
ಪ್ರಶ್ನ ದೈವ ದರ್ಪಣ



ಮೆ|| ಪಿ.ಸಿ. ಶಾಬಾದಿಮಠ ಬುಕ್ ಡಿಪೋ
ಪ್ರಕಾಶಕರು ಮತ್ತು ಪುಸ್ತಕವ್ಯಾಪಾರಿಗಳು - ಗದಗ

—॥ ಶ್ರೀ ಜಗದ್ಗುರು ಚಿನ್ನನಲಿಂಗ ಶಿವಾಚಾರ್ಯಃ ಪ್ರಸೀದತು ॥—

ಶ್ರೀ ಗಣಾಧೀಶ್ವರ ಗ್ರಂಥಮಾಲೆಯ ೧೨ ನೆಯ ಪುಷ್ಪ

ದೈವದರ್ಪಣ

(ಪುರುಷರಿಗೆ)

೧ ನೆಯ ಭಾಗ.

(ಹೊಸ ಮುದ್ರಣ)

ಗ್ರಂಥಕರ್ತರು :

ಜ್ಯೋತಿರ್ವಿದ್ಯಾವಿಭೂಷಣ, ಸಾಹಿತ್ಯರತ್ನ,

ವೇ. ಬಸವಯ್ಯಶಾಸ್ತ್ರಿಗಳು ಹಿರೇಮಠ

ಶ್ರೀ ಗಣಾಧೀಶ್ವರ ಪಂಚಾಂಗ ಕರ್ತರು, ಗದಗ.

ಪ್ರಕಾಶಕರು—

ಮೆಸರ್ಸ್, ಸಿ. ಸಿ. ಶಾಬಾದಿಮಠ ಬುಕ್-ಡಿಪ್ಹೋ, ಗದಗ.

೧೯೮೬ .... ಬೆಲೆ ೮-೦೦

ಜ್ಯೋತಿಷ್ಯ ಶಾಸ್ತ್ರದಲ್ಲಿ ಪಂಡಿತರು ಓದಿ ತಿಳಿದುಕೊಳ್ಳಬಹುದಾದ ಗ್ರಂಥಗಳು ಈವರೆಗೆ ಹೇರಳವಾಗಿ ಹೊರಟಿವೆ. ಆದರೆ ಈ ಶಾಸ್ತ್ರವನ್ನು ಕಲಿಯದವರು ಸುಲಭವಾಗಿ ತಿಳಿದುಕೊಳ್ಳಲು ಅನುಕೂಲವಾಗುವಂತಹ ಗ್ರಂಥಗಳು ದೊರೆಯುವದು ಬಹು ಅಪರೂಪ. ಆದಕ್ಕಾಗಿ ಸಾಮಾನ್ಯಜನರು ಸಹ ತಮ್ಮ ಮುಂದಿನ ಜೀವನದ ಸುಖ, ದುಃಖ, ಪತ್ನಿ, ಪುತ್ರ; ಆಯುಃಷ್ಯ ಆರೋಗ್ಯಾದಿ ವಿಷಯಗಳನ್ನು ಅರಿತುಕೊಂಡು ಸ್ವಾರಸ್ಯವಾದ ಸಂಸಾರವನ್ನು ಸಾಗಿಸಲಿ, ಮತ್ತು ಜ್ಯೋತಿಷ್ಯದ ಪ್ರಾರಂಭದ ಸಂಗತಿಗಳನ್ನು ತಿಳಿದುಕೊಳ್ಳಲಿ ಎಂಬ ಉದ್ದೇಶದಿಂದ ಈ ಗ್ರಂಥವನ್ನು ಪ್ರಕಟಿಸಲಾಗಿದೆ. ಈ ಗ್ರಂಥದ ಬಹುಭಾಗವನ್ನು **ಪಂಡಿತರತ್ನ ವೇ. ಹರೀಶ್ವರಶಾಸ್ತ್ರಿಗಳು,** ಆರಾಧ್ಯಮಠ ಇವರು ಸಂಪಾದನೆ ಮಾಡಿ ಪ್ರಕಾಶನದ ಎಲ್ಲ ಹಕ್ಕುಗಳೊಂದಿಗೆ ನಮಗೆ ಕೊಟ್ಟಿದ್ದಕ್ಕಾಗಿ ಅವರಿಗೆ ತುಂಬಾ ಕೃತಜ್ಞರಾಗಿದ್ದೇವೆ. ಮತ್ತು ಸಕಾಲಕ್ಕೆ ಮುದ್ರಣ ಮಾಡಿಕೊಟ್ಟ ಗದಗ ಶ್ರೀ ರಾಚೋಟೇಶ್ವರ ಪ್ರೆಸ್ ಮಾಲಕರಿಗೆ ಧನ್ಯವಾದಗಳು. ಇದರಲ್ಲಿಯ ಯಾವದೇ ದೃಷ್ಟಿದೋಷಾದಿಗಳನ್ನು ಸುಜ್ಞರು ಸೂಚಿಸಿದಲ್ಲಿ ನಮ್ರತೆಯಿಂದ ಸ್ವೀಕರಿಸುವೆವು.

ಗದಗ
೧೯೦೮ ಅಕ್ಷಯ ತೃತಿಯಾ

ವಿದ್ವಜ್ಜನವಿಧೇಯ.
ಸಿ. ಬಸವಯ್ಯಶಾಸ್ತ್ರಿ ಹಿರೇಮಠ.

— ವಿಷಯಾನುಕ್ರಮಣಿಕೆ —

ಜಜಜಜ

ಶ್ರೀ ಮಹಾಗಣಾಧಿಪತಯೇ ನಮಃ

ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇನಮಃ ॥
ಆದಿತ್ಯಾದಿ ನವಗ್ರಹಾಃ ಶುಭಕರಾ ಮೇಷಾದಯೋ ರಾಶಯಃ।
ನಕ್ಷತ್ರಾಣಿ ಸಯೋಗಕಾಶ್ಚ ತಿಥಯಸ್ತದ್ದೇವತಾಸ್ತದ್ಗಣಾಃ ॥
ಮಾಸಾಬ್ದಾ ಋತವಸ್ತಥೈವ ದಿವಸಾಃ ಸಂಧ್ಯಾಸ್ತಥಾ ರಾತ್ರಯಃ ।
ಸರ್ವೇಸ್ಥಾವರ ಜಂಗಮಾಃಪ್ರತಿದಿನಂ ಕುರ್ವಂತುನೋಮಂಗಲಂ ॥೧॥

ಟೀಕೆ :– ಸಂಸಾರದಲ್ಲಿ ಶುಭವನ್ನುಂಟುಮಾಡತಕ್ಕಂಥ ಸೂರ್ಯ, ಚಂದ್ರ ಮೊದಲಾದ ನವಗ್ರಹಗಳು, ಮೇಷಾದಿ ಹನ್ನೆರಡು ರಾಶಿಗಳು, ಅಶ್ವಿನಿ ಮೊದಲಾದಇಪ್ಪತ್ತೆಂಟು(ಅಭಿಜಿತ್ ಸಹಿತ) ನಕ್ಷತ್ರಗಳು, ವಿಷ್ಕಂಭಾದಿ ಇಪ್ಪತ್ತೇಳು ಯೋಗಗಳು, ಪ್ರತಿಪದಾದಿ ಹದಿನೈದು ತಿಥಿಗಳು, ಚೈತ್ರಾದಿ ಹನ್ನೆರಡು ಮಾಸಗಳು ವಸಂತ,ಮೊದಲಾದ ಆರು ಋತುಗಳು ಪ್ರಭವಾದಿ ಅರವತ್ತು ಸಂವತ್ಸರಗಳು, ಹಗಲು-ರಾತ್ರಿಗಳು ಸಂಧ್ಯಾಕಾಲಗಳು ಈ ಕಾಲ ಚಕ್ರವನ್ನು ಹಿಂದೆ ನಿಯಮಿಸಿದ, ಈಗ ನಿಯಮಿಸುತ್ತಿರುವ, ಮುಂದೆ ನಿಯಮಿಸಲಿರುವ ಎಲ್ಲ ದೇವತಾಗಣಗಳು, ಈ ಜಗತ್ತಿನಲ್ಲಿ ಚಲಿಸುತ್ತಿರುವ ಮತ್ತು ಸ್ಥಿರವಾಗಿನಿಂತಿರುವ, ಸಮಸ್ತ ಚರಾಚರಗಳು ಪ್ರತಿದಿವಸ ನಮಗೆ ಮಂಗಲವನ್ನುಂಟು ಮಾಡಲಿ.

ಸಂವತ್ಸರಗಳು. ೬೦.

೧ ಪ್ರಭವ	೯ ಯುವ	೧೭ ಸ್ವಭಾನು	೨೫ ಖರ
೨ ವಿಭವ	೧೦ ಧಾತು	೧೮ ತಾರಣ	೨೬ ನಂದನ
೩ ಶುಕ್ಲ	೧೧ ಈಶ್ವರ	೧೯ ಪಾರ್ಥಿವ	೨೭ ವಿಜಯ
೪ ಪ್ರಮೋದೂತ	೧೨ ಬಹುಧಾನ್ಯ	೨೦ ವ್ಯಯ	೨೮ ಜಯ
೫ ಪ್ರಜೋತ್ಪತ್ತಿ	೧೩ ಪ್ರಮಾಥಿ	೨೧ ಸರ್ವಜಿತು	೨೯ ಮನ್ಮಥ
೬ ಅಂಗೀರಸ	೧೪ ವಿಕ್ರಮ	೨೨ ಸರ್ವಧಾರಿ	೩೦ ದುರ್ಮುಖಿ
೭ ಶ್ರೀಮುಖ	೧೫ ವಿಷು(ವೃಷ)	೨೩ ವಿರೋಧಿ	೩೧ ಹೇವಿಳಂಬಿ
೮ ಭಾವ	೧೬ ಚಿತ್ರಭಾನು	೨೪ ವಿಕೃತಿ	೩೨ ವಿಳಂಬಿ

೩೩ ವಿಕಾರಿ	೪೦ ಪರಾಭವ	೪೭ ಪ್ರಮಾದೀಚ	೫೪ ರೌದ್ರಿ
೩೪ ಶಾರ್ವರಿ	೪೧ ಪ್ಲವಂಗ	೪೮ ಆನಂದ	೫೫ ದುರ್ಮತಿ
೩೫ ಪ್ಲವ	೪೨ ಕೀಲಕ	೪೯ ರಾಕ್ಷಸ	೫೬ ದುಂದುಭಿ
೩೬ ಶುಭಕೃತು	೪೩ ಸೌಮ್ಯ	೫೦ ನಳ	೫೭ ರುಧಿರೋದ್ಗಾರಿ
೩೭ ಶೋಭನಕೃತು	೪೪ ಸಾಧಾರಣ	೫೧ ಪಿಂಗಳ	೫೮ ರಕ್ತಾಕ್ಷಿ
೩೮ ಕೋಧಿ	೪೫ ವಿರೋಧಿಕೃತ	೫೨ ಕಾಳಯುಕ್ತಿ	೫೯ ಕ್ರೋಧನ
೩೯ ವಿಶ್ವಾವಸು	೪೬ ಪರಿಧಾವಿ	೫೩ ಸಿದ್ಧಾರ್ಥಿ	೬೦ ಕ್ಷಯ

ಅಯನಗಳು. ೨.

೧. ಉತ್ತರಾಯಣ. ೨. ದಕ್ಷಿಣಾಯನ.

ಮಕರ ಸಂಕ್ರಮಣದಿಂದ ಕರ್ಕ ಸಂಕ್ರಮಣದ ವರೆಗೆ ೬ ತಿಂಗಳು ಉತ್ತರಾಯಣವು. ಕರ್ಕ ಸಂಕ್ರಮಣದಿಂದ ಮಕರ ಸಂಕ್ರಮಣದ ವರೆಗೆ ೬ ತಿಂಗಳು ದಕ್ಷಿಣಾಯನವು.

ಋತುಗಳು. ೬.

೧. ವಸಂತಋತು. ೨. ಗ್ರೀಷ್ಮಋತು. ೩. ವರ್ಷಋತು. ೪ ಶರದ್ಋತು. ೫. ಹೇಮಂತಋತು. ೬. ಶಿಶಿರಋತು.

೧. ಋತುವಿಗೆ ೨ ತಿಂಗಳುಗಳು, ಈ ಪ್ರಕಾರ ೧ ವರ್ಷದಲ್ಲಿ ೬ ಋತುಗಳು

ಚೈತ್ರ–ವೈಶಾಖ ಮಾಸಗಳು.	ವಸಂತಋತು
ಜ್ಯೇಷ್ಠ–ಆಷಾಢ ಮಾಸಗಳು.	ಗ್ರೀಷ್ಮಋತು
ಶ್ರಾವಣ–ಭಾದ್ರಪದ ಮಾಸಗಳು	ವರ್ಷಋತು
ಆಶ್ವಿನ–ಕಾರ್ತಿಕ ಮಾಸಗಳು	ಶರದ್ ಋತು
ಮಾರ್ಗಶಿರ–ಪುಷ್ಯ ಮಾಸಗಳು	ಹೇಮಂತಋತು
ಮಾಘ–ಫಾಲ್ಗುಣ ಮಾಸಗಳು	ಶಿಶಿರ ಋತು

ಚಾಂದ್ರಮಾನ ಮಾಸಗಳು. ೧೨

೧ ಚೈತ್ರ.	೪ ಆಷಾಢ	೭ ಆಶ್ವಿನ (ಆಶ್ವಯುಜ)	೧೦ ಪುಷ್ಯ
೨ ವೈಶಾಖ	೫ ಶ್ರಾವಣ	೮ ಕಾರ್ತಿಕ	೧೧ ಮಾಘ
೩ ಜ್ಯೇಷ್ಠ	೬ ಭಾದ್ರಪದ	೯ ಮಾರ್ಗಶಿರ	೧೨ ಫಾಲ್ಗುಣ.

ಸೌರಮಾನ ಮಾಸಗಳು ೧೨

೧ ಮೇಷ	೪ ಕರ್ಕ	೭ ತುಲಾ	೧೦ ಮಕರ
೨ ವೃಷಭ	೫ ಸಿಂಹ	೮ ವೃಶ್ಚಿಕ	೧೧ ಕುಂಭ
೩ ಮಿಥುನ	೬ ಕನ್ಯಾ	೯ ಧನಸ್ಸು	೧೨ ಮೀನ

ರವಿಯು ಮೇಷರಾಶಿಯನ್ನು ಪ್ರವೇಶಮಾಡಿದ ದಿವಸದಿಂದ ವೃಷಭ ರಾಶಿ ಪ್ರವೇಶ ಮಾಡುವ

"	"	"		ದಿವಸದವರೆಗೆ.	ಮೇಷಮಾಸವು
"	ವೃಷಭ		ಮಿಥುನ	"	ವೃಷಭಮಾಸವು
"	ಮಿಥುನ	"	ಕರ್ಕ	"	ಮಿಥುನಮಾಸವು
"	ಕರ್ಕ	"	ಸಿಂಹ	"	ಕರ್ಕಮಾಸವು
"	ಸಿಂಹ	"	ಕನ್ಯಾ	"	ಸಿಂಹಮಾಸವು
"	ಕನ್ಯಾ	"	ತುಲಾ	"	ಕನ್ಯಾಮಾಸವು
"	ತುಲಾ	"	ವೃಶ್ಚಿಕ	"	ತುಲಾಮಾಸವು
"	ವೃಶ್ಚಿಕ	"	ಧನಸ್ಸು	"	ವೃಶ್ಚಿಕಮಾಸವು
"	ಧನಸ್ಸು	"	ಮಕರ	"	ಧನುರ್ಮಾಸವು
"	ಮಕರ	"	ಕುಂಭ	"	ಮಕರಮಾಸವು
"	ಕುಂಭ	"	ಮೀನ	"	ಕುಂಭಮಾಸವು
"	ಮೀನ	"	ಮೇಷ	"	ಮೀನಮಾಸವು

ಪಕ್ಷಗಳು ೨

೧ ಶುಕ್ಲಪಕ್ಷ ೨ ಕೃಷ್ಣಪಕ್ಷ

ಅಮಾವ್ಯಾಸೆಯ ಮರುದಿವಸದಿಂದ ಹುಣ್ಣಿಮೆಯುವರೆಗೆ ೧೫ ದಿವಸ ಶುಕ್ಲಪಕ್ಷವು (ಶುದ್ಧವು) ಹುಣ್ಣಿಮೆಯ ಮರುದಿವಸದಿಂದ ಅಮಾವಾಸ್ಯೆಯ ವರೆಗೆ ೧೫ ದಿವಸ ಕೃಷ್ಣಪಕ್ಷವು (ಬಹುಳವು)

ತಿಥಿಗಳು ೧೫

೧ ಪ್ರತಿಪದೆ (ಪಾಡ್ಯ), ೨ ದ್ವಿತಿಯಾ (ಬಿದಿಗಿ), ೩ ತೃತಿಯಾ (ತದಿಗಿ), ೪ ಚತುರ್ಥಿ (ಚೌತಿ) ೫ ಪಂಚಮಿ, ೬ ಷಷ್ಠಿ, ೭ ಸಪ್ತಮಿ

೮ ಅಷ್ಟಮಿ. ೯ ನವಮಿ, ದಶಮಿ, ೧೧ ಏಕಾದಶಿ, ೧೨ ದ್ವಾದಶಿ, ೧೩ ತ್ರಯೋದಶಿ, ೧೪ ಚತುರ್ದಶಿ, ೧೫ ಪೂರ್ಣಿಮಾ, (ಹುಣ್ಣಿವೆ) ೩೦ ಅಮಾವಾಸ್ಯ.

ಶುಕ್ಲಪಕ್ಷ, ಕೃಷ್ಣ ಪಕ್ಷಗಳಲ್ಲಿ (೧) ಪ್ರತಿಪದೆಯಿಂದ (೧೪) ಚತುರ್ದಶಿಯು ವರೆಗೆ ಒಂದೇ ರೀತಿಯಾಗಿರುವವು. ಶುಕ್ಲಪಕ್ಷ (ಶುದ್ಧ) ದಲ್ಲಿ ಚತುರ್ದಶಿಯು ನಂತರ ೧೫ ಪೂರ್ಣಿಮಾ (ಹುಣ್ಣಿವೆ) ಬರುವದು. ಕೃಷ್ಣ ಪಕ್ಷ (ಬಹುಳ) ದಲ್ಲಿ ೧೪ ಚತುರ್ದಶಿಯು ನಂತರ ೩೦ ಅಮಾವಾಸ್ಯ ಬರುವದು. ಅಂತು ಶುಕ್ಲ ಪಕ್ಷದಲ್ಲಿ ೧೫ ತಿಥಿಗಳು. ಕೃಷ್ಣಪಕ್ಷದಲ್ಲಿ ೧೫ ತಿಥಿ, ಗಳು ಆಗುವವು.

ವಾರಗಳು ೭

೧ ರವಿವಾರ, ೨ ಸೋಮವಾರ, ೩ ಮಂಗಳವಾರ, ೪ ಬುಧವಾರ, ೫ ಗುರುವಾರ, ೬ ಶುಕ್ರವಾರ, ೭ ಶನಿವಾರ, ಇವು ೭ ವಾರಗಳು.

ನಕ್ಷತ್ರಗಳು ೨೭

೧ ಅಶ್ವಿನಿ, ೨ ಭರಣಿ, ೩ ಕೃತ್ತಿಕ, ೪ ರೋಹಿಣಿ, ೫ ಮೃಗಶಿರ, ೬ ಆರಿದ್ರ, ೭ ಪುನರ್ವಸು, ೮ ಪುಷ್ಯ, ೯ ಅಶ್ಲೇಷ, ೧೦ ಮಘ, ೧೧ ಹುಬ್ಬ (ಪೂರ್ವ ಫಲ್ಗುನಿ, ೧೨ ಉತ್ತರ (ಉತ್ತರ ಫಲ್ಗುನಿ), ೧೩ ಹಸ್ತ, ೧೪ ಚಿತ್ತ, ೧೫ ಸ್ವಾತಿ, ೧೬ ವಿಶಾಖ, ೧೭ ಅನುರಾಧ, ೧೮ ಜ್ಯೇಷ್ಠ ೧೯ ಮೂಲ, ೨೦ ಪೂರ್ವಾಷಾಢ, ೨೧ ಉತ್ತರಾಷಾಢ, ೨೨ ಶ್ರವಣ, ೨೩ ಧನಿಷ್ಠ, ೨೪ ಶತಭಿಷ, ೨೫ ಪೂರ್ವಾಭಾದ್ರಪದ, ೨೬ ಉತ್ತರಾ ಭಾದ್ರಪದ, ೨೭ ರೇವತಿ.

ಯೋಗಗಳು ೨೭

೧ ವಿಷ್ಕಂಭ, ೨ ಪ್ರೀತಿ, ೩ ಆಯುಷ್ಮಾನ್, ೪ ಸೌಭಾಗ್ಯ, ೫ ಶೋಭನ, ೬ ಅತಿಗಂಡ ೭ ಸುಕರ್ಮ, ೮ ಧೃತಿ, ೯ ಶೂಲ, ೧೦ ಗಂಡ ೧೧ ವೃದ್ಧಿ, ೧೨ ಧ್ರುವ ೧೩ ವ್ಯಾಘಾತ, ೧೪ ಹರ್ಷಣ, ೧೫ ವಜ್ರ, ೧೬ ಸಿದ್ಧಿ, ೧೭ ವ್ಯತೀಪಾತ, ೧೮ ವರಿಯಾನ್, ೧೯ ಪರಿಘ, ೨೦ ಶಿವ

೨೧ ಸಿದ್ಧ, ೨೨ ಸಾಧ್ಯ, ೨೩ ಶುಭ, ೨೪ ಶುಕ್ಲ, ೨೫ ಬ್ರಹ್ಮ, ೨೬ ಐಂದ್ರ ೨೭ ವೈಧೃತಿ

ಕರಣಗಳು ೧೧

೧ ಬವ	೪ ತೈತುಲ	೭ ಭದ್ರ	೧೦ ನಾಗವಾನ್
೨ ಬಾಲವ	೫ ಗರಜ	೮ ಶಕುನಿ	೧೧ ಕಿಂಸ್ತುಘ್ನ
೩ ಕೌಲವ	೬ ವಣಜ	೯ ಚತುಷ್ಪಾದ	

ರಾಶಿಗಳು ಹಾಗೂ ಲಗ್ನಗಳು ೧೨

೧ ಮೇಷ	೪ ಕರ್ಕ	೭ ತುಲಾ	೧೦ ಮಕರ
೨ ವೃಷಭ	೫ ಸಿಂಹ	೮ ವೃಶ್ಚಿಕ	೧೧ ಕುಂಭ
೩ ಮಿಥುನ	೬ ಕನ್ಯಾ	೯ ಧನಸ್ಸು	೧೨ ಮೀನ

ಗ್ರಹಗಳು. ೯.

೧ ರವಿ	೩ ಮಂಗಳ (ಕುಜ)	೫ ಗುರು	೭ ಶನಿ
೨ ಚಂದ್ರ	೪. ಬುಧ	೬ ಶುಕ್ರ	೮ ರಾಹು
			೯ ಕೇತು

೧ ಯುರೇನಸ್, ೨ ನೆಪ್‌ಚ್ಯೂನ ೩ ಪ್ಲುಟೋ. ಈ ೩ ಗ್ರಹಗಳು ಇತ್ತೀಚೆಗೆ ಶೋಧವಾಗಿವೆ.

ಹೆಸರಿನ ಮೊದಲಿನ ಅಕ್ಷರದಿಂದ ನಕ್ಷತ್ರವನ್ನೂ, ಪಾದವನ್ನೂ ತಿಳಿಯುವದು.

ನಕ್ಷತ್ರ	೧ ನೇ ಪಾದ	೨ ನೇ ಪಾದ	೩ ನೇ ಪಾದ	೪ ನೇ ಪಾದ
ಅಶ್ವಿನಿ	ಚು	ಚೆ	ಚೊ	ಲ
ಭರಣಿ	ಲಿ	ಲು	ಲೆ	ಲೊ
ಕೃತ್ತಿಕ	ಅ	ಇ	ಉ	ಎ
ರೋಹಿಣಿ	ಒ	ವ	ವಿ	ವು
ಮೃಗಶಿರ	ವೆ	ವೊ	ಕ	ಕಿ
ಆರಿದ್ರ,	ಕು	ಘ	ಙ	ಛ
ಪುನರ್ವಸು	ಕೆ	ಕೊ	ಹ	ಹಿ

ನಕ್ಷತ್ರ	೧ ನೇ ಪಾದ	೨ ನೇ ಪಾದ	೩ ನೇ ಪಾದ	೪ ನೇ ಪಾದ
ಪುಷ್ಯ	ಹು	ಹೆ	ಹೊ	ಡ
ಆಶ್ಲೀಷ	ಡಿ	ಡು	ಡೆ	ಡೊ
ಮಘ	ಮ	ಮಿ	ಮು	ಮೆ
ಹುಬ್ಬ	ಮೊ	ಟ	ಟಿ	ಟು
ಉತ್ತರ	ಟೆ	ಟೊ	ಪ	ಪಿ
ಹಸ್ತ	ಪು	ಷ	ಣ	ಠ
ಚಿತ್ತ	ಪೆ	ಪೊ	ರ	ರಿ
ಸ್ವಾತಿ	ರು	ರೆ	ರೊ	ತ
ವಿಶಾಖ	ತಿ	ತು	ತೆ	ತೊ
ಅನುರಾಧ	ನ	ನಿ	ನು	ನೆ
ಜ್ಯೇಷ್ಠ	ನೊ	ಯ	ಯಿ	ಯು
ಮೂಲ	ಯೆ	ಯೊ	ಭ	ಭಿ
ಪೂಷಾ	ಭು	ಧ	ಫ	ಢ
ಉಷಾ	ಭೆ	ಭೊ	ಜ	ಜಿ
ಅಭಿಜಿತ್	ಜು	ಜೆ	ಜೊ	ಖ
ಶ್ರವಣ	ಖಿ	ಖು	ಖೆ	ಖೊ
ಧನಿಷ್ಠ	ಗ	ಗಿ	ಗು	ಗೆ
ಶತಭಿಷ	ಗೊ	ಸ	ಸಿ	ಸು
ಪೂಭಾ	ಸೆ	ಸೊ	ದ	ದಿ
ಉಭಾ	ದು	ಶ್ಯಂ	ಝ	ಥ
ರೇವತಿ	ದೆ	ದೊ	ಚ	ಚಿ

ಹೆಸರಿನ ಮೊದಲಿನ ಅಕ್ಷರದಿಂದಾಗಲಿ ಅಥವಾ ಜನ್ಮನಾಮದ ಮೊದಲಿನ ಅಕ್ಷರದಿಂದಾಗಲಿ ಮೇಲಿನ ಕೋಷ್ಟಕದಲ್ಲಿ (ಪಾದ) ಚರಣಗಳನ್ನು ತಿಳಿದುಕೊಳ್ಳಬೇಕು.

ಉದಾಹರಣೆ—ಮಹದೇವಪ್ಪ ಈ ಹೆಸರಿನ ಮೊದಲಿನ ಅಕ್ಷರ 'ಮ' ಇದು ಮಘಾ ನಕ್ಷತ್ರ ೧ ನೆಯ ಪಾದ (ಚರಣ) ಆಯಿತು,

"ಮಾಲಾ" ಮಾರುತಿ ಈ ಹೆಸರಿನ ಮೊದಲಿನ ಅಕ್ಷರ "ಮಾ" ಇದೂ ಸಹ ಮಘಾ ನಕ್ಷತ್ರ ೧ ನೆಯ ಪಾದ (ಚರಣ) ಆಗುವದು ಯಾಕಂದರೆ ಹ್ರಸ್ವ ಅಕ್ಷರಗಳಿಗೂ, ದೀರ್ಘ ಅಕ್ಷರಗಳಿಗೂ ಭೇದವಿಲ್ಲ. ಇದೇ ಪ್ರಕಾರ ಇಂದುಮತಿ, "ಈಶ್ವರ" ಈ ಎರಡೂ ಹೆಸರುಗಳಿಗೆ ಕೃತ್ತಿಕ ನಕ್ಷತ್ರ ೨ನೆಯ ಚರಣ ಆಗುವದು ಮತ್ತು ಉಮಾದೇವಿ, ಊರ್ಮಿಳಾದೇವಿ ಈ ಹೆಸರುಗಳಿಗೆ ಕೃತ್ತಿಕ ನಕ್ಷತ್ರ ೩ ನೆಯಚರಣ ವಾಗುವದು. ಹಾಗೂ ಎಲ್ಲವ್ವ ಏಕನಾಥಪ್ಪ ಇವರಿಗೆ ಕೃತ್ತಿಕ ನಕ್ಷತ್ರ ೪ ನೆಯ ಚರಣ ಆಗುವದು.

ಕೆಲವು ಹೆಸರುಗಳಿಗೆ ನಕ್ಷತ್ರಗಳು

ಉದಾಹರಣೆ— "ವೈಜಯಂತಿ" ಈಹೆಸರಿನ ಮೊದಲಿನ "ವೈ" ಅಕ್ಷರಕ್ಕೆ ಮೃಗಶಿರ ೧ ನೆಯ ಚರಣವನ್ನೂ "ಗೌರಿ" ಈ ಹೆಸರಿಗೆ ಶತಭಿಷ ೧ನೆಯ ಚರಣವನ್ನೂ,"ಚೌಡಪ್ಪ" ಈ ಹೆಸರಿಗೆ ಅಶ್ವಿನಿ ೩ ನೆಯಚರಣವನ್ನೂ ಹಿಡಿಯಬೇಕು. ಮತ್ತು 'ಶರಣಪ್ಪ ಈ ಹೆಸರಿಗೆ 'ಸ' ಅಕ್ಷರವನ್ನು ಅಂದರೆ ಶತಭಿಷ ನಕ್ಷತ್ರ ೨ನೆಯ ಚರಣವನ್ನೂ, ಅದರಂತೆ "ಶಾಂತಪ್ಪ" ಈ ಹೆಸರಿಗೂ ಸಹ ಶತಭಿಷ ನಕ್ಷತ್ರ ೨ನೆಯ ಚರಣ ವಾಗುವದು. ಬಸಪ್ಪ ಈ ಹೆಸರಿಗೆ 'ವ, ಅಕ್ಷರವನ್ನೂ ಅಂದರೆ ರೋಹಿಣಿ ೨ನೆಯ ಚರಣ, ಶಿವಪ್ಪ ಈ ಹೆಸರಿಗೆ ಶತಭಿಷ ೩ ನೆಯ ಚರಣ, ಶುಕ್ರಾಚಾರ್ಯ ಈ ಹೆಸರಿಗೆ ಶತಭಿಷ ೪ ನೆಯ ಚರಣ ಮತ್ತು 'ಶೌಕತಲಿ, ಶೌನಕಮುನಿ' ಈ ಹೆಸರುಗಳಿಗೆ ಶತಭಿಷ ೪ ನೆಯ ಚರಣ 'ಪೈಗಂಬರ' ಈ ಹೆಸರಿಗೆ ಚಿತ್ತ ೧ನೆಯ ಚರಣ, 'ಕ್ರೈಸ್ತ' ಈ ಹೆಸರಿಗೆ ಪುನರ್ವಸು ೧ನೆಯ ಚರಣ ಈ ಪ್ರಕಾರ ನಕ್ಷತ್ರಗಳ ಚರಣಗಳನ್ನು ಹಿಡಿಯಬೇಕು.

ಒತ್ತಕ್ಷರ ಹೆಸರುಗಳಿಗೆ ನಕ್ಷತ್ರಗಳು

ಒತ್ತಕ್ಷರಗಳಲ್ಲಿ ಎರಡು ಅಕ್ಷರಗಳು ಇರುವದರಿಂದ ಕೊನೆಯ ಅಕ್ಷರಗಳನ್ನು ಬಿಟ್ಟು ಮೊದಲನೆಯ ಅಕ್ಷರದ ಪ್ರಕಾರ ನಕ್ಷತ್ರ ಚರಣ ಹಿಡಿಯಬೇಕು

ಉದಾಹರಣೆ— ಪ್ರಕಾಶ ಈ ಹೆಸರಿನಲ್ಲಿಯ 'ಪ' ಅಕ್ಷರಕ್ಕೆ ತ್ರ್ಯಂಬಕನಾಥ ಈ ಹೆಸರಿನಲ್ಲಿಯ 'ತ' ಅಕ್ಷರಕ್ಕೆ ಶ್ರೀ ಶೈಲಪ್ಪ ಈ ಹೆಸರಿನ 'ಶಿ' ಅಕ್ಷರಕ್ಕೆ ಮೃತ್ಯುಂಜಯ ಈ ಹೆಸರಿನ 'ಮ' ಅಕ್ಷರಕ್ಕೆ ನಕ್ಷತ್ರಚರಣಗಳನ್ನು ಗುರುತಿಸಬೇಕು.

ಹೆಸರು	ನಕ್ಷತ್ರ	ಚರಣ	ರಾಶಿ
ಪ್ರಕಾಶ	ಚಿತ್ರಾ	೩	ತುಲಾ
ತ್ರ್ಯಂಬಕನಾಥ	ಸ್ವಾತಿ	೪	ತುಲಾ
ಶ್ರೀ ಶೈಲಪ್ಪ	ಚಿತ್ರಾ	೪	ತುಲಾ
ಶ್ರೀ ನಿವಾಸ	ಚಿತ್ರಾ	೪	ತುಲಾ
ದ್ರೌಪದಿ	ಸ್ವಾತಿ	೩	ತುಲಾ
ಮೃತ್ಯುಂಜಯ	ಮಘೆ	೧	ಸಿಂಹ
ಧ್ರುವ	ಉತ್ತರಾಭಾದ್ರ	೧	ಮೀನ
ಧೃತರಾಷ್ಟ್ರ	ಪೂರ್ವಾಷಾಢ	೨	ಧನಸ್ಸು
ತ್ರಿಶಂಖು	ವಿಶಾಖ	೧	ತುಲಾ

ವಿಶಿಷ್ಟ ಹೆಸರುಗಳು ಹಾಗೂ ನಕ್ಷತ್ರಗತ್ರಗಳು

ಹೆಸರು	ನಕ್ಷತ್ರ	ಚರಣ	ರಾಶಿ
ಕೃಷ್ಣ	ಮೃಗಶಿರ	೩	ಮಿಥುನ
ಹೃಷ್ಣ	ಸ್ವಾತಿ	೧	ತುಲಾ
ಶ್ರೀಧರ	ಚಿತ್ರಾ	೪	ತುಲಾ
ಕ್ಷೇತ್ರಪಾಲ	ಹಸ್ತ	೧	ಕನ್ಯಾ
ಜ್ಞಾನದೇವ	ಆರಿದ್ರ	೩	ಮಿಥುನ
ಭೀಮಸ್ಪ್ರ	ಪುಷ್ಯ	೩	ಕರ್ಕ
ಭೈರವ	ಪೂರ್ವಾಷಾಢ	೧	ಧನು

ಅನೇಕ ಹೆಸರುಗಳುಳ್ಳವರಿಗೆ ನಕ್ಷತ್ರಗಳು.

ಶಂಕರಲಿಂಗ, ಗುರುಲಿಂಗಪ್ಪ, ಸುಶೀಲಚಂದ್ರ, ಉದಯಕುಮಾರ, ಅಶೋಕಕುಮಾರ, ಪ್ರದೀಪಕುಮಾರ, ವಿಜಯೇಂದ್ರಕುಮಾರ, ಈ ಪ್ರಕಾ

ಒಬ್ಬೊಬ್ಬರು ೨-೩ ಹೆಸರುಗಳುಳ್ಳವರಿರುವರು ಅಂಥ ಹೆಸರುಗಳಲ್ಲಿ ಮೊದಲಿನ ಹೆಸರುಗಳನ್ನು ಬಿಟ್ಟುಕೊನೆಯ ಒಂದು ಹೆಸರಿನ ಮೊದಲಿನ ಅಕ್ಷರದ ಮೇಲಿಂದ ನಕ್ಷತ್ರ ಚರಣವನ್ನು ಗುರುತಿಸಬೇಕು. ಉದಾಹರಣೆ 'ಗುರು ಲಿಂಗಪ್ಪ' ಈ ಹೆಸರನ 'ಗುರು' ಇದನ್ನು ಬಿಟ್ಟು 'ಲಿಂಗಪ್ಪ' ಈ ಹೆಸರಿಗೆ 'ಭರಣಿ' ನಕ್ಷತ್ರ ೧ನೆಯ ೪ಚರಣವೆಂದು ತಿಳಿಯಬೇಕು. 'ವಿಜಯೀಂದ್ರ ಕುಮಾರ' ಈ ಹೆಸರಿನಲ್ಲಿ 'ವಿಜಯ' ಇಂದ್ರ ಈ ಹೆಸರುಗಳನ್ನು ಬಿಟ್ಟು 'ಕುಮಾರ' ಈ ಹೆಸರಿನ ಮೊದಲಿನ ಅಕ್ಷರ 'ಕು' ಇದು ಆರಿದ್ರ ೧ನೆಯ ಚರಣ ಎಂದು ತಿಳಿಯಬೇಕು.

ನಕ್ಷತ್ರಗಳಿಗೆ ರಾಶಿಗಳು

ಅಶ್ವಿನಿ ೪ ಚರಣ ಭರಣಿ ೪ ಚರಣ ಕೃತ್ತಿಕ ೧ನೆಯ ಚರಣ ಮೇಷರಾಶಿ
ಕೃತ್ತಿಕ ೨-೩-೪ಚರಣ ರೋಹಿಣಿ ೪ ಚರಣ ಮೃಗಶಿರ ೧-೨ಚರಣ ವೃಷಭರಾಶಿ
ಮೃಗಶಿರ೩-೪ಚರಣ ಆರಿದ್ರಾ ೪ಚರಣಪುನರ್ವಸು ೧-೨-೩ ಚರಣ ಮಿಥುನರಾಶಿ
ಪುನರ್ವಸು ೪ ನೆಯ ಚರಣ ಪುಷ್ಯ ೪ ಚರಣ ಆಶ್ಲೇಷ ೪ ಚರಣ ಕರ್ಕರಾಶಿ
ಮಘ ೪ ಚರಣ ಹುಬ್ಬ ೪ ಚರಣ ಉತ್ತರ ೧ ನೆಯ ಚರಣ ಸಿಂಹರಾಶಿ
ಉತ್ತರ೨-೩-೪ ಚರಣ ಹಸ್ತ ೪ ಚರಣ ಚಿತ್ತ ೧-೨ ಚರಣ ಕನ್ಯಾರಾಶಿ
ಚಿತ್ತ ೩-೪ ಚರಣ ಸ್ವಾತಿ ೪ ಚರಣ ವಿಶಾಖ ೧-೨-೩ ಚರಣ ತುಲಾರಾಶಿ
ವಿಶಾಖ ೪ ನೆಯ ಚರಣ ಅನುರಾಧ ೪ ಚರಣ ಜ್ಯೇಷ್ಠ ೪ ಚರಣ ವೃಶ್ಚಿಕರಾಶಿ
ಮೂಲ ೪ ಚರಣ ಪೂಷಾ ೪ ಚರಣ ಉಷಾ ೧ನೆಯ ಚರಣ ಧನಸ್ಸುರಾಶಿ
ಉಷಾ ೨-೩-೪ ಚರಣ ಶ್ರವಣ ೪ ಚರಣ ಧನಿಷ್ಠ ೧-೨ ಚರಣ ಮಕರರಾಶಿ
ಧನಿಷ್ಠ ೩-೪ ಚರಣ ಶತಭಿಷ ೪ ಚರಣ ಪೂಭಾ ೧-೨-೩ ಚರಣ ಕುಂಭರಾಶಿ
ಪೂಭಾ ೪ನೆಯ ಚರಣ ಉಭಾ ೪ ಚರಣ ರೇವತಿ ೪ ಚರಣ ಮೀನರಾಶಿ

ರಾಶಿಗಳ ಸುಲಭ ಜ್ಞಾನ

ಅಶ್ವಿನಿ	ಭರಣಿ	ಕೃತ್ತಿಕ	ಕೃತ್ತಿಕ	ರೋಹಿಣಿ	ಮೃಗ	ಮೃಗಶಿರ	ಆರಿದ್ರ	ಪುನ
ಚು	ಲಿ	ಅ		ಒ	ವೆ		ಕು	ಕೆ
ಚೆ	ಲು		ಇ	ವ	ವೊ		ಘ	ಕೊ
ಚೊ	ಲೆ		ಉ	ವಿ		ಕಾ	ಙ	ಹ
ಲ	ಲೊ		ಎ	ವು		ಕಿ	ಛ	
ಮೇಷರಾಶಿ				ವೃಷಭರಾಶಿ			ಮಿಥುನರಾಶಿ	

ಪುನ	ಪುಷ್ಯ	ಆಶ್ಲೇ	ಮಘ	ಹುಬ್ಬ	ಉತ್ತ	ಉತ್ತ	ಹಸ್ತ	ಚಿತ್ತ
,,	ಹು	ಡಿ	ಮ	ಮೊ	ಟೆ		ಪು	ಪೆ
,,	ಹೆ	ಡು	ಮಿ	ಟ		ಟೊ	ಷ	ಪೊ
,,	ಹೊ	ಡೆ	ಮು	ಟಿ		ಪ	ಣ	
ಹಿ	ಡ	ಡೊ	ಮೆ	ಟು		ಪಿ	ಠ	
ಕರ್ಕರಾಶಿ			ಸಿಂಹರಾಶಿ			ಕನ್ಯಾರಾಶಿ		

ಚಿತ್ತ	ಸ್ವಾತಿ	ವಿಶಾ
	ರು	ತಿ
	ರೆ	ತು
ರಾ	ರೊ	ತೆ
ರಿ	ತ	

ತುಲಾರಾಶಿ

ವಿಶಾ	ಅನು	ಜ್ಯೇಷ್ಠ	ಮೂಲ	ಪೂಷಾ	ಉಷಾ	ಉಷಾ	ಅಭಿ	ಶ್ರವ	ಧನಿ
	ನ	ನೊ	ಯೆ	ಭು	ಧೆ			ಜು	ಖಿ ಗ
	ನಿ	ಯ	ಯೊ	ಧ		ಭೊ		ಜೆ	ಖು ಗಿ
	ನು	ಯಿ	ಭ	ಫ		ಜ		ಜೊ	ಖೆ
ತೊ	ನೆ	ಯು	ಭಿ	ಢ		ಜಿ		ಖ	ಖೊ
ವೃಶ್ಚಿಕರಾಶಿ			ಧನಸ್ಸುರಾಶಿ			ಮಕರರಾಶಿ			

ಧನಿ	ಶತ	ಪೂಭಾ
	ಗೊ	ಸೆ
	ಸ	ಸೊ
ಗು	ಸಿ	ದ
ಗೆ	ಸು	

ಕುಂಭರಾಶಿ

ಪೂಭಾ	ಉಭಾ	ರೇವ	ಉದಾಹರಣೆ :- "ಪರಮೇಶ್ವರಪ್ಪ" ಎಂಬವ
"	ದು	ದೆ	ನಿಗೆ ಉತ್ತರ ನಕ್ಷತ್ರ ೩ನೆಯ ಚರಣ ಕನ್ಯಾ
"	ಶ್ಯಂ	ದೊ	ರಾಶಿ ಆಯಿತು.
"	ಝು	ಚ	
ದಿ	ಥ	ಚಿ	

ಮೀನರಾಶಿ

ರಾಶಿ ಹಾಗೂ ಲಗ್ನದ ಅಧಿಪತಿಗಳು.

ಮೇಷ-ಕುಜ (ಮಂಗಳ)	ಕರ್ಕ-ಚಂದ್ರ	ತುಲಾ-ಶುಕ್ರ	ಮಕರ-ಶನಿ
ವೃಷಭ-ಶುಕ್ರ	ಸಿಂಹ-ರವಿ	ವೃಶ್ಚಿಕ-ಕುಜ [ಮಂಗಳ]	ಕುಂಭ-ಶನಿ
ಮಿಥುನ-ಬುಧ	ಕನ್ಯಾ-ಬುಧ	ಧನು-ಗುರು	ಮೀನ-ಗುರು

ಲಗ್ನದ ಪ್ರಮಾಣ. ವೇಳೆ (ಸಾಯನ. ಸ್ಥೂಲ ರೀತಿಯಾಗಿ)

ಲಗ್ನ	ಗಳಿಗೆ-ಫಳ	ಲಗ್ನ	ಗಳಿಗೆ-ಫಳ
ಮೇಷ	೪-೦೦	ತುಲಾ	೫-೧೫
ವೃಷಭ	೪-೩೦	ವೃಶ್ಚಿಕ	೫-೩೦
ಮಿಥುನ	೫-೧೫	ಧನಸ್ಸು	೫-೩೦
ಕರ್ಕ	೫-೩೦	ಮಕರ	೫-೧೫
ಸಿಂಹ	೫-೩೦	ಕುಂಭ	೪-೩೦
ಕನ್ಯಾ	೫-೧೫	ಮೀನ	೪-೦೦

ಸಾಯನ ಲಗ್ನದ ವೇಳೆ ನಿರಯನ ಲಗ್ನದ ವೇಳೆ ಬೇರೆಬೇರೆಯಾಗಿದ್ದು ಅವುಗಳನ್ನು ಸೂಕ್ಷ್ಮವಾಗಿ ಸಾಧಿಸಲು ನಮ್ಮಿಂದ ರಚಿತವಾದ ಪಂಚಾಂಗ ಗಣಿತ ಸಂಜೀವಿನಿ ಭಾಗ ೨ ಬೆಲೆ ೬-೭೫ ತರಿಸಿಕೊಂಡು ನೋಡಿರಿ. ಈಗ ಕೊಟ್ಟಿರುವ ವೇಳೆಯು ಸಾಯನ ಲಗ್ನದ ಸ್ಥೂಲ ವೇಳೆಯು.

—ಪಂಚಾಂಗ ನೋಡುವ ಕ್ರಮ—

ವಾರ, ತಿಥಿ, ನಕ್ಷತ್ರ, ಯೋಗ, ಕರಣ ಇವು ಜ್ಯೋತಿಷ್ಯದ ಪಂಚ ಅಂಗಗಳು ಅಂದರೆ ಪಂಚಾಂಗಳು (ಪಂಚ-ಅಂಗ-ಪಂಚಾಂಗ) ಪಂಚಾಂಗ

ದಲ್ಲಿ ವಾರ, ತಿಥಿ, ನಕ್ಷತ್ರ, ಯೋಗ, ಕರಣಗಳ ಹೆಸರುಗಳನ್ನೂ ಅಲ್ಲದೆ ಇನ್ನೂ ಅನೇಕ ಉಪಯುಕ್ತ ವಿಷಯಗಳನ್ನೂ ಬರೆಯುತ್ತಾರೆ ಅವೆಲ್ಲವುಗಳನ್ನು ತಿಳಿದುಕೊಳ್ಳುವದು ಅವಶ್ಯಕವಾದದ್ದು.

ಪ್ಲವಂಗನಾಮ ಸಂವತ್ಸರ ಕಾರ್ತಿಕ ಶುಕ್ಲ ಪಕ್ಷದತಿಥಿ, ವಾರಾದಿಗಳನ್ನು ತೋರಿಸುವ ಪಂಚಾಂಗದ ಒಂದು ಪುಟವನ್ನು ಇಲ್ಲಿ ಮಾದರಿಗಾಗಿ ತೋರಿಸಿದೆ. ಇದರಲ್ಲಿ ಎಲ್ಲಕ್ಕೂ ಮೊದಲು ಶಾಲಿವಾಹನ ಶಕೆ ೧೮೮೯ ಪ್ಲವಂಗನಾಮ ಸಂವತ್ಸರ ಕಾರ್ತಿಕಮಾಸ ಶುಕ್ಲ ಪಕ್ಷದ ತಿಥಿ ವಾರಾದಿಗಳು ಎಂದು ಶಕೆಯ ಸಂಖ್ಯೆ, ಸಂವತ್ಸರದ ಹೆಸರು, ಮಾಸ, ಪಕ್ಷಗಳನ್ನು ಬರೆದಿದೆ, ೨ ನೆಯ ಸಾಲಿನಲ್ಲಿ ಹಿಜರಿಸನ್ ೧೩೮೭ ಫಸಲಿ ಸನ್ ೧೩೭೭ ಇಂಗ್ಲೀಷ ಸನ್ ೧೯೬೭ ಎಂದು ಆಯಾ ಶಕವರ್ಷಗಳ ಸಂಖ್ಯೆಯನ್ನೂ ಮುಂದೆ 'ದಕ್ಷಿಣಾಯನ' 'ಶರದ್ ಋತು' 'ಈ ಪ್ರಕಾರ ಅಯನದ ಹೆಸರು, ಋತುವಿನ ಹೆಸರು ಕೊಡಲಾಗಿದೆ.

ಎಡಗಡೆಗೆ ೧ ನೆಯ ಕಾಲಂ ದಲ್ಲಿಯು ಮು. ತಾ, ಎಂದರೆ ಮುಸಲ್ಮಾನಿ ತಾರೀಖು ಎಂದು ತಿಳಿಯಿರಿ. ಕೆಳಗಿನ ಅಂಕಿಗಳು ೨೯–೧–೨–೩ ಇವು ಮುಸಲ್ಮಾನಿ ತಾರೀಖುಗಳು. ಮತ್ತು ಅದೇ ಕಾಲಂದಲ್ಲಿ 'ಷಾಬಾನ್', ೮ ಎಂದು ಬರೆದಿದೆ ಇದು ಮುಸಲ್ಮಾನಿ ತಿಂಗಳ ಹೆಸರು ಷಾಬಾನ್. ೮ ಅಂದರೆ ಷಾಬಾನ್ ಇದು ೮ ನೆಯ ತಿಂಗಳು ಎಂದು ಅರ್ಥ.

೨ ನೆಯ ಕಾಲಂದಲ್ಲಿ ಫ. ತಾ ಎಂದರೆ ಫಸಲಿ ತಾರೀಖು ಇಂ. ತಾ ಎಂದರೆ ಇಂಗ್ಲೀಷ ತಾರೀಖು ೨ ನೆಯ ಕಾಲಂದಲ್ಲಿಯ ಕೆಳಗಿನ ಅಂಕೆಗಳು ೩–೪–೫ ಇವು ಇಂಗ್ಲೀಷ ತಾರೀಖುಗಳು. ಫಸಲಿ ತಾರೀಖು ಇಂಗ್ಲೀಷ ತಾರೀಖು ಒಂದೇ ಇರುವದರಿಂದ ಅವುಗಳನ್ನು ಒಂದೇ ಕಾಲಂದಲ್ಲಿ ಬರೆಯಲಾಗಿದೆ ಮತ್ತು ಅದೇ ಕಾಲಂದಲ್ಲಿ 'ದಯ್ ೧೨' ಎಂದು ಇದೆ. ಇದು ಫಸಲಿ ತಿಂಗಳ ಹೆಸರು 'ದಯ್ ೧೨ ಅಂದರೆ ಇದು ಫಸಲೀ ೧೨ ನೆಯ ತಿಂಗಳು ಎಂದು ಅರ್ಥ. ಈ ಫಸಲೀ ತಿಂಗಳ ಕೆಳಗೆ ನವ್ಹಂಬರ. ೧೧, ಎಂದು ಬರೆದಿದೆ ನವ್ಹಂಬರ ಇದು ಇಂಗ್ಲೀಷ ತಿಂಗಳ ಹೆಸರು ಮತ್ತು ನವ್ಹಂಬರ ೧೧ ಅಂದರೆ ನವ್ಹಂಬರ ಇದು ೧೧ ನೆಯ ತಿಂಗಳು ಎಂದು ಅರ್ಥ

'ಸ್ವಾತಿ ೪
ಚರಣವು
., ವಿಶಾಖ
ು ಚರಣ
ಮುಂದೆ ೪
ಕ್ಕೆ ವಿಶಾಖ
ು ೪ನೆಯ

ದಲ್ಲಿ ರ,ಕು,
ರ ಬದಲು
. ಮುಂದೆ
ವ ನಕ್ಷತ್ರ
ರೆದಿರುತ್ತದೆ.
ಮೊದಲಕ್ಷರ

ಕ್ರ, ಶನಿ,

ಶುಕ್ರವಾರ
೬ ಗಳಿಗೆ
ಕೊಡುವದು.
೦ ಘಳಗಳ

ನಕ್ಷತ್ರವು
[illegible] ...ನುರಾಧ ನಕ್ಷತ್ರ
ಕೊಡುವದು ಮತ್ತು ಅನುರಾಧ ನಕ್ಷತ್ರವು ಶನಿವಾರ ಉದಯದಿಂದ ೨೪ ಗಳಿಗೆ
೧೧ ಘಳಿ ಇರುವದು. (೨ ನೆಯ ಸಾಲು ನೋಡಿರಿ)

ದಲ್ಲಿ ವಾರ,
ಇನ್ನೂ ಅನೆ
ಳನ್ನು ತಿಳಿದ
ಪ್ಲವ
ತೋರಿಸುವ
ಸಿದೆ. ಇ
ನಾವು ಸಂ
ಶಕೆಯ ಸಂ
ಸಾಲಿನಲ್ಲಿ
ಎಂದು ಆ
'ಶಸ್ ಖು
ಲಾಗಿದೆ.

ಎಡಗ
ಲ್ಮಾನಿ ತಾ
ಇವು ಮುಸ
ಎಂದು ಬರೆದಿ
ಷಾಬಾನ್ ೩

೨ ನೇ
ಎಂದರೆ ಇಂಗ್ಲಿ
೪-೫ ಇವು
ಖು ಒಂದೇ
ಮತ್ತು ಅದೇ
ಹೆಸರು 'ದಯ
ಅರ್ಥ. ಈ ಫ

ಇದು ಇಂಗ್ಲೀಷ ತಿಂಗಳ ಹೆಸರು ಮತ್ತು ನವ್ಹಂಬರ ೧೧ ಅಂದರೆ ನವ್ಹಂಬ
ಇದು ೧೧ ನೆಯ ತಿಂಗಳು ಎಂದು ಅರ್ಥ

೩ ನೇಯ ಕಾಲಂದಲ್ಲಿ 'ಮಳೆಯ ನಕ್ಷತ್ರ' ಬರೆದಿದೆ. ಕೆಳಗೆ 'ಸ್ವಾತಿ ೪ ಇದೆ ಈ ಪಕ್ಷದ ಮೊದಲನೆಯ ದಿವಸ ಸ್ವಾತಿ ಮಳೆಯ ೪ ನೆಯ ಚರಣವು ಕೂಡುವದು. ಅದರ ಕೆಳಗೆ ವಿಶಾಖ ೧, ವಿಶಾಖ ೨, ವಿಶಾಖ ೩, ವಿಶಾಖ ೪. ಈ ಪ್ರಕಾರ ಬರೆದಿವೆ ಅಂದರೆ ಸ್ವಾತಿ ಮಳೆಯ ೪ ನೆಯ ಚರಣ ಕೂಡಿದ ೪ ದಿವಸಕ್ಕೆ ವಿಶಾಖ ಮಳೆಯ ೧ ನೆಯ ಚರಣವೂ ಮುಂದೆ ೪ ದಿವಸಕ್ಕೆ ವಿಶಾಖ ಮಳೆಯ ೨ ನೆಯ ಚರಣವೂ, ನಂತರ ೫ ದಿವಸಕ್ಕೆ ವಿಶಾಖ ಮಳೆಯ ೩ನೆಯ ಚರಣವೂ, ಬಳಿಕ ೫ ದಿವಸಕ್ಕೆ ವಿಶಾಖ ಮಳೆಯ ೪ನೆಯ ಚರಣವೂ ಕೂಡುವದು, ಎಂದು ತಿಳಿಯಬೇಕು.

೪ನೆಯ ಕಾಲಂದಲ್ಲಿ 'ಗೃಹಚಾರ' ಎಂದು ಬರೆದಿದೆ ಈ ಕಾಲಂದಲ್ಲಿ ರ,ಕು, ಶು, ಶ, ಎಂದು ಇದೆ. ರವಿ, ಕುಜ, ಶುಕ್ರ ಶನಿ, ಹೀಗೆ ಬರೆಯುವದರ ಬದಲು ಸಂಕ್ಷೇಪವಾಗಿ ನವಗ್ರಹಗಳ ಮೊದಲಿನ ಅಕ್ಷರಗಳು ಮಾತ್ರ ಅವೆ. ಮುಂದೆ ಅದೇ ಸಾಲಿನಲ್ಲಿ ಆ ಗ್ರಹವು ಯಾವ ದಿವಸ ಎಷ್ಟು ವೇಳೆಗೆ ಯಾವ ನಕ್ಷತ್ರ ಚರಣವನ್ನು ಪ್ರವೇಶ ಮಾಡುವದೆಂಬುದನ್ನು ವಿಸ್ತಾರವಾಗಿ ಬರೆದಿರುತ್ತದೆ. ಅದು ತಿಳಿಯಲಿ ಎಂಬ ಉದ್ದೇಶದಿಂದ ಆ ಗ್ರಹದ ಹೆಸರಿನ ಮೊದಲಕ್ಷರ ವನ್ನು ಮಾತ್ರ ಗ್ರಹಚಾರದಲ್ಲಿ ಕೊಡುತ್ತಾರೆ.

೫ ನೆಯ ಕಾಲಂದಲ್ಲಿ ವಾರಗಳ ಹೆಸರು ಬರೆದಿರುತ್ತದೆ. ಶುಕ್ರ, ಶನಿ, ಇವು ವಾರಗಳ ಹೆಸರುಗಳು.

೬ ನೆಯ ಕಾಲಂದಲ್ಲಿ ಶು ಪ್ರ. ೬-೮ ಎಂದು ಇದೆ. ಶುಕ್ರವಾರದ ದಿವಸ ಶುಕ್ಲ ಪಕ್ಷದ ಪ್ರತಿಪದ (ಪಾಡ್ಯ) ತಿಥಿಯು ಉದಯದಿಂದ ೬ ಗಳಿಗೆ ೮ ಫಳ ಇರುವದು ಆ ಮೇಲೆ ದ್ವಿತಿಯಾ (ಬಿದಿಗಿ) ತಿಥಿಯು ಕೂಡುವದು. (ಈ ದ್ವಿತಿಯಾ ತಿಥಿಯು) ಶನಿವಾರ ಉದಯದಿಂದ ೦ ಗಳಿಗೆ ೩೦ ಫಳಗಳ ವರೆಗೆ ಇರುವದು. (೨ ನೆಯ ಸಾಲು ನೋಡಿರಿ)

೧ ನೆಯ ಸಾಲಿನಲ್ಲಿ ವಿಶಾ ೨೬-೫೬ ಇದೆ. ಅಂದರೆ ವಿಶಾಖ ನಕ್ಷತ್ರವು ಉದಯದಿಂದ ೨೬ ಗಳಿಗೆ ೫೬ ಫಳ ಇರುವದು. ನಂತರ ಅನುರಾಧ ನಕ್ಷತ್ರ ಕೂಡುವದು ಮತ್ತು ಅನುರಾಧ ನಕ್ಷತ್ರವು ಶನಿವಾರ ಉದಯದಿಂದ ೨೪ ಗಳಿಗೆ ೧೧ ಫಳ ಇರುವದು. (೨ ನೆಯ ಸಾಲು ನೋಡಿರಿ)

೧ನೆಯ ಸಾಲಿನಲ್ಲಿ ಸೌಭಾ ೪೧-೪೭ ಇವೆ. ಅಂದರೆ ಸೌಭಾಗ್ಯಯೋಗವು ಉದಯದಿಂದ ೪೧ ಗಳಿಗೆ ೪೭ ಫಳ ಇರುವದು. ಬಳಿಕ ಶೋಭನ ಯೋಗವು ಕೂಡುವದು. ಅದು ಶನಿವಾರ ಉದಯದಿಂದ ೩೩ ಗಳಿಗೆ ೪೩ ಫಳಗಳ ವರೆಗೆ ಇರುವದು. (೨ ನೆಯ ಸಾಲು ನೋಡಿರಿ).

೧ ನೆಯ ಸಾಲಿನಲ್ಲಿ ಬವ ೬-೮ ಅದೆ. ಅಂದರೆ ಬವಕರಣವು ಈ ದಿವಸ ಉದಯದಿಂದ ೬ ಗಳಿಗೆ ೮ ಫಳ ಇರುವದು.

೧ ನೆಯ ಸಾಲಿನಲ್ಲಿ ಸ್ವಾತಿ ೪ ರ ೭-೧೭ ಎಂದು ಇದೆ ರ ಅಂದರೆ ರವಿಯು ಸ್ವಾತಿ ನಕ್ಷತ್ರ ೪ ನೆಯ ಚರಣಕ್ಕೆ ಉದಯದಿಂದ ೭ ಘಳಿಗೆ ೧೭ ಫಳಕ್ಕೆ ಬರುತ್ತಾನೆ. ಎಂದು ತಿಳಿಯಬೇಕು. ರವಿಯು ಇರುವ ನಕ್ಷತ್ರಕ್ಕೆ ಮಳೆಯ ನಕ್ಷತ್ರ ಅಥವಾ ಮಹಾನಕ್ಷತ್ರ ಎಂದು ಹೇಳುವರು. ಮತ್ತು ಅಭ್ಯಂಗಸ್ನಾನ ವಗೈರೆ ಬರೆದ ನಂತರ ಚಂದ್ರದರ್ಶನಂ ಎಂದು ಇದೆ. ಆ ದಿವಸ ಆಕಾಶದ ಪಶ್ಚಿಮ ದಿಕ್ಕಿನಲ್ಲಿ ಚಂದ್ರನು ಕಾಣಿಸುತ್ತಾನೆ ಎಂದು ತಿಳಿಯಬೇಕು. ಕೊನೆಯಲ್ಲಿ ಭು ೨-೫೭ ಇದೆ ಅಂದರೆ ಭುಕ್ತಿ ೨ ಗಳಿಗೆ ೫೭ ಫಳವು.

ರವಿಯು ಉದಯವಾಗುವ ಸಮಯಕ್ಕೆ ಉದಯ ಲಗ್ನದಲ್ಲಿ ಎಷ್ಟು ವೇಳೆ ಗತಿಸಿ ಹೋಗಿದೆಯೆಂದು ಹೇಳುವದಕ್ಕೆ ಭುಕ್ತಿ ಎಂದು ಹೆಸರು. ಈ ದಿವಸ ರವಿಯು ಸ್ವಾತಿ ನಕ್ಷತ್ರ ೪ ನೆಯ ಚರಣದಲ್ಲಿ ಇದ್ದಾನೆ. ಸ್ವಾತಿ ನಕ್ಷತ್ರ ೪ ನೆಯ ಚರಣವು ತುಲಾರಾಶಿಯು ಆದ್ದರಿಂದ ಈ ದಿವಸ ಉದಯಕ್ಕೆ ತುಲಾ ಲಗ್ನ ಇದ್ದಂತಾಯಿತು. ತುಲಾಲಗ್ನದ ಒಟ್ಟು ವೇಳೆ ೫ ಗಳಿಗೆ ೧೫ ಫಳ. ಇದರಲ್ಲಿಯ ೨ ಗಳಿಗೆ ೫೭ ಫಳ ಇಷ್ಟು ಸಮಯವು ರವಿಯು ಉದಯವಾಗುವದಕ್ಕಿಂತ ಮೊದಲೇ ತುಲಾಲಗ್ನದಲ್ಲಿ ಗತಿಸಿ ಹೋಗಿರುವದೆಂದು ತಿಳಿಸುವದೇ ಭುಕ್ತಿಯು.

೨ ನೆಯ ಸಾಲು ಶನಿವಾರ ದ್ವಿ೦-೩೦ (ದ್ವಿತಿಯಾ ತಿಥಿಯು ೦ ಗಳಿಗೆ ೩೦ ಫಳ ಇರುವದು) ಇದರ ಮುಂದೆ ಉಪರಿ ೫೪-೪೨ ಎಂದು ಇದೆ. ಇಲ್ಲಿ ದ್ವಿತಿಯಾ ತಿಥಿಯನಂತರ ಉಪರಿ ಎಂದು ಇದೆ ಆದ್ದರಿಂದ ಉಪರಿತಿಥಿಯು

ತೃತಿಯಾ ಅಥವಾ ತದಿಗಿ ಆಯಿತು. ಅಂದರೆ ತೃತಿಯಾ ಉದಯದಿಂದ ೫೪ ಗಳಿಗೆ ೪೨ ಫಳ ಇರುವದು. ಪಂಚಾಂಗದಲ್ಲಿ ಮೊದಲು ಒಂದು ತಿಥಿಯ ಹೆಸರು ಅದರ ಗಳಿಗೆ ಫಳ ಬರೆದು ನಂತರ ಉಪರಿ ಎಂದು ಬರೆಯುವರು. ಇಲ್ಲಿ ಮುಂದಿನ ತಿಥಿಯ ಹೆಸರು ಬರೆಯುವದರ ಬದಲು ಉಪರಿ ಎಂದು ಬರೆಯುತ್ತಾರೆ. ಆ ದಿವಸ ಒಂದು ತಿಥಿಯ ಮೇಲೆ ಮತ್ತೊಂದು ತಿಥಿಯು ಬಂದು ಹೋಗುವದಕ್ಕೆ ಉಪರಿ ಎಂದರೆ ಲೋಪ ತಿಥಿ, ಎಂದು ಹೇಳುವರು. ಉಪರಿ ತಿಥಿಗೆ ಅವಮಾತಿಥಿಯೆಂತಲೂ ಹೆಸರು ಇದೆ.

ಈ ಪಕ್ಷದಲ್ಲಿ ಕೆಳಗಿನ ಸಾಲಿನಲ್ಲಿ ಬುಧ ಚ ೬-೦೦ ಅದರ ಕೆಳಗಿನ ಸಾಲಿನಲ್ಲಿ ಗುರು ಚ ೨-೨೧ ಎಂದು ಬರೆದಿದೆ. ಅಂದರೆ ಬುಧವಾರ ಚತುರ್ದಶಿ ತಿಥಿಯು ೬೦ ಗಳಿಗೆ (ಆ ದಿವಸ ಸೂರ್ಯೋದಯದಿಂದ ಮರುದಿವಸ ಉದಯದ ವರೆಗೆ) ಸಂಪೂರ್ಣ ದಿವಸ ಇರುವದು. ಮತ್ತು ಗುರುವಾರ ಚತುರ್ದಶಿ ತಿಥಿಯು ಉದಯದಿಂದ ೨ ಗಳಿಗೆ ೨೧ ಫಳ ಇರುವದು. ಮತ್ತು ಈ ಚತುರ್ದಶಿ ತಿಥಿಯು ಮಂಗಳವಾರ ತ್ರಯೋದಶಿ ತಿಥಿಯು ೫೭ ಗಳಿಗೆ ೯ ಫಳಗಳ ನಂತರ ಕೂಡಿರುವದು. ಆದ್ದರಿಂದ ಚತುರ್ದಶಿ ತಿಥಿಯು ಮಂಗಳವಾರ ಬುಧವಾರ ಗುರುವಾರ, ಹೀಗೆ ಮೂರು ದಿವಸ ವ್ಯಾಪಿಸಿಕೊಂಡಂತಾಯಿತು. ಆದ್ದರಿಂದ ಇಂಥ ತಿಥಿಗಳಿಗೆ ತ್ರಿದಿನ ಸ್ಪೃಕ್ ಎಂದು ಅನ್ನುವರು. ಈ ಪ್ರಕಾರ ಲೋಪತಿಥಿ (ಉಪರಿ) ಇರುವ ದಿವಸ ಅವಮಾ ಎಂದೂ ವೃದ್ಧಿ ತಿಥಿ ಇರುವ ದಿವಸ ತ್ರಿದಿನ ಸ್ಪೃಕ್ ಎಂದೂ ಪಂಚಾಂಗದಲ್ಲಿ ಬರೆಯುವರು.

೩ ನೆಯ ಸಾಲಿನಲ್ಲಿ ಅಹಃ ೨೮-೪೦ ಎಂದು ಬರೆದಿದೆ. ಇದು ಹಗಲಿನ ಪ್ರಮಾಣವು. ಈ ದಿವಸ ಹಗಲು ೨೮ ಗಳಿಗೆ ೪೦ ಫಳ ಇರುವದು ಎಂದು ತಿಳಿಯಿರಿ.

೧೪ನೆಯ ಸಾಲಿನಲ್ಲಿ ವಿಶಾಖ ೪ ವೃಶ್ಚಿಕೇರವಿ ೨೩-೩೨ ಎಂದು ಇದೆ ಅಂದರೆ ಈ ದಿವಸ ರವಿಯು ವೃಶ್ಚಿಕರಾಶಿಗೆ ೨೩ ಗಳಿಗೆ ೩೨ ಫಳಗಳಿಗೆ ಪ್ರವೇಶ ಮಾಡುತ್ತಾನೆ. ಎಂದು ತಿಳಿಯಿರಿ. ಇದೇ ಪ್ರಕಾರ ಚಿತ್ರ ೩ ತುಲಾಯಾಂ

ಶುಕ್ರಃ. ಉಷಾ ೨ ಮಕರೇ ಕುಜಃ ಎಂದು ಬರೆದಿದ್ದಾರೆ. ಆ ದಿವಸ ಅಷ್ಟು ವೇಳೆಗೆ ಶುಕ್ರನು ತುಲಾರಾಶಿಗೆ ಬರುತ್ತಾನೆ. ಮತ್ತು ಮಂಗಳನು ಮಕರ ರಾಶಿಗೆ ಬರುತ್ತಾನೆ. ಎಂದು ತಿಳಿಯಬೇಕು.

ಕೆಲವು ಪಂಚಾಂಗಗಳಲ್ಲಿ ದಿ. ವಿ. ರಾ. ವಿ. ಎಂದು ಬರೆದು ಅದರ ಮುಂದೆ ಗಳಿಗೆ ಘಳ ಬರೆದಿರುತ್ತಾರೆ. ದಿ ಅಂದರೆ ಹಗಲು ವಿ ಅಂದರೆ ವಿಷ. ರಾ. ವಿ. ಅಂದರೆ ರಾತ್ರಿ ವಿಷ ಎಂದು ಅರ್ಥ ದಿವಿ ರಾವಿ ಮುಂದೆ ಬರೆದ ಗಳಿಗೆ ಘಳಗಳ ನಂತರ ೪ ಗಳಿಗೆ ವಿಷಗಳಿಗೆ ಎಂದು ತಿಳಿದು ಆ ೪ ವಿಷಗಳಿಗೆಗಳನ್ನು ಎಲ್ಲ ಕೆಲಸಗಳಿಗೂ ಬಿಡಬೇಕು. ಮತ್ತು ರ-ವೇ, ಕು-ವೇ ಎಂದು ಇದ್ದರೆ ಆ ದಿವಸದ ನಕ್ಷತ್ರಕ್ಕೆ ರವಿ ವೇಧಾ ಇರುವದು. ಅಥವಾ ಕುಜವೇಧಾ ಇರುವದು. ಎಂದು ತಿಳಿಯಬೇಕು. ಈ ಪ್ರಕಾರ ವೇಧಾ ತಗಲಿದ ನಕ್ಷತ್ರವು ಶುಭಕಾರ್ಯಕ್ಕೆ ವರ್ಜ್ಯವು. ಇದೇ ಪ್ರಕಾರ ಕು-ಕ್ರಾಂ ಶ-ಕ್ರಾಂ ಎಂದು ಇದ್ದರೆ, ಕುಜಕ್ರಾಂತಿ, ಶನಿಕ್ರಾಂತಿ ಎಂದು ತಿಳಿಯಬೇಕು. ಮತ್ತು ಆ ದಿವಸದ ನಕ್ಷತ್ರಕ್ಕೆ ಕುಜನ ಅಥವಾ ಶನಿಯ ಕ್ರಾಂತಿ ಉಂಟಾಗಿದೆ ಎಂದು ತಿಳಿದು ಆ ನಕ್ಷತ್ರವನ್ನು ಸಹ ತ್ಯಾಜ್ಯ ಮಾಡಬೇಕು.

ಕೆಲವು ಪಂಚಾಂಗಗಳಲ್ಲಿ ಮುಸಲ್ಮಾನಿ ತಾರೀಖು, ಇಂಗ್ಲೀಷ ತಾರೀಖು ಗಳ ಜೊತೆಗೆ ಭಾರತೀಯ ತಾರೀಖು ಸಹ ೧ ಕಾಲಂದಲ್ಲಿ ಬರೆಯುತ್ತಾರೆ. ತಿಥಿ, ನಕ್ಷತ್ರ, ಯೋಗ ಕರಣಗಳನ್ನು ಬರೆದ ನಂತರ ೧ ಕಾಲಂದಲ್ಲಿ ದಿನಮಾನ ಎಂದು ಅದರ ಕೆಳಗೆ ಪ್ರತಿದಿವಸದ ಗಳಿಗೆ ಘಳ ಬರೆಯುತ್ತಾರೆ ದಿನಮಾನ ಅಂದರೆ ಹಗಲಿನ ಪ್ರಮಾಣವು ಹಾಗೂ ರವಿ ಉದಯ, ರವಿ ಅಸ್ತಗಳನ್ನು ಪ್ರತಿ ದಿವಸ ಗಂಟೆ, ಮಿನಿಟುಗಳಲ್ಲಿ ಬರೆಯುತ್ತಾರೆ. ಮತ್ತು ನಿತ್ಯಚಂದ್ರ ಅಥವಾ ಚಂದ್ರರಾಶಿ ಎಂದು ಕೊನೆಯ ಕಾಲಂದಲ್ಲಿ ಬರೆದು ಕೆಳಗೆ ಮೇಷ, ವೃಷಭ ಮೊದಲಾದ ೧೨ ರಾಶಿಗಳ ಹೆಸರು ಬರೆದಿರುತ್ತಾರೆ ಅಂದರೆ ಚಂದ್ರನು ಆ ದಿವಸ ಆ ರಾಶಿಯಲ್ಲಿ ಇರುತ್ತಾನೆ ಎಂದು ತಿಳಿಯಬೇಕು. ಕೆಲವು ಸಾಲುಗಳಲ್ಲಿ ಗಳಿಗೆ ಘಳ ಬರೆದು 'ನಂ' ಎಂದು ಬರೆದಿರುವರು. ನಂ ಅಂದರೆ ಗಳಿಗೆ ಘಳಗಳ ನಂತರ ಆ ರಾಶಿಯನ್ನು ಚಂದ್ರನು ಪ್ರವೇಶ ಮಾಡುತ್ತಾನೆಂದು ತಿಳಿದುಕೊಳ್ಳಬೇಕು.

ಪಂಚಾಂಗದ ಬಲ ಭಾಗದಲ್ಲಿ ಒಂದು ಕುಂಡಲಿ ಇರುತ್ತದೆ. ಅದು ಹುಣ್ಣಿವೆ ಅಥವಾ ಅಮವಾಸ್ಯೆಯ ದಿವಸದ ಕುಂಡಲಿಯಾಗಿರುವದು. ಶುಕ್ಲ ಪಕ್ಷವಾಗಿದ್ದರೆ ಹುಣ್ಣಿವೆಯ ದಿವಸ ಯಾವ ಗ್ರಹಗಳು ಯಾವ ರಾಶಿಯಲ್ಲಿ ಇರುತ್ತವೆ ಯೆಂಬುದನ್ನು ಸೂಚಿಸುವದು. ಕೃಷ್ಣ ಪಕ್ಷವಾಗಿದ್ದರೆ ಅಮವಾಸ್ಯಯದಿವಸ ಎಲ್ಲ ಗ್ರಹಗಳು ಯಾವ ರಾಶಿಯಲ್ಲಿ ಇರುತ್ತವೆಯೆಂಬುದನ್ನೂ ತಿಳಿಸುವದು. ಮತ್ತು ಆ ಕುಂಡಲಿಯ ಕೆಳಗೆ ಆ ಮಾಸದ ಶುಭಾಶುಭ ಫಲಗಳನ್ನೂ, ಗುರು ಶುಕ್ರರ ಅಸ್ತವನ್ನೂ, ವಾಸ್ತು ಪುರುಷನ ಸ್ಥಿತಿಯನ್ನೂ ಬರೆಯುತ್ತಾರೆ. ಕೆಲವು ಪಂಚಾಂಗಗಳಲ್ಲಿ ಗ್ರಹಗಳು ಒಂದು ರಾಶಿಯನ್ನು ಬಿಟ್ಟು ಬೇರೆರಾಶಿಯನ್ನು ಪ್ರವೇಶ ಮಾಡಿದರೆ ಆ ಪ್ರವೇಶ ಸಮಯದ ಕುಂಡಲಿಗಳನ್ನೂ ಸಹ ಬರೆದಿರ ತ್ತಾರೆ ಅದಕ್ಕಾಗಿ ೨ ಅಥವಾ ೩ ಕುಂಡಲಿಗಳನ್ನು ಬರೆಯುವವಂಟು.

ಈ ಪ್ರಕಾರ ಒಂದು ಪಂಚಾಂಗದ ಮಾಹಿತಿಯನ್ನು ಸರಿಯಾಗಿ ನೋಡುವದಕ್ಕೆ ತಿಳಿದುಕೊಂಡರೆ ಬೇಕಾದ ಪಂಚಾಂಗವನ್ನು ಸಹ ಸುಲಭವಾಗಿ ನೋಡಿ ತಿಳಿದುಕೊಳ್ಳಬಹುದು.

ಜನನ ಕುಂಡಲಿಯನ್ನು ತಯಾರಿಸುವದು.

ಕೂಸು ಹುಟ್ಟಿದ ಜನನಕುಂಡಲಿಯನ್ನು ಹಾಕಬೇಕಾದರೆ ಮೊದಲು ಆ ದಿವಸದ ಉದಯ ಲಗ್ನವನ್ನು ತಿಳಿದುಕೊಂಡು ಆ ಲಗ್ನದ ಗಳಿಗೆ ಫಳಗಳಲ್ಲಿ ಆ ದಿವಸದಲಗ್ನ ಭುಕ್ತಿಯ ಗಳಿಗೆ ಫಳಗಳನ್ನು ಕಳೆದು ಅಲ್ಲಿಂದ ಕೂಸು ಹುಟ್ಟಿದ ವೇಳೆಯವರೆಗೆ ಲಗ್ನ ಸಾಧಿಸಿ ಆ ವೇಳೆಗೆ ಯಾವ ಲಗ್ನವಾಗುವದೆಂಬುದನು ತಿಳಿದುಕೊಳ್ಳಬೇಕು. ಬಳಿಕ ಆ ಸಮಯಕ್ಕೆ ರವಿ, ಚಂದ್ರ, ಮಂಗಳ, ಬುಧ, ಗುರು, ಶುಕ್ರ, ಶನಿ, ರಾಹು, ಕೇತು ಈ ಗ್ರಹಗಳು ಯಾವ ನಕ್ಷತ್ರ ಎಷ್ಟನೆಯ ಪಾದದಲ್ಲಿ ಇರುವರು. ಆ ನಕ್ಷತ್ರ ಪಾದಗಳು ಯಾವ ರಾಶಿಗೆ ಸೇರುತ್ತವೆ ಎಂಬುದನ್ನು ನೋಡಿಕೊಂಡು ಕುಂಡಲಿಯಲ್ಲಿ ಆಯಾರಾಶಿಗಳ ಸಂಖ್ಯೆಗಳ ಮನೆಗಳಲ್ಲಿ ೯ ಗ್ರಹಗಳನ್ನು ತುಂಬಬೇಕು. ಈ ೯ ಗ್ರಹಗಳಲ್ಲಿ ಚಂದ್ರನನ್ನು ಬಿಟ್ಟು ಉಳಿದ ೮ ಗ್ರಹಗಳು ಯಾವ ನಕ್ಷತ್ರ, ಚರಣಗಳಲ್ಲಿ ಇರುವರೆಂಬುದನ್ನು ಬರೆದಿರುತ್ತಾರೆ. ಆದರೆ ಚಂದ್ರನ ನಕ್ಷತ್ರ ಚರಣಗಳನ್ನು ಕೆಲವು

ಪಂಚಾಂಗಗಳಲ್ಲಿ ಬರೆದಿರುವದಿಲ್ಲ ಆಗ ಜನನ ಕಾಲಕ್ಕೆ ಇರುವ ನಕ್ಷತ್ರ ಆದ್ಯಂತ ಕಾಲ, ಇಷ್ಟಕಾಲಗಳನ್ನು ಮಾಡಿಕೊಂಡು ಆ ಸಮಯಕ್ಕೆ ಚಂದ್ರನ ಆ ನಕ್ಷತ್ರದ ಎಷ್ಟನೆಯ ಪಾದದಲ್ಲಿ ಇರುವನೆಂಬುದನ್ನು ತಿಳಿದುಕೊಂಡ ಆ ನಕ್ಷತ್ರ ರಾಶಿಯ ಮನೆಯಲ್ಲಿ ಚಂದ್ರನನ್ನು ತುಂಬಬೇಕಾಗುವದು.

ಉದಯ ಲಗ್ನವನ್ನು ತಿಳಿಯುವದು

ಯಾವ ದಿವಸ ನಾವು ಉದಯ ಲಗ್ನವನ್ನು ತಿಳಿಯಬೇಕಾಗಿದೆಯೋ ದಿವಸ ರವಿಯು ಪಂಚಾಂಗದಲ್ಲಿ ಯಾವ ನಕ್ಷತ್ರ, ಚರಣದಲ್ಲಿರುವನೊ ನಕ್ಷತ್ರ, ಚರಣಗಳಿಗೆ ರಾಶಿಯನ್ನು ಮಾಡಿಕೊಂಡರೆ ಆ ರಾಶಿಯೇ ಉದಯ ಲಗ್ನವಾಗುವದು. ಒಂದು ವೇಳೆ ಕುಂಡಲಿ ಹಾಕುವ ದಿವಸ ರವಿಯ ನಕ್ಷ ಪ್ರವೇಶವು ಇಲ್ಲದಿದ್ದರೆ ೨-೩ ದಿವಸ ಹಿಂದೆ ರವಿಯು ಯಾವ ನಕ್ಷತ್ರ, ಚರ ವನ್ನು ಪ್ರವೇಶ ಮಾಡಿರುವನೋ ಅದನ್ನೇ ಹಿಡಿದುಕೊಂಡು ಆ ನಕ್ಷ ಚರಣಗಳಿಗೆ ರಾಶಿಯನ್ನು ಮಾಡಿಕೊಂಡು ಆ ರಾಶಿಯನ್ನೇ ಉದಯ ಲ ವೆಂದು ತಿಳಿಯಬೇಕು. ಅರ್ಥಾತ್ ರವಿಯು ಯಾವ ರಾಶಿಯಲ್ಲಿ ವನೋ ಆ ರಾಶಿಯೇ ಉದಯ ಲಗ್ನವಾಗುವದು.

ಉದಾಹರಣೆ – ಶಕೆ ೧೮೮೯ ಪ್ಲವಂಗನಾಮ ಸಂವತ್ಸರ ಕಾರ್ತಿ ಶುದ್ಧ ೧೪ ತಾ. ೧೫ ೧೧-೧೯೬೭ ನೇ ಬುಧವಾರ ದಿವಸ ಉದಯ ಗಳಿಗೆ ೧೬ ಫಳಗಳಿಗೆ ಗಂಡು ಕೂಸು ಜನನವಾಗಿದೆ. ಈ ದಿವಸ ಉದ ಲಗ್ನ ಯಾವದಿದೆ ಎಂಬುದನ್ನು ನೋಡುವಾ.

ಬುಧವಾರ ದಿವಸ ಗ್ರಹಚಾರ ಕಾಲಂದಲ್ಲಿ 'ರ' ಎಂದು ಬರೆದಿ ಅಂದರೆ ಈ ದಿವಸ ರವಿಯು ನಕ್ಷತ್ರ ಚರಣ ಪ್ರವೇಶಮಾಡುವದಿಲ್ಲ ಎಂ ತಿಳಿದು ಅದರ ಹಿಂದಿನ ದಿವಸ ಮಂಗಳವಾರವೂ ಇರುವದಿಲ್ಲ. ಆದರೆ ಸೋ ವಾರದ ಸಾಲಿನ ಗ್ರಹಚಾರ ಕಾಲಂದಲ್ಲಿ 'ರ' ಅದೆ. ಅಂದರೆ ಆ ದಿವ ಸಾಲಿನಲ್ಲಿ ವಿಶಾಖಾ ೪ ರವಿ ೪-೪೭ ಎಂದು ಇದೆ. ಅಂದರೆ ೪ ಗಳಿಗೆ ೪೭ ಗಳಿಗೆ ರವಿಯು ವಿಶಾಖ ನಕ್ಷತ್ರ ೩ ನೆಯ ಚರಣವನ್ನು ಪ್ರವೇಶ ಮಾ ಶ್ತಾನೆ. ಮತ್ತು ವಿಶಾಖ ನಕ್ಷತ್ರ ೩ ನೆಯ ಚರಣವು ತುಲಾ ರಾಶಿಯ

ವದು. ಆದ್ದರಿಂದ ಕಾರ್ತಿಕ ಶುದ್ಧ ೧೪ ಬುಧವಾರ ಉದಯಲಗ್ನ ತುಲಾ ಇದ್ದಂತಾಯಿತು. (ಹಿಂದೆ ೧೦ ನೇ ಪುಟದಲ್ಲಿಯ ನಕ್ಷತ್ರಗಳಿಗೆ ರಾಶಿಗಳು ಈ ಕೋಷ್ಟಕ ನೋಡಿರಿ)

— ತತ್ಕಾಲ ಲಗ್ನ ಸಾಧಿಸುವದು —

ಉದಯಲಗ್ನವನ್ನು ತಿಳಿದುಕೊಂಡನಂತರ ಆ ಲಗ್ನದ ಪ್ರಮಾಣ (ವೇಳೆ) ದಲ್ಲಿ ಲಗ್ನಭುಕ್ತಿಯನ್ನು ಕಳೆಯಬೇಕು. ಲಗ್ನಭುಕ್ತಿಯನ್ನು ಪಂಚಾಂಗದಲ್ಲಿ ಪ್ರತಿಯೊಂದು ಸಾಲಿನ ಕೊನೆಯಲ್ಲಿ ಭು ಎಂದು ಬರೆದು ಮುಂದೆ ಗಳಿಗೆ ಫಳ ಬರೆದಿರುವರು. ಈ ಭುಕ್ತಿಯು ಗಳಿಗೆ ಫಳಗಳನ್ನು ಉದಯ ಲಗ್ನದ ವೇಳೆಯಲ್ಲಿ ಕಳೆದು ಮುಂದೆ ಜನನಕಾಲದ (ತತ್ಕಾಲದ) ವರೆಗೆ ಲಗ್ನ ಸಾಧಿಸ ಬೇಕು. ಭುಕ್ತಿ ಅಂದರೆ ರವಿಯು ಉದಯವಾಗುವ ಮೊದಲು ಗತಿಸಿದ ಲಗ್ನದ ಸಮಯ. ಮತ್ತು ಕೂಸು ಜನನವಾದ ವೇಳೆಗೆ ಅಥವಾ ಪ್ರಶ್ನೆ ಕೇಳಿದ ವೇಳೆಗೆ ತತ್ಕಾಲ ಎಂದು ಹೆಸರು ಆ ಸಮಯದ ವರೆಗೆಸಾಧಿಸಿದ ಲಗ್ನಕ್ಕೆ ತತ್ಕಾಲ ಲಗ್ನ ಎಂದು ಹೇಳುವರು.

ಉದಾಹರಣೆ—ಕಾರ್ತಿಕ ಶುದ್ಧ ೧೪ ಬುಧವಾರ ದಿವಸ ಉದಯ ೧೦ ಗಳಿಗೆ ೧೬ ಫಳಗಳಿಗೆ (ತತ್ಕಾಲ) ಲಗ್ನ ಸಾಧಿಸೋಣ.

ಈ ದಿವಸ ಉದಯಲಗ್ನ ತುಲಾ ಇರುವದು. ತುಲಾಲಗ್ನ ಪ್ರಮಾಣ ೫-೧೫ (೫ ಗಳಿಗೆ ೧೫ ಫಳ) ಇದರಲ್ಲಿ ಆ ದಿವಸದ ಲಗ್ನ ಭುಕ್ತಿಯನ್ನು ಕಳೆ ಯಬೇಕು. ಪಂಚಾಂಗದಲ್ಲಿ ಬುಧವಾರದ ಸಾಲಿನಲ್ಲಿ ಕೊನೆಗೆ ಭು ೫-೦ ಇದೆ ಅಂದರೆ ಲಗ್ನ ಭುಕ್ತಿಯು ೫ ಗಳಿಗೆ ೦ ಫಳ ಇರುವದು. ಈ ಭುಕ್ತಿಯನ್ನು ಲಗ್ನ ಪ್ರಮಾಣದಲ್ಲಿ ಕಳೆಯಲು ೦-೧೫ (೦ ಗಳಿಗೆ ೧೫ ಫಳ) ಉಳಿಯಿತು. ಆಮೇಲೆ ೧೦ ಗಳಿಗೆ ೧೬ ಫಳಗಳವರೆಗೆ ಮುಂದಿನ ಲಗ್ನ ಪ್ರಮಾಣದ ಗಳಿಗೆ ಫಳಗಳನ್ನು ಕೂಡಿಸುತ್ತ ಕೂಸಿನ ಜನನ ವೇಳೆಯು ಯಾವ ಲಗ್ನದಲ್ಲಿ ಬರುತ್ತದೆಂಬುದನ್ನು ತಿಳಿಯಬೇಕು.

ಉದಯಲಗ್ನ ತುಲಾ ಅದೆ. ಗಳಿಗೆ ಫಳ.

೫—೧೫ ತುಲಾಲಗ್ನ ಪ್ರಮಾಣ
೫— ೦ ಲಗ್ನಭುಕ್ತಿ

೦—೧೫ ಉಳಿಯಿತು
೫—೩೦ ವೃಶ್ಚಿಕ ಲಗ್ನ ಪ್ರಮಾಣ

೫—೪೫

೫ ಗಳಿಗೆ ೪೫ ಫಳಗಳವರೆಗೆ
ವೃಶ್ಚಿಕ ಲಗ್ನ ಇರುವದು   ೫—೩೦ ಧನಸ್ಸು ಲಗ್ನ ಪ್ರಮಾಣ
ಮುಂದೆ ಧನಸ್ಸು. ಲಗ್ನ ಪ್ರಮಾಣ ೫ಗಳಿಗೆ ೩೦ಫಳ   ೧೧—೧೫
ಕೂಡಿಸಲು ೧೧ ಗಳಿಗೆ ೧೫ಫಳ ಆಗುವದು.

ಅಂದರೆ ನಮ್ಮ ಕೂಸಿನ ಜನನ ವೇಳೆಗೆ ಹೆಚ್ಚಾಗುವದು ಆದ್ದರಿಂದ ಕೂಸು ಧನಸ್ಸು ಲಗ್ನದಲ್ಲಿ ಜನನವಾಗಿದೆ ಎಂದು ತಿಳಿದುಕೊಳ್ಳಬೇಕು, ಅರ್ಥಾತ್ ತತ್ಕಾಲ ಲಗ್ನವು ಧನಸ್ಸು ಇದ್ದಂತಾಯಿತು.

ಈ ಪ್ರಕಾರ ಉದಯಲಗ್ನದಲ್ಲಿ ಭುಕ್ತಿಯನ್ನು ಕಳೆದು ಅದರಲ್ಲಿ ಮುಂದಿನ ಲಗ್ನ ಪ್ರಮಾಣವನ್ನು ಕೂಡಿಸುತ್ತ ನಮಗೆಬೇಕಾದ ಸಮಯದವರೆಗೆ ಲಗ್ನವನ್ನು ಸಾಧಿಸಿ ಆ ಸಮಯಕ್ಕೆ ಯಾವ ಲಗ್ನ ಇರುವದೆಂಬುದನ್ನು ತಿಳಿದು ಕೊಳ್ಳಬಹುದು. ಇದೇ ತತ್ಕಾಲ ಲಗ್ನ ಸಾಧನೆಯು ಹೀಗೆ ಪ್ರಶ್ನೆ ಮಾಡಿದ ವೇಳೆಗೂ ತತ್ಕಾಲ ಲಗ್ನ ಸಾಧಿಸಿಕೊಳ್ಳಿರಿ

ತತ್ಕಾಲ ಲಗ್ನವನ್ನು ಸಾಧಿಸಿದ ನಂತರ ಆಲಗ್ನ ಕುಂಡಲಿಯಲ್ಲಿ ಗ್ರಹಗಳನ್ನು ತುಂಬಬೇಕಾಗುವದು. ಅದಕ್ಕಾಗಿ ಆ ದಿವಸದ ಆ ವೇಳೆಗೆ ಗ್ರಹಗಳು ಯಾವ ನಕ್ಷತ್ರ ಚರಣ ರಾಶಿಗಳಲ್ಲಿ ಇವೆ ಎಂಬುದನ್ನು ಪಂಚಾಂಗನೋಡಿ ಪ್ರತ್ಯೇಕವಾಗಿ ಬರೆದುಕೊಳ್ಳಬೇಕು ಅದು ಹೇಗೆಂದರೆ ಶಕೆ ೧೮೮೯ ಪ್ಲವಂಗ ನಾಮ ಸಂವತ್ಸರ ಕಾರ್ತಿಕ ಶುದ್ಧ ೧೪ ತಾರೀಖು ೧೫-೧೧-೧೯೬೭ ನೆಯ ದಿವಸ ಉದಯ ೧೦ಗಳಿಗೆ ೧೬ ಫಳ ಈ ವೇಳೆಗೆ ಗ್ರಹಚಾರವು ಈ ಪ್ರಕಾರ ಇದೆ.

ರವಿಯು—ಕಾರ್ತಿಕ ಶುದ್ಧ ೧೨ ಸೋಮವಾರ ವಿಶಾಖ ನಕ್ಷತ್ರ ೩ ನೆಯ ಪಾದದಲ್ಲಿಇದ್ದಾನೆ.

ಚಂದ್ರನು— ಕಾರ್ತಿಕ ಶುದ್ಧ ೧೪ ಬುಧವಾರ ಅಶ್ವಿನಿ ನಕ್ಷತ್ರವು ೪೩-೯ ಇದೆ. ಜನನ ವೇಳೆಯು ೧೦-೧೬ ಇದೆ. ಅಂದರೆ ಅಶ್ವಿನಿ ನಕ್ಷತ್ರದಲ್ಲಿ ಜನನವಾಗಿದೆ. ಆದ್ದರಿಂದ ಅಶ್ವಿನಿ ನಕ್ಷತ್ರದ ಹಿಂದಿನ ನಕ್ಷತ್ರ ರೇವತಿಯು ಮಂಗಳವಾರ ೩೬-೪೬ ಇದೆ ಇದನ್ನು ೬೦-೦ ಗಳಿಗೆಗಳಲ್ಲಿ ಕಳೆಯಲು ೨೩-೧೪ ಉಳಿಯಿತು, ಅಂದರೆ ಅಶ್ವಿನಿ ನಕ್ಷತ್ರವು ಬುಧವಾರ ಸೂರ್ಯೋದಯವಾಗುವ ಪೂರ್ವದಲ್ಲಿ ೨೩ ಗಳಿಗೆ ೧೪ ಫಳ ಗತಿಸಿ ಹೋಗಿದೆ. ಮತ್ತು ಬುಧವಾರ ದಿವಸ ಅಶ್ವಿನಿ ನಕ್ಷತ್ರವು ೪೩ ಗಳಿಗೆ ೧೯ ಫಳ ಇದೆ. ಅಂತು ಇವೆರಡನ್ನೂ ಕೂಡಿಸಲು ೬೬ ಗಳಿಗೆ ೩೩ ಫಳ ಅಶ್ವಿನಿ ನಕ್ಷತ್ರದ ಆದ್ಯಂತ ಕಾಲವು [ನಕ್ಷತ್ರದ ಒಟ್ಟು ಗಳಿಗೆ ಫಳಗಳು] ಹಾಗೂ ಈ ನಕ್ಷತ್ರದ ಇಷ್ಟಕಾಲ ತೆಗೆಯಬೇಕು ಅದು ಹೇಗೆಂದರೆ ಬುಧವಾರ ಸೂರ್ಯೋದಯದ ಪೂರ್ವದಲ್ಲಿ ಅಶ್ವಿನಿ ನಕ್ಷತ್ರವು ೨೩ ಗಳಿಗೆ ೧೪ ಫಳ ಗತಿಸಿ ಹೋಗಿದ್ದು ಇದರಲ್ಲಿ ಜನನ ವೇಳೆ ೧೦ ಗಳಿಗೆ ೧೬ ಫಳ ಕೂಡಿಸಲಾಗಿ ೩೩ ಗಳಿಗೆ ೩೦ ಫಳ ನಕ್ಷತ್ರ ಇಷ್ಟಕಾಲವು.

ಗಳಿಗೆ ಫಳ   ಗಳಿಗೆ ಫಳ
೬೬-೩೩ ಅಶ್ವಿನಿ ನಕ್ಷತ್ರ ಆದ್ಯಂತಕಾಲ ೩೩-೩೦ ಅಶ್ವಿನಿ ನಕ್ಷತ್ರ ಇಷ್ಟಕಾಲವು

ಈಗ ಆದ್ಯಂತ ಕಾಲವನ್ನು ೪ ರಿಂದ ಭಾಗಿಸಲು ಒಂದೊಂದು ಚರಣದ ಗಳಿಗೆ ಫಳ ಬರುತ್ತವೆ.

೪) ೬೬-೩೩ (೧೬
೪
೨೬
೨೪
೨
×೬೦
೧೨೦
+೩೩ಫಳ
೧೫೩

೪) ೧೫೩ (೩೮
೧೨
೩೩
೩೨
೦೧

೧೬ ಗಳಿಗೆ, ೩೮ ಫಳ ಒಂದು ಚರಣದ ವೇಳೆ ಈ ವೇಳೆಯನ್ನು ಅಶ್ವಿನಿ ನಕ್ಷತ್ರ ಇಷ್ಟಕಾಲದಲ್ಲಿ ಕಳೆಯುತ್ತ ಹೋಗಬೇಕು. ಮತ್ತು ನಕ್ಷತ್ರದ ಚರಣವನ್ನು ಕಂಡು ಹಿಡಿಯಬೇಕು.

ಗಳಿಗೆ		ಫಳ.	
೩೩	—	೩೦	ಅಶ್ವಿನಿ ನಕ್ಷತ್ರ ಇಷ್ಟಕಾಲ.
೧೬	—	೩೮	ಒಂದನೆಯ ಚರಣದ ವೇಳೆ
೧೬	—	೫೨	ಉಳಿಯಿತು.
೧೬	—	೩೮	ಎರಡನೆಯ ಚರಣದ ವೇಳೆ
೦೦	—	೧೪	

ಎರಡನೆಯ ಚರಣದ ವೇಳೆಯನ್ನು ಕಳೆಯಲಾಗಿ ೦ ಗಳಿಗೆ ೧೪ ಫಳ ಉಳಿಯಿತು. ಆದ್ದರಿಂದ ೩ ನೆಯ ಚರಣದಲ್ಲಿ ಕೂಸು ಜನನವಾದಂತಾಯಿತು. ಆದ್ದರಿಂದ ಚಂದ್ರನು ಅಶ್ವಿನಿ ನಕ್ಷತ್ರ ೩ ನೆಯ ಚರಣದಲ್ಲಿ ಇದ್ದಾನೆ. ನಕ್ಷತ್ರ ಇಷ್ಟಕಾಲವು ಅಥವಾ ಜನನ ಸಮಯವು ಯಾವ ನಕ್ಷತ್ರ ಚರಣದಲ್ಲಿ ಬರುವದೋ ಆ ನಕ್ಷತ್ರ ಚರಣದಲ್ಲಿ ಚಂದ್ರನಿರುವನೆಂದು ತಿಳಿಯಬೇಕು.

ಕುಜ— ಕಾರ್ತಿಕ ಶುದ್ಧ ೧೩ ಮಂಗಳವಾರ ಪೂರ್ವಾಷಾಢ ೪ ನೆಯ ಚರಣದಲ್ಲಿದ್ದಾನೆ.

ಬುಧ— ಕಾರ್ತಿಕ ಶುದ್ಧ ೭ ಬುಧವಾರ ಮಾರ್ಗಾರಂಭ ಬುಧ ಎಂದು ಇದೆ. ಕಾರ್ತಿಕಶುದ್ಧ ೬ ಮಂಗಳವಾರ ಪೂರ್ವೋದಯಂ ಬುಧ ಎಂದು ಬರೆದಿದೆ, ಈ ಪ್ರಕಾರ ಇದ್ದಾಗ ಗ್ರಹಗಳು ಅಸ್ತ, ಉದಯ, ಮಾರ್ಗಾರಂಭ (ರ.ಜ್ಯಾರಂಭ) ಈ ಸ್ಥಿತಿಯಲ್ಲಿದ್ದರೆ ಅವುಗಳನ್ನು ಬಿಟ್ಟು ಇನ್ನೂ ಹಿಂದಿನ ದಿವಸಗ

ಳಲ್ಲಿ ಯಾವ ದಿವಸ ನಕ್ಷತ್ರ ಪಾದ ಪ್ರವೇಶ ಇರುವದೋ ಅದನ್ನೇ ನೋಡಿ ಬರೆದುಕೊಳ್ಳಬೇಕು. ಕೆಲವು ಸಾರೆ ವಕ್ರೀ ಎಂದು ಇದ್ದು ನಕ್ಷತ್ರ ಪಾದ ಪ್ರವೇಶ ಇರುವದು. ಅದನ್ನು ಬರೆದುಕೊಳ್ಳುವಾಗ ಗ್ರಹಚಾರದಲ್ಲಿ ವಕ್ರೀ ಎಂದೇ ಬರೆದುಕೊಳ್ಳಬೇಕು. ಯಾವಾಗಲೂ ಗ್ರಹಚಾರವನ್ನು ನಮ್ಮ ದಿವಸದ ಹಿಂದಿನ ದಿವಸಗಳಲ್ಲಿಯೇ ನೋಡಿ ಬರೆಯಬೇಕು. ಆದರೆ ನಮ್ಮ ದಿವಸದ ಮುಂದಿನ ದಿವಸ ಅಥವಾ ಜನನ ಕಾಲದ ಮುಂದಿನ ವೇಳೆಗೆ ಗ್ರಹಗಳು ನಕ್ಷತ್ರ ಚರಣವನ್ನು ಪ್ರವೇಶ ಮಾಡಿದರೆ ಅದನ್ನು ಬರೆದುಕೊಳ್ಳಬಾರದು. ಈಗ ನಮ್ಮ ಕಾರ್ತಿಕ ಶುದ್ಧ ಬುಧವಾರ ಉದಯು ೧೦ ಗಳಿಗೆ ೧೬ ಫಳ ಈ ದಿವಸ ಹಾಗೂ ಈ ವೇಳೆಯ ಹಿಂದಿನ ಸಮಯ ಅಥವಾ ಈ ದಿವಸದ ಗ್ರಹ ಚಾರದ ನಕ್ಷತ್ರ ಪ್ರವೇಶ ಚರಣಗಳನ್ನು ಬರೆಯಬೇಕು. (ಅಕಸ್ಮಾತ್ ಈ ಬುಧವಾರ ದಿವಸ ೧೫ ಗಳಿಗೆ ೧೦ ಫಳಕ್ಕೆ ಒಂದು ಗ್ರಹವು ನಕ್ಷತ್ರ ಚರಣವನ್ನು ಪ್ರವೇಶಮಾಡಿದರೆ ಅದನ್ನು ಬರೆದುಕೊಳ್ಳ ಬಾರದು) ಈಗ ಕಾರ್ತಿಕ ಮಾಸ ಶುಕ್ಲ ಪಕ್ಷದಲ್ಲಿ ಬುಧನು ಯಾವ ನಕ್ಷತ್ರ ಚರಣವನ್ನೂ ಪ್ರವೇಶ ಮಾಡಿಲ್ಲ. ಆದ್ದರಿಂದ ಆಶ್ವಿನ ಮಾಸದ ಕೃಷ್ಣ ಪಕ್ಷದಲ್ಲಿ ನೋಡಬೇಕು. ಆಶ್ವಿನ ಕೃಷ್ಣ ಪಕ್ಷ ೧೦ ಶನಿವಾರ ಸ್ವಾತಿ ನಕ್ಷತ್ರ ೪ ನೆಯ ಚರಣದಲ್ಲಿ ಬುಧ ವಕ್ರೀ ಇದ್ದಾನೆ.

ಗುರು— ಕಾರ್ತಿಕ ಶುದ್ಧ ೧೧ ರವಿವಾರ ಮಘ ನಕ್ಷತ್ರ ೪ನೆಯ ಚರಣದಲ್ಲಿ ಇದ್ದಾನೆ.

ಶುಕ್ರ— ಕಾರ್ತಿಕ ಶುದ್ಧ ೧೧ ರವಿವಾರ ಹಸ್ತ ನಕ್ಷತ್ರ ೧ ನೆಯ ಚರಣದಲ್ಲಿ ಇದ್ದಾನೆ.

ಶನಿ— ಕಾರ್ತಿಕ ಶುದ್ಧ ೫ ಸೋಮವಾರ ಉತ್ತರಾ ಭಾದ್ರಪದ ನಕ್ಷತ್ರ ೩ ನೆಯ ಚರಣದಲ್ಲಿ ವಕ್ರೀ ಇದ್ದಾನೆ.

ರಾಹು– ಕಾರ್ತಿಕ ಶುದ್ಧ ೮ ಗುರುವಾರ ಅಶ್ವಿನಿ ನಕ್ಷತ್ರ ೧ ನೆಯ ಚರಣದಲ್ಲಿ ಇದ್ದಾನೆ.


ಕೇತು— ಕಾರ್ತಿಕ ಶುದ್ಧ ೮ ಗುರುವಾರ ಚಿತ್ತ ನಕ್ಷತ್ರ ೩ ನೆಯ ಚರಣದಲ್ಲಿದ್ದಾನೆ.

ಈ ಗ್ರಹಚಾರವನ್ನು ಕೆಳಗಿನಂತೆ ಬರೆದುಕೊಳ್ಳಬೇಕು.

— ಗ್ರಹಚಾರ ಕುಂಡಲಿಯು —

ಗ್ರಹಗಳು	ರವಿ	ಚಂದ್ರ	ಕುಜ	ಬುಧ	ಗುರು	ಶುಕ್ರ	ಶನಿ	ರಾಹು	ಕೇತು
ನಕ್ಷತ್ರ	ವಿಶಾಖ	ಅಶ್ವಿನಿ	ಪೂಷಾ	ಸ್ವಾತಿ	ಮಘ	ಹಸ್ತ	ಉಭಾ	ಅಶ್ವಿನಿ	ಚಿತ್ತ
ಚರಣ	೩	೩	೪	೪ವಕ್ರೀ	೪	೧	೩ವಕ್ರೀ	೧	೩
ರಾಶಿ	ತುಲಾ	ಮೇಷ	ಧನು	ತುಲಾ	ಸಿಂಹ	ಕನ್ಯಾ	ಮೀನ	ಮೇಷ	ತುಲಾ

ಈ ಪ್ರಕಾರ ಗ್ರಹಚಾರ ಕುಂಡಲಿಯನ್ನು ಸಿದ್ಧಮಾಡಿಕೊಂಡ ನಂತರ ಜನನ ಲಗ್ನ ಕುಂಡಲಿಯನ್ನು ಹಾಕಿಕೊಂಡು ಅದರಲ್ಲಿ ಗ್ರಹಗಳನ್ನು ತುಂಬಬೇಕು:



ಕಾರ್ತಿಕ ಶುದ್ಧ ೧೪ ಬುಧವಾರ ೧೦-೧೬ ವೇಳೆಗೆ ಧನಸ್ಸು ಲಗ್ನ ಆಗುವದು. (ಲಗ್ನವನ್ನು ಹಿಂದೆ ಸಾಧಿಸಿದೆ ನೋಡಿರಿ)

ಮೇಷ ೧, ವೃಷಭ ೨, ಮಿಥುನ ೩, ಕರ್ಕ ೪, ಸಿಂಹ ೫, ಕನ್ಯಾ ೬ ತುಲಾ, ೭, ವೃಶ್ಚಿಕ ೮ ಧನಸ್ಸು ೯, ಮಕರ ೧೦, ಕುಂಭ ೧೧, ಮೀನ ೧೨ ಧನಸ್ಸು, ೯ನೆಯ ಲಗ್ನವು ಮತ್ತು ೯ ಅಂಕೆಯ ಮನೆಯಲ್ಲಿ ಲಗ್ನ ಎಂದು ಬರೆಯಬೇಕು, ಆದ್ದರಿಂದ ಲಗ್ನಕುಂಡಲಿಯ ಆರಂಭಕ್ಕೆ ೯ ಅಂಕೆಯನ್ನು ಬರೆದು ಕ್ರಮವಾಗಿ ಅಂಕೆಗಳನ್ನು ಬರೆಯಬೇಕು, ಮತ್ತು ಮೊದಲನೆಯ

೧೨	೧	೨	೩
೧೧			೪
೧೦			೫
೯ಲಗ್ನ	೮	೭	೬

ಸ್ಥಾನದಲ್ಲಿ ಲಗ್ನ ಎಂದು ಬರೆಯಬೇಕು. ಬಳಿಕ ಗ್ರಹಚಾರ ಚಕ್ರವನ್ನು ನೋಡಿಕೊಂಡು ಗ್ರಹಗಳು ಇರುವ ರಾಶಿಯನ್ನು ನೋಡಿ ಆ ರಾಶಿಯ ಅಂಕೆಯ ಸ್ಥಾನದಲ್ಲಿ ಕುಂಡಲಿಯೊಳು ರ. ಚಂ. ಕು ಬು. ಗು.ಶು. ಶ. ರಾ. ಕೇ. ಹೀಗೆ ಗ್ರಹಗಳನ್ನು ತುಂಬಬೇಕು. ಜನನ ಕುಂಡಲಿಯನ್ನು ತಯಾರಿರಿಸಿದಂತೆ ಪ್ರಶ್ನೆ ಹೇಳುವದಕ್ಕೆ ತತ್ಕಾಲ ಲಗ್ನ ಕುಂಡಲಿಯನ್ನು ತಯಾರಿಸಿಕೊಳ್ಳಬಹುದು.

ಜನನ ಲಗ್ನ ಕುಂಡಲಿಯು.

೧೨ ಶ(ವ)	೧ರಾ ಚಂ	೨	೩
೧೧			೪
೧೦			೫ ಗು
೯ಕು ಲಗ್ನ	೮	೭ರಕೇ ಬು(ವ)	೬ಶು

ಜನನ ಪತ್ರಿಕೆಯನ್ನು ತಯಾರಿಸಬೇಕಾದರೆ ಮೊದಲು ಕೂಸಿನ ಜನನಕಾಲವನ್ನು ಸ್ಥಿರ ಮಾಡಬೇಕು. ಬಳಿಕ ಜನನ ನಕ್ಷತ್ರದ ಆದ್ಯಂತಕಾಲ, ಇಷ್ಟಕಾಲಗಳನ್ನು ಮಾಡಿ ಜನನ ನಕ್ಷತ್ರ ಚರಣ,ರಾಶಿಗಳನ್ನೂ, ಜನ್ಮನಾಮವನ್ನೂ ನಿರ್ಧರಿಸಿ ಮಹರ್ದಶೆಯನ್ನು ದಶಾವರ್ಷ, ತಿಂಗಳು, ದಿವಸಗಳನ್ನು ಗೊತ್ತುಮಾಡಿಕೊಂಡು ಜನನ ಲಗ್ನವನ್ನು ಸಾಧಿಸಿಕೊಂಡು, ಆಲಗ್ನವನ್ನು ಸ್ಫುಟಗೊಳಿಸಿ ರಾಶಿ, ಭಾಗ, ಲಿಪ್ತಿ, ವಿಲಿಪ್ತಿಗಳನ್ನು ನಿಶ್ಚಯಮಾಡಿಕೊಂಡು, ಗ್ರಹಚಾರ ಚಕ್ರವನ್ನು ತಯಾರಿಸಿ ಜನನಲಗ್ನ ಕುಂಡಲಿ, ನವಾಂಶ ಕುಂಡಲಿ, ದ್ರೇಕ್ಕಾಣ ಕುಂಡಲಿ, ಚಂದ್ರಲಗ್ನ ಕುಂಡಲಿಗಳಲ್ಲಿ ಗ್ರಹಗಳನ್ನು ತುಂಬಬೇಕು. ನಂತರ ಮುಂದೆ ಬರೆದ ಪ್ರಕಾರ ಜನನ ಪತ್ರಿಕೆ ಬರೆದು ತಯಾರಿಸಬೇಕು (ನಮೂನೆಯನ್ನು ಮುಂದೆ ತೋರಿಸಿದೆ)

ಜನನ ಕಾಲವನ್ನು ಸ್ಥಿರ ಮಾಡುವದು. ವಹರ್ದಶಾ ಕ್ರಮದಿಂದ)

ಜನನ ಕಾಲದ ಗಳಿಗೆ, ಫಳಗಳನ್ನು ಬರೆದುಕೊಂಡು ಮೊದಲು ಫಳಗಳನ್ನು ದಶಾ ಸಂಖ್ಯೆ ೯ ರಿಂದ ಗುಣಿಸಿ ೬೦ ರಿಂದ ಭಾಗಿಸಲು ಬರುವ

ಲಬ್ಧವನ್ನು ಬೇರೆ ಕಡೆಗೆ ಬರೆದುಕೊಳ್ಳಬೇಕು. ನಂತರ ಜನನ ಗಳಿಗೆಗಳನ್ನು ದಶಾ ಸಂಖ್ಯೆ ೯ ರಿಂದ ಗುಣಿಸಿ ಅದರಲ್ಲಿ ಬೇರೆ ಕಡೆಗೆ ಬರೆದುಕೊಂಡ ಲಬ್ಧ ಸಂಖ್ಯೆಯನ್ನು ಕೂಡಿಸಿ ನಕ್ಷತ್ರ ಸಂಖ್ಯೆ ೨೭ ರಿಂದ ಭಾಗಿಸಲು ಉಳಿಯುವ ಶೇಷ ಸಂಖ್ಯೆಯಲ್ಲಿ ೧ ಧೃವ ಸಂಖ್ಯೆ ಕೂಡಿಸಬೇಕು. ಒಟ್ಟು ಸಂಖ್ಯೆಗೆ ೧ ಅಶ್ವಿನಿ, ೨ ಭರಣಿ, ೩ ಕೃತ್ತಿಕ ಈ ಪ್ರಕಾರ ಆ ಸಂಖ್ಯೆಗೆ ಅಶ್ವಿನಿಯಿಂದ ಎಣಿಸಿ ಯಾವ ನಕ್ಷತ್ರವಾಗುತ್ತದೆಂಬುದನ್ನು ತಿಳಿದುಕೊಂಡು ಆ ನಕ್ಷತ್ರ ವನ್ನು ಬರೆಯಬೇಕು. ಈಗ ಜನನ ಕಾಲದ ನಕ್ಷತ್ರವೂ, ಬರೆದುಕೊಂಡ ನಕ್ಷತ್ರವೂ ಒಂದೇ ಆದರೆ ಅಥವಾ ಒಂದೇ ಮಹಾದರ್ಶಿಯವು ಆದರೆ ಜನನ ಕಾಲ ಸರಿ ಅದೆ ಎಂದು ತಿಳಿಯಬೇಕು. ಒಂದು ವೇಳೆ ಜನನ ನಕ್ಷತ್ರ, ಮಹ ರ್ದಶೆಗಿಂತ ಬರೆದುಕೊಂಡ ಗಣಿತದ ನಕ್ಷತ್ರ ಮಹರ್ದಶೆ ಹೆಚ್ಚು ಬಂದರೆ ಒಂದು ಮಹರ್ದಶೆಗೆ ೭ ಘಳಗಳಂತೆ ಜನನಕಾಲದಲ್ಲಿ ಕಡಿಮೆಮಾಡಬೇಕು. ಜನನ ನಕ್ಷತ್ರ ಮಹರ್ದಶೆಗಿಂತ ಗಣಿತದ ನಕ್ಷತ್ರ ಮಹರ್ದಶೆ ಕಡಿಮೆ ಬಂದರೆ ಒಂದು ಮಹರ್ದಶೆಗೆ ೭ ಘಳಗಳಂತೆ ಜನನಕಾಲದಲ್ಲಿ ಕೂಡಿಸಬೇಕು. ಈ ಪ್ರಕಾರ ಜನನ ನಕ್ಷತ್ರ ಮಹರ್ದಶಾ, ಗಣಿತ ಸಂಖ್ಯೆಯ ನಕ್ಷತ್ರ ಮಹ ರ್ದಶಾ ಒಂದೇ ಆಗುವ ವರೆಗೆ ಜನನ ಕಾಲದಲ್ಲಿ ಹೆಚ್ಚು ಕಡಿಮೆ ಮಾಡಿ ನಿರ್ಧರಿಸಿದ್ದೇ ನಿಶ್ಚಿತ ಜನನ ಕಾಲವಾಗುವದು. ಈ ಪ್ರಕಾರ ಮಹರ್ದಶೆ ಯಿಂದ ಜನನ ಕಾಲವನ್ನು ಸ್ಥಿರಮಾಡಿದ ನಂತರ ಮೊದಲು ಘಳಗಳನ್ನು ೯ ರಿಂದ ಗುಣಿಸಿ ೬೦ ರಿಂದ ಭಾಗಿಸಿದರೆ ಉಳಿಯುವ ಶೇಷ ಸಂಖ್ಯೆಯ ಬಗ್ಗೆ ವಿಚಾರಿಸಬೇಕು. ಜನನವು ೧ ನೆಯ ಚರಣದಲ್ಲಿ ಆದರೆ ಶೇಷವು ೧೫ ಅಥವಾ ಅದಕ್ಕೂ ಕಡಿಮೆ ಇರಬೇಕು. ೨ ನೆಯ ಚರಣದಲ್ಲಾದರೆ ಶೇಷವು ೧೬ ರಿಂದ ೩೦ ವರೆಗೆ ಉಳಿಯಬೇಕು. ೩ ನೆಯ ಚರಣದಲ್ಲಾದರೆ ೩೧ ರಿಂದ ೪೫ ವರೆಗೆ ಉಳಿಯಬೇಕು, ೪ ನೆಯ ಚರಣದಲ್ಲಾದರೆ ೪೬ ರಿಂದ ೫೯ ವರೆಗೆ ಉಳಿಯಬೇಕು. ಹೀಗೆ ಚರಣ ಸಂಖ್ಯೆಗೆ ಶೇಷ ಸಂಖ್ಯೆ ಸರಿ ಹೊಂದುವಂತೆ ೧-೨ ಘಳ ಹೆಚ್ಚು ಕಡಿಮೆ ಮಾಡಿ ಜನನ ಕಾಲದ ಸೂಕ್ಷ್ಮ ವೇಳೆಯನ್ನು ಗೊತ್ತುಮಾಡಿಕೊಳ್ಳಬೇಕು.

ಉದಾಹರಣೆ— ಶಕೆ ೧೮೪೯ ಪ್ಲವಂಗನಾಮ ಸಂವತ್ಸರ ಕಾರ್ತಿಕ ಶುದ್ಧ ೧೪ ಬುಧವಾರ ತಾರೀಖು. ೧೫-೧೧-೧೯೬೭ ನೆಯ ದಿವಸ ಉದಯ

೧೦ ಗಳಿಗೆ ೧೬ ಫಳಕ್ಕೆ ಗಂಡು ಕೂಸು ಜನನವಾಯಿತು. ಈ ದಿವಸ ಅಶ್ವಿನಿ ನಕ್ಷತ್ರ ೬೦-೦ ಗಳಿಗೆ ಇದೆ. ಜನನ ನಕ್ಷತ್ರ ಅಶ್ವಿನಿ ೩ ನೆಯ ಚರಣ. ಅಶ್ವಿನಿ ನಕ್ಷತ್ರವು ಕೇತುಮಹರ್ದಶೆ ಆಗುತ್ತದೆ (ನಕ್ಷತ್ರಗಳ ಮಹರ್ದಶಾ ತಿಳಿಯಲು ಮುಂದೆ ಕೋಷ್ಟಕ ಇದೆ ನೋಡಿರಿ.)

ಜನನ ಕಾಲ.

ಗಳಿಗೆ ಫಳ

೧೦ — ೧೬

ಫಳ	ಗಳಿಗೆ	
೧೬	೧೦	೨೭) ೯೨ (೩
×೯	×೯	೮೧
೬೦)೧೪೪(೨ ಲಬ್ಧ	೯೦	೧೧ ಶೇಷ
೧೨೦	೨ ಲಬ್ಧ	+೧ ಧೃವ
೨೪ ಶೇಷ	೯೨	೧೨

೧೨ ಈ ಅಂಕೆಗೆ ಉತ್ತರೆ ನಕ್ಷತ್ರ ರವಿಮಹರ್ದಶಾ ಆಯಿತು.

ಜನನ ಕಾಲದ ಕೇತು ಮಹರ್ದಶೆಗೆ ರವಿಮಹರ್ದಶಾ ೨ ದಶಾ ಹೆಚ್ಚು ಆಯಿತು. ಆದ್ದರಿಂದ ೧ ದಶಾಕ್ಕೆ ೭ ಫಳದಂತೆ ೭×೨=೧೪ ಫಳಗಳನ್ನು ಜನನ ಕಾಲದಲ್ಲಿ ಕಳೆಯಬೇಕು.

ಗಳಿಗೆ ಫಳ

೧೦ — ೧೬

೦ — ೧೪ ಕಳೆಯುವದು.

೧೦ — ೨ ಇದು ಸ್ಥಿರವಾದ ಜನನ ಕಾಲವು

ಈಗ ಸೂಕ್ಷ್ಮವಾಗಿ ಜನನ ಕಾಲವನ್ನು ಸ್ಥಿರಮಾಡಬೇಕಾದರೆ

ಗಳಿಗೆ ಫಳ

೧೦ - ೨

ಇದರಲ್ಲಿ ಫಳ ೨ಕ್ಕೆ ೯ ರಿಂದ ಗುಣಿಸಲು ೧೮ ಆಯಿತು. ಅದಕ್ಕೆ ೬೦ ರಿಂದ ಭಾಗಿಸಲು ಲಬ್ಧಂ ಶೇಷ ೧೮ ಉಳಿಯಿತು. ಆದರೆ ಜನನವು ಅಶ್ವಿನಿ ನಕ್ಷತ್ರ೩ನೆಯ ಚರಣ ವಿರುವದರಿಂದ ಶೇಷವು ೩೧ ರಿಂದ ೪೫ ವರೆಗೆ ಉಳಿಯಬೇಕು. ಆದರೆ ಶೇಷ ೧೮ ಉಳಿದಿದೆ ಆದ್ದರಿಂದ ೨ ಫಳ ಕೂಡಿಸಲು (೨ + ೨) ೪ ಫಳ ಆಯಿತು. ಇದಕ್ಕೆ ೯ ರಿಂದ ಗುಣಿಸಲು (೪ × ೯) ೩೬ ಆಯಿತು. ಇದನ್ನು ೬೦ ರಿಂದ ಭಾಗಿಸಲು ಲಬ್ಧ ೦ ಶೇಷ ೩೬ ಉಳಿಯಿತು. ಅಂದರೆ ಜನನ ನಕ್ಷತ್ರ ಚರಣಕ್ಕೂ ಶೇಷ ಸಂಖ್ಯೆಗೂ ಸರಿ ಆಯಿತು. ಆದ್ದರಿಂದ ೧೦ ಗಳಿಗೆ ೪ ಫಳ ಸೂಕ್ಷ್ಮವಾದ ಸ್ಥಿರ

೨
× ೯
೧೮

೬೦)೧೮(೦ ಲಬ್ಧ
೧೮ ಶೇಷ

ಗಳಿಗೆ ಫಳ
೧೦ – ೪
ಸ್ಥಿರ ಜನನ ಕಾಲವು (ಸೂಕ್ಷ್ಮ) ಜನನಕಾಲವು.

ನಕ್ಷತ್ರಗಳಿಗೆ ಮಹರ್ದಶೆಗಳು.

ಮಹರ್ದಶೆ	ರವಿದಶಾ ೬ ವರ್ಷ	ಚಂದ್ರದಶಾ ೧೦ ವರ್ಷ	ಕುಜದಶಾ ೭ ವರ್ಷ	ರಾಹುದಶಾ ೧೮ ವರ್ಷ	ಗುರುದಶಾ ೧೬ ವರ್ಷ
ನಕ್ಷತ್ರಗಳು	ಕೃತ್ತಿಕ ಉತ್ತರ ಉ. ಷಾಡ	ರೋಹಿಣಿ, ಹಸ್ತ ಶ್ರವಣ	ಮೃಗಶಿರ ಚಿತ್ತ ಧನಿಷ್ಠ	ಆಂದ್ರ ಸ್ವಾತಿ ಶತತಾರಾ	ಪುನರ್ವಸು ವಿಶಾಖ ಪೂ. ಭಾದ್ರ
ಮಹರ್ದಶೆ	ಶನಿದಶಾ ೧೯ ವರ್ಷ	ಬುಧದಶಾ ೧೭ ವರ್ಷ	ಕೇತುದಶಾ ೭ ವರ್ಷ	ಶುಕ್ರದಶಾ ೨೦ ವರ್ಷ	●
ನಕ್ಷತ್ರಗಳು	ಪುಷ್ಯ ಅನುರಾಧ ಉ. ಭಾದ್ರ	ಆಶ್ಲೇಷ ಜ್ಯೇಷ್ಠ ರೇವತಿ	ಮಘ ಮೂಲ ಅಶ್ವಿನಿ	ಹುಬ್ಬ ಪೂ. ಷಾಢ ಭರಣಿ	●

ನೋಡುವ ರೀತಿ :— ಕೃತ್ತಿಕ, ಉತ್ತರ, ಉ–ಷಾ ಈ ನಕ್ಷತ್ರಗಳಿಗೆ ರವಿ ಮಹರ್ದಶೆಯು ೬ ವರ್ಷ ಇರುತ್ತದೆ ಇದೇ ಪ್ರಕಾರ ಉಳಿದ. ನಕ್ಷತ್ರಗಳಿಗೂ ನೋಡಬೇಕು.

ಜನನ ಪತ್ರಿಕೆಯ ಒಂದು ನಮೂನೆ

|| ಶ್ರೀ ||

ಗಣಾನಾಥೋ ರವಿ ಮುಖ್ಯಖೇಚರಾಃ ಕುಲದೇವೋ ವಿಧಿ
ವಿಷ್ಣು ಶಂಕರಾಃ |
ಉದಯಾಂಶಾಧಿಪತಿಃ ಪ್ರಕುರ್ವತಾಂ ಚಿರಮಾಯುಃ ಖಲು
ಯಸ್ಯ ಪತ್ರಿಕಾ ||

ಜನನೀ ಜನ್ಮಸೌಖ್ಯಾನಾಂ ವರ್ಧಿನೀಕುಲ ಸಂಪದಾಂ |
ಪದವೀಪೂರ್ವ ಪುಣ್ಯಾನಾಂ ಲಿಖ್ಯತೇ ಜನ್ಮಪತ್ರಿಕಾ ||

ಸಕಲಾ ಸಂಪದಸ್ಸಂತು ಸ್ವಸ್ತಿ ಶ್ರೀ ವಿಜಯಾಭ್ಯುದಯ ಶ್ರೀಮನ್ನೃಪ ಶಾಲಿವಾಹನ ಶಕೆ ೧೮೮೨ ಶ್ರೀಮತ್ ಶಾರ್ವರಿ ಸಂವತ್ಸರೇ ಉತ್ತರ ಅಯನೇ ಶಿಶಿರ ಋತೌ ಮಾಘ ಮಾಸೇ ಶುಕ್ಲಪಕ್ಷೇ ಷಷ್ಠ್ಯಾಂ ತಿಥೌ ರವಿ ವಾಸರೇ ಉತ್ತರಾ ಭಾದ್ರಪದ ನಕ್ಷತ್ರ ಘಟಿಕಾ ೪–೨೩ ಶಿವ ಯೋಗ ಘಟಿಕಾ ೧೦-೩೩ ತೈತುಲ ಕರಣ ಘಟಿಕಾಃ ೨೨-೩೧ ಅಹಃ ಪ್ರಮಾಣ ಘಟಿಕಾಃ ೨೭—೫೨ ಉದಯಲಗ್ನ ಭುಕ್ತಿಕಾಲ ಘಟಿಕಾ ೧—೩೧ ಸೂರ್ಯೋದಯಾಸ್ತಕಾಲ ಸ್ಟ್ಯಾ. ಟಾ. ೭–೩, ೬–೧೫ ಕ್ರಿಸ್ತ ಶಕಾಬ್ದಾ ೧೯೬೧ ಜನೇವರಿ ೨೨ ಏವಂ ಪಂಚಾಂಗ ಶುದ್ಧಾವಸ್ಮಿನ್ ದಿವಸೇ ಶ್ರೀಮನ್ಮಹಾ ಮಾರ್ತಾಂಡ ಮಂಡಲೋದಯಾತ್ ಶಿಶೋಃ ಜನನಕಾಲ ಘಟಿಕಾ ೦-೫೩ (ಉದಯ ೭—೨೦ A. M.) ತತ್ಸಮಯೇ ಮಕರ ಲಗ್ನೇ ವೃಷಭಾಂಶೇ ಶ್ರೀಮದುಮಾರಮಣ ಚರಣ ಸೇವಕ, ಶಿವಭಕ್ತಪ್ರೇಮಿ ಗದಗ ಗ್ರಾಮನಿವಾಸಿನಃ ಅಂಗಡಿ ಶಂಕರಪ್ಪ ಅಸ್ಯ ಧರ್ಮಪತ್ನ್ಯೇನಯ ಕುಲಾನಂದದಾಯಿನೀ ಪತಿವ್ರತಾ ಚೂಡಾಮಣಿ ಶ್ರೀಮತಿ ಪಾರ್ವತಿದೇವಿ ನಾಮ್ನೀ ಗರ್ಭಸುಧಾಶಿಂಧೌ ಪೂರ್ಣ ಚಂದ್ರಸ್ಸಮಾನ ಪುತ್ರ ರತ್ನಮಜೀಜನತ್ ತಸ್ಯಾಭಿದಾನಸ್ಯ ಅವಕಹಡ ಚಕ್ರಾನುಸಾರೇಣ ಉತ್ತರಾಭಾದ್ರಪದ ನಕ್ಷತ್ರ ಚತುರ್ಥ ಚರಣವಶಾತ್ "ಥ" ಏತಜ್ಜನ್ಮನಾಮಾಕ್ಷರ ಅಥ ವ್ಯವಹಾರ ನಾಮಾ

ಪಿತ್ರೈ ಪ್ರೀತಿನಾಮ ಲಿಂಗಾನಂದ ಏಕಪ್ಸನಾಮ ಸಂಪ್ರತಿಷ್ಠಿತಮಸ್ತು ಮಾತಾ-ಪಿತೃ-ಶಿಶು ದೀರ್ಘಾಯುರಸ್ತು. ಶುಭಮಸ್ತು.

ಅಯಂ ಜಾತಕಸ್ಯ ಜನ್ಮರಾಶಿಃ ಮೀನಃ ರಾಶ್ಯಧಿಪಃ ಗುರುಃವಿಪ್ರ ವರ್ಣಃ ಗೋಃ ಯೋನಿಃ ಮನುಷ್ಯಗಣಃ ಮಧ್ಯನಾಡಿಃ ಏತತ್ ದೀಕ್ಷಾ, ವಿವಾಹಕಾಲೇ ಚಿಂತನೀಯಂ.

ಜನನ ಲಗ್ನಕುಂಡಲಿ

೧೨ ಚಂ	೧	೨	೩ ಕು
೧೧ ಶು ಕೇ			೪
೧೦ ರ ಬು ಲಗ್ನ			೫ ರಾ
೯ ಗು ಶ	೮	೭	೬

ನವಾಂಶ ಕುಂಡಲಿ

೧೨ ರ	೧	೨ ಶು ಲಗ್ನ	೩
೧೧ ಕೇ			೪ ಬು
೧೦ ಕು			೫ ರಾ
೯ ಗು ಶ	೮ ಚಂ	೭	೬

ಲಗ್ನಸ್ಫುಟ — ೯ ರಾಶಿ ೧೪ ಭಾಗ ೪೦ ಲಿಪ್ತಿ ೦ ವಿಲಿಪ್ತಿ

ಷಡ್ವರ್ಗ ಚಕ್ರ

ಲಗ್ನ	ಹೋರಾ	ದ್ರೇಕ್ಕಾಣ	ನವಾಂಶ	ದ್ವಾದಶಾಂಶ	ತ್ರಿಶಾಂಶ
ಮಕರ	ಕರ್ಕ	ವೃಷಭ	ವೃಷಭ	ಮಿಥುನ	ಮೀನ
ಶನಿ	ಚಂದ್ರ	ಶುಕ್ರ	ಶುಕ್ರ	ಬುಧ	ಗುರು

ಗ್ರಹಚಾರ ಚಕ್ರ.

ಗ್ರಹ	ರವಿ	ಚಂದ್ರ	ಕುಜ	ಬುಧ	ಗುರು	ಶುಕ್ರ	ಶನಿ	ರಾಹು	ಕೇತು
ನಕ್ಷತ್ರ	ಉಷಾ	ಉಭಾ	ಆರಿ	ಶ್ರವ	ಉಷಾ	ಪೂಭಾ	ಉಷಾ	ಹುಬ್ಬ	ಶತ
ಚರಣ	೪	೪	೨(ವ)	೪	೧	೨	೧	೧	೩
ರಾಶಿ	ಮಕರ	ಮೀನ	ಮಿಥುನ	ಮಕರ	ಧನು	ಕುಂಭ	ಧನು	ಸಿಂಹ	ಕುಂಭ

ಈ ಜಾತಕನ ಜನನಕಾಲಕ್ಕೆ ಶನಿ ಮಹರ್ದಶೆ ೧೯ ವರ್ಷ ಇದ್ದು ಆದರಲ್ಲಿ ೧೭ ವರ್ಷ ೧೦ ತಿಂಗಳು ೬ ದಿವಸ ಮಾತೃಗರ್ಭ ಗತವಾಗಿ ಜನನಾದಿ ೧ ವರ್ಷ ೧ ತಿಂಗಳು ೨೪ ದಿವಸ ಪರ್ಯಂತ ಶನಿ ಮಹರ್ದಶೆ ನಡೆಯುವದು. ಆಮೇಲೆ ೧೭ ವರ್ಷ ಬುಧ ಮಹರ್ದಶೆ ನಡೆಯುವದು. ಇತ್ಯಾದಿ.

ಈ ಜಾತಕನಿಗೆ ಫಾಲ್ಗುಣ ಮಾಸ ೫ ೧೦-೧೫ ತಿಥಿಗಳು ಶುಕ್ರ ವಾರ ಆಶ್ಲೇಷ ನಕ್ಷತ್ರ ವಜ್ರ ಯೋಗ ಚತುಷ್ಪಾದ ಕರಣ ೧೨ ನೆಯ ಚಂದ್ರ ಇವು ಘಾತಕಗಳಿದ್ದು ಇವುಗಳಲ್ಲಿ ಪ್ರಯಾಣ, ಯಾತ್ರಾ, ವಾಣಿಜ್ಯ, ರಾಜದರ್ಶನಾದಿಗಳನ್ನು ಮಾಡಕೂಡದು.

(ನಕ್ಷತ್ರ ಫಲ, ರಾಶಿ ಫಲ, ಲಗ್ನ ಫಲ, ಗ್ರಹಗಳ ಶುಭಾಶುಭ ಫಲ, ಕಟಕಾದಿ ವಿಷಯ ಇತ್ಯಾದಿ ವಿಷಯ ಸಂಪೂರ್ಣವಾಗಿ ಬರೆದ ನಂತರ ಕೊನೆಯಲ್ಲಿ ಕೆಳಗಿನ "ಬ್ರಹ್ಮಾಕರೋತು" ಈ ಶ್ಲೋಕವನ್ನು ಬರೆದು ಮುಗಿಸಬೇಕು.)

ಬ್ರಹ್ಮಾ ಕರೋತು ದೀರ್ಘಾಯುಃ ವಿಷ್ಣುಃ ಕುರ್ಯಾಶ್ಚ ಸಂಪದಂ।
ಹರೋ ರಕ್ಷತು ಗಾತ್ರಾಣಿ ಯಸ್ಯೈಷಾಂ ಜನ್ಮಪತ್ರಿಕಾ ॥
॥ ಶುಭಂ ಭವತು ॥

ಜನನ ಕಾಲ ಸ್ಥಿರ ಮಾಡುವದು (ತತ್ವ ನಿರ್ಣಯದಿಂದ)

ಜನನ ಕಾಲದಿಂದ ಸ್ತ್ರೀ-ಪುರುಷ ಜನನವಾದದ್ದನ್ನು ನೋಡಿ ಸ್ಥಿರ ಮಾಡಬೇಕು. ೧ ಪೃಥ್ವಿ, ೨ ಅಪ್ ೩ ತೇಜಸ್ಸು, ೪ ವಾಯು, ೫ ಆಕಾಶ, ಈ ಪ್ರಕಾರ ೫ ತತ್ವಗಳು.

ಪಂಚತತ್ವಗಳ ಕಾಲಪ್ರಮಾಣ.

ತತ್ವಗಳು	ಗಳಿಗೆ ಫಳ
ಪೃಥ್ವಿ	೦—೧೫
ಅಪ್	೦—೩೦
ತೇಜಸ್ಸು	೦—೪೫
ವಾಯು	೧—೦
ಆಕಾಶ	೧—೧೫
ಒಟ್ಟು	೩—೪೫

ಪಂಚತತ್ವಗಳ ಒಟ್ಟು ಅವಧಿಯು ೩ ಗಳಿಗೆ ೪೫ ಫಳಗಳು ಈ ೫ ತತ್ವಗಳು ಪ್ರತಿದಿವಸ ಸೂರ್ಯೋದಯದಿಂದ ಆರೋಹಣ ಅವರೋಹಣ ಕ್ರಮದಿಂದ ತಿರುಗುತ್ತಿರುವವು. ಪ್ರತಿದಿವಸ ಸೂರ್ಯೋದಯಕ್ಕೆ ಆರೋಹಣ ನಂತರ ಅವರೋಹಣವು.

ಆರೋಹಣ		ಅವರೋಹಣ.	
ಪೃಥ್ವಿ	೦–೧೫	ಆಕಾಶ	೧–೧೫
ಅಪ್	೦–೩೦	ವಾಯು	೧–೦
ತೇಜಸ್ಸು	೦–೪೫	ತೇಜಸ್ಸು	೦–೪೫
ವಾಯು	೧–೦	ಅಪ್	೦–೩೦
ಆಕಾಶ	೧–೧೫	ಪೃಥ್ವಿ	೦–೧೫
ಒಟ್ಟು	೩–೪೫	ಒಟ್ಟು	೩–೪೫

ಆಯಾ ವಾರಗಳಲ್ಲಿ ಸೂರ್ಯೋದಯಕ್ಕೆ ಇರುವ ತತ್ವಗಳು.

ಆದಿತ್ಯವಾರ, ಮಂಗಳವಾರ ಸೂರ್ಯೋದಯದಿಂದ ತೇಜಸ್ಸು ತತ್ವ ಆರಂಭವಾಗುವದು.

ಸೋಮವಾರ, ಶುಕ್ರವಾರ	ಸೂರ್ಯೋದಯಕ್ಕೆ ಅಪ್ ತತ್ವ ಆರಂಭವಾಗುವದು
ಬುಧವಾರ	ಸೂರ್ಯೋದಯಕ್ಕೆ ಪೃಥ್ವಿ ತತ್ವ ಆರಂಭವಾಗುವದು.
ಗುರುವಾರ	ಸೂರ್ಯೋದಯ ಸಮಯದಿಂದ ಆಕಾಶ ತತ್ವ ಪ್ರಾರಂಭವಾಗುವದು.
ಶನಿವಾರ	ಸೂರ್ಯೋದಯದಿಂದ ವಾಯು ತತ್ವ ಪ್ರಾರಂಭವಾಗುವದು.

ಬುಧವಾರ.

ಆರೋಹಣ	ಅವರೋಹಣ
ಪೃಥ್ವಿ	ಆಕಾಶ
ಅಪ್	ವಾಯು
ತೇಜಸ್ಸು	ತೇಜಸ್ಸು
ವಾಯು	ಅಪ್
ಆಕಾಶ	ಪೃಥ್ವಿ

ಸೋಮವಾರ, ಶುಕ್ರವಾರ.

ಆರೋಹಣ	ಅವರೋಹಣ
ಅಪ್	ಪೃಥ್ವಿ
ತೇಜಸ್ಸು	ಆಕಾಶ
ವಾಯು	ವಾಯು
ಆಕಾಶ	ತೇಜಸ್ಸು
ಪೃಥ್ವಿ	ಅಪ್

ಆದಿತ್ಯವಾರ, ಮಂಗಳವಾರ.

ಆರೋಹಣ	ಅವರೋಹಣ
ತೇಜಸ್ಸು	ಅಪ್
ವಾಯು	ಪೃಥ್ವಿ
ಆಕಾಶ	ಆಕಾಶ
ಪೃಥ್ವಿ	ವಾಯು
ಅಪ್	ತೇಜಸ್ಸು

ಶನಿವಾರ.

ಆರೋಹಣ	ಅವರೋಹಣ
ವಾಯು	ತೇಜಸ್ಸು
ಆಕಾಶ	ಅಪ್
ಪೃಥ್ವಿ	ಪೃಥ್ವಿ
ಅಪ್	ಆಕಾಶ
ತೇಜಸ್ಸು	ವಾಯು

ಗುರುವಾರ

ಆರೋಹಣ	ಅವರೋಹಣ.
ಆಕಾಶ	ವಾಯು

ಈ ಪ್ರಕಾರ ಆಯಾವಾರಗಳಲ್ಲಿ ಸೂರ್ಯೋದಯದಿಂದ ಆಯಾತತ್ವಗಳು

ಪೃಥ್ವಿ	ತೇಜಸ್ಸು	ಮೊದಲು ಆರೋಹಣ ನಂತರ ಅವರೋ
ಅಪ್	ಅಪ್	ಹಣ ಕ್ರಮದಿಂದ ತಿರುಗುತ್ತಿರುವವು.
ತೇಜಸ್ಸು	ಪೃಥ್ವಿ	
ವಾಯು	ಆಕಾಶ	

—ಸ್ತ್ರೀ ಪುರುಷ ತತ್ವಗಳು—

ಪೃಥ್ವಿ, ತೇಜಸ್ಸು, ಆಕಾಶ ಈ ಮೂರು ತತ್ವಗಳಾದರೆ ಪುರುಷ (ಗಂಡು) ಜನನವು. ಅಪ್ ವಾಯು ಈ ಎರಡು ತತ್ವಗಳಾದರೆ ಸ್ತ್ರೀ (ಹೆಣ್ಣು) ಜನನವು.

ಉದಾಹರಣೆ— ಕಾರ್ತಿಕ ಶುದ್ಧ ೧೪ ಬುಧವಾರ ಉದಯ ೧೦ ಗಳಿಗೆ, ೪ ಫಳಕ್ಕೆ ಪುರುಷ (ಗಂಡು) ಜನನವು ನಮ್ಮ ಸ್ಥಿರವಾದ ಜನನ ಕಾಲವು. ಮತ್ತು ಬುಧವಾರ ಸೂರ್ಯೋದಯಕ್ಕೆ ಪೃಥ್ವಿತತ್ವ ಆರಂಭ ವಾಗುವದು.

	ಗಳಿಗೆ – ಫಳ	
ಆರೋಹಣ	೩ – ೪೫	
ಅವರೋಹಣ	೩ – ೪೫	
	೭ – ೩೦	ಈಗ ೧೦–೦ ಗಳಿಗೆಯಿಂದ ಆಕಾಶ
ಪೃಥ್ವಿ	೦ – ೧೫	ತತ್ವವು ಆರಂಭವಾಗವದು. ನಮ್ಮ
ಅಪ್	೦ – ೩೦	ಜನನ ಕಾಲವು ೧೦–೪ ಅದೆ ಅದ್ದ
ತೇಜಸ್ಸು	೦ – ೪೫	ರಿಂದ ಆಕಾಶ ತತ್ವದಲ್ಲಿ ಜನನವಾಯಿತು.
ವಾಯು	೧ – ೦೦	ಹಾಗೂ ಆಕಾಶತತ್ವದಲ್ಲಿ ಜನನವಾದ್ದ
	೧೧ – ೦೦	ಪುರುಷ ಜನನವೆಂದು ಇದೆ. ಅದ್ದರಿಂದ

ನಮ್ಮ ವೇಳೆಯು ಸರಿ ಆದಂತಾಯಿತು. ಇಲ್ಲಿ ಸ್ತ್ರೀ –ಪುರುಷ ಜನನವು ಸರಿಯಾಗದಿದ್ದರೆ ಹೆಚ್ಚು ಕಡಿಮೆ ಮಾಡಿಸಿ ಸರಿಪಡಿಸಿಕೊಂಡು ಜನನ ಕಾಲ ವನ್ನು ನಿರ್ಧರಿಸಬೇಕು.

ಜನನಕಾಲ ಸ್ಥಿರಮಾಡುವದು. (ಹೊಸ ಪದ್ಧತಿ)

ಜನನಕಾಲದ ಗಳಿಗೆ ಫಳಗಳನ್ನು ೨ ರಿಂದ ಗುಣಿಸಬೇಕು. ಮತ್ತು ಅದರಲ್ಲಿ ಜನನ ಲಗ್ನವು. ಮೇಷ, ಕರ್ಕ, ತುಲಾ, ಮಕರ ಈ ಚರಲಗ್ನವಾದರೆ ೫, ವೃಷಭ, ಸಿಂಹ, ವೃಶ್ಚಿಕ, ಕುಂಭ. ಈ ಸ್ಥಿರ ಲಗ್ನದಲ್ಲಿ ಜನನವಾದರೆ, ೯, ಕನ್ಯಾ, ಧನಸು ಮೀನ. ಈ ದ್ವಿ ಸ್ವಭಾವ ಲಗ್ನದಲ್ಲಿ ಜನನವಾದರೆ ೭ ಕೂಡಿಸ ಬೇಕು. ಪುನಃ ಆ ಗಳಿಗೆ ಫಳಗಳನ್ನು ೪ ರಿಂದ ಗುಣಿಸಿ ೨೭ ರಿಂದ ಭಾಗಾಕಾರ ಮಾಡಬೇಕು, ಆಗ ಉಳಿಯುವ ಶೇಷ ಸಂಖ್ಯೆಗೆ ಆಶ್ವಿನಿಯಿಂದ ಮತ್ತು ಚಿತ್ತ ನಕ್ಷತ್ರದಿಂದ ಎಣಿಸಿ ಬರುವ ನಕ್ಷತ್ರಗಳನ್ನು ಬೇರೆ ಕಡೆಗೆ ಬರೆಯಬೇಕು. ಎರಡೂ ನಕ್ಷತ್ರಗಳಲ್ಲಿ ಈ ಪ್ರಕಾರ ಬರುವದೊಂದು ಜನನ ನಕ್ಷತ್ರವಾದರೆ ಜನನ ಕಾಲವು ಸರಿ ಇದೆ ಎಂದು ತಿಳಿಯ ಬೇಕು. ಒಂದು ವೇಳೆ ಹಾಗೆ ಜನನ ನಕ್ಷತ್ರದಿಂದ ಮುಂದಿನ ನಕ್ಷತ್ರ ಅಥವಾ ಹಿಂದಿನ ನಕ್ಷತ್ರ ಬಂದದ್ದಾದರೆ ಒಂದೊಂದು ನಕ್ಷತ್ರಕ್ಕೆ ೧೨ ಫಳಗಳಂತೆ ಜನನಕಾಲವನ್ನು ಹೆಚ್ಚುಕಡಿಮೆಮಾಡಬೇಕು. ಅಂದರೆ ನಕ್ಷತ್ರದ ಮುಂದಿನ ನಕ್ಷತ್ರ ಬಂದರೆ ೧ ನಕ್ಷತ್ರಕ್ಕೆ ೧೨ ಫಳಗಳಂತೆ ಜನನ ಕಾಲದಲ್ಲಿ ಕಳೆಯಬೇಕು. ಹಿಂದಿನ ನಕ್ಷತ್ರ ಬಂದರೆ ೧ ನಕ್ಷತ್ರಕ್ಕೆ ೧೨ ಫಳಗಳಂತೆ ಜನನ ಕಾಲದಲ್ಲಿ ಕೂಡಿಸಬೇಕು. ಹಾಗೂ ಜನನ ಕಾಲವನ್ನು ನಿರ್ಧರಿಸಬೇಕು.

ಉದಾಹರಣೆ— ಶಕೆ ೧೮೮೯ ಪ್ಲವಂಗ ಸಂವತ್ಸರ ಕಾರ್ತಿಕ ಶುದ್ಧ ೧೪ ಬುಧವಾರ ಉದಯ ೧೧೦ ಗಳಿಗೆ ೪ ಫಳಕ್ಕೆ ಜನನವು. ಮತ್ತು ಜನನ ಲಗ್ನವು ಧನಸ್ಸು ಈ ಪ್ರಕಾರ ಅದೆ.

ಗಳಿಗೆ–ಫಳ
೧೦ - ೪
×೨
―――――
೨೦–೮
೭–೦ ಧನಸ್ಸು ಲಗ್ನವು ದ್ವಿಸ್ವಭಾವ ಆದ್ದರಿಂದೆ ೭
―――――
೨೭–೮ ಕೂಡಿಸಬೇಕು.

```
  ೨೭–೮                                   ೨೭)೩೨(೧ ಲಬ್ಧ
    ×೪                                      ೨೭
  ─────                                   ─────
೧೦೮–೩೨ ಇದನ್ನು ೨೭ ರಿಂದ ಭಾಗಿಸಬೇಕು.            ೦೫

೨೭)೧೦೮–೩೨(೪
   ೧೦೮
   ─────
   ೦೦೦
    +೧ ಧೃವ
  ─────
     ೧
```

ಈಗ ೩೨ ಫಳ ಇದ್ದು ೨೭ ರಿಂದ ಭಾಗಿಸಲು ಲಬ್ಧ ೧ ಬರುತ್ತದೆ. ಆದ್ದರಿಂದ ಮೊದಲು ಉಳಿದ ಶೇಷ ೦ ದಲ್ಲಿ ೧ ಧೃವ ಕೂಡಿಸಬೇಕು. ಅಂದರೆ ೧ ಅಂಕೆಗೆ ಅಶ್ವಿನಿ ನಕ್ಷತ್ರ ಆಯಿತು. ಆದ್ದರಿಂದ ಜನನ ನಕ್ಷತ್ರವೂ ಈ ಸಂಖ್ಯೆಯ ನಕ್ಷತ್ರವೂ ಸರಿಯಾದದ್ದರಿಂದ ಜನನ ಕಾಲವು ಸರಿ ಅದೆಯೆಂದು ತಿಳಿಯಬೇಕು.

ಜನನ ನಕ್ಷತ್ರದ ಆದ್ಯಂತ, ಇಷ್ಟಕಾಲ ತೆಗೆಯುವದು.

ಜನನ ನಕ್ಷತ್ರವು ಆರಂಭದಿಂದ ಕೊನೆಯ ವರೆಗೆ ಒಟ್ಟು ಎಷ್ಟು ಗಳಿಗೆ ಫಳ ಇರುವದೆಂಬುದನ್ನು ತೆಗೆಯುವದೇ ಆದ್ಯಂತ ಕಾಲವು. ಜನನ ವೇಳೆಗೆ ಆ ನಕ್ಷತ್ರವು ಕೂಡಿ ಎಷ್ಟು ಗಳಿಗೆ ಫಳ ಗತಿಸಿಹೋದವು ಎಂಬುದನ್ನು ತೆಗೆಯುವದೇ ಇಷ್ಟಕಾಲವು.

೧. ಕೂಸು ಜನನವಾದ ದಿವಸ ಇರತಕ್ಕ ನಕ್ಷತ್ರದ ಗಳಿಗೆ. ಫಳಕ್ಕಿಂತಲೂ ಕೂಸು ಹುಟ್ಟಿದ ಗಳಿಗೆ, ಫಳ ಕಡಿಮೆ ಇದ್ದರೆ ಅರ್ಥಾತ್ ನಕ್ಷತ್ರದೊಳಗೆ ಜನನವಾದರೆ–ಜನನವಾದ ದಿವಸದ ಹಿಂದಿನ ದಿವಸ ಇದ್ದ ನಕ್ಷತ್ರದ ಗಳಿಗೆ, ಫಳಗಳನ್ನು ೬೦–೦ ಗಳಿಗೆಯಲ್ಲಿ ಕಳೆದು ಉಳಿದ ಗಳಿಗೆ, ಫಳಗಳಲ್ಲಿ ಜನನವಾದ ದಿವಸ ಇರುವ ನಕ್ಷತ್ರದ ಗಳಿಗೆ, ಫಳ ಕೂಡಿಸಿದರೆ ಬರುವ ಒಟ್ಟು ಗಳಿಗೆ, ಫಳಗಳು ಆ ನಕ್ಷತ್ರದ ಆದ್ಯಂತಕಾಲ ಆಗುವದು.

ಜನನವಾದ ದಿವಸದ ಹಿಂದಿನ ದಿವಸ ಇದ್ದ ಗಳಿಗೆ, ಫಳಗಳನ್ನು ೬೦-೦ ಗಳಿಗೆಯಲ್ಲಿ ಕಳೆದು ಉಳಿದ ಗಳಿಗೆ, ಫಳಗಳಲ್ಲಿ ಜನನ ಕಾಲದ ಗಳಿಗೆ, ಫಳ ಕೂಡಿಸಿದರೆ ಇಷ್ಟಕಾಲ ಆಗುವದು.

ಉದಾಹರಣೆ— ಶಕೆ ೧೮೮೯ ಪ್ಲವಂಗ ಸಂವತ್ಸರ ಕಾರ್ತಿಕ ಶುದ್ಧ ೫ ಸೋಮವಾರ ತಾ. ೬-೧೧-೧೯೬೭ ನೆಯ ದಿವಸ ಉದಯ ೧೦ ಗಳಿಗೆ ೧೫ ಫಳ ಜನನಕಾಲ ಇದೆ. ಇದರ ಆದ್ಯಂತ ಕಾಲ ಇಷ್ಟಕಾಲ ತೆಗೆಯುವಾ.

ಈ ದಿವಸ ಮೂಲ ನಕ್ಷತ್ರ ೧೮ ಗಳಿಗೆ ೨೩ ಫಳ ಇದೆ. ಜನನ ಕಾಲವು ೧೦ ಗಳಿಗೆ ೧೫ ಫಳ ಇದೆ. ಆದ್ದರಿಂದ ನಕ್ಷತ್ರದೊಳಗೆ ಜನನವಾಗಿದೆ. ಮತ್ತು ಆದಿತ್ಯವಾರ ಜ್ಯೇಷ್ಠ ನಕ್ಷತ್ರ ೨೦ ಗಳಿಗೆ ೫೭ ಫಳ ಇದೆ.

ಆದ್ಯಂತ ಕಾಲ ಮಾಡಿದೆ		ಇಷ್ಟಕಾಲ ತೆಗೆದಿದೆ.	
ಗಳಿಗೆ ಫಳ		ಗಳಿಗೆ ಫಳ	
೬೦-೦		೬೦-೦	
೨೦-೫೭	ಜ್ಯೇಷ್ಠ ನಕ್ಷತ್ರ ಕಳೆದಿದೆ	೨೦-೫೭	ಜ್ಯೇಷ್ಠ ನಕ್ಷತ್ರಕಳೆದಿದೆ.
೩೯-೩		೩೯-೩	
೧೮-೨೩	ಮೂಲ ನಕ್ಷತ್ರ ಕೂಡಿಸಿದೆ	೧೦-೧೫	ಜನನಕಾಲ
೫೭-೨೬		೪೯-೧೮	

೪೯ ಗಳಿಗೆ ೧೮ ಫಳ ಇಷ್ಟಕಾಲವು

೫೭ ಗಳಿಗೆ ೨೬ ಫಳ ಮೂಲ ನಕ್ಷತ್ರದ.

ಆದ್ಯಂತಕಾಲವು.

೨. ಕೂಸು ಜನನವಾದ ದಿವಸ ಇರುವ ನಕ್ಷತ್ರ ಗಳಿಗೆ, ಫಳಕ್ಕಿಂತ ಕೂಸು ಹುಟ್ಟಿದ ಗಳಿಗೆ, ಫಳ ಹೆಚ್ಚು ಇದ್ದರೆ ಅರ್ಥಾತ್ ನಕ್ಷತ್ರ ಮೀರಿ ಜನನವಾದರೆ ಜನನವಾದ ದಿವಸ ಇರುವ ನಕ್ಷತ್ರದ ಗಳಿಗೆ ಫಳಗಳನ್ನು ೬೦-೦ ಗಳಿಗೆಯಲ್ಲಿ ಕಳೆದು ಅದರಲ್ಲಿ ಜನನ ದಿವಸದ ಮುಂದಿನ ದಿವಸ ಇರುವ ನಕ್ಷತ್ರದ ಗಳಿಗೆ, ಫಳಗಳನ್ನು ಕೂಡಿಸಿದರೆ ಬರುವ ಒಟ್ಟು ಗಳಿಗೆ ಫಳಗಳು ಆ ನಕ್ಷತ್ರದ ಆದ್ಯಂತಕಾಲ ಆಗುವದು.

ಜನನವಾದ ದಿವಸ ಇರುವ ನಕ್ಷತ್ರದ ಗಳಿಗೆ ಫಳಗಳನ್ನು ಜನನಕಾಲದ ಗಳಿಗೆ, ಫಳಗಳಲ್ಲಿ ಕಳೆದರೆ ಇಷ್ಟಕಾಲ ಆಗುವದು.

ಉದಾಹರಣೆ— ಶಕೆ ೧೮೮೯ ಪ್ಲವಂಗ ಸಂವತ್ಸರ ಕಾರ್ತಿಕ ಶುದ್ಧ ೮ ಗುರುವಾರ ಸಾಯಂಕಾಲ ೨೫ ಗಳಿಗೆ ೩೦ ಫಳಕ್ಕೆ ಜನನವಾಗಿದೆ ಇದರ ಆದ್ಯಂತಕಾಲ, ಇಷ್ಟ ಕಾಲ ತೆಗೆಯೋಣ.

ಈ ದಿವಸ ಶ್ರವಣ ನಕ್ಷತ್ರ ೧೬ ಗಳಿಗೆ ೩೧ ಫಳ ಇದ್ದು ಜನನಕಾಲ ೨೫ ಗಳಿಗೆ ೩೦ ಫಳ ಇದೆ. ಆದ್ದರಿಂದ ಶ್ರವಣ ನಕ್ಷತ್ರ ಮೀರಿ ಧನಿಷ್ಠ ನಕ್ಷತ್ರ ದಲ್ಲಿ ಜನನವಾಗಿದೆ. ಮತ್ತು ಶುಕ್ರವಾರ ಧನಿಷ್ಠ ನಕ್ಷತ್ರ ೧೮ ಗಳಿಗೆ ೮ ಫಳ ಇದೆ.

ಆದ್ಯತ ಮಾಡಿದೆ.		ಇಷ್ಟಕಾಲ ತೆಗೆದಿದೆ.	
ಗಳಿಗೆ. ಫಳ.		ಗಳಿಗೆ. ಫಳ.	
೬೦–೦೦		೨೫–೩೦	ಜನನಕಾಲ
೧೬–೩೧	ಶ್ರವಣ ನಕ್ಷತ್ರ ಕಳೆದಿದೆ.	೧೬–೩೧	ಶ್ರವಣ ನಕ್ಷತ್ರಕಳೆದಿದೆ
೪೩–೨೯		೮–೫೯	
೧೮–೮	ಧನಿಷ್ಠ ನಕ್ಷತ್ರ ಕೂಡಿಸಿದೆ.		
೬೧–೩೭			

೬೧ ಗಳಿಗೆ ೩೭ ಫಳ ಧನಿಷ್ಠ ನಕ್ಷತ್ರ ಆದ್ಯಂತಕಾಲವು.

೮ ಗಳಿಗೆ ೫೯ ಫಳ ಇಷ್ಟಕಾಲವು.

೩. ಕೂಸು ಜನನವಾದ ದಿವಸ ಇರುವ ನಕ್ಷತ್ರವು ೬೦—೦ ಗಳಿಗೆ (ಆದಿವಸ ಸಂಪೂರ್ಣ) ಇದ್ದರೆ–ಜನನದ ಹಿಂದಿನ ದಿವಸ ಇರುವ ನಕ್ಷತ್ರದ ಗಳಿಗೆ ಫಳಗಳನ್ನು ೬೦–೦ ಗಳಿಗೆಯಲ್ಲಿ ಕಳೆದು ಉಳಿದ ಗಳಿಗೆ ಫಳಗಳಲ್ಲಿ ಜನನವಾದ ದಿವಶದ ನಕ್ಷತ್ರದ ೬೦–೦ ಗಳಿಗೆಗಳನ್ನು ಮತ್ತು ಮುಂದಿನ ದಿವಸ ಅದೇ ನಕ್ಷತ್ರ ಇರುವ ಗಳಿಗೆ, ಫಳಗಳನ್ನು ಒಟ್ಟಾಗಿ ಕೂಡಿಸಿದರೆ ಬರುವ ಗಳಿಗೆ, ಫಳಗಳು ಆದ್ಯಂತ ಕಾಲವಾಗುವದು.

ಜನನವಾದ ದಿವಶದ ಹಿಂದಿನ ದಿವಸ ಇರುವ ನಕ್ಷತ್ರದ ಗಳಿಗೆ, ಫಳ ಗಳನ್ನು ೬೦ ಗಳಿಗೆಗಳಲ್ಲಿ ಕಳೆದು ಉಳಿದದ್ದರಲ್ಲಿ ಜನನಕಾಲದ ಗಳಿಗೆ, ಫಳ ಗಳನ್ನು ಕೂಡಿಸಿದರೆ ಇಷ್ಟ ಕಾಲವಾಗುವದು.

ಉದಾಹರಣೆ- ಶಕೆ ೧೮೮೯ ಪ್ಲವಂಗ ಸಂವತ್ಸರ ಕಾರ್ತಿಕ ಬಹುಳ ೧ ಶನಿವಾರ ಉದಯು ೧೧ ಗಳಿಗೆ ೧೫ ಫಳಕ್ಕೆ ಜನನವು ಇದರ ಆದ್ಯಂತ ಕಾಲ ಇಷ್ಟ ಕಾಲ ತೆಗೆಯಬೇಕು.

ಈ ದಿವಸ ರೋಹಿಣಿ ನಕ್ಷತ್ರವು ೬೦-೦ ಗಳಿಗೆ ಇವೆ ಮತ್ತು ಮುಂದಿನ ದಿವಸ ರವಿವಾರ ರೋಹಿಣಿ ನಕ್ಷತ್ರವು ೦ ಗಳಿಗೆ ೫೫ ಫಳ ಇದೆ. ಜನನದ ಹಿಂದಿನ ದಿವಸ ಶುಕ್ರವಾರ ಕೃತ್ತಿಕ ನಕ್ಷತ್ರವು ೫೫ ಫಳ ೫೪ ಫಳ ಇದೆ.

ಆದ್ಯಂತ ಮಾಡಿದೆ		ಇಷ್ಟಕಾಲ ಮಾಡಿದೆ.	
ಗಳಿಗೆ-ಫಳ		ಗಳಿಗೆ-ಫಳ	
೬೦-೦೦	ಹಿಂದಿನ ದಿವಸದ	೬೦-೦೦	
೫೫-೫೪	ಕೃತ್ತಿಕ ನಕ್ಷತ್ರ ಕಳೆದಿದೆ	೫೫-೫೪	ಕೃತ್ತಿಕನಕ್ಷತ್ರ ಕಳೆದಿದೆ
೪-೬		೪-೦೬	
೬೦-೦	ಜನನದಿವಸದರೋಹಿಣಿ ನಕ್ಷತ್ರ	೧೧-೧೫	ಜನನ ಕಾಲ
೦-೫೫	ಮುಂದಿನ ದಿವಸದ	೧೫-೨೧	
೬೫-೧	ರೋಹಿಣಿ ನಕ್ಷತ್ರ ಕೂಡಿಸಿದೆ	೧೫ಗಳಿಗೆ, ೨೧ ಫಳ	

೬೫ ಗಳಿಗೆ ೧ ಫಳ ರೋಹಿಣಿ ನಕ್ಷತ್ರ. ಇಷ್ಟ ಕಾಲವು
ಆದ್ಯಂತ ಕಾಲವು.

೪. ಈ ಕೂಸು ಜನನವಾದ ದಿವಸ ಉದಯದಲ್ಲಿ ಒಂದು ನಕ್ಷತ್ರ ಬಳಿಕ ಮತ್ತೊಂದು ಉಪರಿ ನಕ್ಷತ್ರ ಇದ್ದರೆ-೨ನೆಯ ಉಪರಿ ನಕ್ಷತ್ರದ ಗಳಿಗೆ, ಫಳಗಳು ಆದ್ಯಂತ ಕಾಲ ಆಗುವದು. ಮತ್ತು ಜನನ ಕಾಲದ ಗಳಿಗೆ, ಫಳಗಳಲ್ಲಿ ಉದಯಕ್ಕೆ ಇರುವ ನಕ್ಷತ್ರದ ಗಳಿಗೆ ಫಳಗಳನ್ನು ಕಳೆಯಲಾಗಿ ಉಳಿಯುವ ಗಳಿಗೆ- ಫಳಗಳು ಇಷ್ಟಕಾಲವಾಗುವದು.

ಉದಾಹರಣೆ— ಶಕೆ ೧೮೮೯ ಪ್ಲವಂಗ ಸಂವತ್ಸರ ಕಾರ್ತಿಕ ಬಹುಳ ೧೦ ಸೋಮವಾರ ಉದಯ ೧೨ ಗಳಿಗೆ ೧೮ ಫಳಕ್ಕೆ ಜನನವು. ಇದರ ಆದ್ಯಂತ ಕಾಲ, ಇಷ್ಟಕಾಲ ಮಾಡಬೇಕು.

ಸೋಮವಾರ ಉದಯಕ್ಕೆ ಉತ್ತರ ನಕ್ಷತ್ರವು ೩ ಗಳಿಗೆ ೪೦ ಫಳ ಇದೆ. ನಂತರ ಹಸ್ತ ನಕ್ಷತ್ರವು ೫೬ ಗಳಿಗೆ ೮ ಫಳ ಇರುವದು.

ಇಷ್ಟ ಕಾಲ ಮಾಡಿದೆ.

ಈಗ ೫೬ ಗಳಿಗೆ ೮ ಫಳ ಹಸ್ತ ನಕ್ಷತ್ರ. ಗಳಿಗೆ ಫಳ

ಆದ್ಯಂತಕಾಲವು. ೧೨-೧೮ ಜನನಕಾಲ

೩-೪೦ ಉದಯದ

೮-೩೮ ಉತ್ತರ ನಕ್ಷತ್ರ ಕಳೆದಿದೆ

೮ ಗಳಿಗೆ ೩೮ ಫಳ ಇಷ್ಟಕಾಲವು

—ಜನ್ಮನಾಮ ತಿಳಿಯುವದು—

ಕೂಸು ಜನನವಾದ ನಕ್ಷತ್ರದ ಆದ್ಯಂತಕಾಲ, ಇಷ್ಟಕಾಲಗಳನ್ನು ಮಾಡಿಕೊಂಡು ಆದ್ಯಂತ ಕಾಲವನ್ನು ೪ ರಿಂದ ಭಾಗಿಸಿ ಒಂದು ಪಾದಕ್ಕೆ ಬರುವ ಗಳಿಗೆ ಫಳಗಳ ಸಹಾಯದಿಂದ ಇಷ್ಟ ಕಾಲವು ಎಷ್ಟನೆಯ ಪಾದದಲ್ಲಿ ಬರುವದೆಂಬುದನ್ನು ನೋಡಿಕೊಂಡು ಕೂಸು ಆ ನಕ್ಷತ್ರದ ಪಾದದಲ್ಲಿ ಜನನವಾಗಿದೆಯೆಂದು ತಿಳಿಯಬೇಕು. ಮತ್ತು ಅವಕಹಡ ಚಕ್ರದಲ್ಲಿ (ಹಿಂದೆ ಇದೆ ನೋಡಿರಿ) ಆ ನಕ್ಷತ್ರ ಚರಣ (ಪಾದ)ದ ಅಕ್ಷರದಿಂದ ಜನ್ಮನಾಮವನ್ನು ಹೇಳಬೇಕು. ಮತ್ತು ಜನನ ನಕ್ಷತ್ರ ಚರಣಗಳಿಂದ ಕೂಸಿನ ಜನ್ಮ ರಾಶಿಯನ್ನು ತಿಳಿದು ಹೇಳಬೇಕು ಹಾಗೂ ಜನನ ನಕ್ಷತ್ರ ಚರಣ (ಪಾದ) ಕ್ಕೆ ಚಂದ್ರನ ಪಾದ ಎಂಬ ಹೆಸರು ಇದೆ.

ಉದಾಹರಣೆ—ಶಕೆ ೧೮೮೯ ಪ್ಲವಂಗ ಸಂವತ್ಸರ ಕಾರ್ತಿಕ ಶುದ್ಧ ೧೪ ಬುಧವಾರ ಉದಯ ೧೦ ಗಳಿಗೆ ೪ ಫಳಕ್ಕೆ ಗಂಡು ಕೂಸಿನ ಜನನವು.

ಬುಧವಾರ (ಜನನವಾದ) ದಿವಸ ಅಶ್ವಿನಿ ನಕ್ಷತ್ರ ೪೩ ಗಳಿಗೆ ೯ ಫಳಇದೆ ಅದರ ಹಿಂದಿನ ದಿವಸ ಮಂಗಳವಾರ ರೇವತಿ ನಕ್ಷತ್ರ ೩೬ ಗಳಿಗೆ ೪೬ ಫಳ ಇದೆ. ರೇವತಿ ನಕ್ಷತ್ರದ ಗಳಿಗೆ ಫಳಗಳನ್ನು ೬೦ ಗಳಿಗೆಯಲ್ಲಿ ಕಳೆದು ಅದರಲ್ಲಿ

ಬುಧವಾರ ದಿವಸದಲ್ಲಿಯು ಅಶ್ವಿನಿ ನಕ್ಷತ್ರದ ಗಳಿಗೆ ಫಳಕೂಡಿಸಲು ಅಶ್ವಿನಿ ನಕ್ಷತ್ರದ ಆದ್ಯಂತ ಕಾಲ ಆಗುವದು.

೬೦-೦೦
೩೬-೪೬ ರೇವತಿ ನಕ್ಷತ್ರ
೨೩-೧೪ ಉಳಿದದ್ದು.
೪೩—೯ ಅಶ್ವಿನಿ ನಕ್ಷತ್ರ
೬೬—೨೩ ಅಶ್ವಿನಿ ನಕ್ಷತ್ರ ಆದ್ಯಂತಕಾಲ.

ಮಂಗಳವಾರ ರೇವತಿ ನಕ್ಷತ್ರದ ಗಳಿಗೆ ಫಳಗಳನ್ನು ೬೦ ಗಳಿಗೆಯಲ್ಲಿ ಕಳೆದು ಉಳಿದದ್ದರಲ್ಲಿ ಕೂಸು ಜನನವಾದ ಗಳಿಗೆ ಫಳ ಕೂಡಿಸಲು ಇಷ್ಟಕಾಲ ಆಗುವದು.

೬೦-೦೦
೩೬-೪೬ ರೇವತಿ ನಕ್ಷತ್ರ
೨೩—೧೪ ಉಳಿದದ್ದು.
೧೮—೪ ಜನನಕಾಲ
೩೩—೧೮ ಇಷ್ಟಕಾಲ

ಆದ್ಯಂತ ಕಾಲವನ್ನು ೪ ರಿಂದ ಭಾಗಿಸಲು ೧ ಚರಣದ ಗಳಿಗೆ ಫಳ ಬರುತ್ತವೆ. ಅವರ ಸಹಾಯದಿಂದ ಇಷ್ಟಕಾಲವು ಎಷ್ಟನೆಯ ಚರಣದಲ್ಲಿ ಬರುವದೆಂಬುದನ್ನು ನೋಡಬೇಕು.

ಆದ್ಯಂತಕಾಲ
೪)೬೬-೨೩(೧೬ ಗಳಿಗೆ ಗಳಿಗೆ ಫಳ.
೪ ೧೬-೩೫ ಒಂದು ಚರಣಕ್ಕೆ
೨೬ ಆಗುವವು.
೨೪
೦೨

೨	ಗ. ಫ	
× ೬೦	೧೬-೩೫	ಒಂದನೆಯ ಚರಣ
೧೨೦	೧೬-೩೫	ಎರಡನೆಯ ಚರಣ
	೩೩-೧೦	

```
   ೨೩
೪)೧೪೩(೩೫ ಫಳ.
   ೧೨
   ೨೩
   ೨೦
    ೩
```

೩೩ ಗಳಿಗೆ ೧೦ ಫಳಗಳಿಗೆ ೨ ನೆಯ ಚರಣವು ಮುಗಿಯುವದು. ಮುಂದೆ ೩ ನೆಯ ಚರಣ ಕೂಡುವದು. ಇಷ್ಟ ಕಾಲವು ೩೩ ಗಳಿಗೆ ೧೮ ಫಳ ಇದೆ. ಆದ್ದರಿಂದ ಕೂಸು ಅಶ್ವಿನಿ ನಕ್ಷತ್ರ ೩ ನೆಯ ಚರಣದಲ್ಲಿ ಜನನವಾಗಿದೆ ಎಂದು ತಿಳಿಯಬೇಕು ಮತ್ತು ಅವಕಹಡ ಚಕ್ರದಲ್ಲಿ 'ಚು, ಚೆ, ಚೊ, ಲ' ಅಶ್ವಿನಿ ಈ ಪ್ರಕಾರ ಇದೆ ೩ ನೆಯ ಚರಣಕ್ಕೆ ೩ ನೆಯ ಅಕ್ಷರ 'ಚೊ' ಅದೆ. ಆದ್ದರಿಂದ ಚೋಳರಾಜ ಜನ್ಮನಾಮವಾಯಿತು. ಅದೇ ಪ್ರಕಾರ ಅಶ್ವಿನಿ ೩ ನೆಯ ಚರಣವು ಚಂದ್ರನ ಪಾದವಾಗುವದು.

ಗಂಟೆ, ಮಿನಿಟುಗಳಿಗೆ ಗಳಿಗೆ ಫಳ ಮಾಡುವದು.

ಕೆಲವರು ಜನನ ಕಾಲವನ್ನು ಗಳಿಗೆ—ಫಳ ಹೇಳದೆ ಗಂಟೆ, ಮಿನಿಟು ಗಳಲ್ಲಿ ಹೇಳುತ್ತಾರೆ. ಮತ್ತು ಪ್ರಶ್ನ ಲಗ್ನ (ತತ್ಕಾಲ ಲಗ್ನ) ವನ್ನು ಗಂಟೆ ಮಿನಿ ಟುಗಳ ಮೇಲಿಂದ ತಯಾರಿಸಬೇಕಾಗುತ್ತದೆ. ಆಗ ಆ ದಿವಸದ ರವಿ ಉದಯ, ರವಿ ಅಸ್ತ ಕಾಲಗಳನ್ನು ಪಂಚಾಂಗದಲ್ಲಿ ನೋಡಿಕೊಳ್ಳಬೇಕು. ಕೆಲವು ಪಂಚಾಂಗಗಳಲ್ಲಿ ಪ್ರತಿದಿವಸದ ರವಿ ಉದಯ ಅಸ್ತ ಕಾಲಗಳನ್ನು ಕೊಟ್ಟಿ ರುವದಿಲ್ಲ. ಆಗ ಬೇರೆ ಕಡೆಯಿಂದಲೂ ಆ ದಿವಸದ ರವಿ ಉದಯ

(ಸ್ಟ್ಯಾಂಡರ್ಡ ಟಾಯಮ) ತಿಳಿದುಕೊಳ್ಳಬೇಕು, ಮತ್ತು ಜನನ ಕಾಲದ ಗಂಟೆ ಮಿನಿಟುಗಳಲ್ಲಿ ರವಿ ಉದಯದಗಂಟೆ, ಮಿನಿಟುಗಳನ್ನು ಕಳೆದರೆ ತಾಸು ಮಿನಿಟು ಬರುವವು. ತಾಸು ಮಿನಿಟುಗಳಿಗೆ ಗಳಿಗೆ ಫಳ ಮಾಡಬೇಕು.

ಉದಾಹರಣೆ— ಕಾರ್ತಿಕ ಶು ೧೪ ಬುಧವಾರ ಉದಯು ೧೦ ಗಂಟೆ ೩೬ ಮಿನಿಟುಗಳಿಗೆ ಗಂಡು ಕೂಸು ಜನನವಾಗಿದೆ.

ಈ ದಿವಸ ರವಿ ಉದಯ ೬ ಗಂಟೆ ೩೪ ಮಿನಿಟುಗಳಿಗೆ ಇದೆ. ಜನನ ಕಾಲ ೧೦ ಗಂಟೆ ೩೬ ಮಿನಿಟು ಇದರಲ್ಲಿ ರವಿ ಉದಯ ಕಾಲವನ್ನು ಕಳೆಯುಬೇಕು.

ಗಂಟೆ	ಮಿನಿಟು	
೧೦	– ೩೬	ಜನನಕಾಲ
೬	– ೩೪	ರವಿ ಉದಯ ಸ್ಟ್ಯಾಂಡರ್ಡ ಟಾಯಂ
೪	– ೨	

೪ ತಾಸು ೨ ಮಿನಿಟುಗಳು ಇವುಗಳಿಗೆ ಗಳಿಗೆ ಫಳ ಮಾಡಲು ೧೦ ಗಳಿಗೆ ೫ ಫಳ ಜನನಕಾಲ ಆಯಿತು. ಈ ವೇಳೆಯನ್ನು ಹಿಂದಿನಂತೆ ಪುನಃ ಜನನಕಾಲ ಸ್ಥಿರಮಾಡಿಕೊಂಡು ಜನ್ಮನಾಮ, ಜನನಲಗ್ನಗಳನ್ನು ಗೊತ್ತುಮಾಡಬೇಕು. ಮಹರ್ದಶಾವನ್ನು ನಿರ್ಣಯಿಸಿ ಬಳಿಕ ಹಿಂದೆ ತೋರಿಸಿದ ಪ್ರಕಾರ ಗ್ರಹಚಾರವನ್ನು ತಯಾರಿಸಿಕೊಂಡು ಜನ್ಮ ಲಗ್ನ ಕುಂಡಲಿ ತುಂಬಬೇಕು.

— ದಶಾ ನಿರ್ಣಯು —

ಆದ್ಯಂತ ಕಾಲದ ಗಳಿಗೆ ಫಳಗಳಿಗೆ ಒಟ್ಟು ಫಳಗಳನ್ನು ಮಾಡಿ ಕೊಳ್ಳಬೇಕು. ಆದರಂತೆ ಇಷ್ಟಕಾಲದ ಗಳಿಗೆ ಫಳಗಳಿಗೂ ಒಟ್ಟು ಫಳಗಳನ್ನು ಮಾಡಿಕೊಂಡು ಜನನ ನಕ್ಷತ್ರದ ದಶಾ ವರ್ಷ ಸಂಖ್ಯೆಯಿಂದ ಇಷ್ಟಕಾಲದ

ಒಟ್ಟು ಫಳಗಳನ್ನು ಗುಣಿಸಿ ಅದನ್ನು ಆದ್ಯಂತಕಾಲದ ಒಟ್ಟು ಫಳಗಳಿಂದ ಭಾಗಿಸಲು ವರ್ಷ ಬರುತ್ತವೆ. ಶೇಷವನ್ನು ೧೨ ರಿಂದ ಗುಣಿಸಿ ಆದ್ಯಂತ ಕಾಲದ ಒಟ್ಟು ಫಳಗಳಿಂದ ಭಾಗಿಸಲು ತಿಂಗಳು ಬರುತ್ತವೆ. ಮತ್ತು ಶೇಷವನ್ನು ೩೦ ರಿಂದ ಗುಣಿಸಿ ಆದ್ಯಂತಕಾಲದ ಒಟ್ಟು ಫಳಗಳಿಂದ ಭಾಗಿಸಲು ದಿವಸ ಬರುತ್ತವೆ. ಹೀಗೆ ಬಂದ ವರ್ಷ, ತಿಂಗಳು, ದಿವಸಗಳು ಜನನವಾಗುವ ಪೂರ್ವದಲ್ಲಿ ಗತಿಸಿ ಹೋದ (ಮಾತೃಗರ್ಭಗತ) ದಶಾ ವರ್ಷಗಳೆಂದು ತಿಳಿಯಬೇಕು. ಈ ಮಾತೃ ಗರ್ಭಗತ ವರ್ಷ, ತಿಂಗಳು, ದಿವಸಗಳನ್ನು ಆ ದಶಾವರ್ಷದಲ್ಲಿ ಕಳೆಯಲಾಗಿ ಉಳಿಯುವ ವರ್ಷ, ತಿಂಗಳು, ದಿವಸಗಳು ಜನನ ದಿವಸದಿಂದ ಮುಂದೆ ನಡೆಯುವ (ಏಷ್ಯದಶಾ) ದಶಾ ವರ್ಷಾದಿಗಳೆಂದು ತಿಳಿಯಬೇಕು.

ಉದಾಹರಣೆ— ಶಕೆ ೧೮೮೯ ಪ್ಲವಂಗ ಸಂವತ್ಸರ ಕಾರ್ತಿಕ ಶು. ೧೪ ಬುಧವಾರ ಉದಯ ೧೦ ಗಳಿಗೆ ೪ ಫಳಗಳಿಗೆ ಗಂಡು ಕೂಸಿನ ಜನನಕಾಲವನ್ನು ಸ್ಥಿರ ಮಾಡಿರುತ್ತದೆ. ಮತ್ತು ಅಶ್ವಿನಿ ನಕ್ಷತ್ರ ಆದ್ಯಂತಕಾಲ ಗಳಿಗೆ ೬೬-೨೩ ಇಷ್ಟಕಾಲ ಗಳಿಗೆ ೩೩-೧೪ ಇರುತ್ತವೆ.

ಆದ್ಯಂತಕಾಲ	ಇಷ್ಟಕಾಲ
ಗಳಿಗೆ ಫಳ	ಗಳಿಗೆ ಫಳ
೬೬ – ೨೩	೩೩ – ೧೪
× ೬೦	× ೬೦
೩೯೬೦ ಫಳ	೧೯೮೦ ಫಳ
೨೩ ಫಳ	೧೪ ಫಳ
೩೯೮೩ ಒಟ್ಟು ಫಳಗಳು	೧೯೯೪ ಒಟ್ಟು ಫಳ

ಜನನ ನಕ್ಷತ್ರವು ಅಶ್ವಿನಿ ಈ ನಕ್ಷತ್ರವು ಕೇತು ಮಹಾದಶಾ ಆಗುವದು. ಕೇತು ಮಹಾದಶಾ ವರ್ಷಗಳು ೭ ಅವೆ.

ಇಷ್ಟಕಾಲದ ಒಟ್ಟು ಘಳಗೆಗಳು.

```
              ೧೯೯೮
            ×    ೭  ದಶಾವರ್ಷ.
           ─────────
೩೯೮೩ ) ೧೩೯೮೬ ( ೩ ವರ್ಷ.
        ೧೧೯೪೯
        ─────────
          ೨೦೩೭
           ×೧೨
        ─────────
೩೯೮೩ ) ೨೪೪೪೪ (೬ ತಿಂಗಳು.
        ೨೩೮೯೮
        ─────────
           ೫೪೬
           ×೩೦
        ─────────
೩೯೮೩ ) ೧೬೩೮೦ ( ೪ ದಿವಸ
        ೧೫೯೩೨
        ─────────
           ೪೪೮
```

ವ. ತಿಂ. ದಿ.

೩ - ೬ - ೪ ಮಾತೃಗರ್ಭಗತ ಕೇತು ಮಹಾದಶಾವರ್ಷಾದಿಗಳು.

```
ವ.  ತಿ.  ದಿ.

೭—೦—೦  ಕೇತು ಮಹಾದಶಾವರ್ಷ
೩-೬-೪  ಮಾತೃಗರ್ಭಗತ
──────
೩-೫-೨೬
```

ಈ ಕೂಸಿನ ಜನನ ಕಾಲದಿಂದ ೩ ವರ್ಷ ೫ ತಿಂಗಳು ೨೬ ದಿವಸಗಳ ವರೆಗೆ ಕೇತು ಮಹಾದಶಾ ನಡೆಯುವದು. ಮುಂದೆ ಶುಕ್ರಮಹಾದಶಾ ೨೦ ವರ್ಷ ಇರುವದು.

—ಲಗ್ನ ಸ್ಫುಟ ಮಾಡುವದು—

ಲಗ್ನ ಸ್ಫುಟ ಅಂದರೆ ಜನನ ಲಗ್ನದ ಎಷ್ಟನೆಯ ಭಾಗ ಲಿಪ್ತಿ, ವಿಲಿಪ್ತಿಗಳಲ್ಲಿ ಕೂಸು ಜನನವಾಯಿತು ಎಂಬುದನ್ನು ತಿಳಿಯುವದು. ಈ ಜನನ ಲಗ್ನದ ಭಾಗ, ಲಿಪ್ತಿ, ವಿಲಿಪ್ತಿಗಳಿಂದ ಷಡ್ವರ್ಗವನ್ನು ಮಾಡಬೇಕಾಗುವದು.

ಜನನ ಕಾಲದ ವರೆಗೆ ಲಗ್ನವನ್ನು ಸಾಧಿಸಿ ತತ್ಕಾಲ ಲಗ್ನವನ್ನು ತಿಳಿದುಕೊಂಡ ನಂತರ ತತ್ಕಾಲ ಲಗ್ನದ ಗಳಿಗೆ, ಫಳಗಳಿಗೆ ಒಟ್ಟು ಫಳಗಳನ್ನು ಮಾಡಿಕೊಂಡು ಜನನ ಕಾಲದ ಗಳಿಗೆ, ಫಳಗಳಲ್ಲಿ ಲಗ್ನ ಸಾಧಿಸಿದ ಗಳಿಗೆ, ಫಳಗಳನ್ನು ಕಳೆದು ಉಳಿದ ಗಳಿಗೆ, ಫಳಗಳಿಗೆ ಒಟ್ಟು ಫಳಗಳನ್ನು ಮಾಡಿಕೊಂಡು ಅವುಗಳನ್ನು ೩೦ ರಿಂದ ಗುಣಿಸಿ (೧ ಲಗ್ನಕ್ಕೆ ೩೦ ಭಾಗಗಳು) ತತ್ಕಾಲ ಲಗ್ನದ ಒಟ್ಟು ಫಳಗಳಿಂದ ಭಾಗಿಸಲು ಲಬ್ಧವು ಭಾಗ, ಶೇಷವನ್ನು ೬೦ ರಿಂದ ಗುಣಿಸಿ ತತ್ಕಾಲ ಲಗ್ನದ ಒಟ್ಟು ಫಳಗಳಿಂದ ಭಾಗಿಸಲು ಲಬ್ಧವು ಲಿಪ್ತಿ, ಶೇಷವನ್ನು ೬೦ ಗುಣಿಸಿ ತತ್ಕಾಲ ಲಗ್ನದ ಒಟ್ಟು ಫಳಗಳಿಂದ ಭಾಗಿಸಲು ಲಬ್ಧವು ವಿಲಿಪ್ತಿ ಈ ಭಾಗ, ಲಿಪ್ತಿ ವಿಲಿಪ್ತಿಗಳಿಗೆ, ತತ್ಕಾಲಲಗ್ನದ ಹಿಂದಿನ ಲಗ್ನ ಸಂಖ್ಯೆಯನ್ನೂ ಕೂಡಿಸಿ ಬರೆದುಕೊಳ್ಳಬೇಕು. ಅಂದರೆ ಜನನ ಕಾಲಕ್ಕೆ ಮೊದಲು ಇಷ್ಟು ರಾಶಿ. (ಲಗ್ನ) ಭಾಗ, ಲಿಪ್ತಿ, ವಿಲಿಪ್ತಿಗಳು ಗತಿಸಿ ಹೋಗಿರುತ್ತವೆ ಎಂಬುದು ಸ್ಪಷ್ಟವಾಗುವದು.

ಉದಾಹರಣೆ- ಶಕೆ ೧೮೮೯ ಪ್ಲವಂಗ ಸಂವತ್ಸರ ಕಾರ್ತಿಕ ಶುದ್ಧ ೧೪ ಬುಧವಾರ ಉದಯ ೧೦ ಗಳಿಗೆ ೪ ಫಳಗಳಿಗೆ ಗಂಡು ಕೂಸು ಜನನ ಆ ವೇಳೆಗೆ ಲಗ್ನವನ್ನು ಸಾಧಿಸಿ ಲಗ್ನ ಸ್ಫುಟ ಮಾಡುವದು. (ಕಾರ್ತಿಕಮಾಸದ ಪಂಚಾಂಗ ನೋಡಿರಿ.)

ಕಾರ್ತಿಕ ಶು. ೧೪ ಬುಧವಾರಕ್ಕೆ ೨ ದಿವಸ ಮೊದಲು ಸೋಮವಾರ ರವಿಯು ವಿಶಾಖ ನಕ್ಷತ್ರ ೩ ನೆಯ ಚರಣಕ್ಕೆ ೪-೪೭ ಕ್ಕೆ ಬಂದಿದ್ದಾನೆ ಮತ್ತು ವಿಶಾಖ ೩ ನೆಯ ಚರಣವು ತುಲಾ ರಾಶಿಯಾಗುವದು. ಆದ್ದರಿಂದ ಶು. ೧೪ ಬುಧವಾರ ಉದಯ ಲಗ್ನವು ತುಲಾ ಆಯಿತು. ಮತ್ತು ತುಲಾ ಲಗ್ನ ಪ್ರಮಾ

ಣವು ಗಳಿಗೆ ೫-೧೫ ಇದರಲ್ಲಿ ಬುಧವಾರ ದಿವಸದ ಲಗ್ನಭುಕ್ತಿ ಗಳಿಗೆ ೫-೦ ಕಳೆಯಬೇಕು. ಉಳಿದದ್ದರಲ್ಲಿ ವೃಶ್ಚಿಕ ಲಗ್ನ ಪ್ರಮಾಣ ಗಳಿಗೆ ೫-೩೦ ಕೂಡಿಸಬೇಕು.

ಗಳಿಗೆ. ಫಳ.

೫ – ೧೫ ತುಲಾ ಉದಯಲಗ್ನ ಪ್ರಮಾಣ.
೫ – ೦ ಲಗ್ನ ಭುಕ್ತಿ
———
೦ – ೧೫
೫ – ೩೦ ವೃಶ್ಚಿಕ
———
೫ – ೪೫

ಗಳಿಗೆ ಫಳ
೧೦ – ೪ ಜನನ ಕಾಲ
೫ – ೪೫
———
೪ – ೧೯
×೬೦
———
೨೪೦ ಫಳ
೧೯ ಫಳ
———
೨೫೯ ಒಟ್ಟು ಫಳ
×೩೦ ಲಗ್ನದ ಭಾಗ
———
೩೩೦)೭೭೭೦(೨೩ ಭಾಗ
೬೬೦
———
೧೧೭೦
೯೯೦
———
೧೮೦
×೬೦
———
೧೦೮೦೦

೫ ಗಳಿಗೆ ೪೫ ಫಳಗಳಲ್ಲಿ ಧನಸ್ಸು ಲಗ್ನ ಪ್ರಮಾಣ ಗಳಿಗೆ ೫-೩೦ ಕೂಡಿಸಿದರೆ ಗಳಿಗೆ ೧೧-೧೫ ಆಗುವದು ಇಷ್ಟಕಾಲವು ಗಳಿಗೆ ೧೦-೪ ಅದೆ. ಆದ್ದರಿಂದ ಕೂಸು ಧನಸ್ಸು ಲಗ್ನದಲ್ಲಿ ಜನನವಾದಂತಾಯಿತು. ಅಂದರೆ ತತ್ಕಾಲ ಲಗ್ನವು ಧನಸ್ಸು

ಗಳಿಗೆ ಫಳ
೫ – ೩೦ ಧನಸ್ಸು ಲಗ್ನ ಪ್ರಮಾಣ
×೬೦
———
೩೦೦ ಫಳ
೩೦ ಫಳ
———
೩೩೦ ಧನಸ್ಸು ಲಗ್ನದ ಒಟ್ಟು ಫಳಗಳು

ಭಾಗ – ಲಿಪ್ತಿ – ವಿಲಿಪ್ತಿ.
೨೩ – ೩೨ – ೪೩

ಧನಸ್ಸು ಲಗ್ನದ ಹಿಂದಿನ ಲಗ್ನ ವೃಶ್ಚಿಕ. ಅದರ ಸಂಖ್ಯೆ ೮ ಆದ್ದರಿಂದ ರಾಶಿ ಸಂಖ್ಯೆ ೮ ಆಯಿತು.

```
೩೩೦)೧೦೮೦೦(೩೨ ಲಿಪ್ತಿ
     ೯೯೦
    -----
     ೯೦೦
     ೬೬೦
    -----
     ೨೪೦
     ×೬೦
    -----
೩೩೦)೧೪೪೦೦(೪೩ ವಿಲಿಪ್ತಿ
    ೧೩೨೦
    -----
    ೧೨೦೦
     ೯೯೦
    -----
     ೨೧೦
```

ರಾಶಿ	ಭಾಗ	ಲಿಪ್ತಿ	ವಿಲಿಪ್ತಿ
೮ –	೨೩ –	೩೨ –	೪೩

ಜನನಕಾಲ ಧನಸ್ಸು
ಲಗ್ನದ ಸ್ಫುಟವು

— ಷಡ್ವರ್ಗವನ್ನು ಮಾಡುವದು —

ಲಗ್ನ, ಹೋರಾ, ದ್ರೇಕ್ಕಾಣ, ನವಾಂಶ, ದ್ವಾದಶಾಂಶ, ತ್ರಿಂಶಾಂಶ ಎಂಬುದಾಗಿ ೬ ವರ್ಗ (ಭಾಗ) ಗಳಿಂದ ಆಯಾ ವರ್ಗಗಳ ಅಧಿಪತಿಗಳಿಂದ ಲಗ್ನದ ಬಲಾಬಲ (ಶುಭಾಶುಭ) ವನ್ನು ತಿಳಿಯಬಹುದು. ಈಗ ಷಡ್ವರ್ಗದ (ಆರು ವರ್ಗಗಳ) ಅಧಿಪತಿಗಳನ್ನು ತಿಳಿದುಕೊಳ್ಳುವಾ.

ಲಗ್ನಸ್ಫುಟವು– ರಾಶಿ ೮ ಭಾಗ ೨೩ ಲಿಪ್ತಿ ೩೨ ವಿಲಿಪ್ತಿ ೪೩.

— ೧. ಲಗ್ನಾಧಿಪತಿ —

ಕೂಸು ಧನಸ್ಸು ಲಗ್ನದಲ್ಲಿ ಜನನವಾಗಿರುವದರಿಂದ ಧನಸ್ಸು ಲಗ್ನಾಧಿಪತಿಯು ಗುರು ಆಸನು.

— ೨. ಹೋರಾಧಿಪತಿ —

೧ ಲಗ್ನಕ್ಕೆ ೩೦ ಭಾಗಗಳು ಲಗ್ನವನ್ನು ೨ ಭಾಗ ಮಾಡುವದೇ ಹೋರಾ

ಅಂದರೆ ೧ ಹೋರಾಕ್ಕೆ ೧೫ ಭಾಗಗಳು ರವಿ ಹೋರಾ, ಚಂದ್ರ ಹೋರಾ ಎಂದು ೨ ಹೋರಾಗಳು.

ಮೇಷ, ಮಿಥುನ, ಸಿಂಹ, ತುಲಾ, ಧನಸ್ಸು, ಕುಂಭ, ಇವು ಓಜ (ವಿಷಮ) ರಾಶಿಗಳು. ವೃಷಭ, ಕರ್ಕ, ಕನ್ಯಾ, ವೃಶ್ಚಿಕ, ಮಕರ ಮೀನ ಇವು ಯುಗ್ಮ (ಸಮ) ರಾಶಿಗಳು.

ಓಜರಾಶಿಯು ಜನನ ಲಗ್ನವಾಗಿದ್ದು ಲಗ್ನ ಸ್ಫುಟವು ೧೫ ಭಾಗದೊಳಗಿದ್ದರೆ ರವಿಯೂ, ೧೫ ಭಾಗ ಮೀರಿ ೩೦ ಭಾಗದೊಳಗಿದ್ದರೆ ಚಂದ್ರನೂ ಹೋರಾಧಿ ಪತಿಗಳಾಗುವರು.

ಯುಗ್ಮ ರಾಶಿಯು ಜನನಲಗ್ನವಾಗಿದ್ದು ಲಗ್ನ ಸ್ಫುಟವು ೧೫ ಭಾಗದೊಳಗಿದ್ದರೆ ಚಂದ್ರನೂ, ೧೫ ಭಾಗ ಮೀರಿ ೩೦ ಭಾಗದೊಳಗಿದ್ದರೆ ರವಿಯೂ ಹೋರಾಧಿಪತಿಗಳಾಗುವರು.

ಉದಾಹರಣೆ— ಕೂಸು ಧನಸ್ಸು ಲಗ್ನದಲ್ಲಿ ಜನನವಾಗಿದೆ. ಆದ್ದರಿಂದ ಓಜ (ವಿಷಮ) ರಾಶಿ ಆಯಿತು ೧೫ ಭಾಗಕ್ಕಿಂತ ಲಗ್ನಸ್ಫುಟ ಹೆಚ್ಚಾಗಿದೆ ಆದ್ದರಿಂದ ಚಂದ್ರನು ಹೋರಾಧಿಪತಿಯಾದನು. (ಇದನ್ನು ಕರ್ಕರಾಶಿಯಲ್ಲಿ ಚಂದ್ರ ಎಂದು ಬರೆಯುತ್ತಾರೆ. ಮತ್ತು ರವಿಯಾದರೆ ಸಿಂಹ ರಾಶಿಯಲ್ಲಿ ರವಿ ಎಂದು ಬರೆಯುತ್ತಾರೆ.)

೩. ದ್ರೇಕ್ಕಾಣಾಧಿಪತಿ

ಲಗ್ನದ ೩೦ ಭಾಗಗಳನ್ನು ೩ ಪಾಲು ಮಾಡುವದೇ ದ್ರೇಕ್ಕಾಣವು. ಆದರೆ ೧ ಪಾಲಿಗೆ ೧೦ ಭಾಗ (ಅಂಶ) ಗಳು.

ಚರರಾಶಿಯಾಗಿ ಲಗ್ನ ಸ್ಫುಟವು ೧೦ ಭಾಗದೊಳಗಿದ್ದರೆ ಲಗ್ನಾಧಿಪತಿಯು ದ್ರೇಕ್ಕಾಣಾಧಿಪತಿಯಾಗುವನು. ಲಗ್ನಸ್ಫುಟವು ೧೦ ಭಾಗ ಮೀರಿ ೨೦ ಭಾಗದೊಳಗಿದ್ದರೆ ಲಗ್ನದಿಂದ ೫ ನೆಯ ರಾಶಿಯ ಅಧಿಪತಿಯು ದ್ರೇಕ್ಕಾಣಾಧಿಪತಿಯಾಗುವನು ಲಗ್ನ ಸ್ಫುಟವು ೨೦ ಭಾಗ ಮೀರಿ ೩೦ ಭಾಗದೊಳಗಿದ್ದರೆ ಲಗ್ನದಿಂದ ೯ನೆಯ ರಾಶಿಯ ಅಧಿಪತಿಯು ದ್ರೇಕ್ಕಾಣಾಧಿಪತಿಯಾಗುವನು.

ಸ್ಥಿರರಾಶಿಯಾಗಿ ಲಗ್ನ ಸ್ಫುಟವು ೧೦ ಭಾಗದೊಳಗಿದ್ದರೆ ಲಗ್ನದಿಂದ ೯ ನೆಯ ರಾಶಿಯ ಅಧಿಪತಿಯು ದ್ರೇಕ್ಕಾಣಾಧಿಪತಿಯಾಗುವನು. ಲಗ್ನ ಸ್ಫುಟವು ೧೦ ಭಾಗ ಮೀರಿ ೨೦ ಭಾಗದೊಳಗಿದ್ದರೆ ಲಗ್ನಾಧಿಪತಿಯು ದ್ರೇಕ್ಕಾಣಾಧಿಪ

ಯಾಗುವನು ಲಗ್ನಸ್ಫುಟವು ೨೦ ಭಾಗ ಮೀರಿ ೩೦ ಭಾಗದೊಳಗಿದ್ದರೆ ಲಗ್ನದಿಂದ ೫ನೆಯ ರಾಶಿಯ ಅಧಿಪತಿಯು ದ್ರೇಕ್ಕಾಣಾಧಿಪತಿಯಾಗುವನು.

ದ್ವಿಸ್ವಭಾವರಾಶಿಯಾಗಿ ಲಗ್ನಸ್ಫುಟವು ೧೦ ಭಾಗದೊಳಗಿದ್ದರೆ ಲಗ್ನದಿಂದ ೫ನೆಯ ರಾಶಿಯ ಅಧಿಪತಿಯು ದ್ರೇಕ್ಕಾಣಾಧಿಪತಿಯಾಗುವನು. ಲಗ್ನಸ್ಫುಟವು ೧೦ ಭಾಗ ಮೀರಿ ೨೦ ಭಾಗದೊಳಗಿದ್ದರೆ ಲಗ್ನದಿಂದ ೯ನೆಯ ರಾಶಿಯ ಅಧಿಪತಿಯು ದ್ರೇಕ್ಕಾಣಾಧಿಪತಿಯಾಗುವನು. ಲಗ್ನ ಸ್ಫುಟವು ೨೦ ಭಾಗ ಮೀರಿ ೩೦ ಭಾಗದೊಳಗಿದ್ದರೆ ಲಗ್ನಾಧಿಪತಿಯು ದ್ರೇಕ್ಕಾಣಾಧಿಪತಿಯಾಗುವನು.

ಉದಾಹರಣೆ— ಲಗ್ನ ಸ್ಫುಟವು ೨೩ ಭಾಗ ೩೨ ಲಿಪ್ತಿ ೪೩ ವಿಲಿಪ್ತಿ ಇದೆ. ಅಂದರೆ ೨೦ ಭಾಗ ಮೀರಿ ೩೦ ಭಾಗದೊಳಗೆ ಇದೆ. ಮತ್ತು ಧನಸು ಲಗ್ನವು ದ್ವಿಸ್ವಭಾವ ರಾಶಿಯು. ಆದ್ದರಿಂದ ಲಗ್ನಾಧಿಪತಿಯು ದ್ರೇಕ್ಕಾಣಾಧಿಪತಿಯಾಗುವನು. ಆದ್ದರಿಂದ **ಗುರುದ್ರೇಕ್ಕಾಣಾಧಿಪತಿಯು** (ಇದನ್ನು ಧನಸ್ಸು ರಾಶಿಯಲ್ಲಿ ಗುರು ಎಂದು ಬರೆಯುವರು.)

— ೪. ನವಾಂಶಾಧಿಪತಿ —

ಲಗ್ನದ ಭಾಗಗಳು ೩೦ ಅವುಗಳನ್ನು ೯ ಪಾಲು ಮಾಡುವದೇ ನವಾಂಶವು. ಅಂದರೆ ೧ ಪಾಲಿಗೆ ೩ ಭಾಗ ೨೦ ಲಿಪ್ತಿ ಬರುತ್ತವೆ. ಒಂದೊಂದು ಪಾಲಿಗೆ ಬರುವ ಭಾಗ ಲಿಪ್ತಿಗಳನ್ನು ಹೀಗೆ ಬರೆಯಬಹುದು.

ನವಾಂಶಗಳ ಭಾಗ ಲಿಪ್ತಿಗಳು.

೧	ನೆಯ	ಪಾಲು	೩	ಭಾಗ	೨೦ ಲಿಪ್ತಿ
೨	,,	,,	೬	,,	೪೦ ,,
೩	,,	,,	೧೦	,,	೦ ,,
೪	,,	,,	೧೩	,,	೨೦ ,,
೫	,,	,,	೧೬	,,	೪೦ ,,
೬	,,	,,	೨೦	,,	೦ ,,
೭	,,	,,	೨೩	,,	೨೦ ,,
೮	,,	,,	೨೬	,,	೪೦ ,,
೯	,,	,,	೩೦	,,	೦ ,,

ಈ ಪಾಲುಗಳ ಪ್ರಕಾರ ಜನನ ಲಗ್ನ ಸ್ಫುಟವು ಎಷ್ಟನೆಯ ಪಾಲಿನಲ್ಲಿ ಬರುತ್ತದೆಂಬುದನ್ನು ನೋಡಿಕೊಳ್ಳಬೇಕು.

ಜನನ ಲಗ್ನವು ಮೇಷ, ಸಿಂಹ, ಧನಸ್ಸು ಇವುಗಳಲ್ಲಿ ಒಂದಾಗಿದ್ದರೆ ಮೇಷ ರಾಶಿಯಿಂದ ಎಣಿಸಬೇಕು. (ಭಾಗ ಸಂಖ್ಯೆಯು ವರೆಗೆ ಎಣಿಸಿ ಬರುವ ರಾಶಿಯು ಅಧಿಪತಿಯೇ ನವಾಂಶಾಧಿಪತಿ ಯಾಗುವನು.

ಜನನ ಲಗ್ನವು ವೃಷಭ, ಕನ್ಯಾ, ಮಕರ ಇವುಗಳಲ್ಲಿ ಒಂದಾಗಿದ್ದರೆ ಮಕರ ರಾಶಿಯಿಂದ ಎಣಿಸಬೇಕು.

ಜನನ ಲಗ್ನವು ಮಿಥುನ, ತುಲಾ, ಕುಂಭ ಇವುಗಳಲ್ಲಿ ಒಂದಾಗಿದ್ದರೆ ತುಲಾ ರಾಶಿಯಿಂದ ಎಣಿಸಬೇಕು.

ಜನನ ಲಗ್ನವು ಕರ್ಕ ವೃಶ್ಚಿಕ ಮೀನ ಇವುಗಳಲ್ಲಿ ಒಂದಾಗಿದ್ದರೆ ಕರ್ಕರಾಶಿಯಿಂದ ಎಣಿಸಬೇಕು. ಹೀಗೆ ಎಣಿಸುವದರಿಂದ ಬರುವ ರಾಶ್ಯಧಿಪತಿಯೇ ನವಾಂಶಾಧಿಪತಿಯು.

ಉದಾಹರಣೆ— ನಮ್ಮ ಜನನ ಕಾಲದಲ್ಲಿ ಧನಸ್ಸು ಲಗ್ನ ಇದ್ದು ಲಗ್ನ ಸ್ಫುಟವು ೮ ರಾಶಿ ೨೩ ಭಾಗ ೩೨ ಲಿಪ್ತಿ ೪೩ ವಿಲಿಪ್ತಿ ಅವೆ. ಅಂದರೆ ೨೩ ಭಾಗ ೨೦ ಲಿಪ್ತಿ ಮೇರಿ ೨೬ ಭಾಗ ೪೦ ಲಿಪ್ತಿಗಳೊಳಗೆ ಬರುವದರಿಂದ ಮೇಲಿನ ಕೋಷ್ಟಕದಲ್ಲಿ ತೋರಿಸಿದ ೮ ನೆಯ ಪಾಲಿನಲ್ಲಿ ಬರುವದು. ಹಾಗೂ ಜನನ ಲಗ್ನವು ಧನಸ್ಸು ಇರುವದರಿಂದ ಮೇಷದಿಂದ ೮ನೆ ವರೆಗೆ ಎಣಿಸಲು ವೃಶ್ಚಿಕ ರಾಶಿಯ ಅಧಿಪತಿಯು ಕುಜನು ಆದ್ದರಿಂದ ನವಾಂಶಾಧಿಪನು ಕುಜನು. (ಇದನ್ನು ವೃಶ್ಚಿಕದಲ್ಲಿ ಕುಜ ಎಂದು ಬರೆಯುವರು)

೫. ದ್ವಾದಶಾಂಶಾಧಿಪತಿ

ಒಂದು ಲಗ್ನಕ್ಕೆ ೩೦ ಭಾಗಗಳು ಅವುಗಳನ್ನು ೧೨ ಪಾಲು ಮಾಡು ವದೇ ದ್ವಾದಶಾಂಶವು. ಅಂದರೆ ೧ ಪಾಲಿಗೆ ೨ ಭಾಗ ೩೦ ಲಿಪ್ತಿ ಬರುತ್ತವೆ. ಒಂದೊಂದು ಪಾಲಿಗೆ ಬರುವ ಭಾಗ, ಲಿಪ್ತಿಗಳನ್ನು ಹೀಗೆ ಬರೆಯಬಹುದು.

ದ್ವಾದಶಾಂಶಗಳ ಭಾಗ, ಲಿಪ್ತಿಗಳು

೧	ನೆಯ	ಪಾಲು	೨	ಭಾಗ	೩೦	ಲಿಪ್ತಿ
೨	,,	,,	೫	,,	೦	,,
೩	,,	,,	೭	,,	೩೦	,,
೪	,,	,,	೧೦	,,	೦	,,
೫	,,	,,	೧೨	,,	೩೦	,,
೬	,,	,,	೧೫	,,	೦	,,
೭	,,	,,	೧೭	,,	೩೦	,,
೮	,,	,,	೨೦	,,	೦೦	,,
೯	,,	,,	೨೨	,,	೩೦	,,
೧೦	,,	,,	೨೫	,,	೦	,,
೧೧	,,	,,	೨೭	,,	೩೦	,,
೧೨	,,	,,	೩೦	,,	೦	,,

ಈ ಪಾಲುಗಳ ಪ್ರಕಾರ ಜನನ ಲಗ್ನ ಸ್ಫುಟವು ಎಷ್ಟನೆಯ ಪಾಲಿನಲ್ಲಿ ಬರುತ್ತದೆಂಬುದನ್ನು ನೋಡಿ ಬರೆದುಕೊಳ್ಳಬೇಕು. ಮತ್ತು ಜನನ ಲಗ್ನದಿಂದ ಪಾಲು ಸಂಖ್ಯೆಯಷ್ಟು ಎಣಿಸಲು ಯಾವ ರಾಶಿ ಬರುವದೋ ಆ ರಾಶಿಯೇ ದ್ವಾದಶಾಂಶವು ಮತ್ತು ಆ ರಾಶಿಯ ಅಧಿಪತಿಯೇ ದ್ವಾದಶಾಂಶಾಧಿಪತಿಯು.

ಉದಾಹರಣೆ—ಜನನ ಕಾಲವು ಧನಸ್ಸು ಲಗ್ನ ಇದ್ದು, ನಮ್ಮ ಜನನ ಕಾಲದ ಲಗ್ನ ಸ್ಫುಟವು ೮ ರಾಶಿ ೨೩ ಭಾಗ ೪೭ಲಿಪ್ತಿ ೪೩ವಿಲಿಪ್ತಿ ಅದೆ. ಅಂದರೆ ೨೨ ಭಾಗ ೩೦ ಲಿಪ್ತಿ ಮೀರಿ ೨೫ ಭಾಗದೊಳಗೆ ಬರುವದರಿಂದ ಮೇಲಿನ ಕೋಷ್ಟಕದಲ್ಲಿ ತೋರಿಸಿದ ೧೦ ನೆಯ ಪಾಲಿನಲ್ಲಿ ಬರುವದು. ಹಾಗೂ ಜನನ ಲಗ್ನವು ಧನಸ್ಸು ಇದ್ದು ಅಲ್ಲಿಂದ ೧೦ ರ ವರೆಗೆ ಎಣಿಸಲು ಕನ್ಯಾ ಬರುತ್ತದೆ. ಆದ್ದರಿಂದ ಕನ್ಯಾ ದ್ವಾದಶಾಂಶ ಆಯಿತು ಮತ್ತು ಕನ್ಯಾ ರಾಶಿಯ ಅಧಿಪತಿಯು ಬುಧನು ಆದ್ದರಿಂದ ದ್ವಾದಶಾಂಶಾಧಿಪತಿಯು ಬುಧನು (ಇದನ್ನು ಕನ್ಯಾ ರಾಶಿಯಲ್ಲಿ ಬುಧ ಎಂದು ಬರೆಯುವರು.)

೬. ತ್ರಿಂಶಾಂಶಾಧಿಪತಿ

ಮೇಷ, ಮಿಥುನ, ಸಿಂಹ, ತುಲಾ, ಧನು, ಕುಂಭ ಇವುಗಳಿಗೆ ಓಜ ರಾಶಿಗಳು ಅಥವಾ ಬೆಸ ರಾಶಿಗಳು ಇಲ್ಲವೆ ವಿಷಮ ರಾಶಿಗಳು ಎಂದು ಅನ್ನುವರು.

ವೃಷಭ, ಕರ್ಕ, ಕನ್ಯಾ, ವೃಶ್ಚಿಕ, ಮಕರ, ಮೀನ ಇವುಗಳಿಗೆ ಯುಗ್ಮ ರಾಶಿಗಳು ಅಥವಾ ಸರಿರಾಶಿಗಳು ಇಲ್ಲವೆ ಸಮ ರಾಶಿಗಳು ಎಂದು ಅನ್ನುವರು.

ಜನನಲಗ್ನವು ಬೆಸರಾಶಿಯಾಗಿದ್ದರೆ

೦	ಭಾಗದಿಂದ	೫	ಭಾಗದ	ವರೆಗೆ	ಕುಜ	ಅಧಿಪತಿ
೫	,,	೧೦	,,	,,	ಶನಿ	,,
೧೦	,,	೧೮	,,	,,	ಗುರು	,,
೧೮	,,	೨೫	,,	,,	ಬುಧ	,,
೨೫	,,	೩೦	,,	,,	ಶುಕ್ರ	,,

ಜನನ ಲಗ್ನವು ಸರಿ ರಾಶಿ ಆಗಿದ್ದರೆ,

೦	ಭಾಗದಿಂದ	೫	ಭಾಗದ	ವರೆಗೆ	ಶುಕ್ರ	ಅಧಿಪತಿ
೫	,,	೧೨	,,	,,	ಬುಧ	,,
೧೨	,,	೨೦	,,	,,	ಗುರು	,,
೨೦	,,	೨೫	,,	,,	ಶನಿ	,,
೨೫	,,	೩೦	,,	,,	ಕುಜ	,,

ಈ ಪ್ರಕಾರ ಅಷ್ಟಷ್ಟು ಭಾಗಗಳ ವರೆಗೆ ಆಯಾ ಗ್ರಹಗಳು ಅಧಿಪತಿಗಳಾಗುತ್ತಾರೆ.

ಉದಾಹರಣೆ— ಜನನಲಗ್ನವು ಧನಸ್ಸು, ಇದು ಬೆಸರಾಶಿಯು ಜನನಲಗ್ನಸ್ಫುಟವು ೮ ರಾಶಿ ೨೩ ಭಾಗ ೩೨ ಲಿಪ್ತಿ ೪೩ ವಿಲಿಪ್ತಿ ಆದೆ. ಅಂದರೆ ಇದು ೧೮ ಭಾಗ ಮೀರಿ ೨೫ ಭಾಗದೊಳಗೆ ಬರುವದು. ಆದ್ದರಿಂದ ಬುಧನು ಅಧಿಪತಿಯಾದನು. ಈಗ ತ್ರಿಂಶಾಂಶಾಧಿಪತಿಯು ಬುಧನು ಮತ್ತು ಬುಧನು ಮಿಥುನ, ಕನ್ಯಾರಾಶಿಗಳಿಗೆ ಅಧಿಪತಿಯಾಗಿದ್ದಾನೆ. ಮಿಥುನ,

ಕನ್ಯಾ ಈ ಎರಡು ರಾಶಿಗಳಲ್ಲಿ ಮಿಥುನ ಬೆಸರಾಶಿಯು. ಕನ್ಯಾ ಸಮರಾಶಿಯು ಜನನ ಲಗ್ನವು ಧನಸ್ಸು ಬೆಸರಾಶಿ ಇದ್ದುದರಿಂದ ಇಲ್ಲಿ ಬೆಸರಾಶಿಯಾದ ಮಿಥುನ ವನ್ನೇ ಬರೆಯಬೇಕು. (ಇದನ್ನು ಮಿಥುನ ರಾಶಿಯಲ್ಲಿ ಬುಧ ಎಂದು ಬರೆಯ ಬೇಕು.)

ಷಡ್ವರ್ಗದ ಅಧಿಪತಿಗಳನ್ನು ಬರೆಯುವ ಕ್ರಮು.

ವರ್ಗ	ಲಗ್ನ	ಹೋರಾ	ದ್ರೇಕ್ಕಾಣ	ನವಾಂಶ	ದ್ವಾದಶಾಂಶ	ತ್ರಿಂಶಾಂಶ
ರಾಶಿ	ಧನಸ್ಸು	ಕರ್ಕ	ಧನಸ್ಸು	ವೃಶ್ಚಿಕ	ಕನ್ಯಾ	ಮಿಥುನ
ಅಧಿ ಪತಿ	ಗುರು	ಚಂದ್ರ	ಗುರು	ಕುಜ	ಬುಧ	ಬುಧ

ಜನನಲಗ್ನ ಕುಂಡಲಿ, ಗ್ರಹಚಾರ ಕುಂಡಲಿ, ಹಾಕುವ ಕ್ರಮವನ್ನು ಹಿಂದೆ ತೋರಿಸಿದೆ. ಇನ್ನು ನವಾಂಶ ಕುಂಡಲಿ, ದ್ರೇಕ್ಕಾಣ ಕುಂಡಲಿ, ಚಂದ್ರ ಲಗ್ನ ಕುಂಡಲಿಗಳನ್ನು ಹಾಕುವ ಕ್ರಮವನ್ನು ತಿಳಿಸುತ್ತೇವೆ.

ನವಾಂಶ ಕುಂಡಲಿಯಲ್ಲಿ ಗ್ರಹಗಳನ್ನು ತುಂಬುವದು.

ಅಶ್ವಿನಿ ನಕ್ಷತ್ರದಿಂದ ಗ್ರಹ ಇರುವ ನಕ್ಷತ್ರದ ಹಿಂದಿನ ನಕ್ಷತ್ರದವರೆಗೆ ಎಣಿಸಿ ಆ ಸಂಖ್ಯೆಗೆ ೪ರಿಂದ ಗುಣಿಸಲು ಚರಣಗಳು ಬರುವವು. ಅದರಲ್ಲಿ ಗ್ರಹವು ಎಷ್ಟನೆಯ ಚರಣದಲ್ಲಿರುವದೋ ಅಷ್ಟು ಸಂಖ್ಯೆಯನ್ನು ಕೂಡಿಸಿ ೧೨ ರಿಂದ ಭಾಗಿಸಲು ಕೆಳಗೆ ಉಳಿಯುವ ಶೇಷ ಸಂಖ್ಯೆಯೇ ರಾಶಿಯೆಂದು ತಿಳಿದು ಆ ಗ್ರಹವನ್ನು ಆ ರಾಶಿಯಲ್ಲಿ ತುಂಬಬೇಕು.

ಉದಾಹರಣೆ-ಜನನ ಕಾಲಕ್ಕೆ ಹಾಕಿದ ಗ್ರಹಚಾರ ಕುಂಡಲಿಯಲ್ಲಿ ರವಿಯು ವಿಶಾಖ ೩ನೆಯ ಚರಣದಲ್ಲಿ ಇದ್ದಾನೆ. ಇದರ ಹಿಂದಿನ ನಕ್ಷತ್ರ ಸ್ವಾತಿಯು. ಅಶ್ವಿನಿ ನಕ್ಷತ್ರದಿಂದ ಸ್ವಾತಿ ನಕ್ಷತ್ರದ ವರೆಗೆ ಎಣಿಸಲು ೧೫ ಸಂಖ್ಯೆ ಆಯಿತು. ಇದಕ್ಕೆ ೪ ರಿಂದ ಗುಣಿಸಲು ೬೦ ಆಯಿತು. ಮತ್ತು ವಿಶಾಖ

೩ ಚರಣ ಸಂಖ್ಯೆ ಕೂಡಿಸಲು ೬೩ ಆಯಿತು. ಇದನ್ನು ೧೨ ರಿಂದ ಭಾಗಿಸಲು ಕೆಳಗೆ ಶೇಷ ೩ ಉಳಿಯಿತು. ೩ ಅಂಕೆ (ಮಿಥುನ ರಾಶಿ) ಯಲ್ಲಿ ರವಿಯನ್ನು ತುಂಬಬೇಕು. ಇದೇ ಪ್ರಕಾರ ಕುಂಡಲಿಯಲ್ಲಿ ಎಲ್ಲ ಗ್ರಹಗಳನ್ನು ತುಂಬಿರಿ.

೧೫ ಸ್ವಾತಿ ನಕ್ಷತ್ರ ಸಂಖ್ಯೆ
× ೪ ರಿಂದ ಗುಣಿಸಲು
———
೬೦
೩ ರವಿ ಇರುವ ನಕ್ಷತ್ರ ವಿಶಾಖದ ೩ ಚರಣದ ಸಂಖ್ಯೆ ಕೂಡಿಸು
———
೬೩

೧೨) ೬೩ (೫
೬೦
———
೦೩ ಶೇಷ.

ಶೇಷ ೩ ಉಳಿದಿವೆ ಮಿಥುನ ರಾಶಿಯಲ್ಲಿ ರವಿಯನ್ನು ತುಂಬು.

— ನವಾಂಶ —

೧೨ ಬು(ವ)	೧ ಶು ರಾ	೨	೩ ರ ಚಂ
೧೧			೪ ಗು
೧೦			೫
೯	೮ ಕು ಲಗ್ನ	೭ ಕೇ ಶ(ವ)	೬

ನವಾಂಶ ಅಧಿಪತಿಯು ಕುಜ ಆಗಿದ್ದು ನವಾಂಶ ಲಗ್ನವು ವೃಶ್ಚಿಕ ಆಗಿರುತ್ತದೆ. ಕಾರಣ ನವಾಂಶ ಕುಂಡಲಿಯಲ್ಲಿ ೮ ನೆಯ ರಾಶಿಯಲ್ಲಿ ಲಗ್ನ ಎಂದು ಬರೆದಿರುತ್ತೇವೆ.

ದ್ರೇಕ್ಕಾಣ ಕುಂಡಲಿಯಲ್ಲಿ ಗ್ರಹಗಳನ್ನು ತುಂಬುವದು.

ಅಶ್ವಿನಿ ನಕ್ಷತ್ರದಿಂದ ಗ್ರಹ ಇರುವ ನಕ್ಷತ್ರದ ಹಿಂದಿನ ನಕ್ಷತ್ರದ ವರೆಗೆ ಎಣಿಸಿ ಆ ಸಂಖ್ಯೆಗೆ ೪ ರಿಂದ ಗುಣಿಸಿ ಅದರಲ್ಲಿ ಗ್ರಹವು ಇರುವ ನಕ್ಷತ್ರದ ಚರಣಗಳನ್ನು ಕೂಡಿಸಿ ಅದನ್ನು ೯ ರಿಂದ ಭಾಗಿಸಲು ಕೆಳಗೆ ಶೇಷವು ೧-೨-೩

ಉಳಿದರೆ ಪ್ರಥಮ ದ್ರೇಕ್ಕಾಣವು ಶೇಷವು ೪-೫-೬ ಉಳಿದರೆ ದ್ವಿತೀಯ ದ್ರೇಕ್ಕಾಣವು ಶೇಷವು ೭-೮-೦ ಅಥವಾ ೯ ಉಳಿದರೆ ತೃತೀಯ ದ್ರೇಕ್ಕಾಣವು.

ಪ್ರಥಮ ದ್ರೇಕ್ಕಾಣವಾದರೆ ಜನನ ಕುಂಡಲಿಯಲ್ಲಿ ಆ ಗ್ರಹವು ಯಾವ ರಾಶಿಯಲ್ಲಿರುವದೋ ಆದೇ ರಾಶಿಯಲ್ಲಿ ದ್ರೇಕ್ಕಾಣ ಕುಂಡಲಿಯಲ್ಲಿ ತುಂಬಬೇಕು. ದ್ವಿತೀಯ ದ್ರೇಕ್ಕಾಣವಾದರೆ ಗ್ರಹವು ಇರುವ ರಾಶಿಯಿಂದ ೫ನೆಯ ರಾಶಿಯಲ್ಲಿ ಆ ಗ್ರಹವನ್ನು ತುಂಬಬೇಕು. ತೃತೀಯ ದ್ರೇಕ್ಕಾಣವಾದರೆ ಗ್ರಹವು ಇರುವ ರಾಶಿಯಿಂದ ೯ ನೆಯ ರಾಶಿಯಲ್ಲಿ ಆ ಗ್ರಹವನ್ನು ತುಂಬಬೇಕು.

ಉದಾಹರಣೆ- ಜನನ ವೇಳೆಗೆ (ಗ್ರಹಚಾರ ಕುಂಡಲಿಯಲ್ಲಿ) ಶನಿಯು ಉತ್ತರಾಭಾದ್ರಪದ ನಕ್ಷತ್ರ ೩ನೆಯ ಚರಣದಲ್ಲಿ ಇದ್ದಾನೆ. ಉತ್ತರಾಭಾದ್ರಪದ ನಕ್ಷತ್ರದ ಹಿಂದಿನ ನಕ್ಷತ್ರ ಪೂರ್ವಾಭಾದ್ರಪದ. ಅಶ್ವಿನಿ ನಕ್ಷತ್ರದಿಂದ ಪೂರ್ವಾಭಾದ್ರಪದ ವರೆಗೆ ಎಣಿಸಲು ೨೫ ಸಂಖ್ಯೆಯು. ಇದಕ್ಕೆ ೪ ರಿಂದ ಗುಣಿಸಲು ೧೦೦ ಇದರಲ್ಲಿ ಉತ್ತರಾಭಾದ್ರಪದ ೩ ಚರಣ ಕೂಡಿಸಲು ೧೦೩ ಆಯಿತು. ಇದನ್ನು ೯ ರಿಂದ ಭಾಗಿಸಲು ಕೆಳಗೆ ಶೇಷ ೪ ಉಳಿಯಿತು. ಆದ್ದರಿಂದ ದ್ವಿತೀಯ ದ್ರೇಕ್ಕಾಣವು, ದ್ವಿತೀಯ ದ್ರೇಕ್ಕಾಣವಾದರೆ ಗ್ರಹ ಇರುವ ರಾಶಿಯಿಂದ ೫ ನೆಯ ರಾಶಿಯಲ್ಲಿ ತುಂಬಬೇಕು. ಜನನ ಲಗ್ನ ಕುಂಡಲಿಯಲ್ಲಿ ಶನಿಯು ಮೀನ ರಾಶಿಯಲ್ಲಿ ಇದ್ದಾನೆ. ಮೀನದಿಂದ ೫ ನೆಯ ರಾಶಿಯು ಕರ್ಕ ರಾಶಿ ಆಗುವದು. ಆದ್ದರಿಂದ ದ್ರೇಕ್ಕಾಣ ಕುಂಡಲಿಯಲ್ಲಿ ಶನಿಯನ್ನು ಕರ್ಕ ರಾಶಿ (೪) ಯಲ್ಲಿ ತುಂಬಬೇಕು. ಇದೇ ಪ್ರಕಾರ ಗ್ರಹಗಳ ಪ್ರಥಮ, ದ್ವಿತೀಯ, ತೃತೀಯ ದ್ರೇಕ್ಕಾಣಗಳನ್ನು ತಿಳಿದುಕೊಂಡು ಎಲ್ಲ ಗ್ರಹಗಳನ್ನು ತುಂಬಬೇಕು.

೨೫	ಪೂ. ಭಾ. ನಕ್ಷತ್ರ ಸಂಖ್ಯೆ	೯) ೧೦೩ (೧೧
× ೪	ಗುಣಿಸು	೯
೧೦೦		೦೧೩
+ ೩	ಉತ್ತರಾಭಾದ್ರಪದ ನಕ್ಷತ್ರ	೯
೧೦೩	ಚರಣ ಸಂಖ್ಯೆ ಕೂಡಿಸು.	೦೪ ಶೇಷ

೪ ಶೇಷ ಉಳಿದರೆ ದ್ವಿತೀಯ ದ್ರೇಕ್ಕಾಣವು.

ದ್ರೇಕ್ಕಾಣ ಕುಂಡಲಿ

೧೨	ಚಂ ೧ರಾ	೨	೩ ರ
೧೧ ಬು	ಸಿಂಹ ದ್ರೇಕ್ಕಾಣ		೪ ಶ
೧೦ ಶು			೫ಲಗ್ನ ಕು
೯ ಗು	೮	೭ ಕೇ	೬

ದ್ರೇಕ್ಕಾಣ ಅಧಿಪತಿಯು ರವಿ ಆಗಿದ್ದು ದ್ರೇಕ್ಕಾಣ ಲಗ್ನವು ಸಿಂಹ ಆಗಿರುವದರಿಂದ ದ್ರೇಕ್ಕಾಣ ಕುಂಡಲಿಯಲ್ಲಿ ೫ ನೆಯ ರಾಶಿ ಯಲ್ಲಿ ಲಗ್ನ ಎಂದು ಬರೆದಿವೆ.

ಚಂದ್ರಲಗ್ನ ಕುಂಡಲಿಯಲ್ಲಿ ಗ್ರಹಗಳನ್ನು ತುಂಬುವದು.

ಚಂದ್ರನು ಜನನ ಲಗ್ನ ಕುಂಡಲಿಯಲ್ಲಿ ಯಾವ ರಾಶಿಯಲ್ಲಿ ಇರುವನೋ ಆ ರಾಶಿಯೇ ಚಂದ್ರ ಲಗ್ನವಾಗುವದು. ಜನನ ಲಗ್ನಕುಂಡಲಿಯಲ್ಲಿ ಗ್ರಹಗಳು ಯಾವ ರಾಶಿಯಲ್ಲಿ ಇರುತ್ತವೆಯೋ ಅದೇ ರಾಶಿಯಲ್ಲಿ ಚಂದ್ರ ಲಗ್ನ ಕುಂಡಲಿ ಯೊಳು ಗ್ರಹಗಳನ್ನು ತುಂಬಬೇಕು.

ಉದಾಹರಣೆ- ನಮ್ಮ ಜನನ ಲಗ್ನ ಕುಂಡಲಿಯಲ್ಲಿ ಚಂದ್ರನು ಮೇಷ ರಾಶಿಯಲ್ಲಿ ಇದ್ದಾನೆ. ಆದ್ದರಿಂದ ಮೇಷವು ಚಂದ್ರಲಗ್ನವಾಗುವುದು ಆದ್ದರಿಂದ ಚಂದ್ರಲಗ್ನ ಕುಂಡಲಿಯಲ್ಲಿ ೧ನೆಯ ರಾಶಿ (ಮನೆ)ಯಲ್ಲಿ ಲಗ್ನ ಎಂದು ಬರೆ ದಿದ್ದೇವೆ.

ಚಂದ್ರಲಗ್ನ ಕುಂಡಲಿ

ಶ (ವ) ೧೨	೧ಲಗ್ನ ಚಂರಾ	೨	೩
೧೧			೪
೧೦			ಗು ೫
ಕು ೯	೮	೭ರಬು (ವ)ಕೇ	೬ ಶು

ಎಲ್ಲ ಗ್ರಹಗಳನ್ನು ಜನನಲಗ್ನ ಕುಂಡಲಿ ಯಲ್ಲಿ ಇದ್ದಂತೆಯೇ ತುಂಬಿದರೆ ಚಂದ್ರ ಲಗ್ನ ಕುಂಡಲಿ ಆಗುವದು. ಚಂದ್ರಲಗ್ನ ಕುಂಡಲಿಗೂ, ಜನನ ಲಗ್ನ ಕುಂಡಲಿಗೂ ಯಾವ ಅಂತರವೂ ಇರುವದಿಲ್ಲ. ಆದರೆ ಜನನ ಲಗ್ನ ಕುಂಡಲಿಯಲ್ಲಿ ಜನನ ಲಗ್ನ (ಅಂಕೆಯು) ಮಧ್ಯಕ್ಕೆ ಬರುವದು. ಚಂದ್ರ ಲಗ್ನ ಕುಂಡಲಿಯಲ್ಲಿ ಚಂದ್ರನು ಇರುವ ರಾಶಿಯು (ಅಂಕೆಯು) ಮಧ್ಯಕ್ಕೆ ಬರುವದು.

ಷಡ್ವರ್ಗ ಫಲ ನಿರ್ಣಯ

ಷಡ್ವರ್ಗ, ಲಗ್ನ ಹಾಗೂ ಗ್ರಹಗಳಿಂದ ಫಲವನ್ನು ನಿರ್ಣಯಿಸಬೇಕು. ಅದು ಹೇಗೆಂದರೆ ಲಗ್ನದಿಂದ ಜಾತಕನ ಜನನರೀತಿ ದೇಹದ ವರ್ಣನೆ ಶೀಲ, ಸ್ವಭಾವಗಳನ್ನೂ, ಹೋರೆಯಿಂದ-ಜಾತಕನ ಧನ, ಧಾನ್ಯ, ಐಶ್ವರ್ಯ, ಕೌಟುಂಬಿಕ ಸ್ಥಿತಿಗಳನ್ನೂ ದ್ರೇಕ್ಕಾಣದಿಂದ ಭಾವ, ಮೈದುನರ ವಿಷಯವಾಗಿಯೂ, ನವಾಂಶದಿಂದ ಅಣ್ಣ, ತಮ್ಮ, ಅಕ್ಕ, ತಂಗಿಯರ ಸಂಬಂಧವಾಗಿಯೂ, ದ್ವಾದಶಾಂಶದಿಂದ ವಿವಾಹ, ಪತ್ನಿ, ಸುಖಭೋಗಗಳ ವಿಷಯವಾಗಿಯೂ, ತ್ರಿಂಶಾಂಶದಿಂದ— ತಾಯಿ, ಮತ್ತು ಜಾತಕನ ಅಪೇಕ್ಷೆಗಳು ಯಾವವು ? ಅವು ಹೇಗೆ ಪೂರ್ಣವಾಗುವವು ? ಎಂಬ ವಿಷಯವಾಗಿಯೂ ಆಯಾ ಲಗ್ನಗಳಹಾಗೂ ಆಯಾ ಗ್ರಹಗಳ ಬಲಾಬಲಗಳ ಮೇಲಿಂದ ಫಲಗಳನ್ನು ಹೇಳಬೇಕು. ಒಟ್ಟಾರೆ ಷಡ್ವರ್ಗದ ಅಧಿಪತಿಗಳು ಶುಭ ಗ್ರಹಗಳು ಅಧಿಕವಾಗಿದ್ದರೆ ಶುಭಫಲವೆಂದೂ, ಪಾಪಗ್ರಹಗಳು ಅಧಿಕವಾಗಿದ್ದರೆ ಅಶುಭ ಫಲವೆಂದೂ ತಿಳಿಯಬೇಕು.

ಷಡ್ವರ್ಗ ಅಧಿಪತಿ ತಿಳಿಯುವ ಕೋಷ್ಟಕ
ಲಗ್ನಾಧಿಪತಿ ಕೋಷ್ಟಕ.

ರಾಶಿಗಳು	ಮೇಷ	ವೃಷಭ	ಮಿಥುನ	ಕರ್ಕ	ಸಿಂಹ	ಕನ್ಯಾ
ಅಧಿಪತಿಗಳು	ಕುಜ	ಶುಕ್ರ	ಬುಧ	ಚಂದ್ರ	ರವಿ	ಬುಧ
ರಾಶಿಗಳು	ತುಲಾ	ವೃಶ್ಚಿಕ	ಧನಸ್ಸು	ಮಕರ	ಕುಂಭ	ಮೀನ
ಅಧಿಪತಿಗಳು	ಶುಕ್ರ	ಕುಜ	ಗುರು	ಶನಿ	ಶನಿ	ಗುರು

ಮೇಲಿನ ಸಾಲಿನಲ್ಲಿ ರಾಶಿಗಳ ಹೆಸರು ಅವೆ. ಕೆಳಗೆ ರಾಶಿಗಳ ಅಧಿಪತಿಗಳ ಹೆಸರು ಅವೆ. ಮೇಷ ರಾಶಿಗೆ ಕುಜನು ಅಧಿಪತಿಯು ವೃಷಭಕ್ಕೆ ಶುಕ್ರನು ಅಧಿಪತಿಯು. ಈ ಪ್ರಕಾರ ಎಲ್ಲ ರಾಶಿಗಳಿಗೂ ಅಧಿಪತಿಗಳನ್ನು ತಿಳಿದುಕೊಳ್ಳಿರಿ.

— ಹೋರಾ ಕೋಷ್ಟಕ —

ಲಗ್ನಗಳು ಭಾಗ	ಮೇಷ	ವೃಷಭ	ಮಿಥುನ	ಕರ್ಕ	ಸಿಂಹ	ಕನ್ಯಾ
೧ರಿಂದ೧೫	ಸಿಂಹ|ರವಿ	ಕರ್ಕ|ಚಂ	ಸಿಂಹ|ರವಿ	ಕರ್ಕ|ಚಂ	ಸಿಂಹ|ರವಿ	ಕರ್ಕ|ಚಂ
೧೫ರಿಂದ ೩೦	ಕರ್ಕ|ಚಂ	ಸಿಂಹ|ರವಿ	ಕರ್ಕ|ಚಂ	ಸಿಂಹ|ರವಿ	ಕರ್ಕ|ಚಂ	ಸಿಂಹ|ರವಿ

ಲಗ್ನಗಳು	ತುಲಾ	ವೃಶ್ಚಿಕ	ಧನಸ್ಸು	ಮಕರ	ಕುಂಭ	ಮೀನ
೧ರಿಂದ೧೫	ಸಿಂಹ|ರವಿ	ಕರ್ಕ|ಚಂ	ಸಿಂಹ|ರವಿ	ಕರ್ಕ|ಚಂ	ಸಿಂಹ|ರವಿ	ಕರ್ಕ|ಚಂ
೧೫ರಿಂದ ೩೦	ಕರ್ಕ|ಚಂ	ಸಿಂಹ|ರವಿ	ಕರ್ಕ|ಚಂ	ಸಿಂಹ|ರವಿ	ಕರ್ಕ|ಚಂ	ಸಿಂಹ|ರವಿ

ನೋಡುವ ರೀತಿ– ಧನಸ್ಸು ಲಗ್ನದಲ್ಲಿ ಜನನವಾಗಿದೆ. ಲಗ್ನಸ್ಫುಟವು ೨೩ ಭಾಗ ೩೨ ಲಿಪ್ತಿ. ೪೩ ವಿಲಿಪ್ತಿ ಅದೆ. ಆದ್ದರಿಂದ ೧೫ ರಿಂದ ೩೦ ಭಾಗದಲ್ಲಿ ಬರುವದು. ಧನಸ್ಸು ಲಗ್ನದ ಕೆಳಗೆ ೨ ನೆಯ ಸಾಲಿನಲ್ಲಿ ಕರ್ಕ|ಚಂದ್ರ ಹೀಗೆ ಇದೆ. ಅಂದರೆ– ಹೋರಾಧಿಪತಿಯು ಚಂದ್ರನು. ಮತ್ತು ಕರ್ಕದಲ್ಲಿ ಚಂದ್ರನು ಎಂದು ತಿಳಿಯಿರಿ.

ತ್ರಿಂಶಾಂಶ ಕೋಷ್ಟಕ ನೋಡುವ ರೀತಿ (೬೫ ಪುಟ ನೋಡಿರಿ.)

ನೋಡುವ ರೀತಿ:– ಧನಸ್ಸು ಲಗ್ನದಲ್ಲಿ ಜನನವಾಗಿದೆ ಧನಸ್ಸು ಲಗ್ನವು ವಿಷಮ ರಾಶಿಯಾದ್ದರಿಂದ ವಿಷಮ ರಾಶಿ ತ್ರಿಂಶಾಂಶ ಕೋಷ್ಟಕದಲ್ಲಿ ನೋಡಬೇಕು. ಲಗ್ನಸ್ಫುಟವು ೨೩ ಭಾಗ ೩೨ ಲಿಪ್ತಿ ೪೩ ವಿಲಿಪ್ತಿ ಅದೆ. ಆದ್ದರಿಂದ ೧೮ ರಿಂದ ೨೫ ಭಾಗದೊಳಗೆ ಬರುವದು. ಕಾರಣ ಆ ಸಾಲಿನಲ್ಲಿ ಧನಸ್ಸು ಲಗ್ನದ ಕೆಳಗೆ ನೋಡಲು ಮಿಥುನ ಬುಧ ಎಂದು ಇದೆ. ಆದ್ದರಿಂದ ಮಿಥುನ ತ್ರಿಂಶಾಂಶವಾಯಿತು. ಮತ್ತು ತ್ರಿಂಶಾಂಶಾಧಿಪತಿ ಬುಧನು ಆದನು.

— ದ್ರೇಕ್ಕಾಣ ಕೋಷ್ಟಕ —

ಲಗ್ನಗಳು ಭಾಗಗಳು	ಮೇಷ	ವೃಷಭ	ಮಿಥುನ	ಕರ್ಕ	ಸಿಂಹ	ಕನ್ಯಾ
೧ ರಿಂದ ೧೦	ಮೇಷ|ಕುಜ	ಮಕರ|ಶನಿ	ತುಲಾ|ಶುಕ್ರ	ಕರ್ಕ|ಚಂದ್ರ	ಮೇಷ|ಕುಜ	ಮಕರ|ಶನಿ
೧೦ ರಿಂದ ೨೦	ಸಿಂಹ|ರವಿ	ವೃಷಭ|ಶುಕ್ರ	ಕುಂಭ|ಶನಿ	ವೃಶ್ಚಿಕ|ಕುಜ	ಸಿಂಹ|ರವಿ	ವೃಷಭ|ಶುಕ್ರ
೨೦ ರಿಂದ ೩೦	ಧನಸ್ಸು|ಗುರು	ಕನ್ಯಾ|ಬುಧ	ಮಿಥುನ|ಬುಧ	ಮೀನ|ಗುರು	ಧನಸ್ಸು|ಗುರು	ಕನ್ಯಾ|ಬುಧ
ಲಗ್ನಗಳು ಭಾಗಗಳು	ತುಲಾ	ವೃಶ್ಚಿಕ	ಧನಸ್ಸು	ಮಕರ	ಕುಂಭ	ಮೀನ
೧ ರಿಂದ ೧೦	ತುಲಾ|ಶುಕ್ರ	ಕರ್ಕ|ಚಂದ್ರ	ಮೇಷ|ಕುಜ	ಮಕರ|ಶನಿ	ತುಲಾ|ಶುಕ್ರ	ಕರ್ಕ|ಗುರು
೧೦ ರಿಂದ ೨೦	ಕುಂಭ|ಶನಿ	ವೃಶ್ಚಿಕ|ಕುಜ	ಸಿಂಹ|ರವಿ	ವೃಷಭ|ಶುಕ್ರ	ಕುಂಭ|ಶನಿ	ವೃಶ್ಚಿಕ|ಕುಜ
೨೦ ರಿಂದ ೩೦	ಮಿಥುನ|ಬುಧ	ಮೀನ|ಗುರು	ಧನಸ್ಸು|ಗುರು	ಕನ್ಯಾ|ಬುಧ	ಮಿಥುನ|ಬುಧ	ಮೀನ|ಗುರು

ನೋಡುವ ರೀತಿ:- ಧನಸ್ಸು ಲಗ್ನದಲ್ಲಿ ಜನನವಾಗಿದೆ. ಲಗ್ನಸ್ಫುಟವು ೨೩ ಭಾಗ ೩೨ ಲಿಪ್ತಿ ೪೩ ವಿಲಿಪ್ತಿ ಅವೆ. ಆದ್ದರಿಂದ ೨೦ ರಿಂದ ೩೦ ಭಾಗದೊಳಗೆ ಬರುತ್ತದೆ. ಧನಸ್ಸು ಲಗ್ನದ ಕೆಳಗೆ ೩ ನೆಯ ಸಾಲಿನಲ್ಲಿ ಧನಸ್ಸು|ಗುರು ಹೀಗೆ ಇದೆ ಅಂದರೆ ದ್ರೇಕ್ಕಾಣ ಅಧಿಪತಿಯು ಗುರು ಮತ್ತು ಧನುಸ್ಸಿನಲ್ಲಿ ಗುರು ಎಂದು ತಿಳಿಯಿರಿ.

— ನವಾಂಶ ಕೋಷ್ಟಕ —

ಲಗ್ನಗಳು ಭಾಗ|ಲಿಪ್ತಿ|ಭಾಗ|ಲಿಪ್ತಿ	ಮೇಷ	ವೃಷಭ	ಮಿಥುನ	ಕರ್ಕ	ಸಿಂಹ	ಕನ್ಯಾ
೧- ೦ ರಿಂದ ೩-೨೦	ಮೇಷ|ಕುಜ	ಮಕರ|ಶನಿ	ತುಲಾ|ಶುಕ್ರ	ಕರ್ಕ|ಚಂದ್ರ	ಮೇಷ|ಕುಜ	ಮಕರ|ಶನಿ
೩-೨೦ ರಿಂದ ೬-೪೦	ವೃಷಭ|ಶುಕ್ರ	ಕುಂಭ|ಶನಿ	ವೃಶ್ಚಿಕ|ಕುಜ	ಸಿಂಹ|ರವಿ	ವೃಷಭ|ಶುಕ್ರ	ಕುಂಭ|ಶನಿ
೬-೪೦ ರಿಂದ ೧೦- ೦	ಮಿಥುನ|ಬುಧ	ಮೀನ|ಗುರು	ಧನು|ಗುರು	ಕನ್ಯಾ|ಬುಧ	ಮಿಥುನ|ಬುಧ	ಮೀನ|ಗುರು
೧೦- ೦ ರಿಂದ ೧೩-೨೦	ಕರ್ಕ| ಚಂದ್ರ	ಮೇಷ|ಕುಜ	ಮಕರ|ಶನಿ	ತುಲಾ|ಶುಕ್ರ	ಕರ್ಕ|ಚಂದ್ರ	ಮೇಷ|ಕುಜ
೧೩-೨೦ ರಿಂದ ೧೬-೪೦	ಸಿಂಹ|ರವಿ	ವೃಷಭ-ಶುಕ್ರ	ಕುಂಭ|ಶನಿ	ವೃಶ್ಚಿಕ|ಕುಜ	ಸಿಂಹ|ರವಿ	ವೃಷಭ|ಶುಕ್ರ
೧೬-೪೦ ರಿಂದ ೨೦- ೦	ಕನ್ಯಾ|ಬುಧ	ಮಿಥುನ-ಬುಧ	ಮೀನ|ಗುರು	ಧನು|ಗುರು	ಕನ್ಯಾ|ಬುಧ	ಮಿಥುನ|ಬುಧ
೨೦- ೦ ರಿಂದ ೨೩-೨೦	ತುಲಾ|ಶುಕ್ರ	ಕರ್ಕ|ಚಂದ್ರ	ಮೇಷ|ಕುಜ	ಮಕರ|ಶನಿ	ತುಲಾ|ಶುಕ್ರ	ಕರ್ಕ|ಚಂದ್ರ
೨೩-೨೦ ರಿಂದ ೨೬-೪೦	ವೃಶ್ಚಿಕ |ಕುಜ	ಸಿಂಹ|ರವಿ	ವೃಷಭ|ಶುಕ್ರ	ಕುಂಭ|ಶನಿ	ವೃಶ್ಚಿಕ|ಕುಜ	ಸಿಂಹ|ರವಿ
೨೬-೪೦ ರಿಂದ ೩೦- ೦	ಧನು|ಗುರು	ಕನ್ಯಾ|ಬುಧ	ಮಿಥುನ|ಬುಧ	ಮೀನ|ಗುರು	ಧನು|ಗುರು	ಕನ್ಯಾ|ಬುಧ

ನೋಡುವ ರೀತಿ:– ಧನಸ್ಸು ಲಗ್ನದಲ್ಲಿ ಜನನವಾಗಿದೆ. ಲಗ್ನಸ್ಫುಟವು ೨೩ ಭಾಗ ೩೨ ಲಿಪ್ತಿ, ೪೩ ವಿಲಿಪ್ತಿ ಅವೆ. ಅದ್ದರಿಂದ ೨೩ ಭಾಗ ೨೦ ಲಿಪ್ತಿಯಿಂದ ೨೬ ಭಾಗ ೪೦ ಲಿಪ್ತಿಯೊಳಗೆ ಬರುತ್ತದೆ. ಕಾರಣ ಆ ಸಾಲಿನಲ್ಲಿ ಧನಸ್ಸು ಲಗ್ನದ ಕೆಳಗೆ ನೋಡಲು ವೃಶ್ಚಿಕ|ಕುಜ ಎಂದು ಇದೆ. ಅದ್ದರಿಂದ ವೃಶ್ಚಿಕ ನವಾಂಶ ವಾಯಿತು. ಮತ್ತು ನವಾಂಶಾಧಿಪತಿಯು ಕುಜ ಆದನು, ಎಂದು ತಿಳಿಯಬೇಕು.

— ನವಾಂಶ ಕೋಷ್ಟಕ —

ಲಗ್ನಗಳು	ತುಲಾ	ವೃಶ್ಚಿಕ	ಧನಸ್ಸು	ಮಕರ	ಕುಂಭ	ಮೀನ
ಭಾಗ|ಲಿಪ್ತಿ|ಭಾಗ|ಲಿಪ್ತಿ						
೧- ೦ ರಿಂದ ೩-೨೦	ತುಲಾ|ಶುಕ್ರ	ಕರ್ಕ|ಚಂದ್ರ	ಮೇಷ|ಕುಜ	ಮಕರ|ಶನಿ	ತುಲಾ|ಶುಕ್ರ	ಕರ್ಕ|ಚಂದ್ರ
೩-೨೦ ರಿಂದ ೬-೪೦	ವೃಶ್ಚಿಕ|ಕುಜ	ಸಿಂಹ|ರವಿ	ವೃಷಭ|ಶುಕ್ರ	ಕುಂಭ|ಶನಿ	ವೃಶ್ಚಿಕ|ಕುಜ	ಸಿಂಹ|ರವಿ
೬-೪೦ ರಿಂದ ೧೦- ೦	ಧನು|ಗುರು	ಕನ್ಯಾ|ಬುಧ	ಮಿಥುನ|ಬುಧ	ಮೀನ|ಗುರು	ಧನು|ಗುರು	ಕನ್ಯಾ|ಬುಧ
೧೦- ೦ ರಿಂದ ೧೩-೨೦	ಮಕರ|ಶನಿ	ತುಲಾ|ಶುಕ್ರ	ಕರ್ಕ|ಚಂದ್ರ	ಮೇಷ|ಕುಜ	ಮಕರ ಶನಿ	ತುಲಾ ಶುಕ್ರ
೧೩-೨೦ ರಿಂದ ೧೬-೪೦	ಕುಂಭ|ಶನಿ	ವೃಶ್ಚಿಕ|ಕುಜ	ಸಿಂಹ|ರವಿ	ವೃಷಭ|ಶುಕ್ರ	ಕುಂಭ|ಶನಿ	ವೃಶ್ಚಿಕ|ಕುಜ
೧೬-೪೦ ರಿಂದ ೨೦- ೦	ಮೀನ|ಗುರು	ಧನು|ಗುರು	ಕನ್ಯಾ|ಬುಧ	ಮಿಥುನ|ಬುಧ	ಮೀನ|ಗುರು	ಧನು|ಗುರು
೨೦- ೦ ರಿಂದ ೨೩-೨೦	ಮೇಷ|ಕುಜ	ಮಕರ|ಶನಿ	ತುಲಾ|ಶುಕ್ರ	ಕರ್ಕ|ಚಂದ್ರ	ಮೇಷ|ಕುಜ	ಮಕರ|ಶನಿ
೨೩-೨೦ ರಿಂದ ೨೬-೪೦	ವೃಷಭ ಶುಕ್ರ	ಕುಂಭ|ಶನಿ	ವೃಶ್ಚಿಕ|ಕುಜ	ಸಿಂಹ|ರವಿ	ವೃಷಭ|ಶುಕ್ರ	ಕುಂಭ|ಶನಿ
೨೬-೪೦ ರಿಂದ ೩೦- ೦	ಮಿಥುನ|ಬುಧ	ಮೀನ|ಗುರು	ಧನು|ಗುರು	ಕನ್ಯಾ|ಬುಧ	ಮಿಥುನ ಬುಧ	ಮೀನ|ಗುರು

ನೋಡುವ ರೀತಿ:- ಧನಸ್ಸು ಲಗ್ನದಲ್ಲಿ ಜನನವಾಗಿದೆ. ಲಗ್ನಸ್ಫುಟವು ೨೩ ಭಾಗ ೩೨ ಲಿಪ್ತಿ, ೪೩ ವಿಲಿಪ್ತಿ ಅವೆ. ಆದ್ದರಿಂದ ೨೩ ಭಾಗ ೨೦ ಲಿಪ್ತಿಯಿಂದ ೨೬ ಭಾಗ ೪೦ ಲಿಪ್ತಿಯೊಳಗೆ ಬರುತ್ತದೆ. ಕಾರಣ ಆ ಸಾಲಿನಲ್ಲಿ ಧನಸ್ಸು ಲಗ್ನದ ಕೆಳಗೆ ನೋಡಲು ವೃಶ್ಚಿಕ|ಕುಜ ಎಂದು ಇದೆ. ಆದ್ದರಿಂದ ವೃಶ್ಚಿಕ ನವಾಂಶ ವಾಯಿತು. ಮತ್ತು ನವಾಂಶಾಧಿಪತಿಯು ಕುಜ ಆದನು, ಎಂದು ತಿಳಿದುಕೊಳ್ಳಿರಿ.

— ದ್ವಾದಶಾಂಶ ಕೋಷ್ಟಕ —

ಲಗ್ನಗಳು	ತುಲಾ	ವೃಶ್ಚಿಕ	ಧನಸ್ಸು	ಮಕರ	ಕುಂಭ	ಮೀನ
ಭಾಗ|ಲಿಪ್ತಿ|ಭಾಗ| ಲಿಪ್ತಿ						
೧- ೦ರಿಂದ ೨-೩೦	ತುಲಾ|ಶುಕ್ರ	ವೃಶ್ಚಿಕ|ಕುಜ	ಧನು|ಗುರು	ಮಕರ|ಶನಿ	ಕುಂಭ|ಶನಿ	ಮೀನ|ಗುರು
೨- ೩೦ರಿಂದ ೫-೩೦	ವೃಶ್ಚಿಕ|ಕುಜ	ಧನು|ಗುರು	ಮಕರ|ಶನಿ	ಕುಂಭ|ಶನಿ	ಮೀನ|ಗುರು	ಮೇಷ|ಕುಜ
೫- ೦ರಿಂದ ೭-೦೦	ಧನು|ಗುರು	ಮಕರ|ಶನಿ	ಕುಂಭ|ಶನಿ	ಮೀನ|ಗುರು	ಮೇಷ|ಕುಜ	ವೃಷಭ|ಶುಕ್ರ
೭- ೩೦ರಿಂದ ೧೦-೦೦	ಮಕರ|ಶನಿ	ಕುಂಭ|ಶನಿ	ಮೀನ|ಗುರು	ಮೇಷ|ಕುಜ	ವೃಷಭ|ಶುಕ್ರ	ಮಿಥುನ|ಬುಧ
೧೦- ೩೦ರಿಂದ ೧೨-೩೦	ಕುಂಭ|ಶನಿ	ಮೀನ|ಗುರು	ಮೇಷ|ಕುಜ	ವೃಷಭ|ಶುಕ್ರ	ಮಿಥುನ ಬುಧ	ಕರ್ಕ|ಚಂದ್ರ
೧೨- ೩೦ರಿಂದ ೧೫- ೦	ಮೀನ|ಗುರು	ಮೇಷ|ಕುಜ	ವೃಷಭ|ಶುಕ್ರ	ಮಿಥುನ|ಬುಧ	ಕರ್ಕ|ಚಂದ್ರ	ಸಿಂಹ|ರವಿ
೧೫- ೦ ರಿಂದ ೧೭-೩೦	ಮೇಷ|ಕುಜ	ವೃಷಭ|ಶುಕ್ರ	ಮಿಥುನ|ಬುಧ	ಕರ್ಕ|ಚಂದ್ರ	ಸಿಂಹ|ರವಿ	ಕನ್ಯಾ|ಬುಧ
೧೭- ೩೦ರಿಂದ ೨೦- ೦	ವೃಷಭ|ಶುಕ್ರ	ಮಿಥುನ|ಬುಧ	ಕರ್ಕ|ಚಂದ್ರ	ಸಿಂಹ|ರವಿ	ಕನ್ಯಾ|ಬುಧ	ತುಲಾ|ಶುಕ್ರ
೨೦- ೦ರಿಂದ ೨೨-೩೦	ಮಿಥುನ|ಬುಧ	ಕರ್ಕ|ಚಂದ್ರ	ಸಿಂಹ|ರವಿ	ಕನ್ಯಾ|ಬುಧ	ತುಲಾ|ಶುಕ್ರ	ವೃಶ್ಚಿಕ|ಕುಜ
೨೨- ೩೦ರಿಂದ ೨೫- ೦	ಕರ್ಕ|ಚಂದ್ರ	ಸಿಂಹ|ರವಿ	ಕನ್ಯಾ|ಬುಧ	ತುಲಾ|ಶುಕ್ರ	ವೃಶ್ಚಿಕ|ಕುಜ	ಧನು ಗುರು
೨೫- ೦ರಿಂದ ೨೭-೩೦	ಸಿಂಹ|ರವಿ	ಕನ್ಯಾ|ಬುಧ	ತುಲಾ|ಶುಕ್ರ	ವೃಶ್ಚಿಕ|ಕುಜ	ಧನು|ಗುರು	ಮಕರ|ಶನಿ
೨೭- ೩೦ರಿಂದ ೩೦- ೦	ಕನ್ಯಾ|ಬುಧ	ತುಲಾ|ಶುಕ್ರ	ವೃಶ್ಚಿಕ|ಕುಜ	ಧನು|ಗುರು	ಮಕರ-ಶನಿ	ಕುಂಭ|ಶನಿ

ನೋಡುವ ರೀತಿ:– ಧನಸ್ಸು ಲಗ್ನದಲ್ಲಿ ಜನನವಾಗಿದೆ ಲಗ್ನ ಸ್ಫುಟವು ೨೩ ಭಾಗ ೩೨ ಲಿಪ್ತಿ ೪೩ ವಿಲಿಪ್ತಿ ಅವೆ. ಆದ್ದರಿಂದ ೨೨ ಭಾಗ ೩೦ ಲಿಪ್ತಿಯಿಂದ ೨೫ ಭಾಗ ೦ ಲಿಪ್ತಿ ಯೊಳಗೆ ಬರುತ್ತದೆ. ಕಾರಣ ಆ ಸಾಲಿನಲ್ಲಿ ಧನಸ್ಸು ಲಗ್ನದ ಕೆಳಗೆ ನೋಡಲು ಕನ್ಯಾ|ಬುಧ ಎಂದು ಇದೆ. ಆದ್ದರಿಂದ ಕನ್ಯಾ ದ್ವಾದಶಾಂಶವಾಯಿತು. ಮತ್ತು ದ್ವಾದಶಾಂಶಾಧಿಪತಿಯು ಬುಧನು ಆದನು.

— ದ್ವಾದಶಾಂಶ ಕೋಷ್ಟಕ —

ಲಗ್ನಗಳು	ಮೇಷ	ವೃಷಭ	ಮಿಥುನ	ಕರ್ಕ	ಸಿಂಹ	ಕನ್ಯಾ
ಭಾಗ|ಲಿಪ್ತಿ ಭಾಗ| ಲಿಪ್ತಿ						
೧- ೦ರಿಂದ ೨-೩೦	ಮೇಷ|ಕುಜ	ವೃಷಭ|ಶುಕ್ರ	ಮಿಥುನ|ಬುಧ	ಕರ್ಕ|ಚಂದ್ರ	ಸಿಂಹ|ರವಿ	ಕನ್ಯಾ|ಬುಧ
೨- ೩೦ರಿಂದ ೫- ೦	ವೃಷಭ|ಶುಕ್ರ	ಮಿಥುನ|ಬುಧ	ಕರ್ಕ|ಚಂದ್ರ	ಸಿಂಹ|ರವಿ	ಕನ್ಯಾ|ಬುಧ	ತುಲಾ|ಶುಕ್ರ
೫- ೦ರಿಂದ ೭-೩೦	ಮಿಥುನ|ಬುಧ	ಕರ್ಕ|ಚಂದ್ರ	ಸಿಂಹ|ರವಿ	ಕನ್ಯಾ|ಬುಧ	ತುಲಾ|ಶುಕ್ರ	ವೃಶ್ಚಿಕ|ಕುಜ
೭- ೩೦ರಿಂದ ೧೦- ೦	ಕರ್ಕ|ಚಂದ್ರ	ಸಿಂಹ|ರವಿ	ಕನ್ಯಾ|ಬುಧ	ತುಲಾ|ಶುಕ್ರ	ವೃಶ್ಚಿಕ|ಕುಜ	ಧನು|ಗುರು
೧೦- ೦ರಿಂದ ೧೨-೩೦	ಸಿಂಹ|ರವಿ	ಕನ್ಯಾ| ಬುಧ	ತುಲಾ|ಶುಕ್ರ	ವೃಶ್ಚಿಕ|ಕುಜ	ಧನು ಗುರು	ಮಕರ|ಶನಿ
೧೨- ೩೦ರಿಂದ ೧೫- ೦	ಕನ್ಯಾ|ಬುಧ	ತುಲಾ| ಶುಕ್ರ	ವೃಶ್ಚಿಕ|ಕುಜ	ಧನು|ಗುರು	ಮಕರ|ಶನಿ	ಕುಂಭ|ಶನಿ
೧೫- ೦ ರಿಂದ ೧೭-೩೦	ತುಲಾ| ಶುಕ್ರ	ವೃಶ್ಚಿಕ| ಕುಜ	ಧನು|ಗುರು	ಮಕರ|ಶನಿ	ಕುಂಭ|ಶನಿ	ಮೀನ|ಗುರು
೧೭- ೩೦ರಿಂದ ೨೦- ೦	ವೃಶ್ಚಿಕ| ಕುಜ	ಧನು|ಗುರು	ಮಕರ|ಶನಿ	ಕುಂಭ|ಶನಿ	ಮೀನ|ಗುರು	ಮೇಷ|ಕುಜ
೨೦- ೦ರಿಂದ ೨೨-೩೦	ಧನು|ಗುರು	ಮಕರ|ಶನಿ	ಕುಂಭ|ಶನಿ	ಮೀನ|ಗುರು	ಮೇಷ|ಕುಜ	ವೃಷಭ|ಶುಕ್ರ
೨೨- ೩೦ರಿಂದ ೨೫- ೦	ಮಕರ|ಶನಿ	ಕುಂಭ|ಶನಿ	ಮೀನ|ಗುರು	ಮೇಷ|ಕುಜ	ವೃಷಭ|ಶುಕ್ರ	ಮಿಥುನ|ಬುಧ
೨೫- ೦ರಿಂದ ೨೭-೩೦	ಕುಂಭ|ಶನಿ	ಮೀನ|ಗುರು	ಮೇಷ|ಕುಜ	ವೃಷಭ|ಶುಕ್ರ	ಮಿಥುನ|ಬುಧ	ಕರ್ಕ|ಚಂದ್ರ
೨೭- ೩೦ರಿಂದ ೩೦- ೦	ಮೀನ|ಗುರು	ಮೇಷ|ಕುಜ	ವೃಷಭ|ಶುಕ್ರ	ಮಿಥುನ|ಬುಧ	ಕರ್ಕ|ಚಂದ್ರ	ಸಿಂಹ|ರವಿ

ನೋಡುವ ರೀತಿ:- ಧನಸ್ಸು ಲಗ್ನದಲ್ಲಿ ಜನನವಾಗಿದೆ. ಲಗ್ನ ಸ್ಫುಟವು ೨೩ ಭಾಗ ೩೨ ಲಿಪ್ತಿ ೪೩ ವಿಲಿಪ್ತಿ ಅವೆ ಅದ್ದರಿಂದ ೨೨ ಭಾಗ ೩೦ ಲಿಪ್ತಿಯಿಂದ ೨೫ ಭಾಗ ೦ ಲಿಪ್ತಿಯೊಳಗೆ ಬರುತ್ತದೆ ಕಾರಣ ಆ ಸಾಲಿನಲ್ಲಿ ಧನಸ್ಸು ಲಗ್ನದ ಕೆಳಗೆ ನೋಡಲು ಕನ್ಯಾ|ಬುಧ ಎಂದು ಇದೆ ಅದ್ದರಿಂದ ಕನ್ಯಾ ದ್ವಾದಶಾಂಶವಾಯಿತು. ಮತ್ತು ದ್ವಾದಶಾಂಶಾಧಿಪತಿಯು ಬುಧನು ಆದನು.

— ಸಮ ರಾಶಿ ತ್ರಿಂಶಾಂಶ ಕೋಷ್ಟಕ —

ಲಗ್ನಗಳು	ವೃಷಭ	ಕರ್ಕ	ಕನ್ಯಾ	ವೃಶ್ಚಿಕ	ಮಕರ	ಮೀನ
ಭಾಗಗಳು						
೧ ರಿಂದ ೫	ವೃಷಭ|ಶುಕ್ರ	ವೃಷಭ|ಶುಕ್ರ	ವೃಷಭ|ಶುಕ್ರ	ವೃಷಭ|ಶುಕ್ರ	ವೃಷಭ|ಶುಕ್ರ	ವೃಷಭ|ಶುಕ್ರ
೫ ರಿಂದ ೧೨	ಕನ್ಯಾ|ಬುಧ	ಕನ್ಯಾ|ಬುಧ	ಕನ್ಯಾ|ಬುಧ	ಕನ್ಯಾ|ಬುಧ	ಕನ್ಯಾ|ಬುಧ	ಕನ್ಯಾ|ಬುಧ
೧೨ ರಿಂದ ೨೦	ಮೀನ|ಗುರು	ಮೀನ|ಗುರು	ಮೀನ|ಗುರು	ಮೀನ|ಗುರು	ಮೀನ|ಗುರು	ಮೀನ|ಗುರು
೨೦ ರಿಂದ ೨೫	ಮಕರ|ಶನಿ	ಮಕರ|ಶನಿ	ಮಕರ|ಶನಿ	ಮಕರ|ಶನಿ	ಮಕರ|ಶನಿ	ಮಕರ|ಶನಿ
೨೫ ರಿಂದ ೩೦	ವೃಶ್ಚಿಕ|ಕುಜ	ವೃಶ್ಚಿಕ|ಕುಜ	ವೃಶ್ಚಿಕ|ಕುಜ	ವೃಶ್ಚಿಕ|ಕುಜ	ವೃಶ್ಚಿಕ|ಕುಜ	ವೃಶ್ಚಿಕ|ಕುಜ

— ವಿಷಮ (ಬೆಸ) ರಾಶಿ ತ್ರಿಂಶಾಂಶ ಕೋಷ್ಟಕ —

ಲಗ್ನಗಳು	ಮೇಷ	ಮಿಥುನ	ಸಿಂಹ	ತುಲಾ	ಧನಸ್ಸು	ಕುಂಭ
ಭಾಗಗಳು						
೧ ರಿಂದ ೫	ಮೇಷ|ಕುಜ	ಮೇಷ|ಕುಜ	ಮೇಷ|ಕುಜ	ಮೇಷ|ಕುಜ	ಮೇಷ|ಕುಜ	ಮೇಷ|ಕುಜ
೫ ರಿಂದ ೧೦	ಕುಂಭ ಶನಿ	ಕುಂಭ|ಶನಿ	ಕುಂಭ|ಶನಿ	ಕುಂಭ|ಶನಿ	ಕುಂಭ|ಶನಿ	ಕುಂಭ|ಶನಿ
೧೦ ರಿಂದ ೧೮	ಧನು|ಗುರು	ಧನು|ಗುರು	ಧನು|ಗುರು	ಧನು|ಗುರು	ಧನು|ಗುರು	ಧನು|ಗುರು
೧೮ ರಿಂದ ೨೫	ಮಿಥುನ|ಬುಧ	ಮಿಥುನ|ಬುಧ	ಮಿಥುನ|ಬುಧ	ಮಿಥುನ|ಬುಧ	ಮಿಥುನ|ಬುಧ	ಮಿಥುನ|ಬುಧ
೨೫ ರಿಂದ ೩೦	ತುಲಾ|ಶುಕ್ರ	ತುಲಾ|ಶುಕ್ರ	ತುಲಾ|ಶುಕ್ರ	ತುಲಾ|ಶುಕ್ರ	ತುಲಾ|ಶುಕ್ರ	ತುಲಾ|ಶುಕ್ರ

ಜನನಲಗ್ನವು ಸಮರಾಶಿಯಾದರೆ ಸಮರಾಶಿ ತ್ರಿಂಶಾಂಶಕೋಷ್ಟಕವನ್ನೂ, ಜನನಲಗ್ನವು ವಿಷಮ ರಾಶಿಯಾದರೆ ವಿಷಮ ತ್ರಿಂಶಾಂಶ ಕೋಷ್ಟಕವನ್ನೂ ನೋಡಬೇಕು.

ಸಂವತ್ಸರ ಫಲ ಪ್ರಾರಂಭ

ಪ್ರಭವ– ಈ ಸಂವತ್ಸರದಲ್ಲಿ ಹುಟ್ಟಿದ ಪುರುಷನು ಸಂಪನ್ನನು. ಭೋಗವುಳ್ಳವನು ದೀರ್ಘಾಯುಷ್ಯವುಳ್ಳವನು, ಪುತ್ರವಂತನು. ಸಂಪತ್ತುಳ್ಳವನು ಆಗುತ್ತಾನೆ

ವಿಭವ– ಈ ಸಂವತ್ಸರದಲ್ಲಿ ಹುಟ್ಟಿದ ಪುರುಷನು. ವಿದ್ಯಾವಂತನು, ರಾಜಪೂಜ್ಯನು, ಲಕ್ಷಣವಂತನು, ಭೋಗವಂತನು, ಮೃಷ್ಟಾನ್ನ ಭೋಜನವುಳ್ಳವನು. ವಾಕ್‌ಚಾತುರ್ಯವುಳ್ಳವನು ಆಗುತ್ತಾನೆ.

ಶುಕ್ಲ– ಈ ಸಂವತ್ಸರದಲ್ಲಿ ಹುಟ್ಟಿದ ಪುರುಷನು ಭೃತ್ಯಬಾಂಧವರಿಂದಲೂ ಸ್ತ್ರೀ–ಪುತ್ರರಿಂದಲೂ ಕೂಡಿದವನು ಸುಗುಣವುಳ್ಳವನು. ಮಾನವಂತನು, ಸುಖವಂತನು ಆಗುತ್ತಾನೆ.

ಪ್ರಮೋದೂತ– ಈ ಸಂವತ್ಸರದಲ್ಲಿ ಹುಟ್ಟಿದ ಪುರುಷನು ಸದಾ ಸಂತೋಷವುಳ್ಳವನು. ನಿರಂತರ ಸತ್ಯ ಮಾತಾಡುವವನು, ಮಾನವುಳ್ಳವನು ಸುಂದರನು, ಸೂಕ್ಷ್ಮ ಬುದ್ಧಿಯುಳ್ಳವನು ಆಗುತ್ತಾನೆ.

ಪ್ರಜೋತ್ಪತ್ತಿ– ಈ ಸಂವತ್ಸರದಲ್ಲಿ ಹುಟ್ಟಿದ ಪುರುಷನು ಧರ್ಮಿಷ್ಠನು ಸತ್ಯವಂತನು, ದೇವ ಬ್ರಾಹ್ಮಣರಲ್ಲಿ ಭಕ್ತಿಯುಳ್ಳವನು, ದಯಾದಾಕ್ಷಿಣ್ಯವುಳ್ಳವನು, ಸರ್ವರಲ್ಲಿ ಅತಿ ಪ್ರೀತಿಯುಳ್ಳವನು, ಆಗುತ್ತಾನೆ.

ಅಂಗೀರಸ– ಈ ಸಂವತ್ಸರದಲ್ಲಿ ಹುಟ್ಟಿದ ಪುರುಷನು, ಬಹು ಕಾಮಿಯು, ಭೋಗವಂತನು, ಸ್ತ್ರೀಲೋಲನು, ಆಯುಷ್ಯ ವೃದ್ಧಿಯುಳ್ಳವನು, ಬಹು ಪುತ್ರರುಳ್ಳವನು ವಿನೋದವುಳ್ಳವನು, ಆಗುವನು.

ಶ್ರೀಮುಖ– ಈ ಸಂವತ್ಸರದಲ್ಲಿ ಹುಟ್ಟಿದ ಪುರುಷನು, ಧನವಂತನು, ಭಾಗ್ಯವಂತನು, ದೀರ್ಘಾಯುಷ್ಯವುಳ್ಳವನು, ಶಾಂತ ಸ್ವಭಾವವುಳ್ಳವನು. ಕುಶಲಮತಿಯು ಆಗುತ್ತಾನೆ.

ಭಾವ– ಈ ಸಂವತ್ಸರದಲ್ಲಿ ಹುಟ್ಟಿದ ಪುರುಷನು, ಕೀರ್ತಿವಂತನು, ಧರ್ಮಕಾರ್ಯದಲ್ಲಿ ಆಸಕ್ತಿಯುಳ್ಳವನು, ಲಕ್ಷಣವಂತನು, ಆಗುತ್ತಾನೆ

ಯುವ- ಈ ಸಂವತ್ಸರದಲ್ಲಿ ಹುಟ್ಟಿದವನು. ಕೀರ್ತಿವಂತನು ಗುಣ ವಂತನು, ದೀರ್ಘಾಯುಷ್ಯವುಳ್ಳವನು. ಚುರುಕು ಬುದ್ಧಿಯುಳ್ಳವನು, ಧನ ವಂತನು, ಶಾಂತ ಚಿತ್ತನು ಆಗುತ್ತಾನೆ.

ಧಾತು- ಈ ಸಂವತ್ಸರದಲ್ಲಿ ಹುಟ್ಟಿದ ಪುರುಷನು ಸರ್ವ ಕಾರ್ಯಗಳಲ್ಲಿ ನಿಪುಣನು, ದೀರ್ಘಾಯುಷಿಯು ಭಕ್ತಿಯುಳ್ಳವನು, ಧಾತು ಪುಷ್ಟಿಯುಳ್ಳವನು ಆಗುತ್ತಾನೆ.

ಈಶ್ವರ— ಈ ಸಂವತ್ಸರದಲ್ಲಿ ಹುಟ್ಟಿದ ಪುರುಷನು ಜ್ಞಾನವಂತನು ಗುರುಭಕ್ತಿಯುಳ್ಳವನು, ಸುಂದರನು, ಸದಾ ಕೋಪಿಯು, ಬಹು ವಾದಿಯು ಆಗುತ್ತಾನೆ.

ಬಹುಧಾನ್ಯ- ಈ ಸಂವತ್ಸರದಲ್ಲಿ ಹುಟ್ಟಿದವನು ಧರ್ಮಕಾರ್ಯಗಳನ್ನು ಮಾಡುವವನು, ಭಾವಿಯನ್ನು ಅಗಿಸುವವನು ಪುಣ್ಯಕ್ಷೇತ್ರದರ್ಶನ ಮಾಡು ವವನು ಪರೋಪಕಾರವನ್ನು ಮಾಡುವವನು ಆಗುತ್ತಾನೆ.

ಪ್ರಮಾಥಿ- ಈ ಸಂವತ್ಸರದಲ್ಲಿ ಹುಟ್ಟಿದ ಪುರುಷನು, ಧೈರ್ಯಶಾಲಿಯು ಅತಿ ಆಲೋಚನೆಯುಳ್ಳವನು, ಯುಕ್ತಿವಂತನು ಶಾಸ್ತ್ರಜ್ಞನು. ಬಹುಜನರ ಸ್ನೇಹವನ್ನು ಬೆಳೆಸುವವನು ಆಗುತ್ತಾನೆ.

ವಿಕ್ರಮ- ಈ ಸಂವತ್ಸರದಲ್ಲಿ ಹುಟ್ಟಿದ ಪುರುಷನು, ಬಹುಕೋಪಿಯು ಧೈರ್ಯವಂತನು. ಪಾಪಕಾರ್ಯಗಳಲ್ಲಿ ಆಸಕ್ತಿಯುಳ್ಳವನು, ದುರ್ಜನರ ಸ್ವಭಾವವುಳ್ಳವನು ಆಗುತ್ತಾನೆ.

ವಿಷು- ಈ ಸಂವತ್ಸರದಲ್ಲಿ ಹುಟ್ಟಿದವನು ಮಂದ ಬುದ್ಧಿಯುಳ್ಳವನು. ಆಲಸ್ಯವುಳ್ಳವನು. ಮೂರ್ಖನು ಕೆಟ್ಟಕೆಲಸಗಳನ್ನು ಮಾಡುವವನು ಆಗು ತ್ತಾನೆ.

ಚಿತ್ರಭಾನು- ಈ ಸಂವತ್ಸರದಲ್ಲಿ ಹುಟ್ಟಿದವನು ವಿದ್ಯಾವಂತನು ನಿಕ್ಷೇಪ ಧನಪ್ರಾಪ್ತಿಯುಳ್ಳವನು. ನೀತಿವಂತನು ಸ್ವಾಮಿಭಕ್ತಿಯುಳ್ಳವನು, ಸದಾ ಚಾರವುಳ್ಳವನು ಆಗುತ್ತಾನೆ.

ಸ್ವಭಾನು— ಈ ಸಂವತ್ಸರದಲ್ಲಿ ಹುಟ್ಟಿದವನು, ಕೆಟ್ಟ ನೋಟವುಳ್ಳ ವನು, ಪಿಂಗಲ ವರ್ಣ ಕೂದಲುಳ್ಳವನು ಒಳ್ಳೆ ಕಾರ್ಯದಲ್ಲಿ ತೊಡಗುವವನು ಆಗುತ್ತಾನೆ.

ತಾರಣ– ಈ ಸಂವತ್ಸರದಲ್ಲಿ ಹುಟ್ಟಿದವನು ಚಂಚಲ ಸ್ವಭಾವವುಳ್ಳವನು ನಿಷ್ಠುರನು, ದುರ್ಜನನು ಸರ್ವರೊಡನೆ ಕಲಹ ಬೆಳಿಸತಕ್ಕವನು, ಬಹು.ಶೂರನು ಕೆಟ್ಟಕೆಲಸಗಳಲ್ಲಿ ಆಸಕ್ತಿಯುಳ್ಳವನು, ಆಗುತ್ತಾನೆ

ಪಾರ್ಥಿವ– ಈ ಸಂವತ್ಸರದಲ್ಲಿ ಹುಟ್ಟಿದವನು. ಮೃದುಭಾಷಿಯು ರಾಜ ಜನರಲ್ಲಿ ಮರ್ಯಾದೆಯುಳ್ಳವನು, ಧನವಂತನು ಧರ್ಮವಂತನು ಶುಭ ಲಕ್ಷಣವುಳ್ಳವನು ಆಗುತ್ತಾನೆ.

ವ್ಯಯ– ಈ ಸಂವತ್ಸರದಲ್ಲಿ ಹುಟ್ಟಿದವನು ಪಾಪಕಾರ್ಯ ಮೂಲಕ ವಾಗಿಯೂ ಸ್ತ್ರೀ ಮೂಲಕವಾಗಿಯೂ, ಚೋರರಮೂಲಕವಾಗಿಯೂ, ಧನ ವನ್ನು ಕಳೆದುಕೊಳ್ಳುವನು ಸರಕಾರದ ತೊಂದರೆಯಿಂದ ಕಷ್ಟಪಡುವನು.

ಸರ್ವಜಿತು– ಈ ಸಂವತ್ಸರದಲ್ಲಿ ಹುಟ್ಟಿದವನು ಸ್ವಕರ್ಮದಲ್ಲಿ ನಿರ ತನು. ಶಾಸ್ತ್ರವನ್ನು ತಿಳಿದವನು ಸ್ಥೂಲ ದೇಹವುಳ್ಳವನು ಶ್ಯಾಮಲ ವರ್ಣ ವುಳ್ಳವನು ಆಗುತ್ತಾನೆ.

ಸರ್ವಧಾರಿ— ಈ ಸಂವತ್ಸರದಲ್ಲಿ ಹುಟ್ಟಿದವನು ಅನೇಕ ಜನರ ಸ್ನೇಹ ವುಳ್ಳವನು, ಧನವಂತನು, ಭೋಗವಂತನು ಭೋಜನ ಸುಖವುಳ್ಳವನು, ಅನೇಕ ಸ್ಥಳಗಳಲ್ಲಿ ಮರ್ಯಾದೆಯುಳ್ಳವನು ಆಗುತ್ತಾನೆ.

ವಿರೋಧಿ– ಈ ಸಂವತ್ಸರದಲ್ಲಿ ಹುಟ್ಟಿದವನು ಸರ್ವಜನರಲ್ಲಿ ದ್ವೇಷವು ಳ್ಳವನು. ಕುಟುಂಬದಲ್ಲಿ ಕಲಹ ಮಾಡಿಕೊಳ್ಳುವವನು, ಪರಸ್ತ್ರೀಯರಲ್ಲಿ ಆಸಕ್ತಿ ಯುಳ್ಳವನು, ಗ್ರಾಮದಲ್ಲಿ ವಿರೋಧಿಯು ಆಗುತ್ತಾನೆ.

ವಿಕೃತಿ– ಈ ಸಂವತ್ಸರದಲ್ಲಿ ಹುಟ್ಟಿದವನು, ವಿಕಾರ ರೂಪವುಳ್ಳವನು, ದುಷ್ಟಸ್ವಭಾವವುಳ್ಳವನು ಕಪಟಿಯು, ಡಾಂಭಿಕನು, ಅಜ್ಞಾನಿಯು ಆಗುತ್ತಾನೆ.

ಖರ– ಈ ಸಂವತ್ಸರದಲ್ಲಿ ಹುಟ್ಟಿದವನು, ನಿರ್ಲಜ್ಜನು, ಕಠಿಣ ವಾಕ್ಕು ಳ್ಳವನು, ಅಸತ್ಯವಾದಿಯು, ರೋಗಿಷ್ಠನು, ಆಚಾರ ಹೀನನು ಆಗುತ್ತಾನೆ.

ನಂದನ– ಈ ಸಂವತ್ಸರದಲ್ಲಿ ಹುಟ್ಟಿದವನು, ಸದಾನಂದವುಳ್ಳವನು. ವಾಪಿ, ಕೂಪ ಮುಂತಾದವುಗಳನ್ನು ಕಟ್ಟಿಸುವವನು ಮರ್ಯಾದೆಯುಳ್ಳವನು, ಸದಾಚಾರವುಳ್ಳವನು ಆಗುತ್ತಾನೆ.

ವಿಜಯ– ಈ ಸಂವತ್ಸರದಲ್ಲಿ ಹುಟ್ಟಿದವನು ಧೈರ್ಯಶಾಲಿಯು, ಧನವಂತನು, ರಾಜರ ಸ್ನೇಹವುಳ್ಳವನು, ಭೋಗವಂತನು ಆಗುತ್ತಾನೆ.

ಜಯ– ಈ ಸಂವತ್ಸರದಲ್ಲಿ ಹುಟ್ಟಿದವನು, ವಿದ್ಯಾವಂತನು, ಮಾನವಂತನು, ಶಾಸ್ತ್ರವನ್ನು ಬಲ್ಲವನು, ರಾಜಪೂಜ್ಯನು ಆಗುತ್ತಾನೆ

ಮನ್ಮಥ– ಈ ಸಂವತ್ಸರದಲ್ಲಿ ಹುಟ್ಟಿದವನು, ಬಹು ಕಾಮಿಯು, ಸ್ತ್ರೀಲೋಲನು, ಮನ್ಮಥ ವಿಕಾರವುಳ್ಳವನು, ಭೋಜನ ಸುಖವುಳ್ಳವನು ಆಗುತ್ತಾನೆ.

ದುರ್ಮುಖಿ– ಈ ಸಂವತ್ಸರದಲ್ಲಿ ಹುಟ್ಟಿದವನು, ದುಷ್ಟ ಸ್ವಭಾವದವನು, ಹಿಂಸಾ ಕಾರ್ಯಗಳನ್ನು ಮಾಡುವವನು ಸ್ತ್ರೀಮೂಲಕ ದ್ವೇಷವನ್ನು ಮಾಡಿಕೊಳ್ಳುವವನು ಆಗುತ್ತಾನೆ.

ಹೇವಿಳಂಬಿ— ಈ ಸಂವತ್ಸರದಲ್ಲಿ ಹುಟ್ಟಿದವನು, ಧನಧಾನ್ಯಾದಿ ಸಂಗ್ರಹವುಳ್ಳವನು, ವಸ್ತ್ರಾಭರಣಗಳನ್ನು ಸಂಗ್ರಹಿಸುವವನು, ವಾಹನವುಳ್ಳವನು ಆಗುತ್ತಾನೆ.

ವಿಳಂಬಿ— ಈ ಸಂವತ್ಸರದಲ್ಲಿ ಹುಟ್ಟಿದವನು ವಂಚಕನು ಲೋಭಿಯು ದುಃಖಿಯು ಶ್ಲೇಷ್ಮರೋಗ ಪೀಡಿತನು ಆಗುತ್ತಾನೆ.

ವಿಕಾರಿ– ಈ ಸಂವತ್ಸರದಲ್ಲಿ ಹುಟ್ಟಿದವನು ಅವಿವೇಕಿಯು. ಮಹಾಗರ್ವಿಷ್ಠನು ಕಪಟಿಯು ಇತ್ಯಾದಿ ಗುಣವುಳ್ಳವನಾಗುವನು.

ಶಾರ್ವರಿ— ಈ ಸಂವತ್ಸರದಲ್ಲಿ ಹುಟ್ಟಿದವನು ವ್ಯಾಪಾರದಲ್ಲಿ ಶೂರನು ಸತ್ಪುರುಷರಲ್ಲಿ ದ್ವೇಷವುಳ್ಳವನು ಕೃಶವಾದ ಶರೀರವುಳ್ಳವನು ಅತಿ ನಿದ್ರೆಯುಳ್ಳವನು ಆಗುವನು.

ಪ್ಲವ– ಈ ಸಂವತ್ಸರದಲ್ಲಿ ಹುಟ್ಟಿದವನು ಚಂಚಲ ಸ್ವಭಾವವುಳ್ಳವನು. ಬಹು ಕಾಮಿಯು ಪರದೇಶದಲ್ಲಿ ವಾಸಿಸುವ ಇಷ್ಟತೆಯುಳ್ಳವನು ಆಲಸ್ಯವುಳ್ಳವನು ಆಗುತ್ತಾನೆ.

ಶುಭಕೃತು– ಈ ಸಂವತ್ಸರದಲ್ಲಿ ಹುಟ್ಟಿದವನು ವಿದ್ಯಾವಂತನು ಧರ್ಮಕಾರ್ಯದಲ್ಲಿ ಇಷ್ಟತೆಯುಳ್ಳವನು ಸ್ನಾನಾದಿಮೂಲಕವಾಗಿ ಸುಖವುಳ್ಳವನು ಆಗುತ್ತಾನೆ.

ಶೋಭನಕೃತು— ಈ ಸಂವತ್ಸರದಲ್ಲಿ ಹುಟ್ಟಿದವನು ಜಯಶಾಲಿಯು ಬಹು ಕಾಮಿಯು ಸುಂದರ ರೂಪವುಳ್ಳವನು ಸೂಕ್ಷ್ಮ ಬುದ್ಧಿಯುಳ್ಳವನು ಆಗುವನು.

ಕ್ರೋಧಿ— ಈ ಸಂವತ್ಸರದಲ್ಲಿ ಹುಟ್ಟಿದವನು ಬಹು ಸಿಟ್ಟುಳ್ಳವನು ಸ್ತ್ರೀ ಲೋಲನು ರಾಜದ್ವೇಷವುಳ್ಳವನು ದುರ್ಗುಣವುಳ್ಳವನು ಆಗುತ್ತಾನೆ.

ವಿಶ್ವಾವಸು— ಈ ಸಂವತ್ಸರದಲ್ಲಿ ಹುಟ್ಟಿದವನು ತನ್ನ ವಂಶದಲ್ಲಿ ಶ್ರೇಷ್ಠನೆನಿಸುತ್ತಾನೆ ಸುಖವಂತನು ಶಾಂತ ಗುಣವುಳ್ಳವನು ಧರ್ಮಿಷ್ಠನು ಭೋಜನ ಸುಖವುಳ್ಳವನು ಆಗುತ್ತಾನೆ.

ಪರಾಭವ— ಈ ಸಂವತ್ಸರದಲ್ಲಿ ಹುಟ್ಟಿದವನು ಪರಸ್ತ್ರೀಯರಲ್ಲಿ ಇಚ್ಛೆಯುಳ್ಳವನು ಬಂಧು ಜನರಲ್ಲಿ ದ್ವೇಷಿಯು ಆಗುತ್ತಾನೆ.

ಪ್ಲವಂಗ— ಈ ಸಂವತ್ಸರದಲ್ಲಿ ಹುಟ್ಟಿದವನು ಕ್ರೂರವಾದ ಗುಣವುಳ್ಳವನು ಹೆಂಡತಿಯಲ್ಲಿ ದ್ವೇಷವನ್ನು ಬೆಳಸಿಕೊಳ್ಳುವವನು ಅನಾಚಾರವುಳ್ಳವನು ಕೋಪಿಷ್ಠನು ಆಗುತ್ತಾನೆ.

ಕೀಲಕ— ಈ ಸಂವತ್ಸರದಲ್ಲಿ ಹುಟ್ಟಿದವನು ಮಧ್ಯಮ ರೂಪವುಳ್ಳವನು ಕಾಮಿಯು ಹೃದಯದಲ್ಲಿ ಕಪಟಗುಣವುಳ್ಳವನು ಕುಕ್ಷಿರೋಗವುಳ್ಳವನು ಆಗುತ್ತಾನೆ.

ಸೌಮ್ಯ— ಈ ಸಂವತ್ಸರದಲ್ಲಿ ಹುಟ್ಟಿದವನು ವಿದ್ಯಾವಂತನು ಧನವಂತನು ಬಹುರೋಗಿಯು ದೇವತಾಕಾರ್ಯಗಳಲ್ಲಿ ಬಹುಭಕ್ತಿಯುಳ್ಳವನು ಅನ್ನದಾನ ಪ್ರಿಯನು ಆಗುತ್ತಾನೆ.

ಸಾಧಾರಣ— ಈ ಸಂವತ್ಸರದಲ್ಲಿ ಹುಟ್ಟಿದ ಜಾತಕನು ಸರ್ವಜನಗಳಲ್ಲಿ ವಿರೋಧಿಯು ನೀಚ ಕೃತ್ಯವುಳ್ಳವನು. ಅನಾಚಾರಿಯು ಆಗುತ್ತಾನೆ.

ವಿರೋಧಿಕೃತ— ಈ ಸಂವತ್ಸರದಲ್ಲಿ ಹುಟ್ಟಿದ ಜಾತಕನು ಸರ್ವ ಜನರಲ್ಲಿ ವಿರೋಧಿಯು ತಂದೆಯ ಕೂಡ ದ್ವೇಷ ಬೆಳೆಸಿಕೊಳ್ಳುತ್ತಾನೆ ಸದಾ ಕಲಹವುಳ್ಳವನು ವ್ಯಭಿಚಾರಿಯು ಆಗುತ್ತಾನೆ.

ಪರಿಧಾವಿ— ಈ ಸಂವತ್ಸರದಲ್ಲಿ ಹುಟ್ಟಿದವನು ವ್ಯಾಪಾರದಲ್ಲಿ ಕುಶಲನು ವಿದ್ಯಾವಂತನು ಆಚಾರವಂತನು ರಾಜಮನ್ನಣೆಯುಳ್ಳವನು ಬುದ್ಧಿವಂತನು ಯುಕ್ತಿವಂತನು ಆಗುತ್ತಾನೆ.

ಪ್ರಮಾದೀಚ– ಈ ಸಂವತ್ಸರದಲ್ಲಿ ಹುಟ್ಟಿದವನು ಬಂಧು ಜನಗಳಲ್ಲಿ ವಿರೋಧಿಯಾಗುವನು ಕುಟುಂಬ ಘಾತವುಳ್ಳವನು ಲೋಭಿಯು ಪಾಪಕಾರ್ಯಗಳಲ್ಲಿ ಆಸಕ್ತಿಯುಳ್ಳವನು ದುರ್ಜನ ಸ್ವಭಾವವುಳ್ಳವನು ಆಗುತ್ತಾನೆ.

ಆನಂದ– ಈ ಸಂವತ್ಸರದಲ್ಲಿ ಹುಟ್ಟಿದವನು ತಾಳ್ಮೆಯುಳ್ಳವನು ನಿರ್ಮಲಚಿತ್ತನು ಪುತ್ರ ಮಿತ್ರರುಳ್ಳವನು ಆಗುತ್ತಾನೆ.

ರಾಕ್ಷಸ– ಈ ಸಂವತ್ಸರದಲ್ಲಿ ಹುಟ್ಟಿದವನು ಡಾಂಭಿಕ ಭಕ್ತಿಯುಳ್ಳವನು ಪರರನ್ನು ಹಿಂಸೆ ಪಡಿಸುವವನು ಧರ್ಮಹೀನನು ಗುಣಹೀನನು ಆಗುತ್ತಾನೆ.

ನಳ– ಈ ಸಂವತ್ಸರದಲ್ಲಿ ಹುಟ್ಟಿದವನು ಜಲಕಾರ್ಯಾರಂಭ ಮಾಡಿಸುವವನು ಸುಖವಂತನು ಬಹು ದೊಡ್ಡ ಕುಟುಂಬಿಯು ಆಗುತ್ತಾನೆ.

ಪಿಂಗಳ– ಈ ಸಂವತ್ಸರದಲ್ಲಿ ಹುಟ್ಟಿದವನು ತೀಕ್ಷ್ಣವಾದ ರೋಮವುಳ್ಳವನು ಬಹು ಮುಂಗೋಪಿಯು ಕ್ರೂರ ಸ್ವಭಾವವುಳ್ಳವನು ಆಗುತ್ತಾನೆ.

ಕಾಳಯುಕ್ತಾಕ್ಷಿ– ಈ ಸಂವತ್ಸರದಲ್ಲಿ ಹುಟ್ಟಿದವನು ಲೋಕದಲ್ಲಿ ಪರೋಪಕಾರ ಮಾಡಿ ಪ್ರಸಿದ್ಧಿ ಕೀರ್ತಿ ಪಡೆಯುತ್ತಾನೆ. ಶಾಂತ ಸ್ವಭಾವದವನಾಗುತ್ತಾನೆ.

ಸಿದ್ಧಾರ್ಥಿ– ಈ ಸಂವತ್ಸರದಲ್ಲಿ ಹುಟ್ಟಿದವನು ಸಂಗೀತದಲ್ಲಿ ಇಷ್ಟತೆಯುಳ್ಳವನು ಧರ್ಮಿಷ್ಠನು ಮಂತ್ರಿ ಗುಣವುಳ್ಳವನು ಭೋಗವಂತನು ಆಗುತ್ತಾನೆ.

ರೌದ್ರಿ— ಈ ಸಂವತ್ಸರದಲ್ಲಿ ಹುಟ್ಟಿದವನು, ಧೈರ್ಯಶಾಲಿಯು ಬಹುಕೋಪಿಯು, ಪಾಪಿಷ್ಠನು. ಅಸತ್ಯ ಮಾತಾಡುವವನು, ಮೂರ್ಖನು ಅಲ್ಪಾಯುಷ್ಯವುಳ್ಳವನು ಆಗುತ್ತಾನೆ.

ದುರ್ಮತಿ- ಈ ಸಂವತ್ಸರದಲ್ಲಿ ಹುಟ್ಟಿದವನು ದುರ್ಬುದ್ಧಿಯುಳ್ಳವನು ವಂಚಕ ಗುಣವುಳ್ಳವನು, ಪಾಪಕಾರ್ಯದಲ್ಲಿ ಆಸಕ್ತಿಯುಳ್ಳವನು ಆಗುತ್ತಾನೆ

ದುಂದುಭಿ— ಈ ಸಂವತ್ಸರದಲ್ಲಿ ಹುಟ್ಟಿದವನು, ನಿತ್ಯ ಉತ್ಸಾಹವುಳ್ಳವನು, ಅಶ್ವವಾಹನವುಳ್ಳವನು ರಾಜರಲ್ಲಿ ಸ್ನೇಹವುಳ್ಳವನು, ಆಗುತ್ತಾನೆ.

ರುಧಿರೋದ್ಗಾರಿ- ಈ ಸಂವತ್ಸರದಲ್ಲಿ ಹುಟ್ಟಿದವನು ಕಾಮಿಯು ಲೋಭಿಯು, ಶಸ್ತ್ರಪೀಡನೆಯುಳ್ಳವನು, ದುಷ್ಕರ್ಮವುಳ್ಳವನು ಅತಿ ಪಾಪಿಷ್ಠನು ಆಗುತ್ತಾನೆ.

ರಕ್ತಾಕ್ಷಿ— ಈ ಸಂವತ್ಸರದಲ್ಲಿ ಹುಟ್ಟಿದವನಿಗೆ, ದೃಷ್ಟಿಯು ಕಡಿಮೆಯು ನೇತ್ರರೋಗವುಳ್ಳವನು, ಬಹುಕಾಮಿಯು, ದುರ್ಜನನು ಸ್ತ್ರೀ ಮೂಲಕ ದ್ವೇಷವನ್ನು ಬೆಳಸಿಕೊಳ್ಳುವವನು ಆಗುತ್ತಾನೆ.

ಕ್ರೋಧನ— ಈ ಸಂವತ್ಸರದಲ್ಲಿ ಹುಟ್ಟಿದವನು ಕ್ರೋಧವುಳ್ಳವನು, ಗುಣಹೀನನು, ಧಾತುವೃದ್ಧಿಯುಳ್ಳವನು, ವಂಚಕನು ಪಾಪಿಯು ಆಗುತ್ತಾನೆ.

ಕ್ಷಯ— ಈ ಸಂವತ್ಸರದಲ್ಲಿ ಹುಟ್ಟಿದವನು, ಧರ್ಮಹೀನನು, ಗುಣಹೀನನು, ಬಹು ಲೋಭಿಯು, ಡಾಂಭಿಕನು, ನಾನಾಮೂಲಕ ಧನನಾಶ ಮಾಡಿಕೊಳ್ಳತಕ್ಕವನು, ಕ್ಷಯರೋಗವುಳ್ಳವನು ಆಗುತ್ತಾನೆ.

—: ಸಂವತ್ಸರ ಫಲವು ಸಮಾಪ್ತವಾದುದು :—

ಅಯನ ಫಲ ವಿಚಾರವು.

ಉತ್ತರಾಯಣ- ದಲ್ಲಿ ಹುಟ್ಟಿದವನು ಸಂತೋಷಚಿತ್ತನು, ಆಯುಷ್ಯ, ವೃದ್ಧಿಯುಳ್ಳವನು. ಸದಾಚಾರಿಯು, ಬಹು ಮರ್ಯಾದೆಯುಳ್ಳವನು, ಪ್ರಸಿದ್ಧವಾದ ಕೀರ್ತಿಯುಳ್ಳವನು, ಪರೋಪಕಾರಿಯು, ಧರ್ಮಕಾರ್ಯದಲ್ಲಿ ಇಷ್ಟಕಿಯುಳ್ಳವನು ಆಗುತ್ತಾನೆ.

ದಕ್ಷಿಣಾಯನ— ದಲ್ಲಿ ಹುಟ್ಟಿದವನು ಭೇದ ಬುದ್ಧಿಯುಳ್ಳವನು, ಕಪಟಿಯು, ಕ್ರೂರ ಮನಸ್ಸುಳ್ಳವನು, ಮಾಯಾವಿಯು ಸರ್ವಜನರಲ್ಲಿ ದ್ವೇಷಿಯು ಆಗುತ್ತಾನೆ.

:— ಅಯನ ಫಲ ಮುಗಿದುದು :—

— ಋತು ಫಲ ವಿಚಾರವು —

ವಸಂತ– ಋತುವಿನಲ್ಲಿ ಜನಿಸಿದವನು ಬುದ್ಧಿವಂತನು ತೇಜಸ್ವಿಯು ಬಹಳ ಕೆಲಸಗಳನ್ನು ಮಾಡತಕ್ಕವನು, ಅನೇಕ ದೇಶಗಳ ವ್ಯವಹಾರಗಳನ್ನು ತಿಳಿಯಬಲ್ಲವನು, ರೂಪವಂತನು, ಪ್ರಸನ್ನ ಚಿತ್ತನು, ಧರ್ಮಶಾಸ್ತ್ರಗಳನ್ನು ಬಲ್ಲವನು, ಚತುರನು, ಗಣಿತಶಾಸ್ತ್ರ ಪಂಡಿತನು, ಸಂಗೀತಾದಿ ಕಲಾಬಲ್ಲವನು, ಪ್ರತಾಪಶಾಲಿಯು, ವಸ್ತ್ರಾಲಂಕಾರ ಪ್ರಿಯನು, ಆಗುವನು.

ಗ್ರೀಷ್ಮ— ಋತುವಿನಲ್ಲಿ ಹುಟ್ಟಿದವನು ಸಮಾಧಾನಚಿತ್ತನು, ಕಾಮುಕನು, ಬಹಳ ಕೆಲಸಗಳನ್ನು ಆರಂಭ ಮಾಡತಕ್ಕವನು, ವಿದ್ವಾಂಸನು, ಶೂರನು, ಧೀರನು, ಪವಿತ್ರನು, ಭೋಜನಪ್ರಿಯನು, (ಕೂಳಬಾಕನು) ಧನಧಾನ್ಯ ಸಮೃದ್ಧಿಯುಳ್ಳವನು ಬಹು ಸುಖಭೋಗಿಯು ಜಲ ಪರ್ಯಟನ ಮಾಡತಕ್ಕವನು, ಸುಂದರವಾದ ಕೇಶವುಳ್ಳವನು; ಐಶ್ವರ್ಯವಂತನು ಆಗುವನು.

ವರ್ಷ— ಋತುವಿನಲ್ಲಿ ಜನನವಾದವನು ಸದ್ಗುಣವಂತನು ಸುಖಭೋಗಯುಕ್ತನು; ಜಿತೇಂದ್ರಿಯನು, ಪೂಜ್ಯನು, ಕುಶಲನು, ಸತ್ಯವಂತನು ವ್ಯಾಪಾರ ಉದ್ಯೋಗಗಳಲ್ಲಿ ಚತುರನು, ಸ್ತ್ರೀ ವಿಲಾಸಿಯು, ಮಂತ್ರ ತಂತ್ರಗಳನ್ನು ಬಲ್ಲವನು, ರೂಪವಂತನು ಧೈರ್ಯಶಾಲಿಯು, ಕಫ, ವಾತಸಂಬಂಧ ರೋಗವುಳ್ಳವನು ಆಗುವನು.

ಶರದ್– ಋತುವಿನಲ್ಲಿ ಹುಟ್ಟಿದವನು, ಪ್ರಸಿದ್ಧನಾದ ವ್ಯಾಪಾರಸ್ಥನು ಅಥವಾ ಒಕ್ಕಲುತನ ಮಾಡುವದರಲ್ಲಿ ಹೆಸರಾದವನು, ಧನಧಾನ್ಯ ಸಮೃದ್ಧಿಯುಳ್ಳವನು ತೇಜಸ್ವಿಯು, ಬಹುಜನ ಮಾನ್ಯನು, ಅಭಿಮಾನಿಯು, ವಾತ ಪ್ರಕೃತಿಯುಳ್ಳವನು, ಕ್ಷಮಾಶೀಲನು, ಶುಚಿರ್ಭೂತನು, ರಣಾಂಗಣದಲ್ಲಿ ಧೈರ್ಯಶಾಲಿಯು, ವಾಹನಗಳನ್ನು ಹತ್ತುವ ಅಪೇಕ್ಷೆಯುಳ್ಳವನು ಆಗುವನು.

ಹೇಮಂತ– ಋತುವಿನಲ್ಲಿ ಜನನ ಹೊಂದಿದವನು ಬಲಶಾಲಿಯು, ನೀತಿವಂತನು, ಸತತವಾಗಿ ಉದ್ಯೋಗದಲ್ಲಿ ತೊಡಗಿರುವವನು, ಸಣ್ಣ ಪಾದಗಳುಳ್ಳವನು, ಹಾಗು ತೆಳ್ಳಗಾದ ಸಣ್ಣ ಕುತ್ತಿಗೆಯುಳ್ಳವನು, ಅಂಜುಬುರುಕನ , ಉದಾರ ಹೃದಯವುಳ್ಳವನು, ಧರ್ಮಿಷ್ಠನು, ನಮ್ರ ಸ್ವಭಾವವುಳ್ಳ

ವನು, ಸ್ತುತ್ಯವಾದ ಕಾರ್ಯ ಮಾಡತಕ್ಕವನು, ಮಂತ್ರಿಗಳ ಸಮಾನ ಚತುರ ತನದ ವಿಚಾರ ಮಾಡತಕ್ಕವನು, ಮಂತ್ರಿಯು, ಮುಖಂಡನು ಆಗುವನು.

ಶಿಶಿರ- ಋತುವಿನಲ್ಲಿ ಜನನ ಹೊಂದಿದವನು ರೂಪವಂತನು, ಸದೃಢ ವಾದ ದೇಹವುಳ್ಳವನು, ನಿಧಾನವಾಗಿ ಕೆಲಸ ಮಾಡತಕ್ಕವನು, ಕಾಮುಕನು. ಅಧಿಕವಾಗಿ ಆಹಾರ ಸೇವಿಸತಕ್ಕವನು (ಕೂಳಬಾಕನು) ಮೃಷ್ಟಾನ್ನ ಭೋಜ ನಪ್ರಿಯನು, ಕೋಪಿಷ್ಠನು, ಸುಖಭೋಗಿಯು, ಬಲಶಾಲಿಯು. ಸ್ತುತ್ಯ ಕೆಲ ಸಗಳನ್ನು ಮಾಡುವವನು ಆಗುವನು.

— ಋತು ಫಲವು ಮುಗಿದುದು —

— ಮಾಸಫಲವು —

ಚೈತ್ರಮಾಸ-ದಲ್ಲಿ ಹುಟ್ಟಿದವನು ಉತ್ತಮರಾದ ಮಿತ್ರರುಳ್ಳವನು, ಸಾಧು ಸತ್ಪುರುಷರ ಸಹವಾಸದಲ್ಲಿರತಕ್ಕವನು, ಮೃಷ್ಟಾನ್ನ ಭೋಜನ ಪ್ರಿಯನು, ಸುಖಭೋಗಿಯು, ವಿನಯವಂತನು, ವಿದ್ಯಾ ಸಂಪನ್ನನು, ಸ್ತುತ್ಯ ವಾದ ಕೆಲಸಗಳನ್ನು ಮಾಡತಕ್ಕವನು, ಮುಖಂಡನು ಯಂತ್ರ ಮಂತ್ರಾದಿ ಕೌತುಕ ವಿದ್ಯಾವಂತನು, ಆಗುವನು.

ವೈಶಾಖ- ಮಾಸದಲ್ಲಿ ಜನಿಸಿದವನು, ಸಮಾಜ ಸೇವಾ ಧುರೀಣನು, ಕೀರ್ತಿವಂತನು, ಮುಖಂಡನು, ಪ್ರತಿಷ್ಠಿತನು, ಅಂತಃಕರುಣಿಯು, ಧನವಂತನು, ದೀರ್ಘಾಯುಷಿಯು, ಗುರು-ಹಿರಿಯರಲ್ಲಿ ಭಕ್ತಿಯುಳ್ಳವನು, ದಾನ-ಧರ್ಮ ಪರೋಪಕಾರಾದಿ ಪುಣ್ಯ ಕಾರ್ಯಗಳನ್ನು ಮಾಡತಕ್ಕವನು, ಸುಲಕ್ಷಣನು, ರೂಪ ವಂತನು, ದೊಡ್ಡ ಕುಟುಂಬಸ್ಥನು ಆಗುವನು.

ಜ್ಯೇಷ್ಠಮಾಸ- ದಲ್ಲಿ ಜನನ ಹೊಂದಿದವನು, ಧನಧಾನ್ಯ ಸಮೃದ್ಧಿ ಯುಳ್ಳವನು, ವ್ಯಾಪಾರ ಉದ್ಯೋಗಗಳಲ್ಲಿ ಚತುರನು, ಪರದೇಶಗಳಲ್ಲಿ ಸಂಚಾರ ಮಾಡತಕ್ಕವನು, ಚಂಚಲವಾದ ಚಿತ್ತವುಳ್ಳವನು, ಎಲ್ಲ ಕೆಲಸಗಳನ್ನು ಸಮಾ ಧಾನದಿಂದ ಮಾಡತಕ್ಕವನು, ದೀರ್ಘಾಯುಷಿಯು ವಿದ್ಯಾವಂತನು ಆಗುವನು.

ಆಷಾಢಮಾಸ- ದಲ್ಲಿ ಜನಿಸಿದವನು, ಕಷ್ಟಪಟ್ಟು ಉಪಜೀವನ ಮಾಡತಕ್ಕವನು, ಗುರು-ಹಿರಿಯರಲ್ಲಿ ಭಕ್ತಿಯುಳ್ಳವನು. ಅಭಿಮಾನವುಳ್ಳವನು, ಸಾಧಾರಣ ಬುದ್ಧಿವಂತನು, ಬಡವನು, ಯಾವಾಗಲೂ ಮುಂದಾಗ್ನಿ ರೋಗವುಳ್ಳವನು, ಹೆಚ್ಚು ಮಾತಾಡತಕ್ಕವನು, ವಿಶೇಷ ಖರ್ಚು ಮಾಡುವವನು, ಸುಳ್ಳುಹೇಳುವವನು ಆಗುವನು.

ಶ್ರಾವಣ- ಮಾಸದಲ್ಲಿ ಹುಟ್ಟಿದವನು ಸರಳವಾದ ಹೃದಯವುಳ್ಳವನು ಕೀರ್ತಿವಂತನು, ಮುಖಂಡನು, ಪ್ರಸಿದ್ಧಪುರುಷನು, ಕ್ರಯವಿಕ್ರಯದಲ್ಲಿ ಚತುರನು, ಗುರು ಹಿರಿಯರಲ್ಲಿ, ದೇವ ದ್ವಿಜರಲ್ಲಿ ಭಕ್ತಿಯುಳ್ಳವನು, ಮಕ್ಕಳು, ಮೊಮ್ಮಕ್ಕಳುಗಳಿಂದ ಕೂಡಿದ ದೊಡ್ಡ ಕುಟುಂಬವುಳ್ಳವನು, ಉತ್ತಮ ಮಿತ್ರರುಳ್ಳವನು, ಸೌಖ್ಯವಂತನು, ಸದಾ ಸಮಾಧಾನ ಮನಸ್ಸುಳ್ಳವನು ಆಗುವನು.

ಭಾದ್ರಪದ- ಮಾಸದಲ್ಲಿ ಜನಿಸಿದವನು ಸದ್ಗುಣಿಯು, ಸುಶೀಲನು, ದೃಢವಾದ ದೇಹವುಳ್ಳವನು ಧರ್ಮಶಾಸ್ತ್ರಗಳಲ್ಲಿ ಅಭಿರುಚಿಯುಳ್ಳವನು, ಶ್ರೀಮಂತನು, ದಾನಧರ್ಮ ಪರೋಪಕಾರ ಮಾಡತಕ್ಕವನು, ಮೃದುವಾಗಿ ಮಾತಾಡತಕ್ಕವನು, ಸುಖಭೋಗಿಯು, ವಿಲಾಸಿಯು ಕಾಮುಕನು ಆಗುವನು.

ಆಶ್ವಿನ- ಮಾಸದಲ್ಲಿ ಜನನ ಹೊಂದಿದವನು ಬಹುಪುತ್ರರುಳ್ಳವನು ಪಂಡಿತನು, ಶ್ರೀಮಂತನು, ರಾಜಪೂಜ್ಯನು, ಸ್ತುತ್ಯವಾದ ಕೆಲಸಗಳನ್ನು ಮಾಡತಕ್ಕವನು, ಬಹುಮನ್ನಣೆಗೆ ಪಾತ್ರನು, ಸೇವಕರುಳ್ಳವನು, ದಾನ-ಧರ್ಮ-ಪರೋಪಕಾರ ಪ್ರಿಯನು, ಸದ್ಗುಣಿಯು, ಕೀರ್ತಿವಂತನು, ಪ್ರಸಿದ್ಧ ಪುರುಷನು ಆಗುವನು.

ಕಾರ್ತಿಕ- ಮಾಸದಲ್ಲಿ ಹುಟ್ಟಿದವನು, ಕೃಪಣನು, ಕಾಮುಕನು, ಸ್ತ್ರೀಲಂಪಟನು, ಖರೀದಿ ವಿಕ್ರಿ ವ್ಯವಹಾರದಲ್ಲಿ ಚತುರನು, ಒಕ್ಕಲುತನದಲ್ಲಿ ನಿಪುಣನು, ಧನಧಾನ್ಯ ಸಮೃದ್ಧಿಯುಳ್ಳವನು, ಬಹಳ ಮಾತಾಡ ತಕ್ಕವನು, ದುಷ್ಕಾರ್ಯಗಳಲ್ಲಿ ಪ್ರೀತಿಯುಳ್ಳವನು, ಸುಳ್ಳುಮಾತಾಡತಕ್ಕವನು, ಆಗುವನು.

ಮಾರ್ಗಶಿರ- ಮಾಸದಲ್ಲಿ ಜನನ ಹೊಂದಿದವನು, ಮೃದುವಾಗಿ ಮಾತಾಡತಕ್ಕವನು, ಜ್ಞಾನಿಯು, ಶ್ರೀಮಂತನು, ಸುಶೀಲನು, ಬಹುಜನ

ಸ್ನೇಹಿತರುಳ್ಳವನು, ತೀರ್ಥಯಾತ್ರಾದಿಗಳನ್ನು ಮಾಡತಕ್ಕವನು, ಸನ್ಮಾರ್ಗ ದಲ್ಲಿ ನಡೆಯುತಕ್ಕವನು, ದಾನಧರ್ಮ ಪರೋಪಕಾರಗಳನ್ನು ಮಾಡತಕ್ಕವನು ಪುಣ್ಯಶೀಲನು, ಸಂಗೀತ, ಸಾಹಿತ್ಯ, ಡ್ರಾಯಿಂಗ, ಇತ್ಯಾದಿ ಕಲೆಗಳಲ್ಲಿ ಅಭಿ ರುಚಿಯುಳ್ಳವನು, ಐಶ್ವರ್ಯವಂತನು, ವ್ಯವಹಾರ ಚತುರನು ಆಗುವನು.

ಪುಷ್ಯ–ಮಾಸದಲ್ಲಿ ಜನನ ಹೊಂದಿದವನು ಕಷ್ಟಜೀವಿಯು, ಪರಿಶ್ರಮಪಟ್ಟು ಕೆಲಸ ಮಾಡತಕ್ಕವನು, ಬಂಧುಗಳಿಂದ ಹೆಂಡತಿ ಮಕ್ಕಳಿಂದ ದುಃಖ ಹೊಂದ ತಕ್ಕವನು, ಗುರು–ಹಿರಿಯರ ಆಜ್ಞಾಧಾರಕನು, ಕೃಪಣನು, ಸ್ವತಃ ದುಡಿದು ಸಂಪಾದನೆ ಮಾಡತಕ್ಕವನು, ಪರೋಪಕಾರಿಯು, ದುರ್ಬಲವಾದ ದೇಹವುಳ್ಳ ವನು, ಧರ್ಮ ಶಾಸ್ತ್ರಗಳ ರಹಸ್ಯವನ್ನು ತಿಳಿಯುವ ಅಪೇಕ್ಷೆಯುಳ್ಳವನು ಮಿತ ವ್ಯಯದಿಂದ ಜೀವನ ಸಾಗಿಸತಕ್ಕವನು ಆಗುವನು.

ಮಾಘ— ಮಾಸದಲ್ಲಿ ಹುಟ್ಟಿದವನು, ಸದ್ಗುಣಿಯು, ಸಮಾಧಾನ ಚಿತ್ತನು. ಧನವಂತನು, ಪರಾಕ್ರಮಿಯು, ಶತ್ರುಗಳನ್ನು ನಿಗ್ರಹಿಸತಕ್ಕವನು, ಸಾಧುಸತ್ಪುರುಷರ ಸಹವಾಸದಲ್ಲಿರುವವನು, ವಿದ್ವಾಂಸನು, ಮಂತ್ರ ತಂತ್ರ ವಿದ್ಯಾಬಲ್ಲವನು, ವೇದಾಗಮಗಳ ರಹಸ್ಯವನ್ನು ತಿಳಿದವನು, ಹಟಯೋಗ, ರಾಜಯೋಗ, ಇತ್ಯಾದಿ ಯೋಗ ವಿದ್ಯಾಪ್ರಿಯನು, ಆಗುವನು.

ಫಾಲ್ಗುಣ– ಮಾಸದಲ್ಲಿ ಜನನ ತಾಳಿದವನು ಕಾಮುಕನು, ವಿಷಯ ಲಂಪಟನು, ಅಂತಃಕರುಣಿಯು, ಸೂಕ್ಷ್ಮವಾದ ಶರೀರವುಳ್ಳವನು, ಪರೋಪ ಕಾರಿಯು, ಬುದ್ಧಿವಂತನು, ಬಹಳ ಮಾತಾಡತಕ್ಕವನು, ಆಗುವನು.

— ಮಾಸ ಫಲ ಮುಗಿದುದು —

— ಪಕ್ಷ ಫಲವು —

ಶುಕ್ಲಪಕ್ಷ– ದಲ್ಲಿ ಜನನ ಹೊಂದಿದವನು ಪೂರ್ಣಚಂದ್ರನಂತೆ ಕಾಂತಿಯುಳ್ಳವನು, ಶ್ರೀಮಂತನು, ಉದ್ಯೋಗಶೀಲನು, ಶಾಸ್ತ್ರಾರ್ಥಗಳನ್ನು ತಿಳಿದವನು, ಕುಶಲನು, ಜ್ಞಾನವಂತನು, ಸುಶೀಲನು, ದೀರ್ಘಾಯುಷಿಯು ವಿನಮ್ರ ಸ್ವಭಾವಿಯು, ವಿದ್ವಾಂಸನು ಕೀರ್ತಿಶಾಲಿಯು, ಪಾಪದ ಕೆಲಸಗಳಿಗೆ

ಹಿದೆರತಕ್ಕವನು, ಭಾಗ್ಯಶಾಲಿಯೂ, ಪುತ್ರ-ಪೌತ್ರರುಳ್ಳವನು. ಸದೃಢವಾದ ಶರೀರವುಳ್ಳವನು, ಆಗುವನು.

ಕೃಷ್ಣ ಪಕ್ಷ- ದಲ್ಲಿ ಹುಟ್ಟಿದವನು, ಕಠೋರವಾದ ಸ್ವಭಾವವುಳ್ಳವನು ದಡ್ಡನು. ಬಹುಜನರ ವಿರೋಧಿಯೂ, ಪರರಲ್ಲಿ ಸೇವಾ (ನೌಕರಿ) ಮಾಡತಕ್ಕವನು, ಪರರ ಉತ್ಕರ್ಷವನ್ನು ನೋಡಿ ಸಹಿಸದವನು ಸಿಟ್ಟಿನವನು, ಕಷ್ಟ ಜೀವಿಯೂ, ಶೀಲವಂತನು, ಆಗುವನು.

– ಹಗಲು ರಾತ್ರಿಗಳ ಫಲ –

ಹಗಲು– ವೇಳೆಯಲ್ಲಿ ಜನನ ಹೊಂದಿದವನು ಸುಂದರನು, ಸದೃಢನು, ಬಂಧು-ಬಾಂಧವರಲ್ಲಿ ಮನ್ನಣೆ ಹೊಂದತಕ್ಕವನು, ರಾಜಪೂಜ್ಯನು. (ಸರಕಾರದಲ್ಲಿ ಗೌರವ ಹೊಂದತಕ್ಕವನು) ಧನಧಾನ್ಯಯುತನು, ತೇಜಸ್ವಿಯು, ಕೀರ್ತಿವಂತನು ಸುಂದರವಾದ ನೇತ್ರಗಳುಳ್ಳವನು ಆಗುವನು.

ರಾತ್ರಿ– ವೇಳೆಯಲ್ಲಿ ಹುಟ್ಟಿದವನು ಪಾಪದ ಕೆಲಸಗಳನ್ನು ಮಾಡಲು ಹೇಸದವನು, ದುಷ್ಟನು, ರೋಗ ಪೀಡಿತನು, ಬಹು ಕಾಮುಕನು, ಕಷ್ಟಜೀವಿಯು, ದುಃಖಿತನು ಆಗುವನು.

– ಪಕ್ಷ ಫಲ ಹಗಲು ರಾತ್ರಿಗಳ ಫಲ ಮುಗಿದುದು –

– ತಿಥಿ ಫಲ ವಿಚಾರ ಪ್ರಾರಂಭವು –

ಪ್ರತಿಪದ– ಈ ತಿಥಿಯಲ್ಲಿ ಹುಟ್ಟಿದವನು. ಬಹು ರೋಗಿಯು, ಬಹು ಪ್ರತಾಪ ವುಳ್ಳವನು, ಸಿಟ್ಟುಳ್ಳವನು, ಧನವಂತನು ಆಗುತ್ತಾನೆ.

ಬಿದಿಗಿ– ಈ ತಿಥಿಯಲ್ಲಿ ಹುಟ್ಟಿದವನು ಸರ್ವಾಭರಣ ಸಂಗ್ರಹ ಮಾಡುವವನು, ಬಂಧು ಜನಗಳಲ್ಲಿ ಶ್ರೇಷ್ಠನೆನಿಸಿಕೊಳ್ಳತಕ್ಕವನು, ಸಂತೋಷ ಚಿತ್ತನು ಆಗುತ್ತಾನೆ.

ತದಿಗಿ– ಈ ತಿಥಿಯಲ್ಲಿ ಹುಟ್ಟಿದವನು ಸತ್ಯವಾದಿಯು ಶಾಂತ ಸ್ವಭಾವದವನು, ಸರ್ವ ಲಕ್ಷಣಗಳಿಂದ ಕೂಡಿದವನು ಆಗುತ್ತಾನೆ.

ಚತುರ್ಥಿ- ಈ ತಿಥಿಯಲ್ಲಿ ಹುಟ್ಟಿದವನು ದರಿದ್ರನು, ಬಂಧು ದ್ವೇಷಿಯು, ಚೋರರ ಮೂಲಕವಾಗಿ ಧನ ನಾಶಮಾಡಿಕೊಳ್ಳತಕ್ಕವನು ಆಗ:ತ್ತಾನೆ.

ಪಂಚಮಿ- ಈ ತಿಥಿಯಲ್ಲಿ ಹುಟ್ಟಿದವನು ಉತ್ತಮ ತರವಾದ ವಾಹನವುಳ್ಳವನು, ವಸ್ತ್ರಾಭ:ಣವುಳ್ಳವನು, ಸತ್ಪುತ್ರರುಳ್ಳವನು, ಉತ್ತಮ ಸ್ವಭಾವವುಳ್ಳವನು ಆಗುತ್ತಾನೆ.

ಷಷ್ಠಿ- ಈ ತಿಥಿಯಲ್ಲಿ ಹುಟ್ಟಿದವನು ನೃತ್ಯಗೀತ ಮೊದಲಾದ ವಿದ್ಯೆಗಳನ್ನು ಬಲ್ಲವನು ಕೋಪಿಷ್ಠನು ಕ್ರೂರ ಸ್ವಭಾವವುಳ್ಳವನು ಆಗುವನು.

ಸಪ್ತಮಿ-ಈ ತಿಥಿಯಲ್ಲಿ ಹುಟ್ಟಿದವನು ಪುತ್ರವಂತನು ಬಹು ಮರ್ಯಾದೆಯುಳ್ಳವನು ಪಶುವಾಹನ ಸಂಗ್ರಹವುಳ್ಳವನು ಸ್ತ್ರೀಲೋಲನು ಕ್ರಯ ವಿಕ್ರಯದಲ್ಲಿ ಕುಶಲನು ಆಗುತ್ತಾನೆ.

ಅಷ್ಟಮಿ- ಈ ತಿಥಿಯಲ್ಲಿ ಹುಟ್ಟಿದವನು ಸತ್ಯವಾದಿಯು ಇಷ್ಟ ಬಂಧುಗಳಲ್ಲಿ ವಿರೋಧಿಯಾಗುವನು. ಚಂಚಲ ಮನಸ್ಸುಳ್ಳವನು ಧೂರ್ತನು ಆಗುತ್ತಾನೆ.

ನವಮಿ- ಈ ತಿಥಿಯಲ್ಲಿ ಹುಟ್ಟಿದವನು ಕಲಹದಲ್ಲಿ ಅಪೇಕ್ಷೆಯುಳ್ಳವನು ಬ್ರಾಹ್ಮಣಾದಿ ಉತ್ತಮ ಜಾತಿಯವರಲ್ಲಿ ದ್ವೇಷಿಯಾಗುತ್ತಾನೆ.

ದಶಮಿ- ಈ ತಿಥಿಯಲ್ಲಿ ಹುಟ್ಟಿದವನು ಗಂಧಮಾಲ್ಯಾಭರಣಗಳಿಂದ ಭೂಷಣವುಳ್ಳವನು ವೇದ ಶಾಸ್ತ್ರಗಳಲ್ಲಿ ಇಷ್ಟವುಳ್ಳವನು ಮಾನವಂತನು ಧರ್ಮಿಷ್ಠನು ಆಗುತ್ತಾನೆ.

ಏಕಾದಶಿ- ಈ ತಿಥಿಯಲ್ಲಿ ಹುಟ್ಟಿದವನು ಧರ್ಮಿಷ್ಠನು ವೇದಾಂತದಲ್ಲಿ ಇಷ್ಟತೆಯುಳ್ಳವನು ಒಳ್ಳೇ ಪುತ್ರರುಳ್ಳವನು ಸರ್ವ ಜನರಲ್ಲಿ ಮರ್ಯಾದೆಯುಳ್ಳವನು ಆಗುವನು.

ದ್ವಾದಶಿ- ಈ ತಿಥಿಯಲ್ಲಿ ಹುಟ್ಟಿದವನು ಕೃಷಿಕಾರ್ಯದಲ್ಲಿ ಇಷ್ಟತೆಯುಳ್ಳವನು ಧರ್ಮಿಷ್ಠನು ಹಲವು ಬಗೆಯಾಗಿ ಧನವ್ಯಯವನ್ನು ಮಾಡಿಕೊಳ್ಳುವವನು ಆಗುತ್ತಾನೆ.

ತ್ರಯೋದಶಿ- ಈ ತಿಥಿಯಲ್ಲಿ ಹುಟ್ಟಿದವನು ಅಶ್ವವಾಹನವುಳ್ಳವನು ಧರ್ಮ ಕಾರ್ಯಗಳಲ್ಲಿ ಆಸಕ್ತಿಯುಳ್ಳವನು ರಾಜ ಜನರಲ್ಲಿ ಸ್ನೇಹ ಬೆಳಿಸುವವನು ಆಗುತ್ತಾನೆ

ಚತುರ್ದಶಿ- ಈ ತಿಥಿಯಲ್ಲಿ ಹುಟ್ಟಿದವನು ಮಾಯಾವಿಯು, ವಿದ್ಯಾಭಂಗವುಳ್ಳವನು, ಮಂತ್ರಜ್ಞನು, ಕಪಟಿಯು ಆಗುತ್ತಾನೆ.

ಪೌರ್ಣಿಮಾ- ಈ ತಿಥಿಯಲ್ಲಿ ಹುಟ್ಟಿದವನು ಶಾಂತಿಯುಳ್ಳವನು ವಿದ್ಯಾವಂತನು ಭೋಗವಂತನು, ಧನವಂತನು, ಭಾಗ್ಯವಂತನು ಆಗುತ್ತಾನೆ.

ಅಮಾವಾಸ್ಯ- ಈ ತಿಥಿಯಲ್ಲಿ ಹುಟ್ಟಿದವನು ಚಂಚಲ ಸ್ವಭಾವದವನು, ಪುತ್ರಶೋಕವುಳ್ಳವನು, ಸ್ತ್ರೀಮೋಹಕನು, ಕೀರ್ತಿವಂತನು ಆಗುವನು.

— ತಿಥಿ ಫಲ ಮುಗಿದುದು —

ವಾರ ಫಲ ವಿಚಾರ

ಭಾನುವಾರ- ದಲ್ಲಿ ಹುಟ್ಟಿದವನು ಪರಸ್ತ್ರೀಯರಲ್ಲಿ ಅಪೇಕ್ಷೆಯುಳ್ಳವನು ಧೈರ್ಯಶಾಲಿಯು, ಕೋಪಿಯು, ದೊಡ್ಡವರಿಂದ ಧನ ಸಂಪಾದಿಸತಕ್ಕವನು ಆಗುತ್ತಾನೆ.

ಸೋಮವಾರ- ದಲ್ಲಿ ಹುಟ್ಟಿದವನು ದಿವ್ಯಗಂಧ ಲೇಪನವುಳ್ಳವನು ಸಂತೋಷಚಿತ್ತನು, ವಾಹನಸುಖವುಳ್ಳವನು, ಸ್ತ್ರೀಲೋಲನು, ಆಗುತ್ತಾನೆ.

ಮಂಗಳವಾರ- ದಲ್ಲಿ ಹುಟ್ಟಿದವನು ಮಾತಾಪಿತೃಗಳಲ್ಲಿಯೂ ಗುರುಹಿರಿಯರಲ್ಲಿಯೂ ದ್ವೇಷಿಯಾಗುವನು, ಕಪಟ ಬುದ್ಧಿಯುಳ್ಳವನು, ಧೈರ್ಯಶಾಲಿಯು, ಬಹುವಾದಿಯು, ವ್ರಣಘಾಯವುಳ್ಳವನು ಆಗುತ್ತಾನೆ.

ಬುಧವಾರ- ದಲ್ಲಿ ಹುಟ್ಟಿದವನು, ಕ್ರಯವಿಕ್ರಯದಲ್ಲಿ ಕುಶಲನು, ಸೂಕ್ಷ್ಮ ಬುದ್ಧಿಯುಳ್ಳವನು, ವಿದ್ಯಾವಂತನು, ಯುಕ್ತಿಶಾಲಿಯು, ವಸ್ತ್ರಾಭರಣ ಸಂಗ್ರಹವುಳ್ಳವನು, ಆಗುತ್ತಾನೆ.

ಗುರುವಾರ- ದಲ್ಲಿ ಹುಟ್ಟಿದವನು ವೇದಶಾಸ್ತ್ರಗಳನ್ನು ಬಲ್ಲವನು, ಧನಧಾನ್ಯಗಳಿಂದ ಕೂಡಿದವನು, ಚಪಲ ಬುದ್ಧಿಯುಳ್ಳವನು, ಧರ್ಮಕಾರ್ಯ

ಗಳಲ್ಲಿ ಇಷ್ಟತೆಯುಳ್ಳವನು ದೇವತಾ ಕಾರ್ಯದಲ್ಲಿಯೂ, ಗುರು-ಹಿರಿಯರ ಲ್ಲಿಯೂ ಭಕ್ತಿಯುಳ್ಳವನು ಆಗುತ್ತಾನೆ.

ಶುಕ್ರವಾರ- ದಲ್ಲಿ ಹುಟ್ಟಿದವನು. ಸ್ತ್ರೀ ಲೋಲನು ಬಹು ಕಾಮಿಯು ಸಂಗೀತದ ಮೇಲೆ ಅಪೇಕ್ಷೆಯುಳ್ಳವನು, ಶಯ್ಯಾಸುಖವುಳ್ಳವನು, ರತಿಕ್ರೀಡಾ ವಿನೋದವುಳ್ಳವನು ಆಗುತ್ತಾನೆ.

ಶನಿವಾರ- ದಲ್ಲಿ ಹುಟ್ಟಿದವನು ಲೋಭಿಯು ಕ್ರೂರ ಸ್ವಭಾವದವನು ನೀಚಕಾರ್ಯದಲ್ಲಿ ಆಸಕ್ತನು ವಾತಶೂಲಿ ರೋಗವುಳ್ಳವನು ಆಗುತ್ತಾನೆ.

.... ವಾರ ಫಲ ಮುಗಿದುದು ....

ನಕ್ಷತ್ರ ಫಲವು

ಅಶ್ವಿನಿ- ಈ ನಕ್ಷತ್ರದಲ್ಲಿ ಹುಟ್ಟಿದವನು. ಶುಭಲಕ್ಷಣವುಳ್ಳವನ ಸಂಪನ್ನನು ಮತಿವಂತನು, ಭೋಗಿಯು. ಅಲಂಕಾರ ಪ್ರಿಯನು, ಸುಂದರನು ಸರ್ವಜನ ಪ್ರಿಯನು ಸಮರ್ಥನು ಚಂಚಲ ಸ್ವಭಾವವುಳ್ಳವನು, ಸಂಗೀತ ಪ್ರಿಯನು ರಾಜಮಾನ್ಯನು ಆಯುಷ್ಯವೃದ್ಧಿಯುಳ್ಳವನು ಆಗುವನು.

ಕಂಟಕಾದಿಗಳು- ಈ ನಕ್ಷತ್ರದ ಆದಿ ಭಾಗದಲ್ಲಿ ೨ ಘಳಿಗೆಯಲ್ಲಿ ಶಿಶು ವಿಗೆ ಗಂಡವು ೧ನೆಯ ವರ್ಷದಲ್ಲಿ ಅಗ್ನಿಭಯ ಅಂದರೆ ಚುಟುಕೆ ಬೀಳುತ್ತದೆ, ೨ ನೆಯ ವರ್ಷದಲ್ಲಿ ಜ್ವರಭಯ, ೩ನೆಯ ವರ್ಷದಲ್ಲಿ ಹೊಟ್ಟೆಶೂಲೆ, ೫ನೆಯ ವರ್ಷದಲ್ಲಿ ನೇತ್ರ ರೋಗ, ಪ್ರಾಣಭಯ ೬ ನೆಯ ವರ್ಷದಲ್ಲಿ ಧನ ನಾಶ ೧೦ ವರ್ಷದಲ್ಲಿ ಅಪಮೃತ್ಯುಭಯ ೨೦ ವರ್ಷದಲ್ಲಿ ಮೇಹ ಸಂಬಂಧ ರೋಗ, ೨೧ ವರ್ಷದಲ್ಲಿ ಕಂಟಕವು. ೨೪ ವರ್ಷದಲ್ಲಿ ಮೃಗ ಭಯ, ಚೋರ ಭಯ, ೪೦ ವರ್ಷದಲ್ಲಿ ರೋಗದಿಂದ ಕಂಟಕವು. ಇತ್ಯಾದಿ ವರ್ಷಗಳನ್ನು ಕಳೆದುಳಿದರೆ ೭೦ ವರ್ಷ ಪರಮಾಯುವು.

ಭರಣಿ ನಕ್ಷತ್ರ— ದಲ್ಲಿ ಹುಟ್ಟಿದವನು ಆರಂಭಿಸಿದ ಕಾರ್ಯವನ್ನು ಮಾಡುವವನು, ಸತ್ಯವಾದಿಯು, ಆರೋಗ್ಯವಂತನು, ಸಮರ್ಥನು ದುಃಖ ರಹಿತನು. ಬಹು ಶತೃಗಳುಂಟು ಸುಖವಂತನು, ಕಾರ್ಯದಲ್ಲಿ ನಿಪುಣನು

ಂಚಲ ಸ್ವಭಾವವುಳ್ಳವನು, ಆಚಾರದಲ್ಲಿ ಕಠಿನೆ, ಗುಟ್ಟು ನಿಲ್ಲುವದಿಲ್ಲ; ಸಂಕರಿಯು. ಕಷ್ಟಸುಖಗಳನ್ನು ಬಹಳವಾಗಿ ಅನುಭವಿಸುತ್ತಾನೆ. ಬಹು ವಿಯು, ಧರ್ಮಿಷ್ಠನು ಆಲಸ್ಯವುಳ್ಳವನು, ಮರವು ಬುದ್ಧಿಯುಳ್ಳವನು ನ್ಯರಿಗೆ ಉಪಕಾರ ಮಾಡುವವನು, ಹಟವಾದಿಯಾಗುವನು. ಕೆಂಪಾದ ಣ್ಣುಳ್ಳವನು, ಉಂಗುರ ಕೂದಲುಳ್ಳವನು, ಹೊಕ್ಕಳ ಬಳಿಯಲ್ಲಿ ಮತ್ಸ್ಯರೇಖೆ ಂಟು, ತೊಡೆಗಳಲ್ಲಿ ರೋಗವುಂಟು, ಈ ನಕ್ಷತ್ರ ೧ ನೇ ಪಾದದಲ್ಲಿ ಹುಟ್ಟಿ ದವನು ಗುಣವಂತನಾಗುತ್ತಾನೆ. ೨ನೇ ಪಾದದಲ್ಲಿ ಲೋಭಿಯು, ಮೋಸ ರನು ೩ನೇ ಪಾದದಲ್ಲಿ ಧೈರ್ಯವಂತನು ಉತ್ಸಾಹವಂತನು ಹೆಚ್ಚು ಕೂದ ಳ್ಳವನು ಸ್ತ್ರೀ ಲೋಲನು ೪ನೇ ಪಾದದಲ್ಲಿ ಕ್ರೂರವಾದ ಮಾತುಳ್ಳ ನು, ಪುತ್ರಬುದ್ಧಿಯುಳ್ಳವನು, ಕಷ್ಟದ ಕೆಲಸಕ್ಕಾಗಿ ದುಡಿದು ಫಲ ಬರುವ ಲಕ್ಕೆ ಬಿಟ್ಟು ನಿಷ್ಠುರ ಕಟ್ಟಿಕೊಳ್ಳುವವನು ಆಗುವನು.

ಕಂಟಕಾದಿಗಳು— ಈ ನಕ್ಷತ್ರದ ೨೪ ಘಳಿಗೆಯಿಂದ ೨೮ ಘಳಿಗೆಯ ಗೆ ೪ ಘಳಿಗೆಯು ವಿಷಘಳಿಗೆಯು ಆಗ ಹುಟ್ಟಿದವನು ದುರ್ಯೋಧನನು ವಿಷ ಘಳಿಗೆಯಲ್ಲಿ ಹುಟ್ಟಿದರೆ ಕುಲಕ್ಷಯ ಮಾಡಿಕೊಳ್ಳುವನು. ಇದೇ ನಕ್ಷ ದ ೪೮ ಘಳಿಗೆಯಿಂದ ೫೨ ಘಳಿಗೆಯವರೆಗೆ ಅಮೃತಕಾಲವು ಆ ಕಾಲ ಹುಟ್ಟಿದವನು, ಧರ್ಮರಾಯನು ಅಂಥ ಕಾಲದಲ್ಲಿ ಹುಟ್ಟಿದವರು ನೀತಿ ರ್ಮಪರರಾಗಿ ಯೋಗ್ಯರೆನಿಸಿಕೊಳ್ಳುವರು. ಈ ನಕ್ಷತ್ರದಲ್ಲಿ ಹುಟ್ಟಿದರೆ ೧ ಗಳಲ್ಲಿಯೂ ೪ನೆಯ ವರ್ಷದಲ್ಲಿಯೂ ಅಪಮೃತ್ಯುವು, ಮೃಗಭಯ ೧೧ ನೆಯ ವರ್ಷದಲ್ಲಿ ಅಗ್ನಿಭಯ, ೨೦ ವರ್ಷದಲ್ಲಿ ಮೋಹ ಸಮ್ಮಂಧ ರೋಗ ದ ಕಂಟಕವು. ೨೪ ವರ್ಷದಲ್ಲಿ ಅಪಮೃತ್ಯು ಭಯ ೨೭ ವರ್ಷದಲ್ಲಿ ಶತ್ರು ು, ೩೭ ವರ್ಷದಲ್ಲಿ ಜ್ವರ-ಗಂಡವು ೭೨ ವರ್ಷದಲ್ಲಿ ಗುಲ್ಮರೋಗವು. ತ್ಯಾದಿ ವರ್ಷಗಳನ್ನು ಕಳೆದುಳಿದರೆ ೮೦ ವರ್ಷ ಪರಮಾಯುಷ್ಯ.

ಕೃತ್ತಿಕಾ —ನಕ್ಷತ್ರದಲ್ಲಿ ಹುಟ್ಟಿದವನು ಕಾಂತಿವಂತನು, ಅನ್ಯ ಸ್ತ್ರೀ ಮಾಡುವವನು. ಹೆಚ್ಚಾಗಿ ಭೋಜನ ಮಾಡುವವನು, ಪ್ರಸಿದ್ಧವಂತನು ರ್ಜಿತ ಧನವುಳ್ಳವನು. ಪಾಪಕಾರ್ಯಗಳಲ್ಲಿ ಇಷ್ಟವುಳ್ಳವನು, ೫೦ ದಲ್ಲಿ ಅಪಮೃತ್ಯು, ಕಲಹದಲ್ಲಿ ನಿಪುಣನು, ಕೋಪವುಳ್ಳವನು, ಧೈರ್ಯ

ಶಾಲಿಯು. ಈ ನಕ್ಷತ್ರದ ಒಂದನೆಯ ಪಾದದಲ್ಲಿ ಹುಟ್ಟಿದವನು ಕಾರ್ಯ ನಿಪು
ಣನು, ಕುಶಲನು ಪರೋಪಕಾರಿಯು, ತೇಜಸ್ಸುಳ್ಳವನು, ಸರ್ವಜನಪ್ರಿಯನು
೨ನೆಯ ಪಾದದಲ್ಲಿ ಹುಟ್ಟಿದವನು, ಆಚಾರಹೀನನು, ಶರೀರ ಪುಷ್ಟಿಯುಳ್ಳ
ವನು, ನಿದಾನವಾಗಿ ಮಾತಾಡುವವನು, ೩ನೆಯ ಪಾದದಲ್ಲಿ ಹುಟ್ಟಿದವನು
ಕಾರ್ಯವಂತನು ಕೋಪಿಷ್ಟನು, ದುರ್ಬುದ್ಧಿಯುಳ್ಳವನು. ಯುಕ್ತಿವಂತನು ಅಲ
ಸ್ಯಗಾರನು. ನಾಲ್ಕನೆಯ ಪಾದದಲ್ಲಿ ಹುಟ್ಟಿದವನು, ವಿದ್ಯಾಬುದ್ಧಿ ತೇಜಸ್ಸು
ಳ್ಳವನು, ಯುಕ್ತಿವಂತನು ಸಂಪತ್ತುಳ್ಳವನು ಆಗುತ್ತಾನೆ.

ಕಂಟಕಾದಿಗಳು— ಈ ನಕ್ಷತ್ರದಲ್ಲಿ ಹುಟ್ಟಿದವನಿಗೆ ೩ನೆಯ ತಿಂಗಳಲ್ಲಿ
ಜ್ವರಭಯ,೧ನೆಯ ವರ್ಷದಲ್ಲಿ ಜ್ವರಭಯ ೨ನೆಯ ವರ್ಷದಲ್ಲಿ ಅಕಸ್ಮಾತ್
ಗ್ರಹಭಯ ವಿಷಪೀಡೆ ೨-೭-೧೨ ಈ ವರ್ಷಗಳಲ್ಲಿ ಪಿತ್ತ ಜ್ವರ ಭಯವು
ಆಯುಧವ್ರಣ ಭಯ, ೨೧ ವರ್ಷದಲ್ಲಿ ಅಪಮೃತ್ಯು ೬೦ ವರ್ಷದಲ್ಲಿ ಶತ್ರು
ಗಳಿಂದ ಕಂಟಕ ೭೦ ವರ್ಷಗಳಲ್ಲಿ ಆಯುಧದಿಂದ ಕಂಟಕ ಇತ್ಯಾದಿ ವರ್ಷಗ
ಳನ್ನು ಕಳೆದುಳಿದ ನಂತರ ೮೦ ವರ್ಷ ಪರಮಾಯುಷ್ಯವು

ರೋಹಿಣಿ ನಕ್ಷತ್ರ-ದಲ್ಲಿ ಹುಟ್ಟಿದವನು ಸತ್ಯವಾದಿಯು ಶುಚಿವಂತನು
ಮೃದುಭಾಷಿಯು ಸ್ಥಿರ ಬುದ್ಧಿಯುಳ್ಳವನು. ಸೌಂದರ್ಯವಂತನು ನಿಪುಣನು
ರತಿ ಕೇಳೀ ವಿನೋದವುಳ್ಳವನು ಧನವಂತನು ನೇತ್ರರೋಗವುಳ್ಳವನು ಸೋದರ
ಮಾವನಿಗೆ ಅರಿಷ್ಟವುಳ್ಳವನು ಧನಧಾನ್ಯ ಸಮೃದ್ಧಿಯುಳ್ಳವನು ಸ್ತ್ರೀಲೋಲನು
ಭಯಸ್ವಭಾವದವನು, ಈ ನಕ್ಷತ್ರ ೧ನೆಯ ಪಾದದಲ್ಲಿ ಹುಟ್ಟಿದವನು ಸ್ವಲ್ಪ
ಕೆಂಪು ಕೂದಲುಳ್ಳವನು ಕಾರ್ಯ ನಿಷ್ಠುರ ಉಳ್ಳವನು, ಸ್ವಲ್ಪ ಚೋರಬುದ್ಧಿ
ಯುಳ್ಳವನು, ೨ನೆಯ ಪಾದದಲ್ಲಿ ಹುಟ್ಟಿದವನು, ಭೋಜನಪ್ರಿಯನು ಒಳ್ಳೆ
ಸ್ವಭಾವದವನು. ಸುಶೀಲನು ಸ್ತ್ರೀಯರಲ್ಲಿ ಇಷ್ಟತೆಯುಳ್ಳವನು, ೩ ನೆಯ
ಪಾದದಲ್ಲಿ ಹುಟ್ಟಿದವನು ಗಣಿತವನ್ನು ಬಲ್ಲವನು. ಕವಿತ್ವಗಾರನು. ವಿದ್ಯಾ
ವಂತನು ಧೀರನು ಸೂಕ್ಷ್ಮ ಬುದ್ಧಿಯುಳ್ಳವನು ೪ ನೆಯ ಪಾದದಲ್ಲಿ ಹುಟ್ಟಿ
ದವನು ಧನವಂತನು ನೆಂಟರಲ್ಲಿ ಇಷ್ಟವುಳ್ಳವನು ಹೆರವರಿಗೆ ಉಪಕಾರಿಯೂ
ಬುದ್ಧಿವಂತನೂ ಆಗುವನು.

ಕಂಟಕಾದಿಗಳು- ಈ ನಕ್ಷತ್ರದ ಹತ್ತು ಘಳಿಗೆಯ ಮೇಲೆ ಅಪಮೃತ್ಯು. ೧೦ನೆಯ ದಿನದಲ್ಲಿ ಭಯ. ಸಮ ವರ್ಷಗಳಲ್ಲಿ ನೇತ್ರ ಭಾಧೆ ೩ನೆಯ ವರ್ಷದಲ್ಲಿ ಕಂಟಕವು. ೧೭ನೆಯ ವರ್ಷದಲ್ಲಿ ನೇತ್ರಪೀಡೆಯು. ೨೭ನೆಯ ವರ್ಷದಲ್ಲಿ ಅಪಮೃತ್ಯು, ೩೨ನೆಯ ವರ್ಷದಲ್ಲಿ ಚೋರರಿಂದ ಕಂಟಕವು ೪೬ನೆಯ ವರ್ಷದಲ್ಲಿ ನೀಚರಿಂದ ಕಂಟಕವು ೫೨ ವರ್ಷದಲ್ಲಿ ಅಪಮೃತ್ಯು ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದರೆ ೭೦ ವರ್ಷ ಪರಮಾಯುಷ್ಯವು.

ಮೃಗಶಿರ ನಕ್ಷತ್ರ—ದಲ್ಲಿ ಜನಿಸಿದರೆ ಚಪಲಚಿತ್ತನು, ಧನವಂತನು. ಭೋಗವಂತನು. ಭಯಸ್ಥನು, ಉತ್ಸಾಹಗಾರನು, ಮಾತಿನಲ್ಲಿ ಜಾಣನು ತಾಯಿಯಲ್ಲಿ ಭಕ್ತಿಯುಳ್ಳವನು ಚಮತ್ಕಾರಿಯು ; ಸ್ವತಂತ್ರನು; ಈ ನಕ್ಷತ್ರದ ಒಂದನೇ ಪಾದದಲ್ಲಿ ಹುಟ್ಟಿದವನು, ಜಾರನಾಗುವನು, ಸ್ಥೂಲ ದೇಹವುಳ್ಳವನು, ಶತ್ರುಗಳನ್ನು ಗೆಲ್ಲುವವನು ಎರಡನೇ ಪಾದದಲ್ಲಿ ಹುಟ್ಟಿದವನು ಪುರುಷತ್ವ ಕಡಿಮೆಯು ಮೂರನೇ ಪಾದದಲ್ಲಿ ಹುಟ್ಟಿದವನು, ಉದಾರಗುಣವುಳ್ಳವನು. ಧೈರ್ಯಶಾಲಿಯು ಸೌಂದರ್ಯವಂತನು; ಬುದ್ಧಿವಂತನು ೪ನೇ ಪಾದದಲ್ಲಿ ಹುಟ್ಟಿದವನು, ದರಿದ್ರ ಸ್ವಭಾವವುಳ್ಳವನು, ಸರ್ವಜನರಲ್ಲಿ ದ್ವೇಷವುಳ್ಳವನು ಬಹು ಕಾಮಿಯು ತಲೆಯಲ್ಲಿ ಹುಣ್ಣಿನ ಘಾಯವುಳ್ಳವನು. ಕೆಲಸಕ್ಕೆ ಅನಾಯಾಸ ಕಷ್ಟಪಡುವವನು ಆಗುವನು.

ಕಂಟಕಾದಿಗಳು— ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೮ನೇ ತಿಂಗಳಲ್ಲಿ ಗ್ರಹದೋಷ ತಗಲುವದು ೩ ನೇ ವರ್ಷದಲ್ಲಿ ಸರ್ಪಭಯ, ಪಶುಭಯ ಹೊಟ್ಟೆಶೂಲೆ ೧೦ ನೇ ವರ್ಷದಲ್ಲಿ ಮಹಾವ್ಯಾಧಿ ೬-೮ ವರ್ಷಗಳಲ್ಲಿ ಅಪಮೃತ್ಯುಭಯ. ೨೫ನೇ ವರ್ಷದಲ್ಲಿ ದೊಡ್ಡ ಅಪವಾದವು ಸ್ಥಾನಭ್ರಷ್ಟತೆಯು ೫೦ನೇ ವರ್ಷದಲ್ಲಿ ಕುಟುಂಬನಾಶವು ಕಳ್ಳರಿಂದ ಭಯ ಇತ್ಯಾದಿ ಕಂಟಕ ಕಾಲಗಳನ್ನು ಕಳೆದರೆ ೮೦ ವರ್ಷ ಪರಮಾಯುಷ್ಯವಿದೆ.

ಆರಿದ್ರಾನಕ್ಷತ್ರ—ದಲ್ಲಿ ಹುಟ್ಟಿದವನು ಕಾರ್ಯದ ಮಟ್ಟಿಗೆ ಮಾತ್ರ ಮಾತನಾಡತಕ್ಕವನು. ಅಹಂಕಾರಿಯು ಉಪಕಾರವನ್ನು ಮರೆಯುವವನು ಪಾಪಕಾರ್ಯಾಸಕ್ತನು,ಕ್ರಯವಿಕ್ರಯದಲ್ಲಿ ನಿಪುಣನು, ಆಯುಷ್ಯವೃದ್ಧಿಯುಳ್ಳವನ

ಬಂಧುಗಳಲ್ಲಿ ದ್ವೇಷಿಯು ಕಪಟಿಯು ಕವಿತ್ವವನ್ನು ಒಲ್ಲವನು. ಈ ನಕ್ಷತ್ರದ ೧ನೆಯ ಪಾದದಲ್ಲಿ ಹುಟ್ಟಿದವನು, ದಯಾದಾಕ್ಷಿಣ್ಯವುಳ್ಳವನು, ಗುಣವಂತನು, ಕುಶಲ ಬುದ್ಧಿಯುಳ್ಳವನು, ೨ನೆಯ ಪಾದದಲ್ಲಿ ಹುಟ್ಟಿದವನು ದುಃಖವುಳ್ಳವನು, ಗರ್ವಿಷ್ಠನು, ಸಂಸಾರದಲ್ಲಿ ಭಂಗವುಳ್ಳವನು, ೩ನೆಯ ಪಾದದಲ್ಲಿ ಹುಟ್ಟಿದವನು, ಅಲ್ಪ ಬುದ್ಧಿಯುಳ್ಳವನು, ಮುಂಗೋಪಿಯು, ಆಲಸ್ಯಗಾರನು, ೪ನೆಯ ಪಾದದಲ್ಲಿ ಹುಟ್ಟಿದವನು, ದುರಾಲೋಚನೆಯುಳ್ಳವನು, ಸಾಹಸಗಾರನು ಸರ್ವಜನರ ದ್ವೇಷಿಯು ಆಗುವನು.

ಕಂಟಕಾದಿಗಳು-- ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೭ನೇ ತಿಂಗಳಲ್ಲಿ ಜ್ವರಭಯ ೧ ವರ್ಷದಲ್ಲಿ ಅಕಸ್ಮಾತ್ ಸಂಧುರೋಗ ಭಯ ೫ನೇ ವರ್ಷದಲ್ಲಿ ಅಪಮೃತ್ಯು, ನಂತರ ೮ನೇ ವರ್ಷದಲ್ಲಿ ಅಪಮೃತ್ಯು ಜ್ವರಭಾಧೆಯು ೧೮ ವರ್ಷದಲ್ಲಿ ಅಪಮೃತ್ಯುಭಯ, ಅಗ್ನಿಭಯ, ೨೪ ವರ್ಷದಲ್ಲಿ ಸರ್ಪಭಯ ೨೯ ವರ್ಷದಲ್ಲಿ ಕ್ರೂರ ಕಂಟಕ, ೫೦ ವರ್ಷದಲ್ಲಿ ಉತ್ತಮ ಜಾತಿಯವರಿಂದ ಕ್ರೂರಕಂಟಕ, ಮಾಘಮಾಸ ಭಾನುವಾರ ಆರಿದ್ರಾನಕ್ಷತ್ರ ಬಂದ ಕಾಲದಲ್ಲಿ ಅಪಮೃತ್ಯುಭಯವುಂಟು, ಇತ್ಯಾದಿ ಗಂಡ ಕಾಲಗಳನ್ನು ಕಳಿಮೀರಿದರೆ ೭೦ ವರ್ಷ ಪರಮಾಯುಷ್ಯವು.

ಪುನರ್ವಸುನಕ್ಷತ್ರ— ದಲ್ಲಿ ಹುಟ್ಟಿದವನು, ವೇದಶಾಸ್ತ್ರಗಳನ್ನು ಬಲ್ಲವನು ಕುಶಲನು ಜನಪ್ರಿಯನು, ನಿಯಮಾಚರಣೆಯುಳ್ಳವನು ಒಳ್ಳೆಯ ಸ್ವಭಾವದವನು, ರೋಗಿಷ್ಟನು, ಅಲ್ಪ ಸಂತೋಷವುಳ್ಳವನು, ಬಾಯಾರಿಕೆಯುಳ್ಳವನು. ಭೋಜನಪ್ರಿಯನು ಸ್ತ್ರೀ ಲೋಲನು ಧಾರಾಳಿಯು, ಕೀರ್ತಿವಂತನು, ವಿದ್ಯಾವಂತನು. ವಾಕ್ಚಾತುರ್ಯವುಳ್ಳವನು ಹಾಸ್ಯಪ್ರಿಯನು, ಹೊಟ್ಟೆಯಬದಿಮತ್ಸ್ಯ ಉಂಟು. ಈ ನಕ್ಷತ್ರದ ಒಂದನೇ ಪಾದದಲ್ಲಿ ಹುಟ್ಟಿದವನು ಚೋರಬುದ್ಧಿಯುಳ್ಳವನು, ವ್ಯಾಧಿಪೀಡಿತನು, ಅಸತ್ಯವಾದಿಯು ವ್ಯಸನವುಳ್ಳವನು. ೨ನೇಪಾದದಲ್ಲಿ ಹುಟ್ಟಿದವನು. ಭೋಜನಪ್ರಿಯನು, ಸಲಕ್ಷಣವುಳ್ಳವನು ಒಳ್ಳೇನೇತ್ರವುಳ್ಳವನು ಪರೋಪಕಾರಿಯು ೩ನೇ ಪಾದದಲ್ಲಿ ಹುಟ್ಟಿದವನು. ಬುದ್ಧಿವಂತನು, ಯುಕ್ತಿವಂತನು ಧೈರ್ಯಶಾಲಿಯು. ಸೂಕ್ಷ್ಮಬುದ್ಧಿಯುಳ್ಳವನು, ೪ನೇ ಪಾದದಲ್ಲಿ ಹುಟ್ಟಿದವನು ಧನವಂತನು, ಭೋಗವಂತನು ಆಗುವನು.

ಕಂಟಕಾದಿಗಳು—ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೧ನೇ ವರ್ಷದಲ್ಲಿ ಹೊಟ್ಟೆಬೇನೆ ರೋಗ, ಶೀತಜ್ವರ ಬಾಧೆ, ೩ನೇ ವರ್ಷದಲ್ಲಿ ನೇತ್ರಪೀಡೆ ೫ನೇ ವರ್ಷದಲ್ಲಿ ಮಾತೃಕಂಟಕ ಶತ್ರುಗಳಿಂದ ಭಯ ೬ನೇ ವರ್ಷದಲ್ಲಿ ಪಿತ್ರಾರಿಷ್ಟವು ೧೬ ನೇ ವರ್ಷದಲ್ಲಿ ಅಪಮೃತ್ಯುಭಯ, ೧೭ನೇ ವರ್ಷದಲ್ಲಿ ದೇಶ ಭ್ರಷ್ಟವು, ೨೫ನೇ ವರ್ಷದಲ್ಲಿ ಸರ್ಪಭಯ ೩೭ನೇ ವರ್ಷದಲ್ಲಿ ಜಲಗಂಡವು ೪೩ನೇ ವರ್ಷದಲ್ಲಿ ಕ್ರೂರಮೃಗಗಳಿಂದ ಕಂಟಕವು ೫೭ನೇ ವರ್ಷದಲ್ಲಿ ಸ್ತ್ರೀ ಪುತ್ರರಿಂದ ಹಾನಿಯು ಭಾನುವಾರ ಪಂಚಮಿ ಸೂರ್ಯೋದಯಾದಿ ೬ತಾಸಿಗೆ ಮಹಾಕಂಟಕವು ಇತ್ಯಾದಿಗಳನ್ನು ಕಳೆದುಳಿದರೆ ೮೦ವರ್ಷ ಪರಮಾಯುಷ್ಯವು.

ಪುಷ್ಯನಕ್ಷತ್ರ-ದಲ್ಲಿಹುಟ್ಟಿದವನು, ವಿದ್ಯಾವಂತನು ವಿನಯ ಗುಣವುಳ್ಳವನು;ಸಂಪನ್ನನು, ದೇವ ಬ್ರಾಹ್ಮಣರಲ್ಲಿ ಭಕ್ತಿ ಯುಳ್ಳವನು,ಮತವಾಂಛಲ್ಯವುಳ್ಳವನು. ಸರ್ವಜನಪ್ರಿಯನು,ಧನವಂತನು ವಿದ್ಯಾವಂತನು ಧರ್ಮಕಾರ್ಯದಲ್ಲಿ ಆಸಕ್ತಿಯುಳ್ಳವನು ಜ್ಯೋತಿಷ್ಯವನ್ನು ಬಲ್ಲವನು. ಬಹು ಮುಂಗೋಪಿಯುಹಸ್ತಗಳಲ್ಲಿಯೂ ಪಾದಗಳಲ್ಲಿಯೂ ಮತ್ಸ್ಯ ರೇಖೆಯುಂಟು. ಈ ನಕ್ಷತ್ರ ೧ನೇಪಾದದಲ್ಲಿ ಹುಟ್ಟಿದವನು ನೇತ್ರಪೀಡಾ ಸಂದು ಸಂದುಗಳಲ್ಲಿ ಶೂಲರೋಗವುಳ್ಳವನು ೨ನೆಯ ಪಾದದಲ್ಲಿ ಹುಟ್ಟಿದವನು ವೀರ್ಯ ಪುಷ್ಟಿ ಕಡಿಮೆಯುಳ್ಳವನು ದುಃಖಪಡತಕ್ಕವನು ಅಸತ್ಯ ಭಾಷೆಯುಳ್ಳವನು ಪರಸ್ತ್ರೀ ಪರದ್ರವ್ಯಗಳು ಅಪೇಕ್ಷೆಯುಳ್ಳವನು ಪುತ್ರವಂತನು ೩ನೇ ಪಾದದಲ್ಲಿ ಹುಟ್ಟಿದವನು ಮೃದು ಭಾಷೆಯುಳ್ಳವನು ಹಸನ್ಮುಖಿಯು ೪ನೇ ಪಾದದಲ್ಲಿ ಹುಟ್ಟಿದವನು ದರಿದ್ರನು ಪರದ್ರವ್ಯದ ಅಪೇಕ್ಷೆಯುಳ್ಳವನು ಪುತ್ರವಂತನು ಆಗುವನು.

ಕಂಟಕಾದಿಗಳು— ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೧ನೇ ತಿಂಗಳಲ್ಲಿ ಜ್ವರ,ಭಯ,೪-೬-೮ ತಿಂಗಳಲ್ಲಿ ಕ್ರೂರ ಕಂಟಕ ೩ನೇ ವರ್ಷದಲ್ಲಿ ಅಪಮೃತ್ಯು ೫-೮-೧೦-೧೪-೧೬ ವರ್ಷಗಳಲ್ಲಿ ವಿಷಕಂಟಕ ಭಯ ೧೬ ವರ್ಷದಲ್ಲಿ ವಾತಜ್ವರ ಭಯ ೨೬ ವರ್ಷದಲ್ಲಿ ವಾಹನ ಪಶು ಭಯ ೩೭ ವರ್ಷದಲ್ಲಿ ಶಸ್ತ್ರ ಕಂಟಕಭಯ ೬೪ನೇ ವರ್ಷದಲ್ಲಿ ಅಪಮೃತ್ಯು ಈ ಗಂಡ ಕಾಲಗಳನ್ನು ಕಳೆದುಳಿದರೆ ೭೦ ವರ್ಷ ಪರಮಾಯುಷ್ಯವು.

ಅಶ್ಲೇಷನಕ್ಷತ್ರ— ದಲ್ಲಿ ಹುಟ್ಟಿದವನು ಬಂಧುಗಳಲ್ಲಿ ದ್ವೇಷಿಯಾಗುವನು ಕುತ್ಸಿತವಾದ ಮನಸ್ಸುಳ್ಳವನು. ಕಾಪಟ್ಯ ಹೃದಯವುಳ್ಳವನು ಪಾಪಕರ್ಮವನ್ನು ಮಾಡುವವನು ಅಪಕಾರಿಯು ಅತಿ ಕಾಮಿಯು ಉತ್ತಮ ಜನರನ್ನು ಮೋಸ ಪಡಿಸುವವನು ಜಾಲಗಾರನು ವಿಶಾಲವಾದ ನೇತ್ರವುಳ್ಳವನು ವಿದ್ಯಾಬುದ್ಧಿಯುಳ್ಳವನು ಕಣ್ಣುಗಳಲ್ಲಿ ಸ್ವಲ್ಪ ಮತ್ಸ್ಯವುಂಟು. ಈ ನಕ್ಷತ್ರದ ೧ನೇ ಪಾದದಲ್ಲಿ ಹುಟ್ಟಿದವನು ಶಕ್ತಿವಂತನು ಕಾರ್ಯಾಸಕ್ತನು ೨ನೇಪಾದದಲ್ಲಿ ಹುಟ್ಟಿದವನು ಮಂದ ಬುದ್ಧಿಯುಳ್ಳವನು ಚಪಲ ಚಿತ್ತನು ನೀಚ ಕಾರ್ಯಗಳನ್ನುಮಾಡುವವನು. ೩ನೇ ಪಾದದಲ್ಲಿ ಹುಟ್ಟಿದವನು.ಘಾತುಕನು ದುರ್ಬುದ್ಧಿವಂತನು ಕೋಪಿಷ್ಟನು ಅಲ್ಪ ಜನರ ಸ್ನೇಹವುಳ್ಳವನು ೪ನೇ ಪಾದದಲ್ಲಿ ಹುಟ್ಟಿದವನು ಜ್ಞಾನವಂತನು ಮೃದು ಭಾಷಿಯು ಆಗುವನು.

ಕಂಟಕಾದಿಗಳು— ಈ ನಕ್ಷತ್ರದ ೨ನೇ ಪಾದದಲ್ಲಿ ಹುಟ್ಟಿದರೆ ಮಾತೃಗಂಡ ೩ನೇ ಪಾದದಲ್ಲಿ ಹುಟ್ಟಿದರೆ ಧನ ಹಾನಿ ೪ ನೇ ಪಾದದಲ್ಲಿ ಹುಟ್ಟಿದರೆ ಪಿತೃಗಂಡ, ಈ ನಕ್ಷತ್ರದ ಅಂತ್ಯಕಾಲದಲ್ಲಿ ೨ಘಳಿಗೆ ಅಭುಕ್ತವೆಂಬುವ ಕಂಟಕ ಕಾಲವು ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೧ನೇ ವರ್ಷದಲ್ಲಿ ಜ್ವರ ಭಯ ೪ನೇ ವರ್ಷದಲ್ಲಿ ಪಶುಭಯ ೫ನೇ ವರ್ಷದಲ್ಲಿ ಅಪಮೃತ್ಯು ಭಯ ೮ನೇ ವರ್ಷದಲ್ಲಿ ವಿಷ ಅಗ್ನಿಭಯ ೧೧ನೇವರ್ಷದಲ್ಲಿ ಶರೀರ ಕಂಟಕ ರಾಜ ಬಾಧೆಇಗಿ ಶಸ್ತ್ರಭಯ ೨೭ನೇ ವರ್ಷದಲ್ಲಿ ಸರ್ಪಭಯ, ೩೦ನೇ ವರ್ಷದಲ್ಲಿ ದೇಶ ಭ್ರಮಣ ವಾತರೋಗ ೩೫ನೇ ವರ್ಷದಲ್ಲಿ ಅಪಮೃತ್ಯುಭಯ ೫೨ನೇ ವರ್ಷದಲ್ಲಿ ಕ್ರೂರ ಕಂಟಕ ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದರೆ೭೦ವರ್ಷಪರಮಾಯುಷ್ಯವು ಈ ನಕ್ಷತ್ರದಲ್ಲಿ ಜ್ವರ ಬಂದರೆ ೧ ತಿಂಗಳು ಕ್ರೂರವಾಗಿ ಕಾಡುತ್ತದೆ. ಇದಕ್ಕೆ ಬೃಹಸ್ಪತಿ ಶಾಂತಿ ಮಾಡಿಸಬೇಕು.

ಮಘನಕ್ಷತ್ರ— ದಲ್ಲಿ ಹುಟ್ಟಿದವನು ಉದಾರ ಗುಣವುಳ್ಳವನು ಮರ್ಯಾದೆಯುಳ್ಳವನು ಧನಧಾನ್ಯಗಳಿಂದ ಕೂಡಿದವನು.ಬಹುಭೋಗವಂತನು ಗುರು-ಹಿರಿಯರಲ್ಲಿಯೂ, ದೇವಕಾರ್ಯಗಳಲ್ಲಿಯೂ ಅತಿ ಭಕ್ತಿ ಯುಳ್ಳವನು ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡುವವನು ವಿದ್ಯೆಯಲ್ಲಿ ಪ್ರೀತಿಯುಳ್ಳವನು ದೀರ್ಘಾಯುಷ್ಯವುಳ್ಳವನು ಸ್ಪಷ್ಟವಾಗಿ ಮಾತಾಡತಕ್ಕವನು, ಕೆಂಪಾದ ಕಣ್ಣುಳ್ಳವನು, ಹೃದಯದಲ್ಲಿ ಮತ್ಸ್ಯ ಅಂಕಿತವುಂಟು.

ಬಂಧು ಜನಗಳಿಗೆ ಉಪಕಾರಿಯು. ಗಂಭೀರ ಗುಣವುಳ್ಳವನು, ಸ್ವಲ್ಪ ಲೋಭಿಯು ಆಗುತ್ತಾನೆ. ಆಗಿಂದಾಗ ರೋಗಪೀಡೆ ಬಂದು ಹೋಗುತ್ತದೆ. ಈ ನಕ್ಷತ್ರದ ೧ ನೇ ಪಾದದಲ್ಲಿ ಹುಟ್ಟಿದವನು ಚೋರ ಬುದ್ಧಿಯುಳ್ಳವನು, ಕಿವಿ ಶೂಲಿಯುಳ್ಳವನು, ಬಹುವಾದಿಯು; ಅನ್ಯಾಯದಲ್ಲಿ ಪ್ರೀತಿಯುಳ್ಳವನು ೨ನೆಯ ಪಾದದಲ್ಲಿ ಹುಟ್ಟಿದವನು ಧನವಂತನು ದೀರ್ಘಾಯುಷ್ಯವುಳ್ಳವನು. ಬಹುಪುತ್ರವಂತನು ೩ನೇ ಪಾದದಲ್ಲಿ ಹುಟ್ಟಿದವನು, ಜ್ಞಾನಯುತನು. ಕಾರ್ಯಾಸಕ್ತನು ಸತ್ಯವಾದಿಯು, ವಿದ್ಯಾವಂತನು. ಮಂತ್ರಜ್ಞನು, ಯುಕ್ತಿಶಾಲಿಯು, ನಾಲ್ಕನೆಯ ಪಾದದಲ್ಲಿ ಹುಟ್ಟಿದವನು ಸ್ತ್ರೀಯರ ಮಾತು ಕೇಳುವವನು, ಕೆಟ್ಟರೋಗವುಳ್ಳವನು, ಗುರು-ಹಿರಿಯರಲ್ಲಿ ಭಕ್ತಿಯುಳ್ಳವನು ಆಗುವನು.

ಕಂಟಕಾದಿಗಳು-ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೬ ತಿಂಗಳೊಳಗಾಗಿ ಹುಣ್ಣಿನಿಂದ ಭಯ ೧೮ ತಿಂಗಳಲ್ಲಿ ಅಗ್ನಿ ಶಸ್ತ್ರಗಳಿಂದ ಭಯ. ೫-೭ ನೇ ವರ್ಷಗಳಲ್ಲಿ ಶೀತವಾತ ಜ್ವರಭಯ ೧೦-೧೨ನೇ ವರ್ಷಗಳಲ್ಲಿ ಜ್ವರಭಯ ಶಸ್ತ್ರ ಘಾಯ ೨೪-೨೬ ವರ್ಷಗಳಲ್ಲಿ ಎತ್ತರದ ಮೇಲಿಂದ ಬೀಳುವಿಕೆಯು ಪಶುಭಯ ೩೦ ನೇ ವರ್ಷದಲ್ಲಿ ಗುಲ್ಮರೋಗ ಪೀಡೆ ೬೦ ನೇ ವರ್ಷದಲ್ಲಿ ಅಪಮೃತ್ಯು ಭಯ ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದರೆ, ೭೫ ವರ್ಷ ಪರಮಾಯುಷ್ಯವು. ಈ ನಕ್ಷತ್ರದಲ್ಲಿ ಜ್ವರ ಬಂದರೆ ೨೦ ದಿವಸಗಳ ವರೆಗೆ ಕ್ರೂರವಾಗಿ ಕಾಡುವದು. ಇದಕ್ಕೆ ಯಮದೇವನ ಪ್ರತಿಮೆಯನ್ನು ಮಾಡಿಸಿ ಪೂಜಿಸಬೇಕು.

ಹುಬ್ಬ ನಕ್ಷತ್ರದಲ್ಲಿ— ಹುಟ್ಟಿದವನು, ಪ್ರಿಯ ವಾಕ್ಯುಳ್ಳವನು. ದಾನಶೀಲನು ಸಂಚಾರದಲ್ಲಿ ಅಪೇಕ್ಷೆಯುಳ್ಳವನು ಬಂಧು ಜನರಲ್ಲಿ ನಿಷ್ಠುರ ಹೊಂದುವವನು ಕೆಲವು ದಿವಸ ಪರದೇಶದಲ್ಲಿ ಉಪಜೀವನ ಮಾಡುವನು ರೂಪವಂತನು ಕರ್ಮಿಷ್ಠನು ಭಾತೃಜನರಲ್ಲಿ ಪ್ರೇಮವುಂಟು. ಚಂಚಲ ಕಣ್ಣುಳ್ಳವನು ಆಲಸ್ಯವಂತನು, ಮತ್ತು ಈ ನಕ್ಷತ್ರದ ೧ ನೇ ಪಾದದಲ್ಲಿ ಜನಿಸಿದವನು ಸರ್ವಗುಣ ಸಂಪನ್ನನು ಭೋಗವಂತನು ಬಹು ಪುತ್ರರುಳ್ಳವನು, ತ್ಯಾಗವಂತನು- ೨ನೆಯ ಪಾದದಲ್ಲಿ ಹುಟ್ಟಿದವನು ಪುರುಷತ್ವ ಕಡಿಮೆಯುಳ್ಳವನು ಖ್ಯಾತಿವಂತನು ಮನೋವ್ಯಸನವುಳ್ಳವನು ಸ್ತ್ರೀಯರಲ್ಲಿ ದ್ವೇಷವುಳ್ಳವನು ೩ ನೆಯ ಪಾದದಲ್ಲಿ ಹುಟ್ಟಿದವನು, ಬಂಧುಗಳಲ್ಲಿ ಪ್ರೀತಿಯುಳ್ಳವನು ಶಿಲ್ಪ

ಶಾಸ್ತ್ರವನ್ನು ಬಲ್ಲವನು, ಗಣಿತಜ್ಞನು, ದಾನವಂತನು, ೪ನೆಯ ಪಾದದಲ್ಲಿ ಹುಟ್ಟಿದವನು ದುಃಖವುಳ್ಳವನು ಕೆಟ್ಟ ಸ್ವಭಾವವುಳ್ಳವನು. ಆಗುವನು.

ಕಂಟಕಾದಿಗಳು–ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೬ ತಿಂಗಳಲ್ಲಿ ಒಂದು ಕ್ರೂರ ಕಂಟಕವುಂಟು ೨ನೆಯ ವರ್ಷದಲ್ಲಿ ಜ್ವರಭಯ ೩ನೆಯ ವರ್ಷದಲ್ಲಿ ಅಗ್ನಿಭಯ, ೫ನೆಯ ವರ್ಷದಲ್ಲಿ ಮಹಾಜ್ವರಭಯ ಅಥವಾ ಮೂತ್ರರೋಗ ೭ ನೆಯ ವರುಷದಲ್ಲಿ ರೋಗಪೀಡೆಯು ೯ ನೆಯ ವರುಷದಲ್ಲಿ ಆಯುಧ ವ್ರಣ ಭಯ, ೧೨ ನೆಯ ವರುಷದಲ್ಲಿ ಜ್ವರಭಯ ಜಲಗಂಡ, ನೀಚಜನರಿಂದ ಭಯ ೨೪ನೆಯವರ್ಷದಲ್ಲಿ ಉಗ್ರತರವಾದ ರೋಗಪೀಡೆ, ೫೦ ನೆಯ ವರುಷದಲ್ಲಿ ಅಪಮೃತ್ಯು ಇತ್ಯಾದಿ ಈ ಗಂಡಕಾಲಗಳನ್ನು ಕಳೆದುಳಿದರೆ ೭೬ ವರ್ಷ ಪರಮಾಯುಷ್ಯವು ಈ ನಕ್ಷತ್ರದಲ್ಲಿ ಜ್ವರಬಂದರೆ ೧ ತಿಂಗಳ ಕ್ರೂರವಾಗಿ ಕಾಡುವುದು ಇದಕ್ಕೆ ಭೂದೆ ವಶೆಯನ್ನು ಮಾಡಿ ಪೂಜಿಸಬೇಕು.

ಉತ್ತರಾ—ನಕ್ಷತ್ರದಲ್ಲಿ ಹುಟ್ಟಿದವನು ದಿವ್ಯಾಭರಣಗಳಿಂದ ಕೂಡಿದವನು ಉತ್ತಮ ವಾಹನವುಳ್ಳವನು ಸರ್ವ ಜನಪ್ರಿಯನು ವಿದ್ಯಾವಂತನು ಸಂಪಾದಿಸಲ್ಪಟ್ಟ ಧನವುಳ್ಳವನು ಭೋಗವಂತನು ಸಂತೋಷ ಚಿತ್ತನು ಕಾರ್ಯದಲ್ಲಿ ನಿಪುಣನು ಅಭಿಮಾನಿಯು ಧರ್ಮಿಷ್ಟನು. ಸುಖವಂತನು ಮರ್ಮಜ್ಞನು ಕಲಾಭಿಮಾನಿಯು ಸ್ತ್ರೀಯರಿಗೆ ವಶವಾಗುವವನು. ಉಷ್ಣರೋಗವುಳ್ಳವನು ಶರೀರದಲ್ಲಿ ಮತ್ಸ್ಯ ಅಂಕಿತವುಳ್ಳವನು ಒಂದನೇ ಪಾದದಲ್ಲಿ ಹುಟ್ಟಿದವನು ದಾನಗುಣವುಳ್ಳವರು ಧೈರ್ಯವಂತನು ರೋಗಿಷ್ಟನು ಪಿತೃಗಂಡ ೨ನೇ ಪಾದದಲ್ಲಿ ಹುಟ್ಟಿದವನು,ದರಿದ್ರನು, ಚಪಲಚಿತ್ತನು,ದಯಾದಾಕ್ಷಿಣ್ಯವುಳ್ಳವನು ಮೂರನೇ ಪಾದದಲ್ಲಿ ಹುಟ್ಟಿದವನು. ಡಾಂಬಿಕನು ಪಾಪಿಯು ಮತ್ಸರಬುದ್ಧಿಯವನು ಶೀಘ್ರಕೋಪಿಯು ವ್ಯಸನಿಯು ಅಪಕಾರಿಯು ನಾಲ್ಕನೇ ಪಾದದಲ್ಲಿ ಹುಟ್ಟಿದವನು ಆಚಾರವಂತನು ಸಾಹುಕಾರನು ಪರೋಪಕಾರಿಯು ಆಗುವನು.

ಕಂಟಕಾದಿಗಳು– ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೩ ನೇ ತಿಂಗಳಲ್ಲಿ ಜ್ವರಭಯ. ೧೦ ನೇ ತಿಂಗಳಲ್ಲಿ ಜ್ವರಗಂಡ ೫ನೇ ವರ್ಷದಲ್ಲಿ ಪಿತ್ತ ಜ್ವರ ಗಂಡ ೧೦ ವರ್ಷದಲ್ಲಿ ಶೀತ ಪಿತ್ತ ಜ್ವರಗಂಡ ಕೀಟಭಯ ೫೦ ನೇ ವರ್ಷದಲ್ಲಿ

ಕ್ರೂರ ಮೃಗ ಭಯ ೬೦ನೇ ವರ್ಷದಲ್ಲಿ ಅಪಮೃತ್ಯು ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದರೆ ೭೦ ವರ್ಷಪರಮಾಯುಷ್ಯವು, ಈ ನಕ್ಷತ್ರದಲ್ಲಿ ಜ್ವರ ಬಂದರೆ ೭ ದಿವಸ ಕ್ರೂರವಾಗಿ ಕಾಡುವದು ಇದಕ್ಕೆ ಆರ್ಯನೆಂಬ ದೇವತೆಯನ್ನು ಪೂಜಿಸಬೇಕು.

ಹಸ್ತ ನಕ್ಷತ್ರ– ದಲ್ಲಿ ಹುಟ್ಟಿದವನು ಸಮರ್ಥನು ಚೋರ ಬುದ್ಧಿಯುಳ್ಳವನು ದಯಾಶೂನ್ಯನು ಸ್ತ್ರೀ ಲೋಲನು ಪ್ರಮುಖನು ವಂಚಕನು, ಕೆಟ್ಟ ಮೊಳಕಾಲುಳ್ಳವನು, ಮರ್ಯಾದೆ ಯಿಲ್ಲದವನು ರಾಜಸ ಗುಣದವನು. ಶರೀರದಲ್ಲಿ ಮತ್ಸ್ಯರೇಖೆಯುಳ್ಳವನು ಶತ್ರುಗಳನ್ನು ಜಯಿಸುವವನು ಈ ನಕ್ಷತ್ರದ ೧ನೇ ಪಾದದಲ್ಲಿ ಹುಟ್ಟಿದವದು ಧನವನ್ನು ಕಳೆದುಕೊಳ್ಳುವನು ಬಲವಂತನು ಕಾರ್ಯದಲ್ಲಿ ನಿಪುಣನು ೨ನೇ ಪಾದದಲ್ಲಿ ಹುಟ್ಟಿದವನು ನಿರ್ಮಲ ದೇಹಿಯು ಮಂದ ಬುದ್ಧಿಯುಳ್ಳವನು ಶತ್ರುಗಳಿಲ್ಲದವನು ೩ನೇ ಪಾದದಲ್ಲಿ ಹುಟ್ಟಿದವನು ಬುದ್ಧಿವಂತನು ಕ್ರಯ ವಿಕ್ರಯದಲ್ಲಿ ನಿಪುಣನು ಕಾಮುಕನು ಚಂಚಲ ಮನಸ್ಸುಳ್ಳವನು ೪ನೇ ಪಾದದಲ್ಲಿ ಹುಟ್ಟಿದವನು ರಾಜಕಾರ್ಯದಲ್ಲಿ ನಿಪುಣನು ಸನ್ಮಾನಿಯು ಸ್ವಲ್ಪ ಕೋಪವುಳ್ಳವನು ಆಗುವನು.

ಕಂಟಕಾದಿಗಳು– ಈ ನಕ್ಷತ್ರದಲ್ಲಿ ಹುಟ್ಟಿದವನಿಗೆ ೧ನೇ ವರ್ಷದಲ್ಲಿ ಜ್ವರಗಂಡ ೩ನೇ ವರ್ಷದಲ್ಲಿ ಆಯುಧ ವ್ರಣ ಘಾಯ ೬-೭ನೇ ವರ್ಷದಲ್ಲಿ ಅಪಮೃತ್ಯು ೧೦–೧೨ನೇ ವರ್ಷದಲ್ಲಿ ಜ್ವರಭಯ ೨೨ನೇ ವರ್ಷದಲ್ಲಿ ಧನ ಭಯ ೩೦ನೇ ವರ್ಷದಲ್ಲಿ ಸರಕಾರದವರಿಂದ ಭಯ, ೪೪ ನೇ ವರ್ಷದಲ್ಲಿ ಕೆಟ್ಟ ಉಪದ್ರವದಿಂದ ಭಯ ೬೦ನೇ ವರ್ಷದಲ್ಲಿ ಅಪಮೃತ್ಯುಭಯ ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದರೆ ೭೪ ವರ್ಷ ಪರಮಾಯುಷ್ಯವು. ಈ ನಕ್ಷತ್ರದಲ್ಲಿ ಜ್ವರ ಬಂದರೆ ೧೧ ದಿವಸ ಕ್ರೂರವಾಗಿ ಕಾಡುವದು ಇದಕ್ಕೆ ಮೃತ್ಯುದೇವತೆಯ ಮೂರ್ತಿಯನ್ನು ಪೂಜಿಸಬೇಕು.

ಚಿತ್ತನಕ್ಷತ್ರ– ದಲ್ಲಿ ಹುಟ್ಟಿದವನು ಸಲಕ್ಷಣವಾದ ನೇತ್ರಗಳುಳ್ಳವನು. ಸುಂದರವಾದ ದೇಹವುಳ್ಳವನು, ನಾನಾ ವಿಧವಾದ ವಸ್ತ್ರಾಭರಣ ಭೂಷಿತನು, ಸ್ತ್ರೀ ಲೋಲನು ಭೋಗವಂತನು ಮೃದುಭಾಷಿಯು ದೀರ್ಘವಾದ ಕೂದಲುಗಳುಳ್ಳವನು. ದೀರ್ಘಬಾಹುಗಳುಳ್ಳವನು. ಭಾಗ್ಯವಂತನು ವಿದ್ಯಾವಂತನು ಬಹು

ಕಾಮಿಯು. ಈ ನಕ್ಷತ್ರದ ೧ ನೆಯ ಚರಣದಲ್ಲಿ ಹುಟ್ಟಿದವನು ಕ್ರೂರ ಸ್ವಭಾವ ವುಳ್ಳವನು ರೂಪವಂತನು ಪರಿಹಾಸಕನು ಚಪಲಚಿತ್ತನು ರಾಜರಲ್ಲಿ ಮರ್ಯಾದೆ ಯುಳ್ಳವನು ಧರ್ಮಿಷ್ಠನು ಪುತ್ರವಂತನು ೨ನೆಯ ಪಾದದಲ್ಲಿ ಹುಟ್ಟಿದವನು ಬುದ್ಧಿವಂತನು ಮೃದುಭಾಷಿಯು ಹೆಂಗಸರಲ್ಲಿ ಪ್ರೀತಿಯುಳ್ಳವನು ಸ್ವಲ್ಪ ಲೋಭಿಯು ೩ನೆಯ ಪಾದದಲ್ಲಿ ಹುಟ್ಟಿದವನು ಭಯವಿಲ್ಲದವನು ಕೀರ್ತಿವಂತನು ಪರಾಕ್ರಮ ಶಾಲಿಯು ಸ್ಥಿರವಾದ ಮನಸ್ಸುಳ್ಳವನು ೪ ನೆಯ ಪಾದದಲ್ಲಿ ಹುಟ್ಟಿ ದವನು ದರಿದ್ರ ಸ್ವಭಾವವುಳ್ಳವನು ಬಹು ವಾದಿಯು ವ್ಯಸನವುಳ್ಳವನು ಆಗು ವನು.

ಕಂಟಕಾದಿಗಳು– ಈ ನಕ್ಷತ್ರದ ೧–೨ನೇ ಪಾದದ ಸಂಧಿಯಲ್ಲಿ ಶಿಶ ವು ಹುಟ್ಟಿದರೆ ಪಿತೃಗಂಡವು. ೬ ತಿಂಗಳ ವರೆಗೆ ಶಿಶುವಿನ ಮುಖ ನೋಡಬಾರದು, ೧ ನೇ ವರ್ಷದಲ್ಲಿ ಶೀತರೋಗಭಯವು ೫ ನೇ ವರ್ಷದಲ್ಲಿ ಪಶು ಗಂಡವು ಅಗ್ನಿ ಭಯವು ೮ ನೇ ವರ್ಷದಲ್ಲಿ ಆಯುಧ ಭಯವು ೧೦ ನೇ ವರ್ಷದಲ್ಲಿ ವಾಹನ ಗಂಡವು. ೨೧ ನೇ ವರ್ಷದಲ್ಲಿ ಕ್ರೂರಕಂಟಕವು ೨೫ನೇ ವರ್ಷದಲ್ಲಿ ಮುಳ್ಳು, ಕಲ್ಲು ಮುಂತಾದವುಗಳಿಂದ ಭಯ ೫೦ನೇ ವರ್ಷದಲ್ಲಿ ಸನ್ನಿಪಾತ ಜ್ವರಭಯವು ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದರೆ ೮೦ ವರ್ಷ ಪರಮಾಯುಷ್ಯವು ಈ ನಕ್ಷತ್ರದಲ್ಲಿ ಜ್ವರ ಬಂದರೆ ೧೫ ದಿವಸ ಕ್ರೂರನಾಗಿ ಕಾಡುತ್ತದೆ. ಇದಕ್ಕೆ ಪಿತೃ ದೇವತೆಗೆ ಶಾಂತಿಯನ್ನು ಮಾಡಿಸಬೇಕು.

ಸ್ವಾತಿನಕ್ಷತ್ರ– ದಲ್ಲಿ ಹುಟ್ಟಿದವನು ದಯಾ ದಾಕ್ಷಿಣ್ಯವುಳ್ಳವನು, ಭೋಗವಂತನು ಧರ್ಮಿಷ್ಠನು ಧೈರ್ಯವಂತನು ಸಂಗೀತಾದಿ ವಿನೋದವುಳ್ಳ ವನು ಭಾಗ್ಯವಂತನು ಸಲಕ್ಷಣ ನೇತ್ರಗಳುಳ್ಳವನು. ದೀರ್ಘವಾದ ಶರೀರ ವುಳ್ಳವನುಕೀರ್ತಿವಂತನು ಗುರುಹಿರಿಯರಲ್ಲಿಯೂದೇವತಾ ಕಾರ್ಯಗಳಲ್ಲಿಯೂ ಭಕ್ತಿಯುಳ್ಳವನು, ಬಂಧು ಜನಗಳಲ್ಲಿ ಪ್ರೀತಿಯುಳ್ಳವನು ಸ್ವತಂತ್ರನು ಈ ನಕ್ಷತ್ರದ ೧ನೇ ಪಾದದಲ್ಲಿ ಹುಟ್ಟಿದವನು ಸರ್ವಜ್ಞ ಚಿತ್ತನು ವಾಕ್ಚಾತುರ್ಯ ವುಳ್ಳವನು ಧೈರ್ಯವಂತನು ೨ನೇ ಪಾದದಲ್ಲಿ ಹುಟ್ಟಿದವನು, ಕಪಟಿಯು ದುರಾಲೋಚನೆಯುಳ್ಳವನು. ೩ ನೇ ಪಾದದಲ್ಲಿ ಹುಟ್ಟಿದವನು ಶತ್ರುಗಳಲ್ಲಿ

ಹೆಚ್ಚಾಗಿ ದ್ವೇಷಮಾಡಿ ಧನ ನಾಶಮಾಡಿಕೊಳ್ಳುವವನು ಮೂರ್ಖ ಸ್ವಭಾವ ವುಳ್ಳವನು ಬಹು ಕೋಪಿಯು ೪ನೇ ಪಾದದಲ್ಲಿ ಹುಟ್ಟಿದವನು ಸರ್ವ ಜನ ಪ್ರಿಯನು ಗುರುದೇವತಾ ಪೂಜೆಯಲ್ಲಿ ಇಷ್ಟತೆಯುಳ್ಳವನು ಧನವಂತನು ರೋಷ ದಿಂದ ಕೂಡಿದವನು ಆಗುವನು.

ಕಂಟಕಾದಿಗಳು– ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೮ ನೇ ದಿನದಲ್ಲಿ ಪೀಡೆಯು ೪ ನೇ ವರ್ಷದಲ್ಲಿ ಜ್ವರ ಭಯವು ೮ನೇ ವರ್ಷದಲ್ಲಿ ರೋಗ ಪೀಡೆಯು ೧೨ ನೇ ವರ್ಷದಲ್ಲಿ ಅಪಮೃತ್ಯುವು ೩೦ನೇ ವರ್ಷದಲ್ಲಿ ಅಪಮೃತ್ಯುವು ೪೫ ವರ್ಷದಲ್ಲಿ ಅಪಮೃತ್ಯು ಭಯ ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದ ನಂತರ ೮೦ ವರ್ಷ ಪರಮಾಯುಷ್ಯವು ಈ ನಕ್ಷತ್ರದಲ್ಲಿ ಜ್ವರ ಬಂದರೆ ೧ ತಿಂಗಳವರೆಗೂ ಕ್ರೂರವಾಗಿ ಕಾಡುತ್ತದೆ. ಇದಕ್ಕೆ ಕೃಷ್ಣ ಪ್ರತಿಮೆಯನ್ನು ಮಾಡಿಸಿ ಶಾಂತಿ ಮಾಡಿಸಬೇಕು.

ವಿಶಾಖ ನಕ್ಷತ್ರ:–ದಲ್ಲಿ ಹುಟ್ಟಿದವನು ಅಸೂಯಾಪರನು, ಲೋಭಿಯು ಕಾಂತಿವಂತನು, ಮಾತಿನಲ್ಲಿ ಜಾಣನು, ಬಂಧುಗಳಲ್ಲಿ ಉಪಕಾರಿಯು, ಧನಾ ಢ್ಯನು, ಕೆಂಪಾದ ಕಣ್ಣುಳ್ಳವನು, ಸರ್ವಕಾರ್ಯಗಳಲ್ಲಿ ನಿಪುಣನು ಸ್ತ್ರೀಲೋ- ಲನು, ರೋಗಿಷ್ಠನು, ಮುಖದಲ್ಲಾಗಲಿ ಗುಹ್ಯಸ್ಥಾನದಲ್ಲಾಗಲಿ ತಿಲಕಾಕಾರ ವಾದ ಮತ್ಸ್ಯದಿಂದ ಕೂಡಿದವನು. ಈ ನಕ್ಷತ್ರದ ೧ ನೇ ಪಾದದಲ್ಲಿ ಹುಟ್ಟಿ ದವನು, ಧನವಂತನು ವಾದಿಯು, ರಕ್ತ ನೇತ್ರವುಳ್ಳವನು ೨ನೇ ಪಾದ ದಲ್ಲಿ ಹುಟ್ಟಿದವನು, ಸುಖವುಳ್ಳವನು ಸುಂದರವಾದ ಹೆಂಡತಿಯುಳ್ಳವನು, ಕಿವಿಶೂಲಿಯುಳ್ಳವನು ೩ ನೇ ಪಾದದಲ್ಲಿ ಹುಟ್ಟಿದವನು ದಾನಶೂರನು, ನಿಪುಣನು, ಅಂಡರೋಗವುಳ್ಳವನು. ೪ ನೇ ಪಾದದಲ್ಲಿ ಹುಟ್ಟಿದವನು, ಸ್ತ್ರೀ ಲೋಲನು ಶೀತ ರೋಗವುಳ್ಳವನು ಆಗುವನು.

ಕಂಟಕಾದಿಗಳು:– ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ನೇತ್ರರೋಗವು. ೧೩ ನೇ ವರ್ಷದಲ್ಲಿ ಪೈತ್ಯಜ್ವರ ಭಯವು. ೩೩ನೇ ವರ್ಷದಲ್ಲಿ ಆಯುಧ ದಿಂದ ಬಾಧೆಯು, ಹೊಟ್ಟೆನೋವಿನಿಂದ ಅಪಮೃತ್ಯು ಭಯ ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದರೆ ೭೦ ವರ್ಷ ಪರಮಾಯುಷ್ಯವು ಈ ನಕ್ಷತ್ರದಲ್ಲಿ ಜ್ವರ

ಬಂದರೆ ೧೫ ದಿವಸ ಕ್ರೂರವಾಗಿ ಕಾಡುತ್ತದೆ ಇದಕ್ಕೆ ಅಗ್ನಿ ದೇವತೆಯನ್ನು ಪೂಜಿಸಬೇಕು.

ಅನುರಾಧ ನಕ್ಷತ್ರ– ದಲ್ಲಿ ಹುಟ್ಟಿದವನು, ಪರದೇಶವಾಸಿಯು ಹಸಿವೆಯನ್ನು ತಡೆಯಲಾರದವನು. ಪ್ರಯಾಣದಲ್ಲಿ ಅಪೇಕ್ಷೆಯುಳ್ಳವನು, ಅನೇಕ ಜನ ಸ್ನೇಹಿತರುಳ್ಳವನು ಅಲ್ಪ ಸಂತಾನವುಳ್ಳವನು ಭೋಗವಂತನು ಅನ್ನದಾನ ಪ್ರಿಯನು ರಾಜ ಪೂಜ್ಯನು, ವಿದ್ಯಾವಂತನು, ಪರೋಪಕಾರಿಯು ಬುದ್ಧಿವಂತನು, ಸ್ಥಿರವಾದ ಧನವುಳ್ಳವನು, ಈ ನಕ್ಷತ್ರದ ೧ ನೇ ಪಾದದಲ್ಲಿ ಹುಟ್ಟಿದವನು, ವಾಕ್ಚಾತುರ್ಯವುಳ್ಳವನು, ನೀತಿವಂತನು, ಮಂತ್ರಶೀಲನು ೨ ನೇ ಪಾದದಲ್ಲಿ ಹುಟ್ಟಿದವನು, ಪುರುಷತ್ವ ಕಡಿಮೆಯುಳ್ಳವನು ಸಂಗೀತದಲ್ಲಿ ಅಪೇಕ್ಷೆಯುಳ್ಳವನು. ೩ ನೇ ಪಾದದಲ್ಲಿ ಹುಟ್ಟಿದವನು. ಅನುಕೂಲಳಾದ ಹೆಂಡತಿಯುಳ್ಳವನು. ಉತ್ತಮವಾದ ವಾಹನವುಳ್ಳವನು. ೪ ನೇ ಪಾದದಲ್ಲಿ ಹುಟ್ಟಿದವನು ಅನಾಚಾರವುಳ್ಳವನು. ಕೆಟ್ಟ ಮನಸ್ಸುಳ್ಳವನು ಕುತ್ಸಿತನು. ಪರರಿಗೆ ದ್ರೋಹ ಮಾಡುವವನು ಆಗುವನು.

ಕಂಟಕಾದಿಗಳು— ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೬ ತಿಂಗಳಲ್ಲಿ ಜ್ವರ ಭಯ, ೬ ನೇ ವರ್ಷದಲ್ಲಿ ಪಶು ಭಯ ೧೬ ನೇ ವರ್ಷದಲ್ಲಿ ಪಿತ್ಥ ಜ್ವರ ಭಯ. ೧೭ನೇ ವರ್ಷದಲ್ಲಿ ಗುಲ್ಮರೋಗ ೬೪ ನೇ ವರ್ಷದಲ್ಲಿ ಅಪಮೃತ್ಯು ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದರೆ ೮೦ ವರ್ಷ ಪರಮಾಯುವು. ಈ ನಕ್ಷತ್ರದಲ್ಲಿ ಜ್ವರ ಬಂದರೆ ಒಂದು ತಿಂಗಳು ಕ್ರೂರವಾಗಿ ಕಾಡುತ್ತದೆ, ಇದಕ್ಕೆ ಮಿತ್ರದೇವತೆಯನ್ನು ಪೂಜಿಸಬೇಕು.

ಜ್ಯೇಷ್ಠಾ ನಕ್ಷತ್ರ–ದಲ್ಲಿ ಹುಟ್ಟಿದವನು ಸ್ನೇಹಿತರಿಲ್ಲದವನು. ಸಂತೋಷ ಚಿತ್ತನು. ಧರ್ಮಚಿತ್ತನು. ಬಹಳ ಸಿಟ್ಟುಳ್ಳವನು. ಬಹು ಪುತ್ರರುಳ್ಳವನು ವಿದ್ಯಾವಂತನು, ಶತೃವೃದ್ಧಿಯುಳ್ಳವನು, ಶಾಮಲ ದೇಹವುಳ್ಳವನು, ಸತ್ಯವಾದಿಯು, ದೃಢವಾದ ಮನಸ್ಸುಳ್ಳವನು ಸ್ತ್ರೀಲೋಲನು ದೀರ್ಘವಾದ ನಾಶಿಕವುಳ್ಳವನು, ಹೊಟ್ಟೆಯ ಮೇಲೆ ತಿಲಕಾಕಾರವಾದ ಮತ್ಸ್ಯವುಳ್ಳವನು, ಈ ನಕ್ಷತ್ರದ ೧ ನೇ ಪಾದದಲ್ಲಿ ಹುಟ್ಟಿದವನು ಬರೆಯುವದರಲ್ಲಿ ನಿಪುಣನು ಗರ್ವಿಷ್ಠನು ೨ ನೇ ಪಾದದಲ್ಲಿ ಹುಟ್ಟಿದವನು, ರೋಗಿಷ್ಠನು

ಂದ ಬುದ್ಧಿಯುಳ್ಳವನು, ನೀಚಕಾರ್ಯಗಳಲ್ಲಿ ಆಸಕ್ತಿಯುಳ್ಳವನು ೩ ನೇ ಾದದಲ್ಲಿ ಹುಟ್ಟಿದವನು ಪಾಪಿಷ್ಠನು, ದುರಾಲೋಚನೆಯುಳ್ಳವನು, ಮಂದ ೃಷ್ಟಿಯುಳ್ಳವನು ೪ನೇ ಪಾದದಲ್ಲಿ ಹುಟ್ಟಿದವನು. ಶಾಸ್ತ್ರಜ್ಞನು, ದೇವತಾ ಾರ್ಯಗಳಲ್ಲಿ ಇಷ್ಟವುಳ್ಳವನು ಆಗುವನು.

ಕಂಟಕಾದಿಗಳು— ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೩ ನೇ ವರ್ಷ ಲ್ಲಿ ಜ್ವರಗಂಡವು. ೯ನೇ ವರ್ಷದಲ್ಲಿ ಪಶುಗಂಡವು, ೧೬ನೇ ವರ್ಷದಲ್ಲಿ ಅಗ್ನಿ ಯವು. ೨೦ನೇ ವರ್ಷದಲ್ಲಿ ಅಪಮೃತ್ಯು ಭಯ ೨೫ ನೇ ವರ್ಷದಲ್ಲಿ ಗುಲ್ಮ ೋಗ ೪೫ ನೇ ವರ್ಷದಲ್ಲಿ ಅಪಮೃತ್ಯು, ಇತ್ಯಾದಿ ಗಂಡ ಕಾಲಗಳನ್ನು ಿದುಳಿದರೆ ೮೦ ವರ್ಷ ಪರಮಾಯುಷ್ಯವು.

ಈ ನಕ್ಷತ್ರದಲ್ಲಿ ಜ್ವರ ಬಂದರೆ ೧ ತಿಂಗಳು ಕ್ರೂರವಾಗಿ ಕಾಡುತ್ತದೆ. ದಕ್ಕೆ ಇಂದ್ರದೇವತೆಯ ಶಾಂತಿಯನ್ನು ಮಾಡಿಸಬೇಕು.

ಮೂಲಾ ನಕ್ಷತ್ರ— ದಲ್ಲಿ ಹುಟ್ಟಿದವನು ಧನವಂತನು, ಸುಖವಂತನು. ರವಾದ ಮನಸ್ಸುಳ್ಳವನು, ಬಹುಮಾನಿಯು ಭೋಗವಂತನು ಬಂಧು ಜನ ್ರಯನು ಚೋರ ಗುಣವುಳ್ಳವನು ರಕ್ತವರ್ಣವುಳ್ಳವನು. ಬಹುಕಾಮಿಯು, ೋಗಿಷ್ಠನು, ಸ್ತ್ರೀ ಲೋಲನು, ಈ ನಕ್ಷತ್ರದ ೧ ನೇ ಪಾದದಲ್ಲಿ ಹುಟ್ಟಿದ ನು ಪಿತೃಗಂಡವು ಮೂಲ ರೋಗವು ದರಿದ್ರ ಸ್ವಭಾವವುಳ್ಳವನು. ಸೋದರ ಾವನಿಗೆ ಅರಿಷ್ಟವು ೨ನೇ ಪಾದದಲ್ಲಿ ಹುಟ್ಟಿದವನು ಮಾತ್ರಾರಿಷ್ಟವುಳ್ಳವನು. ಾದಾಕ್ಷಿಣ್ಯವುಳ್ಳವನು. ಹಾಲು-ಬೆಲ್ಲ ಮುಂತಾದ ಮಧುರ ಆಹಾರಗಳಲ್ಲಿ ್ರೀತಿಯುಳ್ಳವನು ಉತ್ತಮವಾಹನವುಳ್ಳವನು. ೩ನೇ ಪಾದದಲ್ಲಿ ಹುಟ್ಟಿದವನು ಾಕ್ಚಾತುರ್ಯವುಳ್ಳವನು ವಿದ್ಯಾವಂತನು. ಧನವಂತನು ಜ್ಯೋತಿಷ್ಯವನ್ನು ಲ್ಲವನು, ೪ನೇ ಪಾದದಲ್ಲಿ ಹುಟ್ಟಿದವನು, ರಾಜಕಾರಣಿಯು ಜನರಲ್ಲಿ ರ್ಯಾದೆಯುಳ್ಳವನು, ಅನೇಕ ಜನರಲ್ಲಿ ಸ್ನೇಹವುಳ್ಳವನು ಪರೋಪಕಾರಿಯು ಹುಕಾಮಿಯು ಕ್ಷಯರೋಗವುಳ್ಳವನು. ಹೆಂಗಸರ ಮಾತು ಕೇಳುವವನು ೃದು ಭಾಷೆಯುಳ್ಳವನು ಭೋಗಭಾಗ್ಯವುಳ್ಳವನು, ಆಗುವನು.

ಕಂಟಕಾದಿಗಳು— ಈ ನಕ್ಷತ್ರದ ಆದಿಯಲ್ಲಿ ೨ ಘಳಿಗೆ ಅಭುಕ್ತ ಪಕಾಲವು ಇದರಲ್ಲಿ ಹುಟ್ಟಿದ ಶಿಶುವು ಬದುಕುವದು ಪ್ರಯಾಸವು ಅಥವಾ ುಕಿದರೆ ಪಾಪಿಷ್ಠನಾಗಿಯೂ ತಂಟೆಖೋರನಾಗಿಯೂ, ಪ್ರಬಲ ಸ್ಥಿತಿಗೆ ಬರು

ತ್ತಾನೆ ೨-೩ ವರ್ಷಗಳಲ್ಲಿ ಜ್ವರಗಂಡ ೨೦ ವರ್ಷಗಳಲ್ಲಿ ಪಿತ್ತಜ್ವರ, ೩೦ ನೇ ವರ್ಷದಲ್ಲಿ ಶೀತಜ್ವರ ೫೦ ನೇ ವರ್ಷದಲ್ಲಿ ಶಸ್ತ್ರಭಯ ೬೦ ನೇ ವರ್ಷದಲ್ಲಿ ಅಪಮೃತ್ಯು ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದರೆ ೮೦ ವರ್ಷ ಪರಮಾಯುಷ್ಯವು

ಈ ನಕ್ಷತ್ರದಲ್ಲಿ ಜ್ವರಬಂದರೆ ೯ ದಿವಸ ಕ್ರೂರವಾಗಿ ಕಾಡುತ್ತದೆ ಇದಕ್ಕೆ ರಾಕ್ಷಸ ದೇವತೆಗಳಿಗೆ ಶಾಂತಿಯನ್ನು ಮಾಡಿಸಬೇಕು.

ಪೂರ್ವಾಷಾಢ ನಕ್ಷತ್ರ–ದಲ್ಲಿ ಹುಟ್ಟಿದವನು ಒಳ್ಳೇ ಗರ್ವಿಷ್ಠನು ಒಳ್ಳೇ ಸ್ನೇಹಿತರುಳ್ಳವನು ಬುದ್ಧಿವಂತನು, ಅಲ್ಪ ಸುಖವುಳ್ಳವನು. ಧೈರ್ಯಶಾಲಿಯು, ಸದೃಢವಾದ ದೇಹವುಳ್ಳವನು, ಈ ನಕ್ಷತ್ರದ ೧ನೇ ಪಾದದಲ್ಲಿ ಹುಟ್ಟಿದವನು, ಅಲ್ಪ ಸುಖವುಳ್ಳವನು ಧೈರ್ಯ ಶಾಲಿಯು. ರಕ್ತನೇತ್ರಗಳುಳ್ಳವನು, ೨ನೇ ಪಾದದಲ್ಲಿ ಹುಟ್ಟಿದವನು, ಗುಣಗ್ರಹಣ ಮಾಡುವವನು, ವಾಕ್ಚಾತುರ್ಯವುಳ್ಳವನು, ಚಪಲಚಿತ್ತನು, ಆಚಾರಶೀಲನು ಮೃದುಭಾಷಿಯು. ೩ನೇ ಪಾದದಲ್ಲಿ ಹುಟ್ಟಿದವನು, ಭಾಗ್ಯವಂತನು ದಯಾ ದಾಕ್ಷಿಣ್ಯವುಳ್ಳವನು ೪ ನೇ ಪಾದದಲ್ಲಿ ಹುಟ್ಟಿದವನು ಕಠಿಣ ಹೃದಯವುಳ್ಳವನು, ಸುಳ್ಳು ಹೇಳುವವನು ಪಾಪ ಕಾರ್ಯಗಳಲ್ಲಿ ಇಷ್ಟಕೆಯುಳ್ಳವನು, ಆಗುವನು.

ಕಂಟಕಾದಿಗಳು— ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ಒಂದು ತಿಂಗಳಲ್ಲಿ ಜ್ವರ ಭಯ ೬ ತಿಂಗಳಲ್ಲಿ ಶೀತ ಜ್ವರ ಭಯ ೧೨-೧೬ನೇ ವರ್ಷಗಳಲ್ಲಿ ಜಲಗಂಡ ೩೦ನೇ ವರ್ಷದಲ್ಲಿ ಶೀತಜ್ವರ ಬಾಧೆ. ೬೦ ನೇ ವರ್ಷದಲ್ಲಿ ಅಪಮೃತ್ಯು ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದರೆ ೮೦ ವರ್ಷ ಪರಮಾಯುಷ್ಯವು ಈ ನಕ್ಷತ್ರದಲ್ಲಿ ಜ್ವರ ಬಂದರೆ ೧ ತಿಂಗಳು ಕ್ರೂರವಾಗಿ ಕಾಡುವದು. ಇದಕ್ಕೆ ಅಪ್ ದೇವತೆಗೆ ಶಾಂತಿಯನ್ನು ಮಾಡಿಸಬೇಕು.

ಉತ್ತರಾಷಾಢ ನಕ್ಷತ್ರ– ದಲ್ಲಿ ಹುಟ್ಟಿದವನು ಪ್ರಿಯ ಗುಣವುಳ್ಳವನು ಧರ್ಮವಂತನು ಸರ್ವ ಜನಪ್ರಿಯನು. ಬಹು ಜನ ಸ್ನೇಹಿತರುಳ್ಳವನು ಶುಭವಂತನು ಹಾಸ್ಯಪ್ರಿಯನು ಪರೋಪಕಾರಿಯು ಅತಿಥಿಗಳನ್ನು ಸನ್ಮಾನಿಸುವವನು ಬಹು ಪುತ್ರವಂತನು. ದೀರ್ಘನಾಶಿಕವುಳ್ಳವನು ಧೈರ್ಯಶಾಲಿಯು ವಾಕ್ಚಾತುರ್ಯವುಳ್ಳವನು ಗುಹ್ಯಸ್ಥಾನದಲ್ಲಿ ತಿಲಕಾಕಾರವಾದ ಮತ್ಸ್ಯಾಂಕಿತವುಳ್ಳವನು ಈ ನಕ್ಷತ್ರದ ೧ನೇ ಪಾದದಲ್ಲಿ ಹುಟ್ಟಿದವನು- ಶಾಸ್ತ್ರಜ್ಞನು ಬುದ್ಧಿವಂತನು ಗುರುದೇವತಾ ಕಾರ್ಯಗಳಲ್ಲಿಯೂ ಆಚಾರದಲ್ಲಿಯೂ ಇಷ್ಟತೆ

ಯುಳ್ಳವನು ೨ ನೇ ಪಾದದಲ್ಲಿ ಹುಟ್ಟಿದವನು ಶೂದ್ರ ಜನರಲ್ಲಿ ಪ್ರೀತಿಯುಳ್ಳವನು. ಪಾಪ ಕಾರ್ಯಮೂಲಕವಾಗಿ ಧನವನ್ನು ಸಂಪಾದಿಸುವವನು. ೩ನೇ ಪಾದದಲ್ಲಿ ಹುಟ್ಟಿದವನು ಸದಾರೋಗಿಯು ಅಲ್ಪಸಂತೋಷವುಳ್ಳವನು ಕ್ರೂರ ಸ್ವಭಾವವುಳ್ಳವನು. ೪ನೇ ಪಾದದಲ್ಲಿ ಹುಟ್ಟಿದವನು ಉತ್ಸಾಹವುಳ್ಳವನು, ಆಚಾರ ನಿಷ್ಠನು ಆಗುವನು.

ಕಂಟಕಾದಿಗಳು- ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೧೨ ನೇ ದಿವಸದಲ್ಲಿ ಜ್ವರಭಯ ೫ನೇ ವರ್ಷದಲ್ಲಿ ಜ್ವರದಿಂದಲೂ ಅಗ್ನಿಯಿಂದಲೂ ಅಥವಾ ಶಸ್ತ್ರಘಾಯದಿಂದಲೂ ದೇಹಬಾಧೆಯು ಜರುಗುತ್ತದೆ ೨೮ ನೇ ವರ್ಷದಲ್ಲಿ ಮಹಾ ವ್ಯಾಧಿಯು ಅಥವಾ ಆಯುಧ ಘಾಯವು ಜಲಗಂಡವು. ೪೦ನೇ ವರ್ಷದಲ್ಲಿ ವಿಷಕಂಟಕ ಭಯವು. ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದರೆ ೦ ವರ್ಷ ಪರಮಾಯುವು ಈ ನಕ್ಷತ್ರದಲ್ಲಿ ಜ್ವರ ಬಂದರೆ ೧ ತಿಂಗಳು ಕ್ರೂರವಾಗಿ ಕಾಡುತ್ತದೆ ಇದಕ್ಕೆ ವಿಶ್ವೇದೇವತೆಗಳಿಗೆ ಶಾಂತಿಯನ್ನು ಮಾಡಿಸಬೇಕು.

ಶ್ರವಣ ನಕ್ಷತ್ರ- ದಲ್ಲಿ ಹುಟ್ಟಿದವನು ಸಂಪತ್ತುಳ್ಳವನು ವಿದ್ಯಾವಂತನು. ಧರ್ಮಿಷ್ಠಳಾದ ಹೆಂಡತಿಯುಳ್ಳವನು, ಧನವಂತನು ಪ್ರಖ್ಯಾತಿಯಿಂದ ಕೂಡಿದವನು ಪರಸ್ತ್ರೀಯರಲ್ಲಿ ಅಪೇಕ್ಷೆಯುಳ್ಳವನು. ವಾಚಾಲನು ಪರದೇಶದಲ್ಲಿ ತಿರುಗತಕ್ಕವನು ಸುಗಂಧಪರಿಮಳಾದಿ ವಸ್ತುಗಳಲ್ಲಿ ಅಪೇಕ್ಷೆಯುಳ್ಳವನು ಸ್ಥೂಲ ದೇಹವುಳ್ಳವನು. ಉದಾರಶೀಲನು ವಿವೇಕಶಾಲಿಯು ಚಪಲಚಿತ್ತನು ಬಂಧು ಜನರಲ್ಲಿ ಶ್ರೇಷ್ಠನೆನಿಸಿಕೊಳ್ಳತಕ್ಕವನು. ಗುಹ್ಯಸ್ಥಾನದಲ್ಲಿ ತಿಲಕಾಕಾರವಾದ ಮತ್ಸ್ಯಾಂಕಿತವುಳ್ಳವನು ಈ ನಕ್ಷತ್ರದ ೧ನೇ ಪಾದದಲ್ಲಿ ಹುಟ್ಟಿದವನು ಗುಲ್ಮರೋಗವುಳ್ಳವನು ಪುತ್ರಶೋಕವುಳ್ಳವನು ೨ ನೇ ಪಾದದಲ್ಲಿ ಹುಟ್ಟಿದವನು ಕಾಮುಕನು ಬಹುಜನ ಸೇವಕರುಳ್ಳವನು ತಂತ್ರವಾದಿಯು ೩ನೇ ಪಾದದಲ್ಲಿ ಹುಟ್ಟಿದವನು. ಕುಶಲಮತಿಯು ಕಲಹಪ್ರಿಯನು ಉದಾರಗುಣವುಳ್ಳವನು ಬರೆಯುವದರಲ್ಲಿ ಸಮರ್ಥನು ೪ನೇ ಪಾದದಲ್ಲಿ ಹುಟ್ಟಿದವನು ಕ್ರಯ ವಿಕ್ರಯದಲ್ಲಿ ನಿಪುಣನು ಧಾರ್ಮಿಕನು ದೀರ್ಘನಾಸಿಕವುಳ್ಳವನು ಆಗುವನು.

ಕಂಟಕಾದಿಗಳು- ಈ ನಕ್ಷತ್ರದಲ್ಲಿ ಹುಟ್ಟಿದವನಿಗೆ ೭ನೇ ವರ್ಷದಲ್ಲಿ ಜ್ವರಗಂಡ ೩ನೇ ವರ್ಷದಲ್ಲಿ ಅಕಸ್ಮಾತ್ ರೋಗಪೀಡೆಯು ವಿಷಜಂತು ಭಯ

೫ನೇವರ್ಷದಲ್ಲಿ ಅಗ್ನಿಭಯ ೭ನೇ ವರ್ಷದಲ್ಲಿ ಶಸ್ತ್ರಭಯು. ೧೩ನೇ ವರ್ಷದಲ್ಲಿ ಜ್ವರ ಭಯು ೧೫ನೇ ವರ್ಷದಲ್ಲಿ ಮಹಾರೋಗ ಭಯ ೩೦ನೇ ವರ್ಷದಲ್ಲಿ ಮಹಾ ಕಂಟಕವು ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದರೆ ೭೮ ವರ್ಷ ಪರಮಾಯುವು. ಈ ನಕ್ಷತ್ರದಲ್ಲಿ ಜ್ವರ ಬಂದರೆ ೧೧ ದಿವಸ ಕ್ರೂರವಾಗಿ ಕಾಡುತ್ತದೆ. ಇದಕ್ಕೆ ವಿಷ್ಣುದೇವತೆಯನ್ನು ಪೂಜಿಸಬೇಕು.

ಧನಿಷ್ಟನಕ್ಷತ್ರ- ದಲ್ಲಿ ಹುಟ್ಟಿದವನು ಧನವಂತನು ಶೂರನು ಸಂಗೀತ ಪ್ರಿಯನು, ಬ್ರಹ್ಮದೇವರ್ಷಿಯು, ತೇಜಸ್ವಿಯು ಅಸತ್ಯವಾದಿಯು, ದೀರ್ಘಪಾದ ಗಳುಳ್ಳವನು ಈ ನಕ್ಷತ್ರದ ೧ನೇ ಪಾದದಲ್ಲಿ ಹುಟ್ಟಿದವನು. ರಾಜಮಾನ್ಯನು ದೊಡ್ಡವರಿಂದ ಸುಖ ಪಡುವವನು ವ್ಯಾಪಾರದಲ್ಲಿ ಸಮರ್ಥನು ವಾಚಾಲನು ವಿನಯ ಸಂಪನ್ನನು ವಿದ್ಯಾವಂತನು, ೨-೩ ನೇ ಪಾದಗಳಲ್ಲಿ ಹುಟ್ಟಿದವನು ಗುಣವಂತನು ಸ್ತ್ರೀಲೋಲನು. ಸಂಗೀತಪ್ರಿಯನು. ೪ ನೇ ಪಾದದಲ್ಲಿ ಹುಟ್ಟಿ ದವನು ಕ್ರೂರಸ್ವಭಾವವುಳ್ಳವನು, ಪಾಪ ಕಾರ್ಯಗಳನ್ನು ಮಾಡುವವನು ಕಲಹಪ್ರಿಯನು ಆಗುವನು.

ಕಂಟಕಾದಿಗಳು- ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೧೮ನೇ ವರ್ಷದಲ್ಲಿ ವಾತ ಜ್ವರಬಾಧೆ, ೨೫ನೇ ವರ್ಷದಲ್ಲಿ ಮೇಹರೋಗ. ೪೦ನೇ ವರ್ಷದಲ್ಲಿ ಅಪ ಮೃತ್ಯುಭಯ ೫೦ನೇ ವರ್ಷದಲ್ಲಿ ಜಲಗಂಡ ೬೦ನೇ ವರ್ಷದಲ್ಲಿ ಅಪಮೃತ್ಯು. ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದರೆ ೮೦ ವರ್ಷ ಪರಮಾಯುವು. ಈ ಧನಿಷ್ಠಾ ಮೊದಲು ೫ ನಕ್ಷತ್ರ ಅಂದರೆ ಶತತಾರಾ-ಪೂರ್ವಾಭಾದ್ರಪದ ಉತ್ತರಾ ಭಾದ್ರಪದ, ರೇವತಿ, ಈ ನಕ್ಷತ್ರಗಳಲ್ಲಿ ಮೃತವಾದರೆ ಮರಳಿಯೂ ಮೃತ ಪಡ ಬೇಕಾಗಿ ಘಟಿಸುವದು. ಅದ್ದರಿಂದ ಆ ಮನೆಯನ್ನು ೬ ತಿಂಗಳು ಬಿಡಬೇಕು. ಈ ನಕ್ಷತ್ರದಲ್ಲಿ ಜ್ವರ ಬಂದರೆ ೧೫ ದಿವಸ ಕ್ರೂರವಾಗಿ ಕಾಡುತ್ತದೆ. ಇದಕ್ಕೆ ವಸುದೇವತೆಯ ಶಾಂತಿಮಾಡಿಸಬೇಕು.

ಶತತಾರಾನಕ್ಷತ್ರ- ದಲ್ಲಿ ಹುಟ್ಟಿದವನು ಸ್ಪಷ್ಟ ಮಾತಾಡುವವನು. ಸಂಗೀತಪ್ರಿಯನು. ಸ್ತ್ರೀಲೋಲನು ಜೂಜುಗಾರನು ಬಂಧು ಜನರಲ್ಲಿ ಉಪ ಕಾರಿಯು. ಸರ್ವದೇಶಗಳಲ್ಲಿ ಮರ್ಯಾದೆಯುಳ್ಳವನು. ಬಹು ಪುತ್ರವಂತನು

ರಕೆ ರೋಗವುಳ್ಳವನು. ದೀರ್ಘನಾಸಿಕವುಳ್ಳವನು. ಎಡಭಾಗದಲ್ಲಿ ತಿಲಕಾಕಾರ ವಾದ ಮತ್ಸ್ಯಾಂಕಿತವುಳ್ಳವನು. ಈ ನಕ್ಷತ್ರದ ೧ನೇ ಪಾದದಲ್ಲಿ ಹುಟ್ಟಿದವನು ದೇವಬ್ರಾಹ್ಮಣರಲ್ಲಿ ಭಕ್ತಿಯುಳ್ಳವನು ಸತ್ಯವಾದಿಯು ಸ್ಥಿರ ಬುದ್ಧಿ ಯುಳ್ಳ ವನು. ಅಭಿಮಾನಿಯು ಅನೇಕ ಜನ ಸ್ನೇಹಿತರುಳ್ಳವನು. ೨ ನೇ ಪಾದದಲ್ಲಿ ಹುಟ್ಟಿದವನು ಪಾಪಕಾರ್ಯಗಳಲ್ಲಿ ಆಸಕ್ತಿಯುಳ್ಳವನು. ೩ ನೇ ಪಾದದಲ್ಲಿ ಹುಟ್ಟಿದವನು ಮಂದಬುದ್ಧಿಯುಳ್ಳವನು. ಪುತ್ರವಂತನು. ಧರ್ಮಕಾರ್ಯಾ ಸಕ್ತನು. ೪ನೇ ಪಾದದಲ್ಲಿ ಹುಟ್ಟಿದವನು ವಿದ್ಯಾವಂತನು. ದೀಕ್ಷಾ ಮುಂತಾದ ಕಾರ್ಯಗಳಲ್ಲಿ ಅಪೇಕ್ಷೆಯುಳ್ಳವನು, ಮತಾಭಿಮಾನಿಯು, ಆಗುವನು.

ಕಂಟಕಾದಿಗಳು– ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೩ನೇ ವರ್ಷದಲ್ಲಿ ಜ್ವರ ಗಂಡ ೨೪ ನೇ ವರ್ಷದಲ್ಲಿ ರೋಗಪೀಡೆಯು ಶತ್ರುಭಯ, ೪೦ ನೇ ವರ್ಷದಲ್ಲಿ ಅಗ್ನಿ ಮಾಂದ್ಯ ಜ್ವರ ಭಯ, ೫೩ ನೇ ವರ್ಷದಲ್ಲಿ ಅಪಮೃತ್ಯು, ೬೩ ನೇ ವರ್ಷದಲ್ಲಿ ಕ್ರೂರಗಂಡವು ೮೦ ವರ್ಷ ಪರಮಾಯುಷ್ಯವು. ಈ ನಕ್ಷತ್ರದಲ್ಲಿ ಜ್ವರ ಬಂದರೆ ೧೦ ದಿವಸ ಕ್ರೂರವಾಗಿ ಕಾಡುತ್ತದೆ. ಇದಕ್ಕೆ ರುದ್ರಪೂಜಾ ಮಾಡಿ ಸಬೇಕು.

ಪೂರ್ವಭಾದ್ರಪದ ನಕ್ಷತ್ರ– ದಲ್ಲಿ ಹುಟ್ಟಿದವನು ಮನೋದುಃಖವು ಳ್ಳವನು, ಬಹುಲೋಭಿಯು ಬಹುಪುತ್ರರುಳ್ಳವನು, ಬಲ್ಲಿದನು, ೧ ನೇ ಪಾದ ದಲ್ಲಿ ಹುಟ್ಟಿದವನು ಸರ್ವಜನರಲ್ಲಿ ದ್ವೇಷಿಯಾಗುತ್ತಾನೆ, ಹಟಮಾರಿಯು, ೨ ನೇ ಪಾದದಲ್ಲಿ ಹುಟ್ಟಿದವನು ಪಾಪಕಾರ್ಯಾಸಕ್ತನು, ನಿಂದಕನು. ೩ ನೇ ಪಾದದಲ್ಲಿ ಹುಟ್ಟಿದವನು, ದರಿದ್ರನು. ೪ ನೇ ಪಾದದಲ್ಲಿ ಹುಟ್ಟಿದವನು ಸತಿ ಪ್ರಿಯನು. ಲೋಕಪೂಜ್ಯನು, ಧನವಂತನು, ಮಾತೃಭಕ್ತಿಯುಳ್ಳವನು. ದೀರ್ಘದೇಹ ಹಾಗೂ ಉದ್ದವಾದ ನಾಲಿಗೆಯುಳ್ಳವನು, ಕಿವಿಶೂಲಿಯುಳ್ಳ ವನು. ಮುಖದಲ್ಲಾಗಲಿ ಗುಹ್ಯದಲ್ಲಿಯಾಗಲಿ ತಿಲಕಾಕಾರವಾದ ಮತ್ಸ್ಯ ವುಳ್ಳವನು ಆಗುವನು.

ಕಂಟಕಾದಿಗಳು— ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೧೨ ನೇ ದಿವಸದಲ್ಲಿ ಜ್ವರಭಯ, ೩ ನೇ ವರ್ಷದಲ್ಲಿ ಜ್ವರಗಂಡ, ೪ ನೇ ವರ್ಷದಲ್ಲಿ ಜಲಭಯ, ೮–೨೮ ನೇ ವರ್ಷದಲ್ಲಿ ಅಪಮೃತ್ಯು. ಇತ್ಯಾದಿ ಗಂಡ ಕಾಲಗಳನ್ನು ಕಳೆದುಳಿದರೆ ೮೦ ವರ್ಷ ಪರಮಾಯುಷ್ಯವು. ಈ ನಕ್ಷತ್ರ

ದಲ್ಲಿ ಜ್ವರಬಂದರೆ ೧ ತಿಂಗಳು ಕ್ರೂರವಾಗಿ ಕಾಡುತ್ತದೆ ಇದಕ್ಕೆ ಅಜೈಕಪಾತ ವೆಂಬ ದೇವತೆಗೆ ಶಾಂತಿ ಮಾಡಿಸಬೇಕು.

ಉತ್ತರಾಭಾದ್ರಪದ ನಕ್ಷತ್ರ– ದಲ್ಲಿ ಹುಟ್ಟಿದವನು ಮನೋದುಃಖಿಯು ವಾಚಾಲನು, ಪುತ್ರವಂತನು, ಶತ್ರುಗಳನ್ನು ಜಯಿಸುವವನು ಧರ್ಮಶೀಲನು ಚಪಲಚಿತ್ತನು, ಧೈರ್ಯವಂತನು, ರೋಗಿಯು, ಎಡಭಾಗದಲ್ಲಿ ತಿಲಕಾಕಾರ ವಾದ ಮಚ್ಚೆಯುಳ್ಳವನು, ೧ನೇ ಪಾದದಲ್ಲಿ ಹುಟ್ಟಿದವನು ಚಂಚಲ ಚಿತ್ತನು. ಪಿತ್ತಪ್ರಕೃತಿಯುಳ್ಳವನು, ಕೋಪಿಯು; ರಕ್ತ ನೇತ್ರವುಳ್ಳವನು, ಕೃಶವಾದ ದೇಹವುಳ್ಳವನು; ೨ ನೇ ಪಾದದಲ್ಲಿ ಹುಟ್ಟಿದವನು ದೈವಜ್ಞನು, ಜ್ಞಾನಿಯು, ಶಾಂತಸ್ವಭಾವವುಳ್ಳವನು, ಗುಣಗ್ರಾಹಿಯು. ೩ನೇ ಪಾದದಲ್ಲಿ ಹುಟ್ಟಿದವನು, ಸ್ತ್ರೀ ಲೋಲನು, ಮೇಧಾವಿಯು. ಭೋಗವಂತನು. ೪ ನೇ ಪಾದದಲ್ಲಿ ಹುಟ್ಟಿ ದವನು. ರಕ್ತರೋಗವುಳ್ಳವನು, ಕೋಪಿಯು ಆಗುವನು.

ಕಂಟಕಾದಿಗಳು— ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ ೬ನೇ ತಿಂಗಳಲ್ಲಿ ಅಪಮೃತ್ಯುಭಯವು ೧೧ ವರ್ಷದಲ್ಲಿ ಜ್ವರಗಂಡವು ೧೮ ವರ್ಷದಲ್ಲಿ ಮೃತ್ಯು ಭಯವು ೪೬ ವರ್ಷದಲ್ಲಿ ಕ್ರೂರ ಗಂಡವು ೮೦ ವರ್ಷ ಪರಮಾಯುಷ್ಯವು. ಈ ನಕ್ಷತ್ರದಲ್ಲಿ ಜ್ವರಬಂದರೆ ೧೫ ದಿವಸ ಕ್ರೂರವಾಗಿ ಕಾಡುತ್ತದೆ. ಇದಕ್ಕೆ ಅಹಿ ರ್ಬುಧ್ನ್ಯ ಎಂಬ ದೇವತೆಗೆ ಶಾಂತಿಯನ್ನು ಮಾಡಿಸಬೇಕು.

ರೇವತಿ ನಕ್ಷತ್ರ–ದಲ್ಲಿ ಹುಟ್ಟಿದವನು. ಸರ್ವಜನ ಪ್ರಿಯನು ವ್ಯವಹಾರ ಪ್ರಿಯನು, ನಿರ್ಮಲ ಚಿತ್ತನು. ಧನವಂತನು, ಸ್ಥೂಲಶರೀರಿಯು ವಿದ್ಯಾ ವಂತನು ಸೌಂದರ್ಯವಂತನು ಭಾಗ್ಯವಂತನು ಅನ್ನದಾತನು ಪರೋಪಕಾ ರಿಯು ಪರದೇಶ ಪ್ರವಾಸಿಯು, ಶರೀರದಲ್ಲಿ ಮತ್ಸ್ಯಾಂಕಿತವುಂಟು ಈ ನಕ್ಷತ್ರದ ೧ ನೇ ಪಾದದಲ್ಲಿ ಹುಟ್ಟಿದವನು, ನೀತಿವಂತನು. ವೇದಾಂತ ಪ್ರಿಯನು ೨ನೇ ಪಾದದಲ್ಲಿ ಹುಟ್ಟಿದವನು ಜೂಜುಗಾರನು, ಕುಟಿಲನು, ೩ನೇ ಪಾದದಲ್ಲಿಹುಟ್ಟಿ ದವನು ಕೋಪಿಯು ಮಂದ ಬುದ್ಧಿಯುಳ್ಳವನು. ಬಹುಮುಂಗೋಪಿಯು ೪ ನೇ ಪಾದದಲ್ಲಿ ಹುಟ್ಟಿದವನು ಧೈರ್ಯವಂತನು ದೇವತಾಕಾರ್ಯಾಪೇಕ್ಷಿಯು ಆಗುವನು.

ಕಂಟಕಾದಿಗಳು– ಈ ನಕ್ಷತ್ರದಲ್ಲಿ ಹುಟ್ಟಿದವರಿಗೆ, ೫ನೇ ತಿಂಗಳಲ್ಲಿಶೀತ ಜ್ವರಬಾಧೆಯು. ೫ನೇ ವರ್ಷದಲ್ಲಿ ಪ್ರಾಣಭಯವು ಜ್ವರಭಯವು ೧೨ನೇ ವರ್ಷ

ದಲ್ಲಿ ಪಶುಗಂಡವು. ೪೪ ನೇ ವರ್ಷದಲ್ಲಿ ಅಪಮೃತ್ಯುವು ೬೦ ನೇ ವರ್ಷದಲ್ಲಿ ಕ್ರೂರಕಂಟಕವು ೮೦ ವರ್ಷ ಪರಮಾಯುಷ್ಯವು ಈ ನಕ್ಷತ್ರದಲ್ಲಿ ಜ್ವರಬಂದರೆ ಕ್ರೂರವಾಗಿ ಕಾಡುತ್ತದೆ. ಇದಕ್ಕೆ ಪೂಷನೆಂಬ ದೇವತೆಗೆ, ಶಾಂತಿಯನ್ನು ಮಾಡಿಸಬೇಕು.

— ನಕ್ಷತ್ರ ಫಲ ಮುಗಿದುದು —

— ಯೋಗ ಫಲವು —

ವಿಷ್ಕಂಭ- ಯೋಗದಲ್ಲಿ ಜನಿಸಿದವನು ರೂಪವಂತನು, ಗುಣವಂತನು ನಾನಾವಿಧ ವಸ್ತ್ರಾಲಂಕಾರಗಳಲ್ಲಿ ಪ್ರೀತಿಯುಳ್ಳವನು, ವಿದ್ವಾಂಸನು, ಸ್ವೇಚ್ಛಾ ವರ್ತನೆಯುಳ್ಳವನು, ಕೋಪಿಷ್ಠನು, ಸನ್ಮಿತ್ರರಿಂದಲೂ ಹೆಂಡತಿ ಮಕ್ಕ ಳಿಂದಲೂ ಸುಖವನ್ನು ಹೊಂದತಕ್ಕವನು, ಎಲ್ಲ ಕೆಲಸಗಳನ್ನು ಸಾಹಸದಿಂದ ಮಾಡಿಕೊಳ್ಳತಕ್ಕವನು. ಕಾಮುಕನು ಆಗುವನು.

ಪ್ರೀತಿ—ಯೋಗದಲ್ಲಿ ಹುಟ್ಟಿದವನು ಬಹು ಉತ್ಸಾಹಿಯು, ಪರಿ ಶ್ರಮವಹಿಸಿ ಕೆಲಸ ಮಾಡತಕ್ಕವನು, ಹಾಸ್ಯಗಾರನು ಸ್ತ್ರೀಯರೊಡನೆ ಹಾಸ್ಯ ದಲ್ಲಿ ಕಾಲ ಕಳೆಯುತಕ್ಕವನು, ಹಸನ್ಮುಖಿಯು, ಸುಸ್ವರೂಪವುಳ್ಳವನು, ವಿಶೇಷವಾಗಿ ಮಾತಾಡತಕ್ಕವನು, ಗುರುಹಿರಿಯರಲ್ಲಿ ಭಕ್ತಿಯುಳ್ಳವನು, ಸರ್ವಜನರೊಡನೆ ಪ್ರೀತಿಯಿಂದ ವರ್ತಿಸತಕ್ಕವನು, ಧರ್ಮ ಶಾಸ್ತ್ರಗಳನ್ನು ತಿಳಿದವನು, ಶುದ್ಧಾಚರಣೆಯುಳ್ಳವನು,ದಾನ,ಧರ್ಮ ಪರೋಪಕಾರ ಮಾಡತಕ್ಕ ವನು ಧನ-ಧಾನ್ಯ ಸಂಪತ್ತುಳ್ಳವನು ಆಗುವನು.

ಆಯುಷ್ಮಾನ್— ಯೋಗದಲ್ಲಿ ಜನ್ಮ ತಾಳಿದವನು ಧನವಂತನು, ಪದ, ಪದ್ಯಗಳನ್ನು ರಚಿಸುವವನು, ಕವಿಯು, ದೀರ್ಘಾಯುಷಿಯು, ಪರಿ ಶ್ರಮಿಯು,ಕರ್ತೃತ್ವ ಶಕ್ತಿಯುಳ್ಳವನು, ಅಗಾಧವಾದ ಕೆಲಸಗಳನ್ನು ಮಾಡುವ ಸಾಮರ್ಥ್ಯವುಳ್ಳವನು, ಶೂರನು ಮರ್ಯಾದೆಯುಳ್ಳವನು, ಸತತ ಉದ್ಯೋ ಗಿಯು, ಸುಖವಂತನು, ಸಾಹಸಿಯು, ಧನಧಾನ್ಯ ಸಮೃದ್ಧಿಯುಳ್ಳವನು ಆಗುವನು.

ಸೌಭಾಗ್ಯ— ಯೋಗದಲ್ಲಿ ಹುಟ್ಟಿದವನು ಬಹುಜನ ಮಾನ್ಯನು, ಮುಖಂಡನು, ಮಂತ್ರಿಯು, ಸಮಸ್ತ ಕೆಲಸಗಳಲ್ಲಿ ನಿಪುಣನು, ಬಲಾಢ್ಯನು

ಚತುರ ಮಾತುಗಾರನು, ಕೀರ್ತಿವಂತನು, ಸುಖಭೋಗಿಯು, ಧನಿಕನು, ಸತ್ಯವಂತನು, ಜ್ಞಾನಿಯು ಆಗುವನು.

ಶೋಭನ– ಯೋಗದಲ್ಲಿ ಜನನ ಹೊಂದಿದವನು ಸುಂದರನು, ಪುತ್ರ ಪೌತ್ರರುಳ್ಳವನು. ಉತ್ಸಾಹವುಳ್ಳವನು, ಬುದ್ಧಿವಂತನು, ಶ್ರೀಮಂತನು, ಧೈರ್ಯಶಾಲಿಯು, ಸ್ವಜನ-ಪರಜನರನ್ನು ರಕ್ಷಿಸತಕ್ಕವನು, ದಯಾಶೀಲನು, ಚತುರನು ಗೌರವವುಳ್ಳವನು, ಸರ್ವ ಕಾರ್ಯಗಳನ್ನು ಮಾಡಲು ಸಮರ್ಥನು ಸುಖಿಯು ಆಗುವನು.

ಅತಿಗಂಡ— ಯೋಗದಲ್ಲಿ ಉತ್ಪನ್ನನಾದವನು ಬಾಲ್ಯದಲ್ಲಿ ತಾಯಿ ಅಥವಾ ತಂದೆ ಇಲ್ಲವೆ ಕುಟುಂಬದಲ್ಲಿಯ ಹಿರಿಯರೊಬ್ಬರನ್ನು ಕಳೆದುಕೊಳ್ಳ ತಕ್ಕವನು, ಧೂರ್ತನು, ವಂಚಕನು, ಕಲಹಪ್ರಿಯನು, ಪರಸ್ತ್ರೀ ವ್ಯಾಮೋಹ ವುಳ್ಳವನು, ಪರದ್ರವ್ಯದಲ್ಲಿ ಅಪೇಕ್ಷೆಯುಳ್ಳವನು, ಘಾತಕ ವಿಚಾರವುಳ್ಳವನು, ಕಂಠದಲ್ಲಿ ರೋಗವುಳ್ಳವನು, ಗುರು ಹಿರಿಯರನ್ನು ನಿಂದಿಸುವವನು, ಸಿಟ್ಟಿ ನವನು, ದುರಾಭಿಮಾನಿಯು ಆಗುವವನು.

ಸುಕರ್ಮ– ಯೋಗದಲ್ಲಿ ಜನ್ಮಿಸಿದವನು ಸಕಲರೊಡನೆ ಪ್ರೀತಿಯಿಂದ ವರ್ತಿಸತಕ್ಕವನು ಸುಂದರನು, ಸದ್ಗುಣಿಯು, ಜನಾನುರಾಗಿಯು ಸುಖ ಭೋಗಿಯು, ಸ್ತುತ್ಯ ಕೆಲಸಗಳನ್ನು ಮಾಡತಕ್ಕವನು, ಸರಳ ಮನಸ್ಸಿನವನು, ಭಾಗ್ಯವಂತನು, ಅಂತಃಕರುಣಿಯು, ಪರೋಪಕಾರಿಯು, ಪರಾಕ್ರಮಿಯು, ಸ್ಥಿರ ಮನಸ್ಸಿನವನು, ಸಂಗೀತ, ಸಾಹಿತ್ಯ, ಮೊದಲಾದ ಕಲೆಗಳಲ್ಲಿ ಪ್ರೀತಿಯುಳ್ಳವನು, ದಯಾಶಾಲಿಯು ಆಗುವನು.

ಧೃತಿ— ಯೋಗದಲ್ಲಿ ಜನನ ಹೊಂದಿದವನು ಕೀರ್ತಿವಂತನು. ಸದೃಢವಾದ ದೇಹವುಳ್ಳವನು, ಧನವಂತನು, ಭಾಗ್ಯಶಾಲಿಯು, ಸದ್ಗುಣ ಸಂಪನ್ನನು, ರೂಪವಂತನು, ವಿದ್ಯಾವಂತನು, ಸುಶೀಲನು, ಬುದ್ಧಿಶಾಲಿಯು ಮುಖಂಡನು, ಧರ್ಮಕಾರ್ಯಗಳಲ್ಲಿ ಅಭಿರುಚಿಯುಳ್ಳವನು, ಸುಖಪುರ ಷನು, ಚತುರತನದಿಂದ ಮಾತಾಡತಕ್ಕವನು, ಸಂತೋಷಚಿತ್ತನು, ಪ್ರಾನಾಪೆ ಕನು ಆಗಿರುವನು.

ಶೂಲ-- ಯೋಗದಲ್ಲಿ ಜನ್ಮತಾಳಿದವನು ರೋಗ ಪೀಡಿತನು, ಧರ್ಮಶಾಸ್ತ್ರಗಳನ್ನು ಬಲ್ಲವನು, ಧಾರ್ಮಿಕ ಕೆಲಸಗಳಲ್ಲಿ ಪ್ರೀತಿಯುಳ್ಳವನು

ತ್ಯೆಯು ಪ್ರಯೋಜನವನ್ನು ಪಡೆಯತಕ್ಕವನು, ಜಾಣನು, ಚಂಚಲ ಮನಸ್ಸಿನವನು, ಕಪಟ ಸ್ವಭಾವದವನು, ಕಾಮುಕನು, ದಾರಿದ್ರ್ಯಸ್ಥಿತಿಯುಳ್ಳವನು, ಹಂಕಾರಿಯು, ಅಸತ್ಯವಾದಿಯು ಆಗುವನು.

ಗಂಡ- ಯೋಗದಲ್ಲಿ ಹುಟ್ಟಿದವನು ದುಃಖಿಯು, ಕಠಿಣ ಹೃದಯುಳ್ಳವನು, ಸ್ಥೂಲವಾದ ದೇಹವುಳ್ಳವನು, ಮೋಸಗಾರನು, ಹಟವಾರಿಯು, ತ್ರರಿಗೆ ಅಹಿತ ಮಾಡತಕ್ಕವನು, ಬಹು ಸಿಟ್ಟಿನವನು, ಜಗಳಗಂಟನು, ೀಗಾಪೇಕ್ಷೆಯುಳ್ಳವನು, ಆಗುವನು.

ವೃದ್ಧಿ- ಯೋಗದಲ್ಲಿ ಜನಿಸಿದವನು ದೀರ್ಘಾಯುಷಿಯು, ಪುತ್ರ-ಪೌತ್ರಳ್ಳವನು, ಸುಂದರಳಾದ ಪತ್ನಿಯುಳ್ಳವನು, ಕಲಾವಂತನು, ವಸ್ತ್ರಾಲಂಕಾಗಳಲ್ಲಿ ಪ್ರೀತಿಯುಳ್ಳವನು, ಕ್ರಯ ವಿಕ್ರಯದಲ್ಲಿ ಚತುರನು ಧನಧಾನ್ಯವೃದ್ಧಿಯುಳ್ಳವನು, ಭಾಗ್ಯವಂತನು, ಗುರುಹಿರಿಯರಲ್ಲಿ ದೇವತಾ ಕಾರ್ಯಲ್ಲಿ ಭಕ್ತಿಯಳ್ಳವನು, ದೊಡ್ಡ ಪರಿವಾರವುಳ್ಳವನು, ಸತ್ಯವಂತನು, ಕೀರ್ತಿತನು, ದಯಾಶೀಲನು ಆಗುವನು

ಧ್ರುವ- ಯೋಗದಲ್ಲಿ ಜನ್ಮತಾಳಿದವನು ಪರಾಕ್ರಮಿಯು, ಸುಖೀಗಿಯು, ಧನವಂತನು, ಸರ್ವಕಾರ್ಯಗಳನ್ನು ಮಾಡಲು ಸಮರ್ಥನು, ಗ್ಯಶಾಲಿಯು, ಕೀರ್ತಿವಂತನು, ಧೈರ್ಯಶಾಲಿಯು, ಬಹುಜನ ಮಾನ್ಯನು, ರ್ಯಾದೆಯುಳ್ಳವನು, ಬುದ್ಧಿವಂತನು, ಉದ್ಯೋಗತತ್ಪರನು, ಸರ್ವಜನ ಸುಬುದ್ಧಿಯುಳ್ಳವನು, ಸತ್ಯಮಾತಾಡತಕ್ಕವನು, ಸ್ಥಿರ ಮನಸ್ಸುಳ್ಳ, ವಿದ್ಯಾವಂತನು, ಸುಖಭೋಗಿಯು, ಪ್ರಸಿದ್ಧ ಪುರುಷನು ಆಗುವನು.

ವ್ಯಾಘಾತ- ಯೋಗದಲ್ಲಿ ಹುಟ್ಟಿದವನು ನಿರ್ದಯನು, ಘಾತಕವಿಚಾವನು, ಮೋಸಗಾರನು, ಉಪಕಾರವನ್ನು ಸ್ಮರಿಸದವನು, ಡಂಭಾಚಾಯು, ದುಷ್ಟನು. ಕ್ರೋಧಸ್ವಭಾವಿಯು, ಸುಳ್ಳು ಹೇಳತಕ್ಕವನು, ಪರರಕರ್ಷವನ್ನು ನೋಡಿ ಸಹಿಸದವನು, ದರಿದ್ರನು, ದುರ್ನಡತೆಯುಳ್ಳವನುವನು.

ಹರ್ಷ- ಯೋಗದಲ್ಲಿ ಜನಿಸಿದವನು ಸರ್ವಜನ ಮಾನ್ಯನು, ಎಲ್ಲರ್ಯಗಳನ್ನು ಮಾಡುವದರಲ್ಲಿ ಕುಶಲನು, ಪ್ರಸಿದ್ಧನು, ಧರ್ಮಶಾಸ್ತ್ರ

ಪುರಾಣಗಳಲ್ಲಿ ಶ್ರದ್ಧೆಯುಳ್ಳವನು ಸದ್ಗುಣವಂತನು, ಧನ ಧಾನ್ಯ ಸಮೃದ್ಧಿ ಯುಳ್ಳವನು, ಭಾಗ್ಯವಂತನು, ಸ್ತ್ರೀ ಲಂಪಟನು, ವಿನಯಶಾಲಿಯು, ಶತ್ರುಗಳನ್ನು ಜಯಿಸತಕ್ಕವನು, ವಸ್ತ್ರಾಲಂಕಾರಗಳಲ್ಲಿ ಪ್ರೀತಿಯುಳ್ಳವನು, ತೇಜಸ್ವಿಯು ಆಗುವನು.

ವಜ್ರ—ಯೋಗದಲ್ಲಿ ಜನನ ಹೊಂದಿದವನು ಬಲಿಷ್ಠವಾದ ದೇಹವುಳ್ಳವನು, ವಿದ್ಯಾವಂತನು, ಧನ ಧಾನ್ಯ ಸಂಪತ್ತುಳ್ಳವನು, ಪರಾಕ್ರಮಿಯು ಸದ್ಗುಣಿಯು, ಮುತ್ತು ರತ್ನಗಳ ಪರೀಕ್ಷಕನು, ಕೀರ್ತಿವಂತನು ಆಲಸಿಯು ಭಕ್ತಿರಹಿತನು, ರತ್ನಾಭರಣಗಳನ್ನು ಧರಿಸತಕ್ಕವನು, ದೊಡ್ಡ ಕುಟುಂಬಸ್ಥನು ಸತ್ಯವಂತನು, ಆಗುವನು.

ಸಿದ್ಧಿ— ಯೋಗದಲ್ಲಿ ಹುಟ್ಟಿದವನು, ಸರ್ವಕಾರ್ಯಗಳಲ್ಲಿ ಸಿದ್ಧಿ ಹೊಂದತಕ್ಕವನು, ದಾನವಂತನು, ಸುಖಭೋಗಿಯು, ರೂಪವಂತನು, ದುಃಖಿಯು, ರೋಗ ಪೀಡೆಯುಳ್ಳವನು, ಉದಾರ ಮನಸ್ಸಿನವನು, ಸುಶೀಲನು, ಧರ್ಮಶಾಸ್ತ್ರಗಳನ್ನು ಬಲ್ಲವನು, ಚತುರನು, ಬಲಶಾಲಿಯು, ಭಾಗ್ಯವಂತನು, ಸ್ಥಿರ ಮನಸ್ಸಿನವನು, ಸ್ತ್ರೀಮೂಲಕವಾಗಲಿ, ರೋಗಬಾಧೆಯಿಂದಾಗಲಿ, ಕ್ಲೇಶಪಡತಕ್ಕವನು ಆಗುವನು.

ವ್ಯತಿಪಾತ- ಯೋಗದಲ್ಲಿ ಜನ್ಮ ತಾಳಿದವನು ಬಹು ಕಷ್ಟದಿಂದ ಜೀವಿಸುವವನು, ಸುಳ್ಳು ಮಾತಾಡತಕ್ಕವನು, ಮಂದ ಬುದ್ಧಿಯುಳ್ಳವನು, ಕಠೋರ ಮನಸ್ಸಿನವನು. ಪರರ ಕಾರ್ಯಗಳಿಗೆ ಆತಂಕವನ್ನುಂಟು ಮಾಡುವವನು, ತಂದೆ-ತಾಯಿಗಳ, ಗುರು-ಹಿರಿಯರ ಆಜ್ಞಾಪಾಲಕನು, ದುಂದು ವೆಚ್ಚ ಮಾಡತಕ್ಕವನು; ಮೂರ್ಖನು ಆಗುವನು.

ವರಿಯಾನ್—ಯೋಗದಲ್ಲಿ ಜನಿಸಿದವನು ಸಾಹಿತ್ಯ, ನೃತ್ಯ, ಸಂಗೀತ, ಶಿಲ್ಪ, ಚಿತ್ರ ಮೊದಲಾದ ಕಲೆಗಳಲ್ಲಿ ಪ್ರೀತಿಯುಳ್ಳವನು, ವಿನಯವಂತನು, ಉತ್ತಮ ಕಾರ್ಯಗಳಿಗೆ ಹಣ ಖರ್ಚು ಮಾಡತಕ್ಕವನು, ಗುಣವಂತನು, ಸಾಧಾರಣ ಧನವಂತನು, ಸಂಪಾದನೆಯಲ್ಲಿ ಸುಖಭೋಗ ಹೊಂದತಕ್ಕವನು ಆಗುವನು.

ಪರೀಘ — ಯೋಗದಲ್ಲಿ ಜನ್ಮ ಹೊಂದಿದವನು ತನ್ನ ವಂಶೋದ್ಧಾರಕನು ಕೀರ್ತಿಶಾಲಿಯು, ಧರ್ಮಶಾಸ್ತ್ರಗಳ ರಹಸ್ಯವನ್ನು ಬಲ್ಲವನು, ಉತ್ತಮ ಭಾಷಣಕಾರನು, ದಾನಶೀಲನು, ಮೃದುವಾಗಿ ಮಾತಾಡತಕ್ಕವನು, ಸುಖ ಭೋಗಿಯು; ಪದ ಪದ್ಯಗಳನ್ನು ರಚಿಸುವ ಶಕ್ತಿಯುಳ್ಳವನು, ಜಿತೇಂದ್ರಿಯನು, ಗುರು-ಹಿರಿಯರಲ್ಲಿ ಭಕ್ತಿಯುಳ್ಳವನು, ಸಮಾಧಾನ ಚಿತ್ತನು; ಜಾಣನು ಸೌಭಾಗ್ಯವಂತನು; ವೈರಿಗಳನ್ನು ನಿರ್ಭಯದಿಂದ ಜಯಿಸತಕ್ಕವನು; ದಯಾದಾಕ್ಷಿಣ್ಯಾದಿ ಗುಣವುಳ್ಳವನು; ಚತುರನು; ಅಲ್ಪಭೋಜನ ಮಾಡತಕ್ಕವನು; ಆಗುವನು.

ಶಿವ— ಯೋಗದಲ್ಲಿ ಜನನಹೊಂದಿದವನು ಸಮಸ್ತ ಜನರಕಲ್ಯಾಣವನ್ನು ಅಪೇಕ್ಷಿಸುವವನು, ಮೇಧಾವಿಯು, ಸರ್ವಜನ ಮಾನ್ಯನು; ಪ್ರಸಿದ್ಧ ಪುರುಷನು ಕೀರ್ತಿವಂತನು, ಸರಳ ಮನಸ್ಸಿನವನು, ದಾನ ಧರ್ಮ ಪರೋಪಕಾರ ಮಾಡತಕ್ಕವನು, ಶಾಂತ ಸ್ವಭಾವಿಯು, ಭಕ್ತಿವಂತನು, ಸುಖಭೋಗಿಯು, ಸತ್ಕರ್ಮಗಳನ್ನು ಮಾಡತಕ್ಕವನು, ಮಂತ್ರ ತಂತ್ರಗಳನ್ನು ಬಲ್ಲವನು, ಜಿತೇಂದ್ರಿಯನು, ಸುಂದರವಾದ ದೇಹವುಳ್ಳವನು, ಧನವಂತನು, ಬುದ್ಧಿವಂತನು ಆಗುವನು.

ಸಿದ್ಧ— ಯೋಗದಲ್ಲಿ ಹುಟ್ಟಿದವನು ಯಂತ್ರ, ಮಂತ್ರ, ತಂತ್ರ ಸಿದ್ಧಿ ಮಾಡಿಕೊಂಡಿರುವವನು, ದಿವ್ಯ ಪತ್ನಿಯುಳ್ಳವನು, ಭಾಗ್ಯಶಾಲಿಯು, ಧನ-ಧಾನ್ಯ ಸಂಪತ್ತುಳ್ಳವನು ಪರೋಪಕಾರಿಯು; ಕೀರ್ತಿವಂತನು; ಮನ್ನಣೆ ಹೊಂದತಕ್ಕವನು, ದಯಾಶೀಲನು; ಧರ್ಮಿಷ್ಠನು; ಆಲೋಚಿಸಿದ ಎಲ್ಲಕೆಲಸಗಳಲ್ಲಿ ಸಿದ್ಧಿ ಹೊಂದತಕ್ಕವನು; ಇಂದ್ರಿಯ ನಿಗ್ರಹಿಯು; ಸೂಕ್ಷ್ಮ ಬುದ್ಧಿಯುಳ್ಳವನು ಆಗುವನು.

ಸಾಧ್ಯ— ಯೋಗದಲ್ಲಿ ಜನಿಸಿದವನು ಸಮಸ್ತ ಕೆಲಸಗಳಲ್ಲಿ ಯಶಸ್ಸು ಹೊಂದತಕ್ಕವನು; ಪ್ರಖ್ಯಾತನು ಸರ್ವರಿಂದ ಮನ್ನಣೆ ಹೊಂದತಕ್ಕವನು ಸಮಾಧಾನದಿಂದ ಕಾರ್ಯ ಮಾಡತಕ್ಕವನು; ಕಾರ್ಯದಕ್ಷನು ಯುಕ್ತಿ ಪ್ರಯುಕ್ತಿಗಳಿಂದ ಶತ್ರುಗಳನ್ನು ದಮನ ಮಾಡತಕ್ಕವನು; ಸತ್ಯಮಾರ್ಗಸ್ಥನು; ಗುರು ಹಿರಿಯರಲ್ಲಿ ಸೇವ; ದ್ವಿಜರಲ್ಲಿ ಭಯ ಭಕ್ತಿಯುಳ್ಳವನು;

ಅಸಾಧ್ಯ ಕೆಲಸಗಳಲ್ಲಿ ಸಹ ದಕ್ಷತೆಯಿಂದ ಯಶಸ್ಸು ಪಡೆಯತಕ್ಕವನೂ ಆಗುವನು.

ಶುಭ- ಯೋಗದಲ್ಲಿ ಜನಿಸಿದವನು ಸದಾ ಶುಭಮಂಗಲ ಕಾರ್ಯಗಳಲ್ಲಿ ತೊಡಗಿರುವವನು. ಧನವಂತನು; ದಾನಶೀಲನು; ಪರೋಪಕಾರಿಯು ದೇವತೆ ದ್ವಿಜರು, ಗುರು-ಹಿರಿಯರಲ್ಲಿ ಭಕ್ತಿಯುಳ್ಳವನು; ಶಾಸ್ತ್ರಾರ್ಥಗಳನ್ನು ತಿಳಿದವನು; ಸಕಲರಿಗೂ ಸುಖವನ್ನು ಬಯಸತಕ್ಕವನು; ಸಮಸ್ತರಿಗೆ ಆಶ್ರಯ ಕೊಡತಕ್ಕವನು; ಜ್ಞಾನಿಯು ಸತ್ಯವಂತನು ಸವಿನುಡಿಗಳುಳ್ಳವನು ಲಕ್ಷಣವಂತನು ಆಗುವನು.

ಶುಕ್ಲ- ಯೋಗದಲ್ಲಿ ಜನ್ಮತಾಳಿದವನು ಶೂರನು, ಧನವಂತನು ಸರ್ವ ಜನರಲ್ಲಿ ಪ್ರೀತಿಯುಳ್ಳವನು, ಕಲಾಪ್ರಿಯನು, ಜ್ಞಾನಿಯು, ವಿದ್ಯಾವಂತನು, ಧರ್ಮಿಷ್ಠನು, ಇಂದ್ರಿಯಗಳನ್ನು ಜಯಿಸತಕ್ಕವನು, ಆತ್ಮಸಂಯಮನವುಳ್ಳವನು, ಪರಾಕ್ರಮಿಯು, ಸಾಹಸಿಯು, ಬಹುಜನರಿಂದ ಮನ್ನಣೆ ಹೊಂದ ತಕ್ಕವನು, ವಸ್ತ್ರಾಲಂಕಾರ ಪ್ರಿಯನು ಆಗುವನು.

ಬ್ರಹ್ಮ- ಯೋಗದಲ್ಲಿ ಜನನವಾದವನು ಪಂಡಿತನು, ವೇದಾಗಮ ಶಾಸ್ತ್ರ ವಿಚಾರಗಳನ್ನು ಬಲ್ಲವನು, ಬ್ರಹ್ಮಜ್ಞಾನಿಯು, ಎಲ್ಲ ಕಾರ್ಯಗಳಲ್ಲಿ ಚತುರನು, ಸದಾಚಾರ ಶೀಲನು, ಸಮಾಧಾನಿಯು, ತಪಸ್ವಿಯು, ಧನಧಾನ್ಯ ಸಮೃದ್ಧಿಯುಳ್ಳವನು, ಸುಖಿಯು ವಿದ್ಯಾವ್ಯಾಸಂಗದಲ್ಲಿ ತಲ್ಲೀನನು, ಒಳ್ಳೆಯ ಕೆಲಸಗಳನ್ನು ಮಾಡತಕ್ಕವನು, ಕೀರ್ತಿವಂತನು, ಲೋಕಮಾನ್ಯನು, ಆಗುವನು.

ಐಂದ್ರ— ಯೋಗದಲ್ಲಿ ಹುಟ್ಟಿದವನು ರಾಜವಂಶದಲ್ಲಿ ಜನಿಸತಕ್ಕವನು, ಪ್ರಖ್ಯಾತನು, ಅಲ್ಪಾಯುಷಿಯು, ಸುಖಭೋಗಿಯು, ಗುಣವಂತನು, ಮಹಾಖಂಡನು, ಜನನಾಯಕನು; ಚತುರನು ಧನವಂತನು; ಧೂರ್ತನು; ರಾಜಕಾರಣ ಪಟುವು; ಪರೋಪಕಾರಿಯು; ಬಲಾಢ್ಯನು; ಸ್ವಜನ ಮಾನ್ಯನು; ವಂಶಭೂಷಣನು; ಕೀರ್ತಿಶಾಲಿಯು ಆಗುವನು.

ವೈಧೃತಿ— ಯೋಗದಲ್ಲಿ ಹುಟ್ಟಿದವನು ಜಗಳಗಂಟನು. ಉತ್ಸಾಹ ಹೀನನು, ಸ್ವಜನ-ಪರಜನರಲ್ಲಿ ವಿರೋಧಿಯು, ಚಂಚಲ ಮನಸ್ಸಿನವನು, ಇ.ಟಿ

ನು; ಅಂಜುಬುರುಕನು; ಅನ್ಯರ ಉತ್ಕರ್ಷವನ್ನು ಸಹಿಸದವನು, ವಂಚ ಕನು, ದುಃಖಿಯು, ಕ್ರೂರನು, ನಾಸ್ತಿಕನು ಮಿತ್ರದ್ರೋಹಿಯು, ಅಪ್ರಿಯನು ಆಗುವನು.

—ಯೋಗ ಫಲ ಮುಗಿದುದು—

—ಕರಣ ಫಲವು—

ಬವ— ಕರಣದಲ್ಲಿ ಜನನವಾದವನು ಮಾನವಂತನು; ಧರ್ಮಿಷ್ಠನು; ಶಾಶ್ವತವಾದ ಕಾರ್ಯಗಳನ್ನು ಮಾಡತಕ್ಕವನು, ಭಾಗ್ಯವಾನನು, ಸುಖಭೋಗಿಯು, ಸಂಸದ್ಚರಿತನು, ಸುಶೀಲನು, ಬಲವಂತನು, ಅಂತಃಕರುಣಿಯು, ಚತುರನು, ರಾಜಮಾನ್ಯನು, ಕಾಮಿಯು, ಶೀಘ್ರನಾಗಿ ನಡೆಯುತಕ್ಕವನು, ಸ್ವಜನ ಪರಜನರಲ್ಲಿ ಪ್ರೀತಿಯುಳ್ಳವನು, ಆಗುವನು.

ಬಾಲವ-ಕರಣದಲ್ಲಿ ಹುಟ್ಟಿದವನು ತೀರ್ಥ-ಯಾತ್ರಾ ಪುಣ್ಯಕ್ಷೇತ್ರಗಳಿಗೆ ಪರ್ಯಟನ ಮಾಡತಕ್ಕವನು, ವಿದ್ಯಾವಂತನು, ರಾಜಮಾನ್ಯನು, ಸುಖಿಯು, ದೇವತಾ-ಗುರುಹಿರಿಯರಲ್ಲಿ ಶಕ್ತಿಯುಳ್ಳವನು, ಸದೃಢನು ಬಲಶಾಲಿಯು ಸಾಹಿತ್ಯ, ಸಂಗೀತಾದಿ ಕಲಾಭಿರುಚಿಯುಳ್ಳವನು, ಸದೃಢನು, ಬಲಶಾಲಿಯು ಕೆಲಸಗಳನ್ನು ಮಾಡಿ ಮನ್ನಣೆ ಹೊಂದತಕ್ಕವನ ಆಗುವನು.

ಕೌಲವ-ಕರಣದಲ್ಲಿ ಜನನ ಹೊಂದಿದವನು ಸ್ವಜನ-ಪರಜನರಲ್ಲಿ ಪ್ರೀತಿ ಸಂಪಾದಿಸತಕ್ಕವನು, ಬಹುಜನ ಸ್ನೇಹಿತರುಳ್ಳವನು, ಧೈರ್ಯವಂತನು, ಪರರ ಕೆಲಸಗಳನ್ನು ಪ್ರೀತಿಯಿಂದ ಮಾಡತಕ್ಕವನು, ಕಾಮುಕನು, ವಿಷಯ ಲಂಪಟನು, ಬುದ್ಧಿವಂತನು, ಗಂಭೀರ ಮುಖಮುದ್ರೆಯುಳ್ಳವನು, ಮೃದುವಾಗಿಯೂ, ಮಧುರವಾಗಿಯೂ ಮಾತಾಡತಕ್ಕವನು, ಆನೆ, ಕುದುರೆ, ಸಾಯಿಕಲ್, ಮೋಟರ ಇತ್ಯಾದಿ ವಾಹನಗಳುಳ್ಳವನು, ಆಗುವನು.

ತೈತುಲ—ಕರಣದಲ್ಲಿ ಹುಟ್ಟಿದವನು, ಸೌಭಾಗ್ಯವಂತನು, ಸದ್ಗುಣಿಯು ಎಲ್ಲರೊಡನೆ ಪ್ರೀತಿಯಿಂದ ಇರತಕ್ಕವನು, ಹೊಲ, ಮನೆ, ಸ್ಥಾವರ ಆಸ್ತಿ ಸಂಪಾದಿಸತಕ್ಕವನು, ಸುಂದರನು, ವಿಲಾಸಿಯು, ಸವಿಮಾತಿನವನು, ಸುಶೀ

ಲನು, ಸದಾಚಾರಿಯು, ಬುದ್ಧಿವಂತನು, ಕಾರ್ಯದಕ್ಷನು, ಸತ್ಯವಂತನು, ಶಾಂತಮನಸ್ಸಿನವನು ಆಗುವನು.

ಗರಜ–ಕರಣದಲ್ಲಿ ಜನಿಸಿದವನು, ಒಕ್ಕಲುತನದ ಉದ್ಯೋಗದಿಂದ ಉಪಜೀವನ ಹೊಂದತಕ್ಕವನು. ಶ್ರಮ ಸಹಿಷ್ಣುವು, ಕಷ್ಟಜೀವಿಯು, ಮನೆತನದ ಕೆಲಸಗಳಲ್ಲಿ ನಿಪುಣನು, ಅಪೇಕ್ಷೆಯಾದ ವಸ್ತುವನ್ನು ಪರಿಶ್ರಮಪಟ್ಟು ಸಂಪಾದಿಸತಕ್ಕವನು, ಹಾಸ್ಯಸ್ವಭಾವದವನು, ಸರ್ವಜನ ಮಾನ್ಯನು ಗುರು ಹಿರಿಯರಲ್ಲಿ ದೇವ-ದ್ವಿಜರಲ್ಲಿ ಭಕ್ತಿಯುಳ್ಳವನು, ಮೇಧಾವಿಯು ಸಾಹಿತ್ಯ, ಸಂಗೀತ, ನೃತ್ಯ ಇತ್ಯಾದಿ ಕಲೆಗಳನ್ನು ಬಲ್ಲವನು ಧನವಂತನು, ಆಗುವನು.

ವಣಜ—ಕರಣದಲ್ಲಿ ಜನನ ಹೊಂದಿದವನು; ವ್ಯಾಪಾರದಿಂದ ಉಪಜೀವನ ಹೊಂದತಕ್ಕವನು. ಯಾವಾಗಲೂ ಪರಸ್ಥಳ ಪ್ರವಾಸ ಮಾಡತಕ್ಕವನು, ಮನಸ್ಸಿಗೆ ಬಂದ ಕಾರ್ಯವನ್ನು ಕಷ್ಟಪಟ್ಟು ಮಾಡಿ ಸಿದ್ಧಿ ಹೊಂದತಕ್ಕವನು, ಶತ್ರುಗಳನ್ನು ಜಯಿಸತಕ್ಕವನು, ಪರೋಪಕಾರಿಯು ಉದಾರ ಮನಸ್ಸಿನವನು, ವಿಚಾರಶೀಲನು, ಕೀರ್ತಿವಂತನು, ಬುದ್ಧಿವಂತನು, ಭಕ್ತಿಯುಳ್ಳವನು, ಸರ್ವಜನರಿಂದ ಮನ್ನಣೆ ಹೊಂದತಕ್ಕವನು, ಚತುರನು ಆಗುವನು.

ಭದ್ರ–ಕರಣದಲ್ಲಿ ಜನನವಾದವನು, ಘಾತಕ ವಿಚಾರದವನು, ಮೋಸಗಾರನು, ಹಿಂಸಾವಾದಿಯು, ಜಗಳಗಂಟನು; ದುರ್ಬುದ್ಧಿಯುಳ್ಳವನು, ನಾನಾವಿಧ ಯುಕ್ತಿ, ಪ್ರಯುಕ್ತಿಗಳಿಂದ ಶತ್ರುಗಳನ್ನು ನಾಶಮಾಡತಕ್ಕವನು, ಚಪಲನು, ಬಲವಂತನು, ಸುಂದರನು, ಸ್ವಜನರಿಗೆ ದ್ರೋಹ ಮಾಡತಕ್ಕವನು, ದುಷ್ಟ ಜನ ಸ್ನೇಹಿತರುಳ್ಳವನು, ಸುಳ್ಳು ಹೇಳತಕ್ಕವನು, ಹಾಸ್ಯಗಾರನು, ಆಗುವನು.

ಶಕುನಿ–ಕರಣದಲ್ಲಿ ಹುಟ್ಟಿದವನು ಸದೃಢನು ದಷ್ಟ—ಪುಷ್ಟವಾದ ದೇಹವುಳ್ಳವನು, ಜಾಣನು, ಔಷಧೋಪಚಾರ, ಶಸ್ತ್ರಚಿಕಿತ್ಸೆ ಇತ್ಯಾದಿ ವೈದ್ಯಕೀಯ ಉದ್ಯೋಗವನ್ನು ಬಲ್ಲವನು, ಸೌಭಾಗ್ಯವಂತನು; ಮಂತ್ರ ತಂತ್ರ ವಿದ್ಯಾ ತಿಳಿದವನು, ರೂಪವಂತನು, ಸಮಾಧಾನ ಮನಸ್ಸಿನವನು, ಬಹುಜನ ಸ್ನೇಹಿತರುಳ್ಳವನು, ಸತತೋದ್ಯೋಗಿಯು, ಹೊಲ, ಮನೆ, ಧನ

ನಕ ಸಂಪಾದಿಸತಕ್ಕವನು, ಸೇವಕರಿಂದ ಸೇವಿಸಲ್ಪಡತಕ್ಕವನು, ಸ್ವಜನರಿಗೆ ರೋಧಿಯು, ಧೈರ್ಯಶಾಲಿಯು ವಿನಯವಂತನು ಆಗುವನು.

ಚತುಷ್ಪಾದ—ಕರಣದಲ್ಲಿ ಜನಿಸಿದವನು ಗುರು-ಹಿರಿಯರು, ದೇವ ಬ್ರಾಹ್ಮಣರಲ್ಲಿ ಭಕ್ತಿಯುಳ್ಳವನು, ಆಕಳು ಎತ್ತು ಎಮ್ಮೆ, ಕುದುರೆ ಮೊದಲಾದ ಶುಗಳಿಗೆ ಔಷಧೋಪಚಾರ ಮಾಡುವವನು (ದನಗಳ ಡಾಕ್ಟರ) ದೀರ್ಘಾ ಯುಷಿಯು, ವ್ಯಾಪಾರ, ಒಕ್ಕಲುತನ ಈ ಉದ್ಯೋಗಗಳಲ್ಲಿ ಪ್ರೀತಿಯುಳ್ಳ ನು, ಅನಾಚಾರಿಯು, ಯುಕ್ತಿವಂತನು ಆಕಳು, ಎತ್ತು ಎಮ್ಮೆ ಕುದುರೆ, ಡು, ಕುರಿ ಮೊದಲಾದ ಚತುಷ್ಪಾದ ಪ್ರಾಣಿಗಳ ರಕ್ಷಕನು ಆಗುವನು.

ನಾಗವಾನ್—ಕರಣದಲ್ಲಿ ಜನನವಾದವನು ಕಷ್ಟಜೀವಿಯು, ಎಲ್ಲ ಲಸಗಳನ್ನು ಪರಿಶ್ರಮಪಟ್ಟು ಮಾಡತಕ್ಕವನು, ದುರ್ಭಾಗ್ಯನು, ನಿಷ್ಠುರ ಾಗಿ ಮಾತಾಡತಕ್ಕವನು, ಕಲಹವಂತನು, ಸಿಟ್ಟಿನ ಸ್ವಭಾವದವನು, ಸ್ವಜನ ರೋಧಿಯು, ಮೋಸಗಾರನು, ಪರಸ್ತ್ರೀ ಲಂಪಟನು, ಸ್ವತಂತ್ರವಾಗಿ ಜೀವಿಸ ಕ್ಕವನು, ಚಂಚಲ ಸ್ವಭಾವಿಯು, ದುರಾಚಾರಿಯು ವಂಶ ನಾಶಕನು ಗುವನು.

ಕಿಂಸ್ತುಘ್ನ— ಕರಣದಲ್ಲಿ ಹುಟ್ಟಿದವನು ಸಂತೋಷ ಚಿತ್ತನು. ಸನ್ಮುಖನು, ಸದೃಢನು, ದಷ್ಟ ಪುಷ್ಟವಾದ ದೇಹವುಳ್ಳವನು, ಶುಭಮಂಗಲ ರ್ಮಿಕ ಕೆಲಸಗಳನ್ನು ಮನಸಾ ಮಾಡತಕ್ಕವನು; ಎಲ್ಲ ಕೆಲಸಗಳಲ್ಲಿ ಶಲನು, ಹೇಡಿ ಜನ ಸ್ನೇಹಿತರುಳ್ಳವನು, ಎಲ್ಲರೊಡನೆ ವಿನಯದಿಂದ ರ್ತಿಸುವವನು, ಶತ್ರುಗಳಿಲ್ಲದವನು, ಭಾಗ್ಯವಂತನು, ಧರ್ಮ ಅರ್ಥರ್ಮ ರ್ಯಗಳೆರಡನ್ನೂ ಮಾಡತಕ್ಕವನು ಆಗುವನು.

—ಕರಣ ಫಲ ಮುಗಿದುದು—

—ರಾಶಿ ಫಲ ಪ್ರಾರಂಭವು—

—೧. ಮೇಷರಾಶಿ—

ಮೇಷರಾಶಿಯಲ್ಲಿ ಚಂದ್ರನಿರುವಾಗ ಹುಟ್ಟಿದವನು ದುಂಡಗೆ ಕೆಂಪಾಗಿರುವ ಣ್ಣುಳ್ಳವನು ಉಷ್ಣ ಪದಾರ್ಥಗಳ ಭೋಜನದಲ್ಲಿ ಇಷ್ಟವುಳ್ಳವನು ಅಲ್ಪಾಹಾ

ರಿಯು ಕೋಪಕಾಲದಲ್ಲಿ ಶೀಘ್ರವಾಗಿಸುಮುಃಖನಾಗುವನು. ದೇಶಸಂಚಾರಿಯು ಸ್ತ್ರೀ ಲೋಲನು ಕ್ಷಣಿಕ ಸಂಪತ್ತುಳ್ಳವನು ಕಲಹಪ್ರಿಯನು ಹೆಂಗಸರಿಗೆ ಪ್ರಿಯಕರನು ಪರೋಪಕಾರಿಯು ತಲೆಯಲ್ಲಿ ಹುಣ್ಣಿನಿಂದ ಗುರುತಾದವನು ಗರ್ವಿಯು ಚಪಲಚಿತ್ತನು ನೀರು ಕಂಡರೆ ಹೆದರುವವನು ಕಾರ್ಯಕುಶಲನು ದೇವಕಾರ್ಯಾಸಕ್ತನು. ವಿಚಾರವಂತನು ಬಿಳುಪು ಪದಾರ್ಥಗಳಲ್ಲಿ ಅಪೇಕ್ಷೆಯುಳ್ಳವನು ಭೋಜನಪ್ರೀಯನು ಈತನಿಗೆ ೪೪ ವರ್ಷದಲ್ಲಿ ಕ್ರೂರಕಂಟಕವು ೭೮ ವರ್ಷ ಪರಮಾಯುಷ್ಯವು.

—೨ ವೃಷಭರಾಶಿ—

ವೃಷಭ ರಾಶಿಯಲ್ಲಿ ಚಂದ್ರನಿರುವಾಗ ಹುಟ್ಟಿದವನು ಸುಂದರವಾದ ದೀರ್ಘತುಟಿಯುಳ್ಳವನು, ವಿಶಾಲ ವುಃಖವುಳ್ಳವನು, ಕಷ್ಟ ಸಹಿಷ್ಣುವು ತನ್ನ ಆಜ್ಞೆಗೆ ವಿರೋಧ ಹೇಳಿದರೆ ಸಹಿಸತಕ್ಕವನಲ್ಲ ಹಗಲು ಬಲವುಳ್ಳವನು, ಸ್ತ್ರೀ ಸಂತಾನವುಳ್ಳವನು, ಪಾಪಿಯು, ಬಂಧು ಮಿತ್ರರಿಂದ ಬಿಡಲ್ಪಡತಕ್ಕವನು, ಸೌಭಾಗ್ಯವಂತನು, ತಾಳ್ಮೆಯುಳ್ಳವನು, ಬಲಶಾಲಿಯು ರತಿಪ್ರಿಯನು, ದೃಢವಾದ ಸ್ನೇಹಿತರುಳ್ಳವನು 'ಬಾಲ್ಯದಲ್ಲಿ ದುಃಖಿಯು ಆಗಿ ಮಧ್ಯ ಅಂತ್ಯದಲ್ಲಿ ಸುಖಿಯಾಗುವನು, ಭಕ್ತಿವಂತನು, ಧರ್ಮಪ್ರಿಯನು, ಪಶುಗಂಡವು ಜಲಗಂಡವು, ವಿಷಜಂತು ಭಯವುಳ್ಳವನು, ಅಕಸ್ಮಾತ್ ರೋಗ ಪೀಡೆಯು, ಸ್ತ್ರೀ ಮೂಲಕ ಗಂಡವು ೧ ವರ್ಷದಲ್ಲಿ ರೋಗಪೀಡೆಯು, ೬ ವರ್ಷದಲ್ಲಿ ಜ್ವರಗಂಡವು ೪೦ ವರ್ಷದಲ್ಲಿ ಕ್ರೂರಕಂಟಕವು ೫೬ ವರ್ಷ ಪರಮಾಯುಷ್ಯವು.

-೩. ಮಿಥುನರಾಶಿ-

ಮಿಥುನ ರಾಶಿಯಲ್ಲಿ ಚಂದ್ರನಿರುವಾಗ ಹುಟ್ಟಿದವನು, ವ್ಯಭಿಚಾರಿಯು ಸ್ತ್ರೀಲೋಲನು, ಕಾಮತಂತ್ರಕುಶಲನು ರಕ್ತನೇತ್ರನು, ವಿದ್ಯಾವಂತನು ಪರಸೇವಾನಿರತನು, ಚುರುಕುಬುದ್ಧಿಯುವನು, ಪರರ ಇಂಗಿತ ತಿಳಿಯುವವನು ಹಾಸ್ಯಗಾರನು, ಜೂಜುಗಾರನು, ಮೃದುಭಾಷಿಯು, ಬಹುಭಕ್ಷಕನು, ಸಂಗೀತಲೋಲನು- ಷಂಡರಲ್ಲಿ ರಮಿಸುವವನು, ಹೊಟ್ಟೆಯಲ್ಲಿ ಗಂಟು ಉಳ್ಳವನು, ೧ನೇ ವರ್ಷದಲ್ಲಿ ಶೀತಜ್ವರವು ೫ ವರ್ಷದಲ್ಲಿ ಅಗ್ನಿಭಯವು, ೭ ವರ್ಷದಲ್ಲಿ ಪ್ರಾಣ ಭಯವು, ೯ ವರ್ಷದಲ್ಲಿ ವಾಹನ ಪಶುಭಯವು, ೧೩ ವರ್ಷದಲ್ಲಿ

ಜಲಭಯವು ೧೭ ವರ್ಷದಲ್ಲಿ ಶೀತಜ್ವರವು೨೨ ವರ್ಷದಲ್ಲಿ ಮೇಹರೋಗವು ೩೦ ವರ್ಷದಲ್ಲಿ ಜ್ವರಗಂಡವು ೬೫ ವರ್ಷ ಪರಮಾಯುಃಷ್ಯವು.

—೪. ಕರ್ಕರಾಶಿ—

ಕರ್ಕರಾಶಿಯಲ್ಲಿ ಚಂದ್ರನಿರುವಾಗ ಹುಟ್ಟಿದವನು, ಕುಟಿಲನು, ಸನ್ಮಿತ್ರರುಳ್ಳವನು, ದೈವಜ್ಞನು ಚಂದ್ರನ ಹಾಗೆ ಕ್ಷಯವೃದ್ಧಿಯುಳ್ಳವನು. ಕೆಲವು ದಿವಸ ಧನ ಸಂಪಾದನೆ ಮಾಡಿ ಕೆಲವು ದಿವಸ ಕಳೆದುಕೊಳ್ಳತಕ್ಕವನು, ಸ್ನೇಹಪರನು, ತೋಟ, ಅಡವಿ. ನೀರು ಪ್ರದೇಶಗಳಲ್ಲಿ ಪ್ರೀತಿವುಳ್ಳವನು ಜಲಕಾರ್ಯಾರಂಭ ಮಾಡಿಸುವವನು, ವಿದ್ಯಾವಂತನು ಮೃಷ್ಟಾನ್ನಭೋಜನಪ್ರಿಯನು, ಈ ರಾಶಿಯಲ್ಲಿ ಜನಿಸಿದವರಿಗೆ ನೇತ್ರರೋಗವು, ಮೂತ್ರರೋಗವು, ಕ್ಷಯ ಜಾಡ್ಯವು ಬಾಲ್ಯದಲ್ಲಿ ಸಂದುರೋಗ, ಅಗ್ನಿಭಯ, ಶಸ್ತ್ರಘಾಯ ಸ್ತ್ರೀ ಮೂಲಕ ಗಂಡವು ೩ ವರ್ಷದಲ್ಲಿ ಶೀತಜ್ವರ. ೭-೧೧-೧೬--೨೯-೪೫-೫೧ ವರ್ಷಗಳಲ್ಲಿ ಗಂಡಕಾಲವು ೮೦ ವರ್ಷ ಪರಮಾಯುಷ್ಯವು.

—೫ ಸಿಂಹ ರಾಶಿ—

ಈ ರಾಶಿಯಲ್ಲಿ ಚಂದ್ರನಿರುವಾಗ ಹುಟ್ಟಿದವನು, ಬಹು ಕೋಪಿಯು ವಿಶಾಲ ನೇತ್ರದವನು ಅಲ್ಪ ಸಂತಾನಿಯು; ಸ್ತ್ರೀಯರಿಗೆ ದ್ವೇಷಿಯು, ವನ ಪರ್ವತ ಪ್ರಯಾಣಗಳಲ್ಲಿ ಅಪೇಕ್ಷೆಯುಳ್ಳವನು. ಮಾಡಕೂಡದ ಕೆಲಸಗಳಲ್ಲಿ ಹೆಚ್ಚಾಗಿ ಕೋಪ ಮಾಡುವವನು ಹಸಿವು ಬಾಯಾರಿಕೆಯುಳ್ಳವನು, ಹೊಟ್ಟೆ ಹಲ್ಲುನೋವುಗಳಿಂದ ಬಾಧೆ ಪಡುವವನು, ಚಪಲ ಚಿತ್ತನು ದಾನಶೂರನು ಧೈರ್ಯಶಾಲಿಯು; ತಾಯಿ ಹೇಳಿದಂತೆ ಕೇಳುವವನು, ಈ ರಾಶಿಯಲ್ಲಿ ಹುಟ್ಟಿದವರಿಗೆ ಜಲಗಂಡವು ಕ್ಷಯರೋಗವು ಹೊಟ್ಟೆ ಶೂಲಿಯು ಸರಕಾರದ ತೊಂದರೆಯು, ಸ್ತ್ರೀಮೂಲಕ ಗಂಡವು ೭-೮ ವರ್ಷಗಳಲ್ಲಿ ಜಲಗಂಡವು ೧೩-೧೭-೨೫ ೩೩-೪೧ ವರ್ಷಗಳಲ್ಲಿ ಗಂಡಕಾಲವು. ೭೨ ವರ್ಷ ಪರಮಾಯುಃಷ್ಯವು.

-೬. ಕನ್ಯಾರಾಶಿ-

ಈ ರಾಶಿಯಲ್ಲಿ ಚಂದ್ರನಿರುವಾಗ ಹುಟ್ಟಿದವನು, ನಾಚಿಕೆಯಿಂದ ಸೋಮಾರಿತನದಿಂದ, ವರ್ತಿಸುವವನು ಸುಂದರವಾದ ನೋಟವುಳ್ಳವನು, ದೀರ್ಘ

ಬಾಹುವುಳ್ಳವನು. ಸೌಖ್ಯವೇಹಿಯು, ಮೃದು ಶರೀರಿಯು. ಸತ್ಯ ಭಾಷಿಯು ನೃತ್ಯ ಗೀತ ವಿದ್ಯೆಗಳಲ್ಲಿ ನಿಪುಣನು; ಧರ್ಮಿಷ್ಠನು, ಶಾಸ್ತ್ರಜ್ಞನು, ಸೂಕ್ಷ್ಮ ಬುದ್ಧಿಯುಳ್ಳವನು' ಕಾಮಕ್ರೀಡಾಲೋಲನು, ಅನ್ಯದೇಶ ಸಂಚಾರಿಯು., ಪ್ರಿಯ ಭಾಷೆಯು, ಸ್ತ್ರೀ ಸಂತಾನಿಯು, ಪುತ್ರರು ನಾಶವಾಗುವರು. ಪರಧನ ಪರ ವಿಭವದಿಂದ ಕೂಡಿದವನು, ಈ ರಾಶಿಯಲ್ಲಿ ಹುಟ್ಟಿದವರಿಗೆ ಶೀತಜ್ವರ ಗಂಡವು ಮೋಹರೋಗವು ಜಲಭಯವು, ಸರ್ಪಭಯವು, ವಾಹನ ಪಶುಭಯವು, ಎತ್ತರದ ಸ್ಥಳದಿಂದ ಬೀಳುವಭಯವು, ಶತೃಕಂಟಕವು, ಜಲ ಸಮೀಪದಲ್ಲಿ ಅಕಸ್ಮಾತ್ ಪಿಶಾಚಭಯವು, ೯ ವರ್ಷದಲ್ಲಿ ಜ್ವರಗಂಡವು, ೧೩-೧೫-೨೧-೩೭-೪೫ ವರ್ಷಗಳಲ್ಲಿ ಕಂಟಕವು ೮೭ ವರ್ಷ ಪರಮಾಯುಷ್ಯವು.

೭. ತುಲಾರಾಶಿ

ಈ ರಾಶಿಯಲ್ಲಿ ಚಂದ್ರನಿರುವಾಗ ಹುಟ್ಟಿದವನು, ಜನರಲ್ಲಿ, ಪ್ರಿಯನು ದೇವ ಬ್ರಾಹ್ಮಣರಲ್ಲಿ ಭಕ್ತಿಯುಳ್ಳವನು, ವಿವೇಕಶಾಲಿಯು. ನಿರ್ಮಲಚಿತ್ತನು, ಹೆಂಗಸರು ಹೇಳಿದಂತೆ ಕೇಳತಕ್ಕವನು, ಉನ್ನತ ಶರೀರಿಯು, ಕೃಶಶರೀರಿಯು, ಸಂಚಾರದಲ್ಲಿ ಆಸಕ್ತನು, ಧನವಂತನು, ಹೀನಾಂಗವುಳ್ಳವನು, ತನಗೆ ತಂದೆ ತಾಯಿಗಳು ಇಟ್ಟ ಹೆಸರಲ್ಲದೆ, ಸಭೆಯಲ್ಲಿ ಮತ್ತೊಂದು ಹೆಸರಿನಿಂದ ಪ್ರಸಿದ್ಧಿ ಹೊಂದತಕ್ಕವನು. ವ್ಯಾಪಾರದಲ್ಲಿ ಸಮರ್ಥನು, ಸ್ವಜನರಲ್ಲಿ ಉಪಕಾರಿಯು, ರೋಗಶರೀರಿಯು ಬಂಧುಗಳಲ್ಲಿ ನಿಷ್ಠುರವಾಗುವನು, ಹೆಂಗಸರಿಂದ ಗಂಡವು, ಬಾಲ್ಯಗಲ್ಲಿ ನೇತ್ರ ಭಾಧೆಯು, ವ್ರಣಬಾಧೆಯು, ಅಕಸ್ಮಾತ್ ಸಂಮರೋಗವು ೨-೬-೧೨ ೨೦-೨೮-೩೬-೪೪ ವರ್ಷಗಳಲ್ಲಿ ಗಂಡಕಾಲವು ೭೦ ವರ್ಷ ಪರಮಾಯುಷ್ಯವು

೮ ವೃಶ್ಚಿಕರಾಶಿ

ಈ ರಾಶಿಯಲ್ಲಿ ಚಂದ್ರನಿರುವಾಗ ಹುಟ್ಟಿದವನು, ವಿಶಾಲ ನೇತ್ರದವನು. ವಿಶಾಲವಾದ ಮುಖವುಳ್ಳವನು. ಪುಂಡಾಟಿಕೆಯುಳ್ಳವನು, ತಾಯಿ ತಂದೆಗುರುಗಳಿಂದ ಮನಸ್ತಾಪ ಮಾಡಿಕೊಳ್ಳುವವನು ಬಾಲ್ಯದಲ್ಲಿ ವ್ಯಾಧಿಪೀಡಿತನು ರಾಜಪೂಜ್ಯನು, ಅಧಿಕಾರವುಳ್ಳವನು, ಕ್ರೂರ ಸ್ವಭಾವದವನು, ಗುಪ್ತವಾಗಿ ಪಾಪಕಾರ್ಯ ಮಾಡುವವನು. ಪಾದಗಳಲ್ಲಿ ಮತ್ಸ್ಯ ಮುಂತಾದ ಪಕ್ಷಿರೇಖೆಗಳುಂಟು

ವಿಶೇಷ ನಿದ್ರೆಯಿಂದ ಕೂಡಿದವನು. ತಾಯಿಯಿಂದ ದುಃಖಪಡುವನು. ಜಲಗಂಡವು ವಾಹನ, ಪಶುಗಂಡವು ಸರ್ಪಭಯವು, ಹೆಂಗಸರಿಂದ ಕಲಹವು, ಕ್ಷಯರೋಗವು ಮೇಹರೋಗವು. ೩-೯-೧೧-೨೧-೩೩-೪೫ ವರ್ಷಗಳಲ್ಲಿ ಗಂಡಕಾಲವು ೬೭ ವರ್ಷ ಪರಮಾಯುಷ್ಯವು.

೯. ಧನಸ್ಸು ರಾಶಿ

ಈ ರಾಶಿಯಲ್ಲಿ ಚಂದ್ರನಿರುವಾಗ ಹುಟ್ಟಿದವನು ದೀರ್ಘಮುಖಿಯು ಕವಿತ್ವ ಬಲ್ಲವನು ಮಾತುಗಾರನು, ಬಲಶಾಲಿಯು, ಧರ್ನುವನ್ನು ಬಲ್ಲವನು, ಬಂಧುದ್ವೇಷಿಯು ಚಮತ್ಕಾರವಾಗಿ ಅಧೀನವನ್ನು ಹೊಂದುವವನು ಉಪಾಯ ದಿಂದ ವಶವಾಗುವನು. ಒರೆಯುವರಲ್ಲಿ ನಿಪುಣನು, ಕಾರ್ಯದಕ್ಷನು, ಮಹಾ ದೀಕ್ಷಾವಂತನು. ಈ ರಾಶಿಯಲ್ಲಿ ಹುಟ್ಟಿದವರಿಗೆ ಆಯುಧವ್ರಣದಿಂದ ಗಂಡವು ಚೋರಗಂಡವು, ಸ್ತ್ರೀ ಮೂಲಕ ಗಂಡವು, ಕೊಂಬುಗಳುಳ್ಳ ಜಂತು ವಿನಿಂದ ಭಯವು ಅಗ್ನಿಭಯ, ನೇತ್ರಪೀಡೆಯು, ಮೇಹರೋಗವು ೨-೧೦-೧೪ ೨೬-೪೨ ವರ್ಷಗಳಲ್ಲಿ ಗಂಡಾಂತರವು ೬೦ ವರ್ಷ ಪರಮಾಯುಷ್ಯವು.

—೧೦. ಮಕರ ರಾಶಿ—

ಈ ರಾಶಿಯಲ್ಲಿ ಚಂದ್ರನಿರುವಾಗ ಹುಟ್ಟಿದವನು ಹೆಂಡತಿ ಮಕ್ಕಳಲ್ಲಿ ಪ್ರೀತಿಯುಳ್ಳವನು. ಧರ್ಮಮಾಡುತ್ತೇನೆಂದು ಧನವನ್ನು ತಿನ್ನುವವನು, ಲಕ್ಷಣ ನೇತ್ರವುಳ್ಳವನು. ಸೌಭಾಗ್ಯವಂತನು, ದಾರಿ ನಡೆಯುವದರಲ್ಲಿ ಪ್ರೇಮ ವುಳ್ಳವನು, ಚಳಿಯನ್ನು ಸಹಿಸಲಾರದವನು, ಸೋಮಾರಿಯು ಬಲಿಷ್ಠನು ಲೋಭಿಯು ಹೇಳಿದ ಮಾತ್ರದಿಂದ ಗ್ರಹಿಸುವವನು ನಾಚಿಗೆ, ದಯವಿಲ್ಲದವನು ಹೀನಜಾತಿಯ ಸ್ತ್ರೀಯರಲ್ಲಿಯೂ,ವೃದ್ಧ ಸ್ತ್ರೀಯರಲ್ಲಿಯೂ, ಆಸಕ್ತನು,ಕವಿತ್ವ ಬಲ್ಲವನು, ಈ ರಾಶಿಯಲ್ಲಿ ಹುಟ್ಟಿದವರಿಗೆ ನೀರಿನಲ್ಲಿ ಕಂಟಕವು, ಅಶ್ವವಾಹನ ಶುಭಯವು, ಜಲ ಸಮೀಪದಲ್ಲಿ ಅಕಸ್ಮಾತ್ ಭಯವು, ಶೀತರೋಗವುಳ್ಳವನು ಮಹಾ ವ್ಯಾಧಿರೋಗವುಳ್ಳವನು ಬಾಲ್ಯದಲ್ಲಿ ವಿಶೇಷವಾಗಿ ಕಾಡುತ್ತದೆ. ೪-೧೧ ೨-೩೮-೫೪ಇತ್ಯಾದಿ ವರ್ಷಗಳಲ್ಲಿ ಗಂಡಕಾಲವು ೭೨ ವರ್ಷ ಪರಮಾಯುವು

—೧೧ ಕುಂಭರಾಶಿ—

ಈ ರಾಶಿಯಲ್ಲಿ ಚಂದ್ರನಿರುವಾಗ ಹುಟ್ಟಿದವನು ಉದ್ದವಾದ ಕೊರಳುಳ್ಳವನು ಉದ್ದವಾದ ಕೂದಲು ಶರೀರವುಳ್ಳವನು. ದೊಡ್ಡ ತೊಡೆ ಬೆನ್ನು ಬಾಯಿ ಟೊಂಕಗಳುಳ್ಳವನು ಕಿವಿಗಳು ಮಂದ ಪರಧನ ಪರಸ್ತ್ರೀಯರನ್ನು ಅಪಹರಿಸುವವನು ಪಾಪಕಾರ್ಯವಮಾಡುವವನು. ಒಂದು ಕಾಲದಲ್ಲಿ ಧನವಂತನಾಗಿಯೂ ಮತ್ತೊಂದು ಕಾಲದಲ್ಲಿ ಧನಹೀನನಾಗಿಯೂ ಪುಷ್ಪ ಸುಗಂಧವಸ್ತು ಸ್ನೇಹಿತರಲ್ಲಿ ಪ್ರೇಮವುಳ್ಳವನು, ಮಾರ್ಗದಲ್ಲಿ ಕಷ್ಟಪಡುವನು. ಈ ರಾಶಿಯಲ್ಲಿ ಹುಟ್ಟಿದವರಿಗೆ ನದಿಯಲ್ಲಿ ಭಯವು, ಮರದಮೇಲಿಂದ ಬೀಳುವನು. ಸರಕಾರದಿಂದ ಮನೋವ್ಯಸನವು ಶೀತರೋಗವುಳ್ಳವನು ನೇತ್ರರೋಗವುಳ್ಳವನು. ೭–೯–೧೭–೨೩–೩೪–೪೮–೫೫ ವರ್ಷಗಳಲ್ಲಿ ಗಂಡಕಾಲವು ೭೦ ವರ್ಷಪರಮಾಯುಷ್ಯವು.

—೧೨ ಮೀನರಾಶಿ—

ಈ ರಾಶಿಯಲ್ಲಿ ಚಂದ್ರನಿರುವಾಗ ಹುಟ್ಟಿದವನು. ಜಲಸಮ್ಬಂಧ ಪದಾರ್ಥದಿಂದಲೂ, ರಸಪದಾರ್ಥದಿಂದಲೂ, ಮುತ್ತು ಮೊದಲಾದ ಬಿಳುಪು ಪದಾರ್ಥಗಳ ಕ್ರಯವಿಕ್ರಯದಿಂದಲೂ ಧನಸಂಪಾದಿಸುವನು. ಹೆಂಡತಿಯಲ್ಲಿಯೂ, ವಸ್ತ್ರಾಭರಣಗಳಲ್ಲಿಯೂ, ಪ್ರೇಮವುಳ್ಳವನು ಪರಧನದಿಂದಕೂಡಿದವನು. ಸುಂದರವಾದ ಶರೀರವುಳ್ಳವನು ದೊಡ್ಡ ತಲೆ ಹಾಗೂ ಮೂಗುಳ್ಳವನು ಶಾಸ್ತ್ರಜ್ಞನು ನಿಕ್ಷೇಪಧನ ದೊರಕಿಸತಕ್ಕವನು ವಿದ್ಯಾವಂತನು ಜಯಶೀಲನು ಹೆಂಗಸಿನ ಆಜ್ಞಾಪ್ರಕಾರ ನಡೆಯುವವನು. ಅಶ್ವವಾಹನವುಳ್ಳವನು ಜಲಕಾರ್ಯಾರಂಭ ಮಾಡಿಸುವವನು. ಮಾವು, ತೆಂಗು ಮುಂತಾದ ಫಲ ವೃಕ್ಷಗಳನ್ನು ಹಾಕಿಸುವವನು. ಈ ರಾಶಿಯಲ್ಲಿ ಹುಟ್ಟಿದವರಿಗೆ ಸರಕಾರದ ಭಯವು, ಚೋರ ಭಯವು ಮೂತ್ರ ಕಟ್ಟುವದು ಚಾತುರ್ಥಿಕ ಜ್ವರಗಂಡವು. ಜಲಗಂಡವು ಅಕಸ್ಮಾತ್ ವಿಷಜಂತು ಭಯವು, ೧–೫–೯–೧೫–೨೭–೩೬–೪೮ ಈ ವರ್ಷಗಳಲ್ಲಿ ಗಂಡಾಂತರವು ೬೫ ವರ್ಷಪರಮಾಯುಷ್ಯವು.

ಜನನ ಕಾಲದಲ್ಲಿ ಚಂದ್ರನಿರುವ ರಾಶಿಯೂ, ಚಂದ್ರನಿರುವ ರಾಶ್ಯಾಧಿಪತಿಯೂ, ಚಂದ್ರನೂ ಇವು ಮೂರು ಬಲಯುಕ್ತವಾದ ಪಕ್ಷದಲ್ಲಿ ಮೇಲೆ

ಹೇಳಲ್ಪಟ್ಟ ರಾಶಿ ಸ್ವಭಾವಗಳು ಸಂಪೂರ್ಣವಾಗಿ ಫಲಿಸುವವೆಂಆಲೂ, ಬಲಾ ಬಲ ಮಿಶ್ರಿತವಾಗಿದ್ದರೆ ಸ್ವಲ್ಪ ಕಡಿಮೆಯಾಗಿ ಜರಗುತ್ತವೆ. ಹಿಂದೆ ಹೇಳಿದ ಗಂಡ ಕಾಲಗಳು ದಶಾಭುಕ್ತ್ಯಾನುಸಾರವಾಗಿ ಆಯಾಯ ವರ್ಷಗಳಿಗೆ ಸರಿಯಾಗಿ ಮಾರಕಗಳು ಬಂದದ್ದಾದರೆ ಸದರಿ ಗಂಡ ಕಾಲಗಳು ಸರಿಯಾಗಿ ಜರಗುತ್ತವೆ ಮಾರಕ ಕಾಲವು ಬಾರದೇ ಇದ್ದ ಪಕ್ಷದಲ್ಲಿ ದೇಹಪೀಡಾದಿಗಳು ಸೂಕ್ಷ್ಮವಾಗಿ ಮಾತ್ರ ಜರಗುವವು.

ಚಂದ್ರ ರಾಶಿ ಮುಗಿದುದು

ದ್ವಾದಶ ಲಗ್ನ ಫಲ ವಿಚಾರವು

೧. ಮೇಷಲಗ್ನ

ಈ ಲಗ್ನದಲ್ಲಿ ಹುಟ್ಟಿದವನು ಬಹುಕೋಪಿಯು. ಮಿತ್ರ ಭೇದ ಮಾಡು ವವನು ಆಡಿದ ಮಾತು ತಪ್ಪಿಸುವವನು ವಾತ ಪಿತ್ತ ಪ್ರಕೃತಿಯುಳ್ಳವನು. ಲೋಭಿಯು ಬಹು ದುಃಖವನ್ನು ಅನುಭವಿಸುವವನು. ಚಿಕ್ಕಂದಿನಲ್ಲಿ ಹಿರಿಯ ರಿಂದ ವ್ಯಸನ ಪಡುವವನು. ಗಂಡು ಸಂತಾನಕ್ಕೆ ವಿಘ್ನವುಂಟು. ನೆಂಟರಿಗೂ ಸೋದರರಿಗೂ ಹಿತವನ್ನು ಮಾಡುತ್ತಾನೆ. ದುರ್ಬುದ್ಧಿಯುಳ್ಳವನು ವಿಶೇಷ ಕಾರ್ಯ ಮಾಡುವವನು. ಮಾಡಿದ ಕೆಲಸಕ್ಕೆ ಪ್ರಯೋಜನ ಇಲ್ಲದೇಹೋಗು ವವನು, ನೀಚಳಾಗಿಯೂ ಭಾವಿಕೋರಳಾಗಿಯೂ ಅಂಗ ವೈಕಲ್ಯವುಳ್ಳವ ಳಾಗಿಯೂ ಇರುವ ಹೆಂಡತಿ ದೊರೆಯುತ್ತಾಳೆ. ಅಪಮಾನಿಗೆ ಸ್ನೇಹಿತರು ಅಧಿಕವಾಗಿರುವರು, ಈ ಲಗ್ನದಲ್ಲಿ ಹುಟ್ಟಿದವರಿಗೆ ಆಯುಧಗಂಡ ವಿಷಗಂಡ ಜಲಗಂಡ ಅಗ್ನಿಗಂಡ ಇತ್ಯಾದಿ ಗಂಡಕಾಲಗಳು ಪಿತ್ತವಿಕಾರರೋಗವು ಎತ್ತರ ವಾದ ಸ್ಥಲದಿಂದ ಬೀಳುವನು ಹಾಗೂ ೧೫ ದಿವಸ ಬಾಧೆ ಪಡುವನು.

–೨. ವೃಷಭ ಲಗ್ನ –

ಈ ಲಗ್ನದಲ್ಲಿ ಹುಟ್ಟಿದವನು ದಪ್ಪ ತುಟಿ ಅಗಲವಾದ ಹಣೆಯುಳ್ಳವನು ಶೀತ ಪ್ರಕೃತಿಯುಳ್ಳವನು. ಖರ್ಚುದಾರನು, ಹೆಣ್ಣು ಮಕ್ಕಳು ಹೆಚ್ಚು. ತಂದೆ ತಾಯಿಗಳಲ್ಲಿ ಮನಸ್ತಾಪ ಮಾಡಿಕೊಳ್ಳುವವನು. ಯಾವಾಗಲೂ ಹೆಂಡತಿ

ಯನ್ನು ಅಪೇಕ್ಷಿಸುವವನು ತನ್ನ ಜನರನ್ನು ಬಾಧಿಸುವವನು. ಆಯುಧ ಗಂಡ ಮೃಗಗಳಿಂದ ಬಾಧೆ ಪಡುವನು ಒಂಭತ್ತನೇ ವರ್ಷ, ಆಯಾಸವು ಜಲಗಂಡ ಪಶುಗಂಡಗಳು ಪ್ರಬಲ ವಿರೋಧವು ಮಾರ್ಗದಲ್ಲಿ ಕಷ್ಟ ಪಡುವನು. ಪರದೇಶ ದಲ್ಲಿ ಅಥವಾ ಪರ ಊರಲ್ಲಿ ಮರಣವು.

೩. ಮಿಥುನ ಲಗ್ನ

ಈ ಲಗ್ನದಲ್ಲಿ ಹುಟ್ಟಿದವನು. ಇಷ್ಟವಾಗಿ ಮಾತಾಡುವವನು. ವಿಶೇಷ ವಾಗಿ ಕೆಲಸಮಾಡುವವನು ಮಿಶ್ರಪ್ರಕೃತಿಯುಳ್ಳವನು ಇಬ್ಬರು ತಾಯಿ ಗಳು ಇರುವರು. ಅಲ್ಪ ಬುದ್ಧಿಯುಳ್ಳವನು. ಕೃಶವಾದ ದೇಹಿಯು ದೊಡ್ಡ ವರಲ್ಲಿಯೂ ಸಜ್ಜನರಲ್ಲಿಯೂ ಪೂಜ್ಯನಾಗುತ್ತಾನೆ. ಅಣ್ಣ ತಮ್ಮಂದಿರಿಂದ ವ್ಯಸನ ಪಡುವವನು. ಶತ್ರುಗಳನ್ನು ಮರ್ದಿಸುವವನು. ಗುಣವಂತನು ಬಹುಕಾರ್ಯಗಳಲ್ಲಿ ಪ್ರೇಮುಳ್ಳವನು. ಧರ್ಮಪ್ರೇಮಿಯು ಅಧರ್ಮಕ್ಕೆ ಹೋಗ ದವನು ಹಲವುಬಗೆಯಾಗಿ ಬಂದ ಲಾಭಗಳನ್ನು ಅನೇಕ ದೋಷಗಳಿಂದ ಹಾಳು ಮಾಡಿಕೊಳ್ಳುವವನು. ಅನೇಕ ಸ್ತ್ರೀಯರಲ್ಲಿ ರಮಿಸುತ್ತಾನೆ ಕ್ರೂರ ವಾದ ರೋಗಗಳನ್ನು ಗೆಲ್ಲುವನು ಸರ್ಪಗಂಡವು ಮಾಟ, ಮರವೆ ಮಾಂತ್ರಿಕ ವಿಷ ರೋಗಗಳಿಂದ ಗಂಡವು ಮೃಗ ಭಯವು. ಜಲಗಂಡವು.

೪. ಕರ್ಕಲಗ್ನ

ಈ ಲಗ್ನದಲ್ಲಿ ಹುಟ್ಟಿದವನು ಮೇಹರೋಗದಿಂದ ಕಷ್ಟ ಪಡುವನು. ಸ್ಥಿರವಿಲ್ಲದ ಬುದ್ಧಿಯುಳ್ಳವನು. ಭಯ ಸ್ವಭಾವದವನು ಎದೆಯಲ್ಲಿ ಗುರುತು ಇರು ತ್ತದೆ. ಶೀತ ಪ್ರಕೃತಿಯು ಹಟವಾದಿಯು ಗ್ರಹಿಸಿದ್ದನ್ನು ಮರೆಯುವವನಲ್ಲ ದುಷ್ಟ ಶತ್ರುಗಳುಳ್ಳವನು ಪರರ ವಸ್ತುಗಳನ್ನು ವೆಚ್ಚ ಮಾಡುವವನಲ್ಲ. ತನ್ನ ಜನಗಳಿಂದ ಗರ್ವಪಡುತ್ತಾನೆ. ಜನರಿಂದ ಸಿಮ್ಮರ ಹೊಂದುತ್ತಾನೆ. ಅನ್ಯ ದೇಶದಲ್ಲಿ ಶ್ರಮ ಪಡುತ್ತಾನೆ. ಯಾವಾಗಲೂ ಧನವನ್ನು ಸಂಪಾದಿಸಬೇಕೆಂದು ಪ್ರಯತ್ನ ಮಾಡುತ್ತಾನೆ. ಪರರ ಹಂಗಿಲ್ಲದವನು. ಸಂತತಿಯಲ್ಲಿ ಮನ ಸ್ತಾಪ ಮಾಡಿಕೊಳ್ಳುವವನು ಶತ್ರುಗಳಿಂದ ಗೆಲ್ಲಲ್ಪಡುವನು, ಗಂಟಲಿನ ರೋಗವು ಶ್ಲೇಷ್ಮವಾಧಿಯು ಉರುಲು ಹಾಕಿಕೊಳ್ಳುವಿಕೆಯು ನೀರು ಸೇರಿ ದೊಡ್ಡ ಬೆಳೆಯುವಿಕೆಯು ಇತ್ಯಾದಿಗಳಿಂದ ಮರಣವು.

೫. ಸಿಂಹಲಗ್ನ

ಈ ಲಗ್ನದಲ್ಲಿ ಹುಟ್ಟಿದವನು, ಕಠಿಣ ಸ್ವಭಾವವುಳ್ಳವನು. ಭೋಗವಸ್ತುಗಳಲ್ಲಿ ಅಪೇಕ್ಷೆಯುಳ್ಳವನು, ಪಿತ್ತಪ್ರಕೃತಿಯುಳ್ಳವನು ಉನ್ನತವಾದ ಮೂಗುಳ್ಳವನು ಬಹುಕೆಲಸಗಳನ್ನು ಆರಂಭಿಸುವವನು ಕುಟುಂಬ ವೃದ್ಧಿಯುಳ್ಳವನು, ಸ್ವಲ್ಪ ರೋಗಿಯು ಜನಸಮ್ಮತನು. ಪ್ರಸಿದ್ಧವಂತನು, ಸಹಜವಾಗಿ ವ್ಯಸನಪಡುತ್ತಾನೆ ಧೈರ್ಯಶಾಲಿಯು ತನ್ನವರನ್ನು ಘಾತಿಸುವವನು, ಅನೇಕ ಉಪಾಯಗಳಿಂದ ಧನವನ್ನು ಸಂಪಾದಿಸುತ್ತಾನೆ, ಧರ್ಮವಂತನು, ಕುಲವತಿಯಾದ ಹೆಂಡತಿಯನ್ನು ಪಡೆಯುತ್ತಾನೆ ಹಲ್ಲುನೋವು ಸೊಂಟನೋವು ಮೊಣಕಾಲು ನೋವು ಆಯುಧಗಂಡವು, ವಿಷಗಂಡವು, ರೋಗಪೀಡೆಯು ಜಲ ಗಂಡವು ಇತ್ಯಾದಿಗಳಿಂದ ಮರಣವು.

೬. ಕನ್ಯಾಲಗ್ನ

ಈ ಲಗ್ನದಲ್ಲಿ ಹುಟ್ಟಿದವನು, ಸವಿನುಡಿಗಳುಳ್ಳವನು, ಕಾಂತಿಯುಳ್ಳವನು ನೀಳವಾದ ಕೈಕಾಲುಗಳುಳ್ಳವನು, ಮಿಶ್ರಪ್ರಕೃತಿಯುಳ್ಳವನು, ಸುಂದರನು, ಹುಣ್ಣು ರೋಗದಿಂದ ಕಷ್ಟಪಡುವವನು, ಧನವಂತನು, ಲೋಭಿಯು, ತನ್ನವರಿಗೆ ಇಷ್ಟನು, ಸ್ತ್ರೀ ಸಂತಾನವುಳ್ಳವನು, ಅಣ್ಣ ತಮ್ಮಂದಿರಲ್ಲಿ ವಿರೋಧ ಮಾಡುವವನು, ಧರ್ಮಕಾರ್ಯಪ್ರಿಯನು, ಅನೇಕ ವಿಧವಾಗಿ ಲಾಭ ಹೊಂದುವವನು, ಕೆಲಸದಲ್ಲಿ ಜಾಣತನವಿರುತ್ತದೆ. ಶಸ್ತ್ರಗಂಡವು ಆಯುಧಗಂಡವು ಪಿತ್ತರೋಗವು, ಜಂತುಗಳ ಭಯವು, ಜಲಗಂಡವು, ಅಗ್ನಿಭಯವು ಇತ್ಯಾದಿಗಳಿಂದ ಮರಣವು.

೭. ತುಲಾಲಗ್ನ

ಈ ಲಗ್ನದಲ್ಲಿ ಹುಟ್ಟಿದವನಿಗೆ ಅಂಗಗಳು ವ್ಯತ್ಯಾಸ ವಿರುತ್ತವೆ. ಶೀತವಾತ ಪ್ರಕೃತಿಯುಳ್ಳವನು. ಚಂಚಲ ಬುದ್ಧಿಯುವನು ಪರೋಪಕಾರಿಯು ವಿಶೇಷವಾಗಿ ಧನವನ್ನು ಸಂಪಾದಿಸುತ್ತಾನೆ. ಧಾರಳವಾಗಿ ವೆಚ್ಚಮಾಡಿ ಕೀರ್ತಿ ಪಡೆಯುತ್ತಾನೆ ಗುರು ಹಿರಿಯರಲ್ಲಿ ಭಕ್ತಿಯುಳ್ಳವನು. ತಂದೆಯನ್ನು ಬಿಟ್ಟು ಮಿಕ್ಕ ಬಂಧುಗಳಿಗೂ ದಾಯಾದ್ಯರಿಗೂ ಮಾನ್ಯನಾಗುತ್ತಾನೆ.

ದಾರಿ ನಡೆಯುವವರಲ್ಲಿ ಪ್ರೇಮವುಳ್ಳವನು, ಧರ್ಮವಂತನು ತನ್ನವರಿಂದಲೇ ಕಷ್ಟಪಡುತ್ತಾನೆ ಹೆಂಡತಿ ತೀವ್ರಸಾಯುವಳು. ಕಲಹಪ್ರಿಯನು ಪ್ರಸಿದ್ಧಪುರುಷನ ದೆಶೆಯಿಂದಲೂ ತನ್ನವರಿಂದಲೂ ನಾಲ್ಕು ಕಾಲಿನ ಪ್ರಾಣಿಗಳಿಂದಲೂ ಗಂಡವು.

೮. ವೃಶ್ಚಿಕ ಲಗ್ನ

ಈ ಲಗ್ನದಲ್ಲಿ ಹುಟ್ಟಿದವನಿಗೆ ಅಗಲಬಾಯಿ ದೊಡ್ಡ ಹೊಟ್ಟೆ ಉಂಟು ಕೋಪಿಯು ಪಿತ್ತಸ್ವಭಾವವು ಹೆರವರಿಗೆ ಉಪಕಾರ ಮಾಡುವವನು. ಕುಟುಂಬ ವೃದ್ಧಿಯುಳ್ಳವನು ಸುಖ ಕಡಿಮೆ ದಾಯಾದ್ಯರ ಮಾತ್ಸರ್ಯವುಳ್ಳವನು ಶೂದ್ರರ ಸ್ನೇಹ ಮಾಡುವವನು, ಧರ್ಮ ಪರಿತ್ಯಾಗ ಮಾಡತಕ್ಕವನು. ಹೆಂಡತಿಯು ಸಲುವಾಗಿ ಮುಖ ಕೆಡಿಸಿಕೊಂಡು ನಿಷ್ಠುರ ಹೊಂದುವವನು ಧನ ಹೆಚ್ಚಾಗಿ ಕೊಡುವದಿಲ್ಲ ತನ್ನ ಕುಲದಲ್ಲಿ ಹುಟ್ಟಿದ ಶತ್ರುಗಳನ್ನು ಪಡೆಯುತ್ತಾನೆ, ಹಲವು ಬಗೆಯಾಗಿ ರೋಗಗಳುಂಟು ದೇಹದಲ್ಲಿ ಘಾಯವು ಶತ್ರುಗಳ ಕೈಗೆ ಸಿಗುವಿಕೆಯಿಂದ ಕಷ್ಟ ಪಡುವಿಕೆಯು ರೋಗವು ಚಿಂತೆಯು ಇವುಗಳಿಂದ, ಮರಣವು.

೯. ಧನಸ್ಸು ಲಗ್ನ

ಈ ಲಗ್ನದಲ್ಲಿ ಹುಟ್ಟಿದವನು ಶೀತೋಷ್ಣ ಪ್ರಕೃತಿಯುಳ್ಳವನು. ತುಟಿ, ಹಲ್ಲು ದಪ್ಪವುಳ್ಳವನು ಪ್ರಯತ್ನ ಶಾಲಿಯು ಧೈರ್ಯಶಾಲಿಯು ಚಾಡಿಹೇಳುವ ನೀಚ ಜನರನ್ನು ಸೇವಿಸುತ್ತಾನೆ ತೆರವಿನಿಂದಲೂ ಬೆಂಕಿಯಿಂದಲೂ, ಅರಮನೆಗೆ ದಂಡ (ಸರಕಾರಕ್ಕೆ ದಂಡ) ತೆರುವದರಿಂದಲೂ ಇದ್ದ ಧನ ನಾಶವಾಗುತ್ತದೆ. ತಿಳುವಳಿಕೆಯುಳ್ಳವನು. ಹಲವು ಸಂತಾನವುಳ್ಳವನು ಬಹುಜನರಲ್ಲಿ ಪೂಜ್ಯನು. ದಾಯಾದಿ ಮಾತ್ಸರ್ಯವುಳ್ಳವನು, ಅನ್ಯದೇಶಗಳಲ್ಲಿ ಇಷ್ಟವಾದ ಕೆಲಸ ಮಾಡುತ್ತಾನೆ. ದೊರೆಗಳ ಮನಸ್ಸಿಗೆ ತಕ್ಕ ಹಾಗೆ ನಡೆದುಕೊಳ್ಳುವವನು, ಧರ್ಮಕಾರ್ಯಪ್ರಿಯನು ಹೆಂಡತಿಯೊಡನೆ ವಿರೋಧ ಪಡೆಯುತ್ತಾನೆ. ಬಾಯಿಯಲ್ಲಿ ರೋಗಗಳುಂಟು, ಪಶುಗಂಡವು ಸರ್ಪಗಂಡವು ರಾಜಶಿಕ್ಷೆಯು ಬಂಧನವು ಇತ್ಯಾದಿಗಳಿಂದ ಮರಣವು.

೧೦. ಮಕರ ಲಗ್ನ

ಈ ಲಗ್ನದಲ್ಲಿ ಹುಟ್ಟಿದವನಿಗೆ ಮೂಗಿನ ಹೊಳ್ಳೆಗಳು, ಸಣ್ಣದಾಗಿರುವವು ಬಾಯಿ ಅಗಲ, ಕೈಕಾಲು ಉದ್ದ ವಾತ ಪ್ರಕೃತಿಯುಳ್ಳವನು, ಮೃಗದ ಹಾಗೆ

ಸುಖವುಳ್ಳವನು, ಧೀರಸ್ವಭಾವವು, ಚಪಲಬುದ್ಧಿಯು ಪೆಟ್ಟಿಗೆಸಿಕ್ಕಿ ಹೋಗು ವನು, ಕ್ಷುದ್ರವಾದ ಕುಟುಂಬವುಳ್ಳವನು, ಅಲ್ಪ ಧನವುಳ್ಳವನು, ಅಸತ್ಯವಾ ದಿಯು ಹೆಣ್ಣು ಮಕ್ಕಳುಳ್ಳವನು, ಸ್ವಂತ ಜನರು ಸತ್ತು ಹೋಗುವರು ಭ್ರಾತೃ ವೃದ್ಧಿಯುಳ್ಳವನು, ದೊಡ್ಡವರಿಂದ ಕಾಡಿಸಿದ ಧನವನ್ನು ಸಂಪಾದಿಸುತ್ತಾನೆ. ಉಪವಾಸ ಮಾಡುವವನು, ನೀಚಳಾಗಿಯೂ, ಇಷ್ಟಳಾಗಿಯೂ ಇರುವ ಹೆಂಡತಿಯನ್ನು ಹೊಂದುತ್ತಾನೆ. ಬಹಳವ್ಯಾಜ್ಯಗಾರನು, ರೋಗಿಯು ವಾತ ರೋಗದಿಂದಲೂ ಆಯುಧಗಿಂದಲೂ, ರಾಜಕೋಪದಿಂದಲೂ ವಿಷ ಪ್ರಯೋಗ ದಿಂದಲೂ, ಬೀಳುವುದರಿಂದಲೂ, ಕ್ರೂರವಾದ ಮೃಗದಿಂದಲೂ ಪಿತ್ತ ಅಜೀ ರ್ಣದಿಂದಲೂ ದಾರಿತಪ್ಪುವದರಿಂದಲೂ ಕಷ್ಟಪಡುತ್ತಾನೆ. ಶೀತಜ್ವರದಿಂದ ಗಂಡವು.

೧೧. ಕುಂಭ ಲಗ್ನ

ಈ ಲಗ್ನದಲ್ಲಿ ಹುಟ್ಟಿದವನ ಬುದ್ಧಿಯು ಮಂದವಾಗಿರುವದು. ಕ್ರೂರ ಗುಣವುಳ್ಳವನು, ಕುಲಪ್ರಾಜ್ಞನು, ಪಿತ್ತಪ್ರಕೃತಿಯುಳ್ಳವನು, ಎಳ್ಳುಹೂವಿನ ಹಾಗೆ ಮೂಗುಳ್ಳವನು, ಬಂದ ಲಾಭಗಳನ್ನು ಹೋಗಿಸಿಕೊಳ್ಳುವವನು, ಬಹುಮಂದಿ ಸೇವಕರಿರುತ್ತಾರೆ. ಅಟಲವಾದ ದೇಹವುಳ್ಳವನು, ಸ್ವಜನರಲ್ಲಿ ದ್ವೇಷಿಯಾಗುತ್ತಾನೆ ಪಾಪಕಾರ್ಯಗಳಲ್ಲಿ ಆಸಕ್ತಿಯುಳ್ಳವನು, ಸೊಗಸಾದ ಹೆಂಡತಿಯುಳ್ಳವನು, ಆಡಂಬರವಾಗಿ ಧರ್ಮಕಾರ್ಯ ಮಾಡತಕ್ಕವನು, ಹೆಂಡತಿಯ ವಿಷಯವಾಗಿ ದುಃಖಪಡುವವನು, ಶ್ಲೇಷ್ಮ ರೋಗವುಳ್ಳವನು, ಹೊಟ್ಟೆಯೊಳಗಿನ ರೋಗದಿಂದಲೂ ವಾಂತಿಯಿಂದಲೂ ಹೆಂಗಸರು ಮದ್ದು (ವಿಷ) ಇಡುವದರಿಂದಲೂ ತಂತ್ರ ಪ್ರಯೋಗದಿಂದಲೂ ಗಂಡವು.

೧೨. ಮೀನಲಗ್ನ

ಈ ಲಗ್ನದಲ್ಲಿ ಹುಟ್ಟಿದವನ ಕಣ್ಣುಗಳು ಮೀನಿನಹಾಗೆ ಇರುತ್ತವೆ. ತುಟಿಯು ಮೂಗು ದಪ್ಪಾಗಿರುವವು. ಶ್ಲೇಷ್ಮ ಪ್ರಕೃತಿಯುಳ್ಳವನು ದೊಡ್ಡ ಮನಸ್ಸು ಳ್ಳವನು; ಚರ್ಮರೋಗವುಳ್ಳವನು, ಹಲವು ಬುದ್ಧಿಯುಳ್ಳವನು, ಚೇಷ್ಟೆಯುಳ್ಳ

ವನೂ ಯೋಗ್ಯರಿಂದಲೂ ಸೇವಕರಿಂದಲೂ ಲಾಭ ನಷ್ಟಗಳುಂಟು, ತನ್ನವರಲ್ಲಿಯೂ, ಹೆಂಗಸರಲ್ಲಿಯೂ ಪೂಜ್ಯತೆಯುಳ್ಳವನು, ಒಡಹುಟ್ಟಿದವರಿಗೆ ಅಧಿಕಾರಿಯಾಗುವನು. ಪುಣ್ಯ ಕಾರ್ಯಗಳನ್ನು ಮಾಡುವವನು ಒಳ್ಳೆ ಹೆಂಡತಿ ಇದ್ದಾಗ್ಯೂ ನೀಚಳಾದ ಹೆಂಡತಿಯುಳ್ಳವನಾಗಿರುತ್ತಾನೆ, ಕ್ರೂರನಾದ ಶತೃಗಳಿರುತ್ತಾರೆ. ಮೂಲವ್ಯಾಧಿ ರೋಗವಿರುತ್ತದೆ. ಹಾವು, ನಾಯಿ, ಕ್ರೂರ ಮೃಗ ಇವುಗಳಿಂದಲೂ ಹೆಗ್ಗಡಿಗಳಾದ ಮನುಷ್ಯರಿಂದಲೂ ಗುಪ್ತರೋಗವಿಕಾರಗಳಿಂದಲೂ ಭಾರಿ(ವಿಷ) ಮದ್ದಿನಿಂದಲೂ ಉಪವಾಸದಿಂದಲೂ ಮಾರ್ಗಾಯಾಸದಿಂದಲೂ, ಮರಣವು.

ಇಲ್ಲಿ ತಿಳಿಸಿದ ಲಗ್ನಫಲಗಳು ಸರಿಯಾಗಿ ಅನುಭವಕ್ಕೆ ಬರಬೇಕಾದರೆ ಲಗ್ನದಿಂದಲೂ ಲಗ್ನದಲ್ಲಿರುವ ಗ್ರಹಗಳಿಂದಲೂ ಲಗ್ನಾಧಿಪತಿಯನ್ನು ಕೂಡಿಕೊಂಡಿರುವ ಗ್ರಹಗಳಿಂದಲೂ ಊಹಿಸಿ ಫಲವನ್ನು ತಿಳಿಯಬೇಕು.

ಮೇಷಾದಿ ದ್ವಾದಶ ರಾಶಿಗಳಲ್ಲಿ ರವಿ ಇರುವ ಫಲವಿಚಾರವು.

೧. ಮೇಷರಾಶಿಯಲ್ಲಿ ರವಿಯಿದ್ದರೆ ಪ್ರಖ್ಯಾತವಂತನು. ಚತುರನು ಸಂಚಾರಿಯು ಅಲ್ಪಧನವುಳ್ಳವನು. ಆಯುಧಗಳುಳ್ಳವನು ರವಿಯು ಇದೇ ರಾಶಿಯಲ್ಲಿ ೧೦ ಭಾಗ ಪರಮೋಚ್ಚದಲ್ಲಿದ್ದರೆ ಧನವಂತನು ಪ್ರಸಿದ್ಧವಂತನು ಬುದ್ಧಿವಂತನು ಆಗುತ್ತಾನೆ.

೨. ವೃಷಭರಾಶಿಯಲ್ಲಿದ್ದರೆ ಸುಗಂಧ ದ್ರವ್ಯ ವಸ್ತ್ರಾದಿಗಳ ಕ್ರಯ ವಿಕ್ರಯದಲ್ಲಿ ನಿಪುಣನು; ಹೆಂಗಸರಲ್ಲಿ ದ್ವೇಷಿಯಾಗುವನು, ಸಂಗೀತಪ್ರಿಯನು ಪ್ರಿಯವಾದಿಯು, ಪಿತ್ತಾಧಿಕ್ಯವುಳ್ಳವನು, ಆಗುವನು.

೩. ಮಿಥುನರಾಶಿಯಲ್ಲಿದ್ದರೆ ದೈವಜ್ಞನು, ವಿದ್ಯಾವಂತನು, ಧನವಂತನು, ಕಾರ್ಯದಕ್ಷನು, ಆಗುತ್ತಾನೆ.

೪. ಕರ್ಕರಾಶಿಯಲ್ಲಿದ್ದರೆ ದುಃಖಿಯು ಕ್ರೂರಗುಣವುಳ್ಳವನು, ಸಂಚಾರದಲ್ಲಿ ಕಷ್ಟಪಡುವವನು, ಪರೋಪಕಾರಿಯು ಆಗುತ್ತಾನೆ

೫. ಸಿಂಹರಾಶಿಯಲ್ಲಿದ್ದರೆ, ಮೂರ್ಖಸ್ವಭಾವದವನು, ಬಲಶಾಲಿಯು ಅರಣ್ಯ ಪರ್ವತ ಪ್ರದೇಶಗಳಲ್ಲಿ ಸಂಚರಿಸುವ ಆಸಕ್ತಿಯುಳ್ಳವನು, ಪಿತ್ತಾಧಿಕ್ಯವುಳ್ಳವನು ಆಗುವನು,

೬. ಕನ್ಯಾರಾಶಿಯಲ್ಲಿದ್ದರೆ ಬರೆಯುವವರಲ್ಲಿ ನಿಪುಣನು ಗಣಿತಜ್ಞನು-ಮೃದುಶರೀರಿಯು ಚಿತ್ರ ಬರೆಯುವದರಲ್ಲಿ ನಿಪುಣನು, ಆಗುತ್ತಾನೆ.

೭. ತುಲಾರಾಶಿಯಲ್ಲಿದ್ದರೆ ನೀಚರ ಸ್ನೇಹಮಾಡುವವನು ನೀಚ ಕಾರ್ಯ ಮಾಡುವವನು ಪ್ರಯಾಣದಲ್ಲಿ ಆಶೆಯುಳ್ಳವನು ತಂದೆಯಲ್ಲಿ ಮನಸ್ತಾಪ ಮಾಡಿಕೊಳ್ಳುವವನು, ಬಂಧುಗಳಲ್ಲಿ ವಿರೋಧಿಯಾಗುವನು.

೮. ವೃಶ್ಚಿಕ ರಾಶಿಯಲ್ಲಿದ್ದರೆ, ಉಗ್ರಸ್ವಭಾವದವನು ಯುಕ್ತಾಯುಕ್ತ ವಿಚಾರಮಾಡದೆ ಧೈರ್ಯದಿಂದ ಕಾರ್ಯ ಸಾಧಿಸುವವನು, ವಿದ್ಯಾವಂತನು, ಕಳ್ಳರಿಂದಲೂ ರಾಜರಿಂದಲೂ ಧನನಾಶ ಮಾಡಿಕೊಳ್ಳುವವನು ಆಗುವನು.

೯. ಧನುರಾಶಿಯಲ್ಲಿದ್ದರೆ ಸತ್ಪುರುಷರ ಸ್ನೇಹಮಾಡುವವನು, ಧನ ಸಂಪಾದನೆ ಮಾಡುವವನು, ಕೋಪಿಯು ವೇದಶಾಸ್ತ್ರಗಳನ್ನು ಸ್ವಲ್ಪ ಬಲ್ಲವನು. ಉತ್ತಮವಾದ ವಾಹನವುಳ್ಳವನು, ಧೈರ್ಯವಂತನು ಆಗುತ್ತಾನೆ.

೧೦. ಮಕರದಲ್ಲಿದ್ದರೆ ನೀಚಕಾರ್ಯಗಳನ್ನು ಮಾಡುವವನು ಸರಕಾರದ ತೊಂದರೆಯಿಂದ ಶ್ರಮಪಡುವವನು ಸ್ವಲ್ಪ ಲೋಭಿಯು, ಮೂರ್ಖ ಸ್ವಭಾವವುಳ್ಳವನು, ಶತ್ರುವೃದ್ಧಿಯುಳ್ಳವನು, ಆಗುತ್ತಾನೆ.

೧೧. ಕುಂಭದಲ್ಲಿದ್ದರೆ, ಶೂದ್ರಜನರ ಸ್ನೇಹಮಾಡುವವನು, ಪುತ್ರದ್ವೇಷವುಳ್ಳವನು, ದೊಡ್ಡವರಲ್ಲಿ ದ್ವೇಷಮಾಡಿಕೊಳ್ಳುವವನು, ಶತ್ರುಜನರಿಂದ ಧನನಾಶ ಮಾಡಿಕೊಳ್ಳುವವನು, ಆಗುವನು.

೧೨. ಮೀನರಾಶಿಯಲ್ಲಿದ್ದರೆ, ನೀರಿನಲ್ಲಿ ಹುಟ್ಟಿದ ಪದಾರ್ಥಗಳ ಕ್ರಯವಿಕ್ರಯದಿಂದ ಧನವನ್ನು ಸಂಪಾದಿಸುತ್ತಾನೆ. ಹೆಂಗಸರ ಮೂಲಕ ಧನಲಾಭ ಹೊಂದುವವನು, ಅನೇಕ ಜನ ಸ್ನೇಹಿತರುಳ್ಳವನು ಆಗುತ್ತಾನೆ.

ರವಿ-ಚಂದ್ರರು ಒಂದೇ ರಾಶಿಯಲ್ಲಿ ಕೂಡಿದ್ದರೆ

ಆ ರಾಶಿಯಿಂದ ಕಾಲಪುರುಷನ ಯಾವ ಅಂಗವಾಗುತ್ತದೆ. ಆ ಅಂಗದಲ್ಲಿ ಮತ್ಸ್ಯ ಇರುತ್ತದೆಂದು ಹೇಳಬೇಕು ಹೇಗಂದರೆ- ರವಿ-ಚಂದ್ರರುಮೇಷದಲ್ಲಿ ಕೂಡಿದ್ದರೆ ಮೇಷಾಂಗವಾದ ತಲೆಯಲ್ಲಿ ಮತ್ಸ್ಯವಿರುತ್ತದೆ ವೃಷಭದಲ್ಲಿ ಕೂಡಿದ್ದರೆ, ಕುತ್ತಿಗೆಯಲ್ಲಿ ಮತ್ಸ್ಯವಿರುತ್ತದೆ, ಮಿಥುನದಲ್ಲಿ ಕೂಡಿದ್ದರೆ ಎದೆಯಲ್ಲಿ,

ಕರ್ಕದಲ್ಲಿ ಕೂಡಿದ್ದರೆ, ಹೊಟ್ಟೆಯ ಮೇಲೆ, ಸಿಂಹರಾಶಿಯಲ್ಲಿ ಕೂಡಿದ್ದರೆ, ಹೊಕ್ಕಳ ಸಮೀಪದಲ್ಲಿ ಕನ್ಯಾಕಲ್ಲಿ ಕೂಡಿದ್ದರೆ, ಸೊಂಟದ ಮೇಲೆ, ತುಲಾದಲ್ಲಿ ಕೂಡಿದ್ದರೆ ಗುಹ್ಯಸ್ಥಾನದಲ್ಲಿ ವೃಶ್ಚಿಕದಲ್ಲಿ ಕೂಡಿದ್ದರೆ ಲಿಂಗಸ್ಥಾನದಲ್ಲಿ. ಧನುಸ್ಸಿನಲ್ಲಿ ಕೂಡಿದ್ದರೆ ತೊಡೆಯಲ್ಲಿ, ಮಕರದಲ್ಲಿ ಕೂಡಿದ್ದರೆ ಮೊಣಕಾಲಿನ ಮೇಲೆ, ಕುಂಭದಲ್ಲಿ ಕೂಡಿದ್ದರೆ, ಕಣಕಾಲಿನ ಮೇಲೆ ಮಚ್ಚೆ ಇರುತ್ತದೆಂದು ಹೇಳಬೇಕು.

ಮೇಷಾದಿ ದ್ವಾದಶ ರಾಶಿಗಳಲ್ಲಿ ಕುಜನಿರುವ ಫಲ ವಿಚಾರವು.

೧) ಮೇಷದಲ್ಲಿ ಕುಜನಿದ್ದರೆ ರಾಜಪೂಜ್ಯನು; ಸಂಚಾರ ಪ್ರಿಯನು ಅನೇಕ ಜನರ ಸಹವಾಸವುಳ್ಳವನು. ಕ್ರಯ ವಿಕ್ರಯದಲ್ಲಿ ನಿಪುಣನು. ಧನವಂತನು ಧೈರ್ಯವಂತನು, ಬಹಳವಾಗಿ ಕಾಮ ಶಕ್ತಿಯುಳ್ಳವನು. ದೇಹದಲ್ಲಿ ಘಾಯವುಂಟಾಗಿ ಗುರ್ತು ನಿಲ್ಲುವದು.

೨) ವೃಷಭದಲ್ಲಿ ಕುಜನಿದ್ದರೆ ಹೆಂಗಸರ ಮಾತು ಕೇಳುವವನು. ಬಂಧು ಮಿತ್ರರಿಗೆ ವಂಚಕನು ಪರಸ್ತ್ರೀ ರತನು. ಇಂದ್ರಜಾಲ ಮೊದಲಾದ ಮಂತ್ರ ತಂತ್ರಗಳನ್ನು ಬಲ್ಲವನು. ಅಥವಾ ಅಂಥವರ ಸಹವಾಸವನ್ನಾದರೂ ಮಾಡುವವನು. ವಾಕ್ಚಾತುರ್ಯವುಳ್ಳವನು. ವೇಷಧಾರಿಯು ಧೈರ್ಯಶಾಲಿಯು ಆಗುವನು.

೩) ಮಿಥುನ ರಾಶಿಯಲ್ಲಿದ್ದರೆ ಸಹಿಸಲು ಅಶಕ್ಯವಾದ ತೇಜಸ್ಸುಳ್ಳವನು ಪುತ್ರವಂತನು ಅನೇಕ ಜನ ಸ್ನೇಹಿತರುಳ್ಳವನು. ಉಪಕಾರವನ್ನು ಮರೆಯುವವನು ವ್ಯವಹಾರದಲ್ಲಿ ನಿಪುಣನು, ಧರ್ಮ ಕಾರ್ಯ ಪ್ರಿಯನು ಆಗುತ್ತಾನೆ.

೪) ಕರ್ಕರಾಶಿಯಲ್ಲಿದ್ದರೆ ಪ್ರಯಾಣ ಮೂಲಕವಾಗಿ ಧನಸಂಪಾದನೆ ಮಾಡುವವನು ಅಂಗವೈಕಲ್ಯವುಳ್ಳವನು ದುಷ್ಟ ಸ್ವಭಾವದವನು ಜಲ ಗಂಡವುಳ್ಳವನು. ಭೂಮಿಯಿಂದಲೂ ಅನ್ಯಜನರಿಂದಲೂ ವಿರೋಧ ಮಾಡಿಕೊಳ್ಳುವವನು ಆಗುವನು.

೫) ಸಿಂಹ ರಾಶಿಯಲ್ಲಿದ್ದರೆ ದರಿದ್ರ ಸ್ವಭಾವದವನು ದುಷ್ಟ ಸಹಿಷ್ಣುವು ಅರಣ್ಯ ಮಧ್ಯದಲ್ಲಿ ಸಂಚರಿಸುವವನು ಹೆಂಡತಿ ಮಕ್ಕಳಿಂದ ದುಃಖವನ್ನು ಹೊಂದತಕ್ಕವನು ಬಹು ಕೋಪಿಷ್ಠನು ಆಗುವನು.

೬. ಕನ್ಯಾರಾಶಿಯಲ್ಲಿದ್ದರೆ- ತೇಜಸ್ವಿಯು ಪುತ್ರವಂತನು ಕೃತಜ್ಞನು, ಸಂಗೀತಪ್ರಿಯನು, ಇಬ್ಬರು ಹೆಂಡರುಳ್ಳವನು, ಧೈರ್ಯಶಾಲಿಯು ಯಾಚಕ ಸ್ವಭಾವದವನು, ಧರ್ಮಕಾರ್ಯಗಳಲ್ಲಿ ಇಷ್ಟವುಳ್ಳವನು, ಕಾರ್ಯನಿಪುಣನು, ಆಗುವನು.

೭. ತುಲಾರಾಶಿಯಲ್ಲಿದ್ದರೆ- ಹೆಂಗಸರ ಮಾತು ಕೇಳುವವನು, ಬಂಧು ಮಿತ್ರದ್ವೇಷಿಯು, ಪರಸ್ತ್ರೀಸಂಗ ಮಾಡುವವನು, ಮಾಯಾ ವಿದ್ಯೆಯನ್ನು ಬಲ್ಲವನು ಅಥವಾ ಅಂಥವರ ಸ್ನೇಹವನ್ನು ಮಾಡುವವನು ಆಗುವನು.

೮. ವೃಶ್ಚಿಕ ರಾಶಿಯಲ್ಲಿದ್ದರೆ, ದೊಡ್ಡವರಲ್ಲಿ ಮರ್ಯಾದೆಯುಳ್ಳವನು, ಸಂಚಾರಿಯು, ಬಹುಜನರಲ್ಲಿ ಸ್ನೇಹವುಳ್ಳವನು, ಕ್ರಯ-ವಿಕ್ರಯದಲ್ಲಿ ನಿಪುಣನು, ಬಹುಕಾಮಿಯು, ದೇಹದಲ್ಲಿ ಘಾಯವುಂಟಾಗಿ ಗುರ್ತು ನಿಲ್ಲುವದು, ಬಹುವಾದಿಯು, ಚೋರ ಬುದ್ಧಿಯವನು, ಆಗುತ್ತಾನೆ.

೯. ಧನಸ್ಸಿನಲ್ಲಿದ್ದರೆ- ಖ್ಯಾತಿವಂತನು, ಸೂಕ್ಷ್ಮ ಬುದ್ಧಿಯುಳ್ಳವನು, ಯುಕ್ತಿವಂತನು, ಮಂತ್ರಿಗುಣವುಳ್ಳವನು, ಭಯವಿಲ್ಲದವನು, ಪುತ್ರ ಶೋಕ ವುಳ್ಳವನು, ಕೋಪಿಷ್ಠನು, ಆಗುವನು.

೧೦. ಮಕರದಲ್ಲಿದ್ದರೆ- ಧನವಂತನು, ಪುತ್ರವಂತನು, ರಾಜಸೇವಾನೆ ನಾದ ಗುಣವುಳ್ಳವನು, ಭೂಮಿಯನ್ನು ಸಂಪಾದಿಸುವವನು, ಧೈರ್ಯಶಾಲಿಯು, ಮುಂಗೋಪಿಯು, ಆಗುವನು.

೧೧. ಕುಂಭದಲ್ಲಿದ್ದರೆ- ಕ್ರೂರಸ್ವಭಾವದವನು. ಯಾವಾಗಲೂ ಮನೋವ್ಯಸನವುಳ್ಳವನು, ಸಂಚಾರಿಯು, ಸುಳ್ಳುಗಾರನು, ಕಲಹಪ್ರಿಯನು, ಅಣ್ಣ-ತಮ್ಮಂದಿರಲ್ಲಿ ವಿರೋಧಿಯಾಗುವನು.

೧೨. ಮೀನದಲ್ಲಿದ್ದರೆ- ಶತ್ರುವೃದ್ಧಿಯುಳ್ಳವನು, ಕೀರ್ತಿವಂತನು ಧೈರ್ಯಶಾಲಿಯು ಪುತ್ರಶೋಕವುಳ್ಳವನು. ಯುಕ್ತಿವಂತನು, ಸೂಕ್ಷ್ಮಬುದ್ಧಿ ಯುಳ್ಳವನು ಮಂತ್ರಗುಣವುಳ್ಳವನು, ಆಗುವನು.

ಮೇಷಾದಿ ದ್ವಾದಶರಾಶಿಗಳಲ್ಲಿ ಬುಧನಿರುವ ಫಲ ವಿಚಾರ

೧. ಮೇಷದಲ್ಲಿ ಬುಧನಿದ್ದರೆ ಜೂಜಿನ ಸಲುವಾಗಿ, ಧನನಾಶ ಮಾಡಿ ಕೊಳ್ಳತಕ್ಕವನು, ಶೂದ್ರಜನರ ಸ್ನೇಹ ಮಾಡುವವನು, ಚೋರ ಬುದ್ಧಿಯು ಳ್ಳವನು, ಕ್ರೂರ ಗುಣವುಳ್ಳವನು, ಕ್ರೂರ ಗುಣವುಳ್ಳ ಹೆಂಡತಿಯುಳ್ಳವನು, ಕಪಟ ಸ್ವಭಾವಿಯು ಸುಳ್ಳುಗಾರನು ಆಗುವನು.

೨. ವೃಷಭದಲ್ಲಿದ್ದರೆ- ಉಪದೇಶಕರ್ತನು, ಹೆಂಡರು ಮಕ್ಕಳಿಂದ ಸುಖ ಪಡುವವನು. ಧನ ಸಂಪಾದನೆಯಲ್ಲಿ ಇಷ್ಟವುಳ್ಳವನು, ದಾನಶೀಲನು; ತಾಯಿ-ತಂದೆಗಳಲ್ಲಿಯೂ, ಗುರು-ಹಿರಿಯರಲ್ಲಿಯೂ ಭಕ್ತಿಯುಳ್ಳವನು, ಕ್ರಯ ವಿಕ್ರಯದಲ್ಲಿ ಕುಶಲನು ಆಗುವನು.

೩. ಮಿಥುನ ರಾಶಿಯಲ್ಲಿರುವಾಗ ಹುಟ್ಟಿದರೆ, ಸತ್ಯವಾದಿಯು ಇಂಪಾದ ನುಡಿಯುಳ್ಳವನು, ಶಾಸ್ತ್ರದಲ್ಲಿಯೂ, ಸಂಗೀತದಲ್ಲಿಯೂ, ಪ್ರೇಮವುಳ್ಳವನು, ಸುಖವಂತನು ಸೂಕ್ಷ್ಮಬುದ್ಧಿಯುಳ್ಳವನು ಆಗುವನು.

೪. ಕರ್ಕರಾಶಿಯಲ್ಲಿದ್ದರೆ- ಸ್ವಾರ್ಜಿತ ಧನವುಳ್ಳವನು ಬಂಧು ವಿರೋ ಧಿಯು ಆಗುವನು.

೫. ಸಿಂಹರಾಶಿಯಲ್ಲಿದ್ದರೆ- ಧನವಂತನು, ಸುಖವಂತನು, ಪುತ್ರರಿಂದ ಬಿಡಲ್ಪಡುವನು, ಸಂಚಾರಿಯು ಮೂರ್ಖಸ್ವಭಾವದವನು, ಸ್ತ್ರೀಲೋಲನು, ನಿಂದಾಕ್ಷದನು, ಹೆಂಗಸರ ಮಾತುಕೇಳುವವನು, ಆಗುವನು.

೬. ಕನ್ಯಾರಾಶಿಯಲ್ಲಿದ್ದರೆ- ಧರ್ಮವಂತನು, ವಿದ್ಯಾವಂತನು ಸುಖ ವಂತನು ದಾನಶೂರನು, ಯುಕ್ತಿವಂತನು, ಶಾಂತನು, ನಿರ್ಭಯನು, ಧೈರ್ಯ ವಂತನು; ಸೂಕ್ಷ್ಮ ಬುದ್ಧಿಯುಳ್ಳವನು, ಸದಾಚಾರಿಯು ಆಗುವನು.

೭. ತುಲಾ ರಾಶಿಯಲ್ಲಿದ್ದರೆ- ಉಪದೇಶಕರ್ತನು, ಹೆಂಡರು ಮಕ್ಕ ಳಿಂದ ಸುಖಿಯು, ಧನ ಸಂಪಾದನೆಯಲ್ಲಿ ನಿಪುಣನು, ದಾನಶೀಲನು, ಗುರು ಹಿರಿಯರಲ್ಲಿ ಭಕ್ತಿಯುಳ್ಳವನು ಕಾರ್ಯನಿಪುಣನು ಆಗುವನು.

೮. ವೃಶ್ಚಿಕ ರಾಶಿಯಲ್ಲಿದ್ದರೆ- ಜೂಜು ಮೊದಲಾದ ಪಾಪಕಾರ್ಯ ಗಳಿಗಾಗಿ ಧನನಾಶ ಮಾಡಿಕೊಳ್ಳತಕ್ಕವನು, ಹೀನಜಾತಿಯ ಜನರಲ್ಲಿ ವಾಸ

ಮಾಡುವವನು, ಕ್ರೂರಗುಣವುಳ್ಳ ಹೆಂಡತಿಯುಳ್ಳವನು, ಕಪಟಿಯು, ಸುಳ್ಳುಗಾರನು ಆಗುವನು.

೯. ಧನಸ್ಸಿನಲ್ಲಿದ್ದರೆ– ರಾಜ್ಯಮಾನ್ಯನು ವಿದ್ಯಾವಂತನು, ವ್ಯವಹಾರದಲ್ಲಿ ನಿಪುಣನು, ಆಲೋಚನೆಯಿಂದ ತಿಳಿದು ಯುಕ್ತಿಯಿಂದ ಮಾತನಾಡುವವನು

೧೦. ಮಕರದಲ್ಲಿದ್ದರೆ–ಹೆರವರ ಸೇವಾ ಮಾಡತಕ್ಕವನು, ಬಿಟ್ಟಿಕೆಲಸ ಮಾಡುವವನು, ಸಾಲಗಾರನು, ಶಿಲ್ಪಗಾರನು, ದರಿದ್ರ ಮನಸ್ಸುಳ್ಳವನು ಆಗುವನು.

೧೧. ಕುಂಭದಲ್ಲಿದ್ದರೆ– ಇತರರ ಸೇವಾದಲ್ಲಿರುವವನು, ದರಿದ್ರನು, ಪರೋಪಕಾರಿಯು ಸಾಲಗಾರನು ಆಗುವನು.

೧೨. ಮೀನರಾಶಿಯಲ್ಲಿ ಬುಧನಿದ್ದರೆ– ಎರಡನೆಯವರ ಅಭಿಪ್ರಾಯ ತಿಳಿದು, ನಡೆಯುವದರಲ್ಲಿ ಸೇವಕರಿಗಿಂತಲೂ ಅಧಿಕನು, ಪ್ರಯತ್ನಮಾಡತಕ್ಕ ಸೇವಕರುಳ್ಳವನು, ನೀಚಕಾರ್ಯಗಳನ್ನು ಮಾಡಿ ಜೀವಿಸುವವನು ಆಗುವನು.

ಮೇಷಾದಿ ದ್ವಾದಶ ರಾಶಿಗಳಲ್ಲಿ ಗುರುವು ಇರುವ ಫಲ

೧. ಮೇಷರಾಶಿಯಲ್ಲಿ ಗುರುವಿದ್ದರೆ– ಧನವಂತನು, ಹೆಂಡರುಮಕ್ಕಳಿಂದ ಕೂಡಿದವನು, ಧರ್ಮವಂತನು, ಒಳ್ಳೆ ಸೇವಕರುಳ್ಳವನು, ದಯಾಗುಣವುಳ್ಳವನು, ಕೀರ್ತಿವಂತನು ದೇಹಕಾಂತಿಯುಳ್ಳವನು ಆಗುತ್ತಾನೆ.

೨. ವೃಷಭ ರಾಶಿಯಲ್ಲಿದ್ದರೆ– ದಾನವಂತನು, ಸರ್ವ ಜನಪ್ರಿಯನು ಶರೀರ ಸುಖವುಳ್ಳವನು ಪುತ್ರ ಮಿತ್ರರಿಂದ ಕೂಡಿದವನು ಆಗುವನು.

೩. ಮಿಥುನ ರಾಶಿಯಲ್ಲಿದ್ದರೆ– ಯುಕ್ತಿವಂತನು, ಚತುರೋಪಾಯವುಳ್ಳವನು, ಬಹುಜನರಲ್ಲಿ ಸ್ನೇಹವುಳ್ಳವನು, ಹೆಂಡತಿಯಿಂದ ಸುಖಪಡುವವನು ಗುರು–ಹಿರಿಯರಲ್ಲಿ ದ್ವೇಷ ಮಾಡಿಕೊಳ್ಳುವವನು ಆಗುತ್ತಾನೆ.

೪. ಕರ್ಕ ರಾಶಿಯಲ್ಲಿದ್ದರೆ– ಧನವಂತನು, ಪುತ್ರವಂತನು, ಸೂಕ್ಷ್ಮ ಬುದ್ಧಿಯುಳ್ಳವನು, ಸುಖವಂತನು, ಧರ್ಮಿಷ್ಠನು, ದೇವಕಾರ್ಯಗಳಲ್ಲಿ ಪ್ರೀತಿಯುಳ್ಳವನು, ಆರೋಗ್ಯವಂತನು ಆಗುತ್ತಾನೆ.

೫. ಸಿಂಹರಾಶಿಯಲ್ಲಿದ್ದರೆ– ಉತ್ತಮ ಆಭರಣ ಸಂಗ್ರಹಿಸುವವನು. ಪುತ್ರವಂತನು ಅನೇಕ ಜನರಿಂದ ಕೂಡಿದವನು ಆಗುವನು.

೬. ಕನ್ಯಾರಾಶಿಯಲ್ಲಿದ್ದರೆ— ಮಿತ್ರತ್ವವುಳ್ಳವನು ಪುತ್ರವಂತನು. ಸ್ತ್ರೀಯರಿಂದ ಸುಖ ಹೊಂದತಕ್ಕವನು ಆಗುವನು.

೭. ತುಲಾ ರಾಶಿಯಲ್ಲಿದ್ದರೆ–ಸ್ವಜನಪ್ರಿಯನು ಧರ್ಮಿಷ್ಟನು ಸುಖವಂತನು ಸೂಕ್ಷ್ಮಬುದ್ಧಿಯುಳ್ಳವನು. ದೇಹಾರೋಗ್ಯವುಳ್ಳವನು. ಧನವನ್ನು ಸಂಪಾದಿಸುವವನು ಆಗುವನು.

೮. ವೃಶ್ಚಿಕ ರಾಶಿಯಲ್ಲಿದ್ದರೆ— ಧನವಂತನು ಧರ್ಮಿಷ್ಟನು ಒಳ್ಳೇಜನ ಸೇವಕರುಳ್ಳವನು. ತಾಳ್ಮೆ ಗುಣವುಳ್ಳವನು ದೇಹಕಾಂತಿಯುಳ್ಳವನು. ಕೀರ್ತಿವಂತನು ಸ್ತ್ರೀಮೂಲಕ ಸುಖ ಹೊಂದುವವನು ಆಗುವನು.

೯. ಧನಸ್ಸುರಾಶಿಯಲ್ಲಿದ್ದರೆ–ದೇಹಪುಷ್ಟಿಯುಳ್ಳವನು. ಧನವಂತನುಧರ್ಮಧುರೀಣನು ಚುರುಕಾದ ಬುದ್ಧಿಯುಳ್ಳವನು. ಅನೇಕ ಜನ ಸ್ನೇಹಿತರುಳ್ಳವನು ಮಂತ್ರಿಗುಣವುಳ್ಳವನು ಆಗುವನು.

೧೦. ಮಕರರಾಶಿಯಲ್ಲಿದ್ದರೆ– ಅಲ್ಪಸುಖಿಯು ಮನೋ ದುಃಖವುಳ್ಳವನು. ಪುತ್ರಶೋಕವುಳ್ಳವನು ಗುರು ಹಿರಿಯರಲ್ಲಿ ದ್ವೇಷಿಯಾಗುವನು. ಆರೋಗ್ಯವುಳ್ಳ ದೇಹವುಳ್ಳವನು ಆಗುವನು.

೧೧. ಕುಂಭರಾಶಿಯಲ್ಲಿದ್ದರೆ– ಉತ್ತಮ ಆಭರಣಗಳನ್ನು ಸಂಗ್ರಹಿಸುವವನು ಪುತ್ರವಂತನು ಬುದ್ಧಿವಂತನು ಸ್ತ್ರೀ ಮೂಲಕವಾಗಿ ಸುಖ ಹೊಂದುವವನು ಆಗುವನು.

೧೨. ಮೀನರಾಶಿಯಲ್ಲಿ ಗುರುವಿರುವಾಗ ಹುಟ್ಟಿದವನು-ಧನವಂತನು, ರಾಜಸಮಾನ ಗುಣವುಳ್ಳವನು. ಪುತ್ರವಂತನು, ಬಹುಜನರಿಂದ ಮರ್ಯಾದೆಯನ್ನು ಪಡೆಯುವವನು, ಪ್ರಸಿದ್ಧ ಕಾರ್ಯಮಾಡಿ ಕೀರ್ತಿಯನ್ನು ಪಡೆಯತಕ್ಕವನು, ಆಗುವನು.

ಮೇಷಾದಿ ದ್ವಾದಶ ರಾಶಿಗಳಲ್ಲಿ ಶುಕ್ರನಿರುವ ಫಲವಿಚಾರವು-

೧. ಮೇಷರಾಶಿಯಲ್ಲಿ ಶುಕ್ರನಿರುವಾಗ ಹುಟ್ಟಿದವನು ಪರಸ್ತ್ರೀರತನು, ಹೆಂಗಸರ ಮಾತಿಗೆ ಬೆರಗಾಗಿ ದುಡ್ಡು ಹಾಳುಮಾಡಿಕೊಳ್ಳತಕ್ಕವನು ಕುಲ

ದಲ್ಲಿ ನಿಷ್ಠುರ ಹೊಂದತಕ್ಕವನು, ಹೆಂಡತಿಯಿಂದ ವ್ಯಸನ ಪಡುವವನು, ವೀರ್ಯ ಸಂಬಂಧ ರೋಗವುಳ್ಳವನು, ಆಗುತ್ತಾನೆ.

೨. ವೃಷಭದಲ್ಲಿದ್ದರೆ- ತನ್ನ ಕಷ್ಟದಿಂದ ಧನ ಸಂಪಾದಿಸುವವನು. ರಾಜಮಾನ್ಯನು ಬಂಧು ಜನರಲ್ಲಿ ಶ್ರೇಷ್ಠ ನೆನಿಸಿಕೊಳ್ಳುವವನು. ಪ್ರಖ್ಯಾತ ವಂತನು ಬಹುಕಾಮಿಯು ಧೈರ್ಯವಂತನು ಸ್ತ್ರೀಯರಿಂದ ಸುಖ ಪಡು ವವನು ಆಗುತ್ತಾನೆ.

೩. ಮಿಥುನರಾಶಿಯಲ್ಲಿದ್ದರೆ- ರಾಜಕಾರ್ಯದಲ್ಲಿ ಸಮರ್ಥನು. ಧನ ವಂತನು ಸ್ತ್ರೀಲೋಲನು. ಸಂಗೀತ ಪ್ರಿಯನುಆಗುತ್ತಾನೆ.

ಕರ್ಕರಾಶಿಯಲ್ಲಿದ್ದರೆ- ಭಯಸ್ವಭಾವದವನು. ದ್ವಿಕಲತ್ರ (ಇಬ್ಬರು ಹೆಂಡತಿಯರ) ಯೋಗವುಳ್ಳವನು, ಸ್ತ್ರೀಮೂಲಕವಾಗಿ ವ್ಯಸನ ಪಡುವವನು ಚಂಚಲ ಬುದ್ಧಿಯುಳ್ಳವನು, ಆಗುತ್ತಾನೆ.

೫. ಸಿಂಹರಾಶಿಯಲ್ಲಿದ್ದರೆ- ಸ್ತ್ರೀಮೂಲಕ ಧನ ಸಂಪಾದನೆ ಮಾಡುವ ವನು, ಸ್ತ್ರೀಮೂಲಕ ವಿರೋಧವುಳ್ಳವನು, ಪುತ್ರಶೋಕವುಳ್ಳವನು, ಆಗುವನು.

೬. ಕನ್ಯಾರಾಶಿಯಲ್ಲಿದ್ದರೆ-ನೀಚಕಾರ್ಯ ಮಾಡುವವನು, ಮರ್ಯಾ ದೆಗೇಡಿಯು ಹೆಂಗಸರಿಂದಲೂ ವ್ಯವಹಾರ ಮೂಲಕವಾಗಿಯೂ, ಧನನಾಶ ಮಾಡಿಕೊಳ್ಳುವವನು, ಸ್ತ್ರೀ ವಿರೋಧಿಯೂ, ಆಗುವನು.

೭. ತುಲಾ ರಾಶಿಯಲ್ಲಿದ್ದರೆ— ಸ್ವಬುದ್ಧಿಯಿಂದ ಧನ ಸಂಪಾದನೆ ಮಾಡುವವನು, ದೊಡ್ಡವರಲ್ಲಿ ಮರ್ಯಾದೆಯುಳ್ಳವನು, ತನ್ನವರಲ್ಲಿ ಉತ್ತಮ ನೆನಿಸಿಕೊಳ್ಳುವವನು, ಕೀರ್ತಿವಂತನು, ಆಗುತ್ತಾನೆ.

೮. ವೃಶ್ಚಿಕರಾಶಿಯಲ್ಲಿದ್ದರೆ-ಪರಸ್ತ್ರೀಲೋಲನು, ಹೆಂಗಸರ ಸಲುವಾಗಿ ದುಡ್ಡು ನಾಶಮಾಡಿಕೊಳ್ಳತಕ್ಕವನು, ಸ್ವಜಾತಿಯವರಿಂದ ಅಪವಾದ ಹೊಂದು ವವನು, ಕ್ರೂರವಾದ ಗುಣವುಳ್ಳ ಹೆಂಡತಿಯುಳ್ಳವನು ಆಗುತ್ತಾನೆ.

೯. ಧನಸ್ಸುರಾಶಿಯಲ್ಲಿದ್ದರೆ- ಒಳ್ಳೇ ಗುಣದಿಂದ ಮರ್ಯಾದೆಹೊಂದ ತಕ್ಕವನು, ಧನವಂತನು, ವಾಹನವುಳ್ಳವನು, ಸಂಗೀತ ಪ್ರಿಯನು ಆಗುವನು.

೧೦. ಮಕರ ರಾಶಿಯಲ್ಲಿದ್ದರೆ– ಸ್ವಜನರಲ್ಲಿ ಪ್ರೀತಿಯುಳ್ಳವನು, ಹೆಂಗಸರ ಮಾತು ಕೇಳುವವನು ಶೂದ್ರ ಸ್ತ್ರೀಯರಲ್ಲಿ ರಮಿಸುವವನು ಆಗುವವನು.

೧೧. ಕುಂಭರಾಶಿಯಲ್ಲಿದ್ದರೆ– ಸ್ತ್ರೀಮೂಲಕವಾಗಿ ಧನನಾಶಮಾಡಿಕೊಳ್ಳುವವನು ವಿಧವಾ ಸ್ತ್ರೀಸಂಪರ್ಕ ಮಾಡುವವನು ಆಗುವನು.

೧೨. ಮೀನರಾಶಿಯಲ್ಲಿ ಶುಕ್ರನಿರುವಾಗ ಹುಟ್ಟಿದವನು ವಿದ್ಯಾವಂತನು ಧನವಂತನು, ರಾಜಪೂಜ್ಯನು, ಸ್ವಜನರಲ್ಲಿ ಮರ್ಯಾದೆಯುಳ್ಳವನು, ಉತ್ತಮ ಗುಣವುಳ್ಳ ಹೆಂಡತಿಯುಳ್ಳವನು. ಸುಗಂಧ ಪುಷ್ಪಗಳಲ್ಲಿಯೂ ರಮ್ಯಸ್ತ್ರೀಯರಲ್ಲಿಯೂ ಸುಖಪಡತಕ್ಕವನು ಆಗುವನು.

ಮೇಷಾದಿ ದ್ವಾದಶ ರಾಶಿಗಳಲ್ಲಿ ಶನಿಯಿರುವ ಫಲ

೧. ಮೇಷ ರಾಶಿಯಲ್ಲಿ ಶನಿಯಿರುವಾಗ ಹುಟ್ಟಿದವನು. ಮೂರ್ಖನು ಕಪಟಿಯು ಸ್ನೇಹಿತರಿಲ್ಲದವನು, ಪಾಪ ಕಾರ್ಯ ಮಾಡತಕ್ಕವನು ನೀಚರ ಸಹವಾಸ ಮಾಡತಕ್ಕವನು ಆಗುವನು.

೨. ವೃಷಭರಾಶಿಯಲ್ಲಿದ್ದರೆ– ತಾರತಮ್ಯವಿಲ್ಲದೆ ಕೆಲಸ ಮಾಡತಕ್ಕವನು ಮಾತ್ರ ಸಮಾನ ಸ್ತ್ರೀಸಂಗ ಮಾಡತಕ್ಕವನು; ಪಾಪಕಾರ್ಯಗಳ ಸಲುವಾಗಿ ಧನನಾಶ ಮಾಡಿಕೊಳ್ಳತಕ್ಕವನು, ಸ್ತ್ರೀಯರ ಸಲುವಾಗಿ ಅಪವಾದ ಹೊಂದುವವನು ಆಗುವನು.

೩. ಮಿಥುನರಾಶಿಯಲ್ಲಿದ್ದರೆ– ಸುಖವಂತನು, ಪುತ್ರಶೋಕವುಳ್ಳವನು ಚಿತ್ರಬರೆಯುವದರಲ್ಲಿ ನಿಪುಣನು, ಪ್ರಸಿದ್ಧನು ಆಗುವನು.

೪. ಕರ್ಕರಾಶಿಯಲ್ಲಿದ್ದರೆ– ಮೂರ್ಖನು, ದಂತಪಟುತ್ವವಿಲ್ಲದವನು, ತಾಯಿಯಿಂದ ದುಃಖವುಳ್ಳವನು, ವಸ್ತುಹೀನತ್ವವುಳ್ಳವನು, ಜಲ ಗುಹ್ಯ ಮೂತ್ರರೋಗವುಳ್ಳವನು, ಶತ್ರುಗಳಲ್ಲಿ ವಿರೋಧವುಳ್ಳವನು ಆಗುವನು.

೫. ಸಿಂಹರಾಶಿಯಲ್ಲಿದ್ದರೆ– ದುಷ್ಟ ಸ್ವಭಾವದವನು, ಮಕ್ಕಳ ಸುಖವಿಲ್ಲದವನು, ಬಿಟ್ಟಿ ಕೆಲಸಗಳನ್ನು ಮಾಡತಕ್ಕವನು, ಶತ್ರುಗಳಿಂದಲೂ ಸರಕಾರದಿಂದಲೂ ಭಯಹೊಂದತಕ್ಕವನು ನೆಂಟರಲ್ಲಿ ಅಭಿಮಾನ ತೋರಿಸುವವನು ಆಗುವನು.

೬. ಕನ್ಯಾರಾಶಿಯಲ್ಲಿದ್ದರೆ- ಬರೆಯುವದರಲ್ಲಿ ನಿಪುಣನು, ಅನೇಕ ಜನರಿಗೆ ಉಪಕಾರ ಮಾಡುವವನು, ಜಾತಿಶ್ರೇಷ್ಠನು, ಪುತ್ರಶೋಕವುಳ್ಳವನು, ಆಗುವನು.

೭. ತುಲಾರಾಶಿಯಲ್ಲಿದ್ದರೆ- ಕೀರ್ತಿವಂತನು, ಗ್ರಾಮದಲ್ಲಿ ಅಧಿಕಾರಿಯಾಗುವನು. ನೀಚರಿಂದ ದುಃಖಪಡುವವನು, ಅನೇಕ ಜನರಲ್ಲಿ ಮರ್ಯಾದೆ ಹೊಂದುವವನು ಆಗುವನು.

೮. ವೃಶ್ಚಿಕ ರಾಶಿಯಲ್ಲಿದ್ದರೆ- ದಯಾರಹಿತನು, ಚಂಚಲನು, ಬಂಧನದಿಂದ ಕಷ್ಟಪಡುವವನು, ಕಳ್ಳರು, ಶತ್ರುಗಳಿಂದ ಪೆಟ್ಟುತಿನ್ನುವವನು, ಶೂದ್ರರಲ್ಲಿ ವಿರೋಧವುಳ್ಳವನು ಆಗುವನು.

೯. ಧನಸ್ಸಿನಲ್ಲಿದ್ದರೆ- ಅಂತ್ಯಕಾಲದಲ್ಲಿ ಸುಖವುಳ್ಳವನು, ರಾಜಪುರುಷರಲ್ಲಿ ಸ್ನೇಹವುಳ್ಳವನು. ಧನವಂತನು, ಗ್ರಾಮದಲ್ಲಿ ಮುಖ್ಯ ನೆನಸಿಕೊಳ್ಳುವವನು ವಾಹನ ಪಶು ಭಯವುಳ್ಳವನು. ಪುತ್ರಶೋಕವುಳ್ಳವನು ಆಗುವನು.

೧೦. ಮಕರರಾಶಿಯಲ್ಲಿದ್ದರೆ- ಪರಸ್ತ್ರೀ ಪರಧನಗಳಿಂದ ಕೂಡಿದವನು, ಸ್ವಲ್ಪ ಮಂದಬುದ್ಧಿಯುಳ್ಳವನು, ಮಲಿನವಾದ ಮನಸ್ಸುಳ್ಳವನು ಸ್ಥಿರವಾದ ಧನಸಂಪತ್ತುಳ್ಳವನು, ಜಲಗಂಡವುಳ್ಳವನು, ಶೂದ್ರಜನರಲ್ಲಿ ಸ್ನೇಹವುಳ್ಳವನು ಆಗುವನು.

೧೧. ಕುಂಭರಾಶಿಯಲ್ಲಿದ್ದರೆ- ಸ್ತ್ರೀಮೂಲಕ ಧನ ದೊರೆಯುವದು. ಕ್ರೂರಗುಣವುಳ್ಳವನು, ಕಪಟಿಯು, ಪಶುವಾಹನ ಭಯವುಳ್ಳವನು. ರಾಜಾಗ್ನಿ ಕಳ್ಳರಿಂದ ಕಷ್ಟಪಡುವವನು. ಗ್ರಾಮದಲ್ಲಿ ಮುಖ್ಯ ನೆನಿಸಿಕೊಳ್ಳುವವನು ಆಗುವನು.

೧೨. ಮೀನರಾಶಿಯಲ್ಲಿದ್ದರೆ- ಅಂತ್ಯಕಾಲದಲ್ಲಿ ಸುಖ ಪಡುವವನು. ದೊಡ್ಡವರಲ್ಲಿ ನಂಬಿಕೊಳ್ಳತಕ್ಕವನು. ಧನವಂತನು. ಮರ್ಯಾದೆಯುಳ್ಳವನು ಆಗುವನು.

ಮೇಷಾದಿ ದ್ವಾದಶ ರಾಶಿಗಳಲ್ಲಿ ರಾಹು ಇರುವ ಫಲ

೧. ಮೇಷರಾಶಿಯಲ್ಲಿ ರಾಹುವಿದ್ದರೆ-ಧೈರ್ಯಶಾಲಿಯು, ಕೋಪಿಯು ಕೀರ್ತಿಶಾಲಿಯು ಕಲಹದಲ್ಲಿ ನಿಪುಣನು. ಕಲೆಯಲ್ಲಿ ರೋಗವುಳ್ಳವನು ಅಣ್ಣ

ಶತ್ರುಗಳಿಂದಲೂ ಭೂಮಿಯಿಂದಲೂ ಮನಸ್ತಾಪ ಮಾಡಿಕೊಳ್ಳುವವನು ಆಗುತ್ತಾನೆ.

೨. ವೃಷಭರಾಶಿಯಲ್ಲಿದ್ದರೆ– ಗ್ರಾಮದಲ್ಲಿ ಮರ್ಯಾದೆಯುಳ್ಳವನು. ವಾರ್ (ಗುಲ್ಮ) ರೋಗವುಳ್ಳವನು. ಸ್ತ್ರೀ ಮೂಲಕ ದ್ವೇಷವುಳ್ಳವನು. ಶೂದ್ರರಿಂದ ಸುಖ ಪಡುವವನು ಆಗುವನು.

೩. ಮಿಥುನರಾಶಿಯಲ್ಲಿದ್ದರೆ— ಕೀರ್ತಿವಂತನು. ದೂರ ಪ್ರಯಾಣದಿಂದ ಪುಣ್ಯಕ್ಷೇತ್ರ ದರ್ಶನ ಮಾಡಿಕೊಳ್ಳುವನು. ತೇಜಸ್ವಿಯು. ಧೈರ್ಯಶಾಲಿಯು ಹೆಸರುವಾಸಿಯು ರಾಜರ ಸ್ನೇಹವುಳ್ಳವನು ಆಗುವನು.

೪. ಕರ್ಕಲಾಶಿಯಲ್ಲಿದ್ದರೆ—ಜಲಗಂಡವು ಚಂಚಲವಾದ ಮನಸ್ಸುಳ್ಳವನು. ಜಲ ಸಮೀಪದಲ್ಲಿ ಅಕಸ್ಮಾತ್ ವಿಷ ಜಂತು ಭಯವು ಹೃದಯ ವ್ಯಾಧಿಯುಳ್ಳವನು. ಮಾತೃ ಸಮಾನ ಸ್ತ್ರೀಯರಲ್ಲಿ ರಮಿಸುವವನು ಆಗುವನು.

೫. ಸಿಂಹರಾಶಿಯಲ್ಲಿದ್ದರೆ— ಪರಕೀಯರ ತೊಂದರೆಯಿಂದ ಧನ ನಾಶ ಮಾಡಿಕೊಳ್ಳುವವನು. ಬಹು ಮುಂಗೋಪಿಯು, ಮಹಾಕೋಪಿಯು, ಧೈರ್ಯಶಾಲಿಯು, ಪಕ್ಷಶೂಲೆಯಿಂದ ಕಷ್ಟಪಡುವವನು, ಬಂಧುದ್ವೇಷಿಯು ಆಗುವನು.

೬. ಕನ್ಯಾರಾಶಿಯಲ್ಲಿದ್ದರೆ– ಕೀರ್ತಿವಂತನು, ಕಾರ್ಯನಿಪುಣನು, ಸಾಹಸಗಾರನು, ಮದುವೆಯಾಗದೆ ಸ್ತ್ರೀಮೂಲಕ ಅಪವಾದ ಹೊಂದತಕ್ಕವನು, ಮರವು ಬುದ್ಧಿಯುಳ್ಳವನು, ಬಂಧುದ್ವೇಷಿಯು ಆಗುವನು.

೭. ತುಲಾರಾಶಿಯಲ್ಲಿದ್ದರೆ— ರಾಜಚೋರಾಗ್ನಿಯಿಂದ ಭಯಪಡುವವನು. ಸ್ತ್ರೀಮೂಲಕ ದುಃಖಪಡತಕ್ಕವನು, ಈತನ ಹೆಂಡತಿಗೆ ಪಿಶಾಚ ಬಾಧೆಯುಂಟು ಗುಹ್ಯಸ್ಥಾನದಲ್ಲಿರೋಗವುಳ್ಳವನು, ಸ್ವಲ್ಪಧೈರ್ಯವಂತನುಆಗುವನು.

೮. ವೃಶ್ಚಿಕದಲ್ಲಿದ್ದರೆ— ಕ್ರೂರಗುಣವುಳ್ಳವನು, ಅಸತ್ಯವಾದಿಯು, ಅಣ್ಣ-ತಮ್ಮಂದಿರಲ್ಲಿ ದ್ವೇಷವುಳ್ಳವನು, ಶಿಶ್ನ ರೋಗವುಳ್ಳವನು; ಆಗುತ್ತಾನೆ.

೯. ಧನುರಾಶಿಯಲ್ಲಿದ್ದರೆ– ಗುರು-ಹಿರಿಯರಲ್ಲಿ ಭಕ್ತಿಯಿಲ್ಲದವನು, ಬ್ರಾಹ್ಮಣಾದಿ ಉತ್ತಮ ಜಾತಿಯವರೊಡನೆ ದ್ವೇಷ ಮಾಡಿಕೊಳ್ಳತಕ್ಕವನು.

ಪುತ್ರ ಶೋಕವುಳ್ಳವನು, ಹೆಂಡತಿಗೆ ಗರ್ಭ ನಷ್ಟವಿಂದ ಸಂಕಟ ಜರುಗುತ್ತದೆ ತೊಡೆಯಲ್ಲಿ ಅಕಸ್ಮಾತ್ ಶೂಲೆ ವ್ರಣಭಾಧೆಯುಳ್ಳವನು ಆಗುತ್ತಾನೆ.

೧೦. ಮಕರರಾಶಿಯಲ್ಲಿದ್ದರೆ- ಕಳ್ಳರಿಂದಲೂ, ನೀರಿನಿಂದಲೂ, ಕಂಟಕವುಳ್ಳವನು, ಪಾಪಕಾರ್ಯದ ಸಲುವಾಗಿ ಧನನಾಶಮಾಡಿಕೊಳ್ಳುವವನು, ಮೊಣಕಾಲಿನಲ್ಲಿ ಅಕಸ್ಮಾತ್ ಶೂಲಿಯಿಂದ ಬಾಧೆ ಜರುಗುತ್ತದೆ.

೧೧. ಕುಂಭರಾಶಿಯಲ್ಲಿದ್ದರೆ– ಜಲ ಸಮೀಪದಲ್ಲಿ ಅಕಸ್ಮಾತ್ ಸರ್ಪ ಭಯವು ಬಹು ಮುಂಗೋಪಿಯು ಅಕಸ್ಮಾತ್ ಜಲಭಯವು, ಮೊಣಕಾಲಿನಲ್ಲಿ ವ್ರಣಬಾಧೆಯು ಉಂಟು.

೧೨. ಮೀನರಾಶಿಯಲ್ಲಿ ರಾಹುವಿದ್ದರೆ– ಗುರುಜನರಲ್ಲಿ ದ್ವೇಷಿಯಾಗುವವನು, ಡಾಂಭಿಕ ಭಕ್ತಿಯುಳ್ಳವನು, ನಿಂದಕನು, ಹೆಂಡತಿಗೆ ಗರ್ಭ ಪೀಡೆಯು, ಜಲ–ವಾಹನ–ಪಶುಭಯವುಳ್ಳವನು, ಪಾದಗಳಲ್ಲಿ ವಿಷ ಜಂತು ಭಯವುಳ್ಳವನು, ಆಗುವನು ರಾಹುವಿನ ಫಲದಂತೆಯೇ ಕೇತುವಿನ ಫಲ ಇರುವದೆಂದು ತಿಳಿಯಬೇಕು.

ನವಾಂಶ ಕುಂಡಲಿಯ ಫಲ ವಿಚಾರವು.

೧. ಮೇಷಾಂಶದಲ್ಲಿ ಹುಟ್ಟಿದರೆ– ಚೋರಬುದ್ಧಿಯುಳ್ಳವನು, ನೀಚ ಜನರ ಸಹವಾಸವುಳ್ಳವನು ಕಪಟ ಹೃದಯವುಳ್ಳವನು ಆಗುತ್ತಾನೆ.

೨. ವೃಷಭಾಂಶದಲ್ಲಿ ಹುಟ್ಟಿದರೆ– ಧನವಂತನು, ಪುತ್ರ–ಮಿತ್ರ–ಕಲತ್ರರಿಂದ ಕೂಡಿದವನು, ಧರ್ಮಗುಣವುಳ್ಳವನು, ಸ್ತ್ರೀ-ಲೋಲನು ಬಹು ಕಾಮಿಯು ಆಗುತ್ತಾನೆ.

೩. ಮಿಥುನಾಂಶದಲ್ಲಿ ಹುಟ್ಟಿದರೆ– ಸಂಪನ್ನನು ಶಾಂತಸ್ವಭಾವದವನು ಉತ್ತಮ ಜನರ ಸ್ನೇಹವುಳ್ಳವನು; ಧರ್ಮಕಾರ್ಯ ಮಾಡುವವನು, ಸೂಕ್ಷ್ಮಬುದ್ಧಿಯುಳ್ಳವನು, ವ್ಯಾಪಾರದಲ್ಲಿ ನಿಪುಣನು ಆಗುತ್ತಾನೆ.

೪. ಕರ್ಕಾಂಶದಲ್ಲಿ ಹುಟ್ಟಿದರೆ– ಧನವಂತನು, ಮೃದುಭಾಷಿಯು, ಸಂಗೀತ ಪ್ರಿಯನು; ಬಿಳುಪು ಪದಾರ್ಥಗಳಲ್ಲಿ ಅಪೇಕ್ಷೆಯುಳ್ಳವನು ಆಗುತ್ತಾನೆ.

೫. ಸಿಂಹಾಂಶದಲ್ಲಿ ಹುಟ್ಟಿದರೆ– ಧೈರ್ಯಶಾಲಿಯು, ರಾಜಸಮಾನ ಗುಣವುಳ್ಳವನು, ಪ್ರಸಿದ್ಧ ಕಾರ್ಯಗಳನ್ನು ಮಾಡಿ ಕೀರ್ತಿಪಡೆಯುವವನು ಸಭಾಪೂಜ್ಯನು ಆಗುವನು.

೬. ಕನ್ಯಾಂಶದಲ್ಲಿ ಹುಟ್ಟಿದರೆ– ಸಕಲ ಕಲಾಸಂಪನ್ನನು, ಬಹು ಬುದ್ಧಿ ಶಾಲಿಯು, ಆಲೋಚನಾ ಪರನು ಕ್ರಯವಿಕ್ರಯಗಳಲ್ಲಿ ನಿಪುಣನು ಆಗುವನು.

೭. ತುಲಾಂಶದಲ್ಲಿ ಹುಟ್ಟಿದರೆ– ವ್ಯಾಪಾರದಲ್ಲಿ ಸಮರ್ಥನು, ಮಂತ್ರಿ ಸಮಾನ ಗುಣವುಳ್ಳವನು, ಅನ್ಯ ಸ್ತ್ರೀ ಸಂಗ ಮಾಡುವವನು ಆಗುವನು.

೮. ವೃಶ್ಚಿಕಾಂಶದಲ್ಲಿ ಹುಟ್ಟಿದರೆ– ಕಲಹಪ್ರಿಯನು, ದರಿದ್ರನು, ನೀಚ ಕೃತ್ಯಗಳನ್ನು ಮಾಡುವವನು, ವಂಚಕನು ಬಂಧುದ್ವೇಷಿಯು ಆಗುವನು.

೯. ಧನುರಾಂಶದಲ್ಲಿ ಹುಟ್ಟಿದರೆ— ಜ್ಞಾನಿಯು, ವೇದಶಾಸ್ತ್ರಗಳಲ್ಲಿ ನಂಬಿಗೆಯುಳ್ಳವನು, ಗುರುಹಿರಿಯರಲ್ಲಿ ದೇವ-ಬ್ರಾಹ್ಮಣರಲ್ಲಿ ನಂಬಿಗೆಯುಳ್ಳವನು, ಪರೋಪಕಾರಿಯು ಆಗುವನು.

೧೦. ಮಕರಾಂಶದಲ್ಲಿ ಹುಟ್ಟಿದರೆ– ಬಹುಮುಂಗೋಪಿಯು, ಪಾಪಕರ್ಮಿಯು, ಶೂದ್ರಜನರಲ್ಲಿ ಸ್ನೇಹ ಮಾಡುವವನು ಘಾತುಕನು, ಬಹುವಾದಿಯು, ಬಲಗಂಡವುಳ್ಳವನು ಆಗುವನು.

೧೧. ಕುಂಭಾಂಶದಲ್ಲಿ ಹುಟ್ಟಿದರೆ– ವ್ಯಾಪಾರದಲ್ಲಿ ನಿಪುಣನು, ನೀಚ ಕಾರ್ಯಗಳನ್ನು ಮಾಡುವವನು, ನೀಚ ಸ್ತ್ರೀಸಂಗ ಮಾಡುವವನು. ಬಂಧುದ್ವೇಷಿಯು ಆಗುವನು.

೧೨. ಮೀನಾಂಶದಲ್ಲಿ ಹುಟ್ಟಿದರೆ– ವಿದ್ಯಾವಂತನು, ಜಲಕಾರ್ಯಗಳನ್ನು ಮಾಡುವವನು, ಗುರು-ಹಿರಿಯರಲ್ಲಿ ಭಕ್ತಿಯುಳ್ಳವನು ಪುತ್ರವಂತನು ಆಗುವನು.

ಅಂಶವೆಂದರೆ ಷಡ್ವರ್ಗ ಚಕ್ರದಲ್ಲಿ ನವಾಂಶರಾಶಿ ಯಾವುದಾಗುತ್ತದೆಯೋ ಆದೇರಾಶಿಯನ್ನೇ ಅಂಶರಾಶಿಯೆಂದು ತಿಳಿಯಬೇಕು.

ನವಾಂಶಕುಂಡಲಿಯಲ್ಲಿ ಮೇಷಾದಿ ಅಂಶಗಳಲ್ಲಿ ಗ್ರಹ ವಿರುವ ಫಲವಿಚಾರವು

೧. ಮೇಷಾಂಶವಲ್ಲಿ ರವಿಯಿದ್ದರೆ- ಸರಕಾರದ ತೊಂದರೆಯಿಂದ ಧನ ಹಾನಿಯಾಗುವದು. ತಂದೆಯಿಂದ ದುಃಖವುಳ್ಳವನು, ಪಿತ್ತಾಧಿಕ್ಯವುಳ್ಳವನು, ಆಗುವನು.

೨. ವೃಷಭಾಂಶದಲ್ಲಿ ರವಿಯಿದ್ದರೆ- ಕೆಲವು ದಿವಸ ದೇಶತ್ಯಾಗ ಮಾಡು ವವನು, ಸ್ತ್ರೀಮೂಲಕವಾಗಿ ಶತೃತ್ವವುಳ್ಳವನು, ಹೆಂಡತಿಯಲ್ಲಿ ಮನಸ್ಸು ಇಲ್ಲದೆ, ಕೆಲವು ದಿವಸ ಅನ್ಯ ಸ್ತ್ರೀಯರಲ್ಲಿ ಇಷ್ಟವುಳ್ಳವನು ಆಗುತ್ತಾನೆ.

೩. ಮಿಥುನಾಂಶದಲ್ಲಿ ರವಿಯಿದ್ದರೆ- ಪಿತ್ತಕ್ಲೇಶವುಳ್ಳವನು, ಬಂಧು ಜನರಲ್ಲಿ ದ್ವೇಷಿಯಾಗುವನು, ಉಷ್ಣ ಶರೀರವುಳ್ಳವನು, ವ್ಯಾಪಾರ ಮೂಲಕ ವಾಗಿ ಧನ ಕಳೆದುಕೊಳ್ಳುವವನು ಆಗುವನು.

೪. ಕರ್ಕಾಂಶದಲ್ಲಿ ರವಿಯಿದ್ದರೆ- ಮನೋದುಃಖವುಳ್ಳವನು, ನೀರಿನ ಭಯವುಂಟು ದೊಡ್ಡವರಲ್ಲಿ ವಿರೋಧಿಯಾಗುವನು.

೫. ಸಿಂಹಾಂಶದಲ್ಲಿ ರವಿಯಿದ್ದರೆ- ಅಧಿಕಾರಿಯಾಗುವನು, ರಾಜಜನ ರಲ್ಲಿ ದ್ವೇಷಿಯಾಗುವನು. ವ್ಯವಹಾರದಲ್ಲಿ ನಿಪುಣನು, ಉಷ್ಣಜ್ವರದಿಂದ ದೇಹ ತಾಪವುಳ್ಳವನು ಆಗುವನು.

೬. ಕನ್ಯಾಂಶದಲ್ಲಿ ರವಿಯಿದ್ದರೆ- ಮಂದವು ಬುದ್ಧಿಯುಳ್ಳವನು, ವರ್ತ ಕರಲ್ಲಿ ದ್ವೇಷಿಯಾಗುವನು. ವಂಚಕತ್ವದಿಂದ ಧನವನ್ನು ಕಳೆದುಕೊಳ್ಳುವವನು ಆಗುವನು.

೭. ತುಲಾಂಶದಲ್ಲಿ ರವಿಯಿದ್ದರೆ- ರಹಸ್ಯಾಂಗದಲ್ಲಿ ಹುಣ್ಣು ಉಳ್ಳವನು, ಸ್ತ್ರೀ ಮೂಲಕವಾಗಿ ಅಪವಾದ ಹೊಂದುವವನು. ಮೋಹ ಜಾಡ್ಯದಿಂದ ಸಂಕಟ ಪಡುವವನು ಆಗುತ್ತಾನೆ.

೮. ವೃಶ್ಚಿಕಾಂಶದಲ್ಲಿ ರವಿಯಿದ್ದರೆ- ಬಹು ಭೋಜನವುಳ್ಳವನು, ಜೀರ್ಣಶಕ್ತಿಯುಳ್ಳವನು, ತಲೆಯಲ್ಲಿ ಹುಣ್ಣಿನ ಬಾಧೆಯಿಂದ ಕಷ್ಟಪಡುವವನು, ಶಿರೋಭ್ರಮಣ (ಹುಚ್ಚು) ವುಳ್ಳವನು ಆಗುತ್ತಾನೆ.

೯. ಧನುರಂಶದಲ್ಲಿ ರವಿಯಿದ್ದರೆ- ಬಾಲ್ಯದಲ್ಲಿ ದುಃಖಪಡುವವನು; ಅನೇಕ ಜನರ ಸ್ನೇಹ ಮಾಡುವವನು ಧೈರ್ಯಶಾಲಿಯು; ಅನೇಕ ಜನರಲ್ಲಿ ಮರ್ಯಾದೆಯುಳ್ಳವನು ಆಗುವನು.

೧೦. ಮಕರಾಂಶದಲ್ಲಿ ರವಿಯಿದ್ದರೆ- ಮರವು ಬುದ್ಧಿಯುಳ್ಳವನು; ಜಲಗಂಡವು ರಾಜಭೀತಿಯುಂಟು; ಶತ್ರುಜನರಲ್ಲಿ ದ್ವೇಷಮಾಡಿಕೊಳ್ಳುವವನು, ಆಗುವನು.

೧೧. ಕುಂಭಾಂಶದಲ್ಲಿ ರವಿಯಿದ್ದರೆ— ಪಶುಗಂಡವುಳ್ಳವನು, ಪಿತ್ರಾರಿಷ್ಟವುಳ್ಳವನು, ಶತ್ರುವೃದ್ಧಿಯುಳ್ಳವನು ಆಗುವನು.

೧೨. ಮೀನಾಂಶದಲ್ಲಿ ರವಿಯಿದ್ದರೆ— ಯಾವಾಗಲೂ ಪ್ರಯಾಣದಲ್ಲಿ ಅಪೇಕ್ಷೆಯುಳ್ಳವನು, ಕಾರ್ಯನಿಪುಣನು, ದೊಡ್ಡ ಜನರಲ್ಲಿ ಸ್ನೇಹ ಮಾಡುವವನು ಆಗುವನು.

ಮೇಷಾದಿ ಅಂಶಸ್ಥಿತ ಚಂದ್ರನ ಫಲವು.

೧. ಮೇಷಾಂಶದಲ್ಲಿ ಚಂದ್ರನಿದ್ದರೆ- ಕಲಹಪ್ರಿಯನು, ಬಾಲ್ಯದಲ್ಲಿ ತಾಯಿಯ ಸುಖವಿಲ್ಲದವನು; ವೀರ್ಯ ನಷ್ಟತ್ವದಿಂದ ದುರ್ಬಲವಾದ ದೇಹವುಳ್ಳವನು, ಸ್ತ್ರೀಮೂಲಕ ವಿರೋಧಮಾಡಿಕೊಳ್ಳುವವನು, ಆಗುವನು.

೨. ವೃಷಭಾಂಶದಲ್ಲಿ ಚಂದ್ರನಿದ್ದರೆ- ಸದಾ ಸ್ತ್ರೀಲೋಲನು; ಬಹು ಕಾಮಿಯು; ಪರಸ್ತ್ರೀಯರಲ್ಲಿ ಪ್ರೇಮವುಳ್ಳವನು, ಅಲಂಕಾರ ಪ್ರಿಯನು, ಬಿಳುಪು ಪದಾರ್ಥಗಳಲ್ಲಿ ಪ್ರೇಮವುಳ್ಳವನು ಆಗುವನು.

೩. ಮಿಥುನಾಂಶದಲ್ಲಿ ಚಂದ್ರನಿದ್ದರೆ-ಒಳ್ಳೇ ಭೋಗಿಯು ಮಧುರಾಹಾರದಲ್ಲಿ ಪ್ರೇಮವುಳ್ಳವನು, ಸಂಗೀತ ಪ್ರಿಯನು; ನೀರಿನಲ್ಲಿ ಪ್ರೇಮವುಳ್ಳವನು ಆಗುವನು.

೪. ಕರ್ಕಾಂಶದಲ್ಲಿ ಚಂದ್ರನಿದ್ದರೆ- ಸಂತೋಷವಾದ ಮನಸ್ಸುಳ್ಳವನು ತಾಯಿಯಲ್ಲಿ ವಿಶ್ವಾಸವುಳ್ಳವನು, ವಾಕ್ಚಾತುರ್ಯವುಳ್ಳವನು, ಜಲಕಾರ್ಯಾರಂಭ ಮಾಡುವವನು ಆಗುವನು.

೫. ಸಿಂಹಾಂಶದಲ್ಲಿ ಚಂದ್ರನಿದ್ದರೆ- ರೋಗಿಷ್ಠಳಾದ ಹೆಂಡತಿಯುಳ್ಳವನು, ವಸ್ತ್ರಾಭರಣ ಸಂಗ್ರಹವುಳ್ಳವನು, ಶೀತ ದೇಹವುಳ್ಳವನು, ಆಗುವನು.

೬. ಕನ್ಯಾಂಶದಲ್ಲಿದ್ದರೆ- ಕೀರ್ತಿವಂತನು, ಉತ್ಸಾಹವಂತನು, ವ್ಯಾಪಾರದಲ್ಲಿ ನಿಪುಣನು ಧರ್ಮಕಾರ್ಯ ಮಾಡುವವನು ಆಗುವನು.

೭. ತುಲಾಂಶದಲ್ಲಿದ್ದರೆ— ಧನಧಾನ್ಯಗಳಿಂದ ಕೂಡಿದವನು. ಸ್ತ್ರೀ ಮೂಲಕವಾಗಿ ಸುಖ ಪಡುವವನು. ಸೂಕ್ಷ್ಮ ಬುದ್ಧಿಯುಳ್ಳವನು ಆಗುವನು.

೮. ವೃಶ್ಚಿಕಾಂಶದಲ್ಲಿದ್ದರೆ- ತಂದೆಯಲ್ಲಿ ಭಕ್ತಿಯುಳ್ಳವನು. ಜಲ ಸಮ್ಬಂಧ ಭೂಮಿಯನ್ನು ಸಂಪಾದಿಸುವವನು ಸಸಿಗಳನ್ನು ಹಾಕಿಸುವವನು, ಆಗುವನು.

೯. ಧನುರಂಶದಲ್ಲಿ ಹುಟ್ಟಿದರೆ- ಶೀತ ಜ್ವರದಿಂದ ದೇಹ ಅಶಕ್ತಿಯುಳ್ಳವನು. ಚಂಚಲವಾದ ಮನಸ್ಸುಳ್ಳವನು ಆಗುವನು.

೧೦. ಮಕರಾಂಶದಲ್ಲಿ ಹುಟ್ಟಿದರೆ- ಧಾತು ಪುಷ್ಟಿಯಿಲ್ಲದವನು ಜಲ ಪಶುವಾಹನ ಗಂಡವುಳ್ಳವನು. ಮಾತೃ ಸಮಾನ ಸ್ತ್ರೀಯರಲ್ಲಿ ರಮಿಸುವವನು ಆಗುವನು.

೧೧. ಕುಂಭಾಂಶದಲ್ಲಿ ಚಂದ್ರನಿರುವಾಗ ಹುಟ್ಟಿದವನು- ಚೋರಾಗ್ನಿ ಭಯವುಳ್ಳವನು, ಮಾತ್ರಾರಿಷ್ಟವುಳ್ಳವನು ಆಗುವನು.

೧೨. ಮೀನಾಂಶದಲ್ಲಿ ಚಂದ್ರನಿದ್ದರೆ- ದೇವತಾ ಕಾರ್ಯಗಳಲ್ಲಿಯೂ ಗುರು-ಹಿರಿಯರಲ್ಲಿಯೂ ಭಕ್ತಿಯುಳ್ಳವನು ಧರ್ಮಿಷ್ಠನು. ಉತ್ತಮ ಸ್ವಭಾವದವನು ಆಗುವನು.

ಮೇಷಾದಿ ಅಂಶದಲ್ಲಿರುವ ಕುಜನ ಫಲ.

೧. ಮೇಷಾಂಶದಲ್ಲಿ ಕುಜನಿದ್ದರೆ- ಕಲಹ ಪ್ರಿಯನು ಬಹುವಾದಿಯು ಧೈರ್ಯಶಾಲಿಯು ವಿಷನು ಜ್ವರ ಅಗ್ನಿ ಇತ್ಯಾದಿಗಳಿಂದ ದೇಹ ಬಾಧೆಯುಳ್ಳವನು ಆಗುವನು.

೨. ವೃಷಭಾಂಶದಲ್ಲಿ ಕುಜನಿದ್ದರೆ– ಆಯುಧದಿಂದ ಘಾಯುವುಳ್ಳವನು, ಸ್ತ್ರೀ ಮೂಲಕ ವಿರೋಧ ಮಾಡಿಕೊಳ್ಳುವವನು, ಅತನ ಹೆಂಡತಿಯೂ ಹುಣ್ಣಿನಿಂದ ಕಷ್ಟಪಡುವವನು ಆಗುವನು.

೩. ಮಿಥುನಾಂಶದಲ್ಲಿ ಕುಜನಿದ್ದರೆ– ಸರ್ವರೊಡನೆ ವಿರೋಧಿಯಾಗುವನು, ಮಾರವು ಬುದ್ಧಿಯುಳ್ಳವನು. ಬಂಧುಗಳಲ್ಲಿಯೂ ವರ್ತಕರಲ್ಲಿಯೂ ದ್ವೇಷಿಯಾಗುವವನು.

೪. ಕರ್ಕಾಂಶದಲ್ಲಿ ಕುಜನಿದ್ದರೆ— ಜಲಕಂಟಕವುಳ್ಳವನು. ಭೂಮಿಯಿಂದಲೂ ಅಣ್ಣತಮ್ಮಂದಿರಿಂದಲೂ ದ್ವೇಷ ಮಾಡಿಕೊಳ್ಳುವವನು. ಬಾಲ್ಯದಲ್ಲಿ ತಾಯಿಗೆ ಸಂಕಟ ಉಂಟಾಗುತ್ತದೆ.

೫. ಸಿಂಹಾಂಶದಲ್ಲಿ ಕುಜನಿದ್ದರೆ– ಸ್ತ್ರೀಯರಿಂದ ದುಃಖ ಪಡುವವನು, ಬಹುವಾದಿಯು, ಬಂಧು ಜನರಿಂದ ವಿರೋಧಿಯಾಗುವನು.

೬. ಕನ್ಯಾಂಶದಲ್ಲಿ ಕುಜನಿದ್ದರೆ– ಭೂಮಿ ಸಂಪಾದನೆ ಮಾಡುವವನು ಕಪಟಿಯು, ಕೋಪಿಯು ಜಗಳಗಂಟನು ಅಣ್ಣ ತಮ್ಮಂದಿರಲ್ಲಿ ಸಮ ಭಾವನೆಯುಳ್ಳವನು ಆಗುವನು.

೭. ತುಲಾಂಶದಲ್ಲಿ ಕುಜನಿದ್ದರೆ– ಮೇಹರೋಗದಿಂದ ಕಷ್ಟಪಡುವವನು. ಕೆಲವು ದಿವಸ ಹೆಂಡತಿಯಲ್ಲಿ ವಿಶ್ವಾಸವಿಲ್ಲದೆ ಅನ್ಯ ಸ್ತ್ರೀಯರಲ್ಲಿ ರಮಿಸುವನು ಸ್ತ್ರೀಮೂಲಕ ಶತ್ರುಗಳುಳ್ಳವನು ಆಗುವನು.

೮. ವೃಶ್ಚಿಕಾಂಶದಲ್ಲಿ ಕುಜನಿದ್ದರೆ– ನಾನಾರೋಗಗಳಿಂದ ಶರೀರ ಬಡಕಾಗುವದು. ಕಲಹ ಪ್ರಿಯನು, ಸರ್ಪಗಂಡವುಳ್ಳವನು. ಅಣ್ಣತಮ್ಮಂದಿರಲ್ಲಿ ದ್ವೇಷಿಯಾಗುವನು.

೯. ಧನುರಂಶದಲ್ಲಿ ಕುಜನಿದ್ದರೆ– ಬುದ್ಧಿಲಾಭಕ್ಕಾಗಿ ಧನನಾಶಮಾಡಿಕೊಳ್ಳತಕ್ಕವನು. ವ್ಯವಹಾರದಲ್ಲಿ ನಿಪುಣನು, ಅನೇಕ ಜನರ ಸ್ನೇಹವುಳ್ಳವನು ಭೂಮಿಯನ್ನು ಸಂಪಾದಿಸುವವನು ಆಗುವನು.

೧೦. ಮಕರಾಂಶದಲ್ಲಿ ಕುಜನಿದ್ದರೆ– ಹೊಸದಾಗಿ ಭೂಮಿಯನ್ನು ಸಂಪಾದಿಸುವವನು ಹೊಸದಾಗಿ ಮನೆಯನ್ನು ಕಟ್ಟಿಸುವನು. ವಾಹನ ಪಶುಭಯವುಂಟು ಕಲ್ಲು ಕಟ್ಟಿಗೆ ಮುಂತಾದವುಗಳಿಂದ ಶ್ರಮ ಪಡುವವನು ಆಗುತ್ತಾನೆ.

೧೧. ಕುಂಭಾಂಶದಲ್ಲಿ ಕುಜನಿದ್ದರೆ- ಕೂಲಿ ಕೆಲಸ ಮಾಡುವವನು ಬಹುಕೋಪಿಯು ಹಟವಾದಿಯು ಆಗುವನು.

೧೨. ಮೀನಾಂಶದಲ್ಲಿ ಕುಜನಿದ್ದರೆ- ವ್ಯವಹಾರದಲ್ಲಿ ನಿಪುಣನು ಬ್ರಾಹ್ಮಣರಲ್ಲಿ ವಿರೋಧಿಯು ಜಲಸಂಬಂಧವಾದ ಭೂಮಿಯನ್ನು ವೃದ್ಧಿ ಮಾಡುವವನು ಜಲಭಯವುಳ್ಳವನು ಆಗುವನು.

ಮೇಷಾದಿ ಅಂಶದಲ್ಲಿರುವ ಬುಧನ ಫಲವು

೧. ಮೇಷಾಂಶದಲ್ಲಿ ಬುಧನಿದ್ದರೆ- ವಸ್ತ್ರಾಭರಣ ಸಂಗ್ರಹವುಳ್ಳವನು ಬಂಧುಗಳಲ್ಲಿ ಶ್ರೇಷ್ಠನೆನಿಸಿಕೊಳ್ಳುವವನು, ಧೈರ್ಯಶಾಲಿಯು, ವ್ಯವಹಾರ ಮೂಲಕವಾಗಿ ಧನನಾಶ ಮಾಡಿಕೊಳ್ಳುವವನು ಆಗುವನು.

೨. ವೃಷಭಾಂಶದಲ್ಲಿ ಬುಧನಿದ್ದರೆ- ಕ್ರಯವಿಕ್ರಯದಲ್ಲಿ ನಿಪುಣನು ವಿದ್ಯಾವಂತನು, ಸೂಕ್ಷ್ಮ ಬುದ್ಧಿಯುಳ್ಳವನು, ಆಚಾರವಂತನು. ಪ್ರಜ್ಞಾ-ಶಾಲಿಯು ಆಗುವನು.

೩. ಮಿಥುನಾಂಶದಲ್ಲಿ ಬುಧನಿದ್ದರೆ- ಕೀರ್ತಿವಂತನು, ದಯಾ ದಾಕ್ಷಿಣ್ಯವುಳ್ಳವನು, ನಾನಾ ದೇಶಗಳನ್ನು ಸಂಚಾರ ಮಾಡುವವನು, ಸರ್ವಜನರಲ್ಲಿ ಸ್ನೇಹವುಳ್ಳವನು ಆಗುವನು.

೪. ಕರ್ಕಾಂಶದಲ್ಲಿ ಬುಧನಿದ್ದರೆ- ವಿದ್ಯಾಬುದ್ಧಿಯುಳ್ಳವನು, ಉತ್ತಮ ಸ್ವಭಾವದವನು, ಯುಕ್ತಿಯಿಂದ ಕೆಲಸಮಾಡುವವನು ಆಗುತ್ತಾನೆ.

೫. ಸಿಂಹಾಂಶದಲ್ಲಿ ಬುಧನಿದ್ದರೆ- ಸಂಗೀತ ಪ್ರಿಯನು, ಪುರಾಣ ಪುಣ್ಯಕಥೆಗಳಲ್ಲಿ ಅಪೇಕ್ಷೆಯುಳ್ಳವನು ಆಗುವನು.

೬. ಕನ್ಯಾಂಶದಲ್ಲಿ ಬುಧನಿದ್ದರೆ- ಧನವಂತನು. ಅನೇಕ ವಿಧವಾದ ವ್ಯಾಪಾರ ಮಾಡುವವನು ಸದಾಚಾರವುಳ್ಳವನು ಆಗುವನು.

೭. ತುಲಾಂಶದಲ್ಲಿ ಬುಧನಿದ್ದರೆ- ಸೌಭಾಗ್ಯವಂತನು, ಕಾರ್ಯಕುಶಲನು, ಯುಕ್ತಿವಂತನು ಆಗುವನು.

೮. ವೃಶ್ಚಿಕಾಂಶದಲ್ಲಿ ಬುಧನಿದ್ದರೆ- ಗುಹ್ಯರೋಗಿಯು, ಕಲಹದಿಂದಲೂ ವ್ಯಾಪಾರದಿಂದಲೂ ಧನ ಕಳೆದುಕೊಳ್ಳುವವನು. ಚಪಲಚಿತ್ತನು ಆಗುವನು.

೯. ಧನುರಂಶದಲ್ಲಿ ಬುಧನಿದ್ದರೆ– ಕುಶಲನು, ವಿವೇಕಿಯು ಕ್ರಯ-ವಿಕ್ರಯದಲ್ಲಿ ನಿಪುಣನು, ವಿಚಾರವಂತನು ಆಗುವನು.

೧೦. ಮಕರಾಂಶದಲ್ಲಿ ಬುಧನಿದ್ದರೆ– ನೀಚಜನರ ಮೂಲಕ ಧನನಾಶ ಮಾಡಿಕೊಳ್ಳುವವನು, ಕಪಟಿಯು ಆಗುವನು.

೧೧. ಕುಂಭಾಂಶದಲ್ಲಿ ಬುಧನಿದ್ದರೆ– ವಿದ್ಯೆಗಾಗಿ ಕಷ್ಟಪಡುವವನು ಮಂದ ಬುದ್ಧಿಯುಳ್ಳವನು, ವಂಚಕತನದಿಂದ ಧನ ನಾಶ ಮಾಡಿಕೊಳ್ಳುವವನು ಆಗುವನು.

೧೨. ಮೀನಾಂಶದಲ್ಲಿ ಬುಧನಿದ್ದರೆ– ಕುಟುಂಬ ವೃದ್ಧಿಯುಳ್ಳವನು, ಬುದ್ಧಿಭ್ರಂಶವುಳ್ಳವನು, (ತಿಳಿಗೇಡಿಯು) ನೆಂಟರಲ್ಲಿ ನಿಷ್ಠುರನು, ಆಗುವನು.

ಮೇಷಾದಿ ಅಂಶದಲ್ಲಿ ಗುರುವು ಇರುವ ಫಲವು.

೧. ನೇ ಮೇಷಾಂಶದಲ್ಲಿ ಗುರುವಿದ್ದರೆ– ಸುವರ್ಣಾಭರಣ ಸಂಗ್ರಹಮಾಡುವವನು, ದೇಹಕಾಂತಿಯುಳ್ಳವನು, ಧರ್ಮಿಷ್ಠನು, ಪರೋಪಕಾರಿಯು, ದಯಾಗುಣವುಳ್ಳವನು, ಆಗುವನು.

೨. ನೇ ವೃಷಭಾಂಶದಲ್ಲಿ ಗುರುವಿದ್ದರೆ– ಸುಖಿಯು ಉತ್ತಮ ಜಾತಿಯುವರಲ್ಲಿ ದ್ವೇಷಿಯಾಗುವನು, ಪುತ್ರಶೋಕವುಳ್ಳವನು, ಸ್ತ್ರೀಮೂಲಕವಾಗಿ ಧನನಾಶಮಾಡಿಕೊಳ್ಳುವವನು ಆಗುವನು.

೩. ನೇ ಮಿಥುನಾಂಶದಲ್ಲಿ ಗುರುವಿದ್ದರೆ- ಸತ್ಪುತ್ರವಂತನು ವ್ಯಾಪಾರ ಮೂಲಕ ಧನಸಂಪಾದನೆ ಮಾಡುವವನು, ಪ್ರಯಾಣದಿಂದ ಪುಣ್ಯಕ್ಷೇತ್ರ ದರ್ಶನ ಮಾಡಿಕೊಳ್ಳುವವನು, ಆಗುವನು.

೪. ನೇ ಕರ್ಕಾಂಶದಲ್ಲಿ ಗುರುವಿದ್ದರೆ– ಮಾವು ತೆಂಗು ಮುಂತಾದ ಸಸಿಗಳನ್ನು ಹಾಕಿಸುವವನು, ಜಲ (ಕೆರೆ-ಬಾವಿ) ಕಾರ್ಯಾರಂಭ ಮಾಡಿಸುವವನು, ಸತ್ಪುತ್ರವಂತನು, ಆಗುವನು.

೫. ನೇ ಸಿಂಹಾಂಶದಲ್ಲಿ ಗುರುವಿದ್ದರೆ– ದೊಡ್ಡವರಲ್ಲಿ ಸ್ನೇಹ ಮಾಡುವವನು, ದೇಹ ಪುಷ್ಟಿಯುಳ್ಳವನು ರಾಜದಂಡವುಳ್ಳವನು, ನಷ್ಟಸಂತಾನವುಳ್ಳವನು, ಆಗುವನು.

೬. ನೇ ಕನ್ಯಾಂಶದಲ್ಲಿ ಗುರುವಿದ್ದರೆ-ದೊಡ್ಡವರಿಂದ ಸುಖಪಡುವವನು, ಉತ್ತಮ ಜಾತಿಯವರಲ್ಲಿ ಶತ್ರುತ್ವವುಳ್ಳವನು ಆಗುವನು.

೭. ನೇ ತುಲಾಂಶದಲ್ಲಿ ಗುರುವಿದ್ದರೆ ಕಲಹಗಾರನು, ಹೆಂಡತಿಯಲ್ಲಿ ಮನಸ್ತಾಪ ಮಾಡಿಕೊಳ್ಳುವವನು, ಮೇಹರೋಗವುಳ್ಳವನು, ಆಗುವನು.

೮. ನೇ ವೃಶ್ಚಿಕಾಂಶದಲ್ಲಿ ಗುರುವಿದ್ದರೆ- ಮಾತಿನಲ್ಲಿ ಜಾಣನು ಶಿಶ್ನದಲ್ಲಿ ರೋಗವುಳ್ಳವನು. ಮಕ್ಕಳ ಸಲುವಾಗಿ ವ್ಯಸನ ಪಡುವವನು ಆಗುವನು.

೯. ಧನುರಂಶದಲ್ಲಿ ಗುರುವಿದ್ದರೆ- ಅಶ್ವ (ಸಾಯಿಕಲ್ಲು, ಮೋಟರ, ರೈಲು ವಿಮಾನ, ಹಡಗ ಇತ್ಯಾದಿ) ವಾಹನವುಳ್ಳವನು, ದೇಹ ಕಾಂತಿಯುಳ್ಳವನು, ಪುತ್ರವೃದ್ಧಿಯುಳ್ಳವನು, ನಾನಾಮೂಲಕವಾಗಿ ಧನ ಸಂಪಾದನೆ ಮಾಡುವವನ ಆಗುವನು.

೧೦. ನೇ ಮಕರಾಂಶದಲ್ಲಿ ಗುರುವಿದ್ದರೆ- ಬಂಧು ವಿರೋಧಿಯು ದೇಹಾರೋಗ್ಯವುಳ್ಳವನು, ಚಂಚಲ ಬುದ್ಧಿಯುಳ್ಳವನು ಆಗುತ್ತಾನೆ.

೧೧. ನೇ ಕುಂಭಾಂಶದಲ್ಲಿ ಗುರುವಿದ್ದರೆ- ವಾಹನ ವಸ್ತ್ರಾಭರಣವುಳ್ಳವನು, ಡಂಭಾಚಾರದಿಂದ ಧರ್ಮಕಾರ್ಯ ಮಾಡುವವನು, ಆಗುತ್ತಾನೆ.

೧೨. ನೇ ಮೀನರಾಶಿಯ ಅಂಶದಲ್ಲಿ ಗುರುವಿದ್ದರೆ- ಆಲೋಚನೆಯಲ್ಲಿ ಸಮರ್ಥನು, ಸೂಕ್ಷ್ಮ ಬುದ್ಧಿಯುಳ್ಳವನು, ಧರ್ಮಕಾರ್ಯಕ್ಕೆ ಸಹಾಯ ಮಾಡತಕ್ಕವನು ಆಗುವನು.

ಮೇಷಾದಿ ಅಂಶದಲ್ಲಿ ಶುಕ್ರನಿರುವ ಫಲ

೧. ನೇ ಮೇಷಾಂಶದಲ್ಲಿ ಶುಕ್ರನಿದ್ದರೆ- ಆಭರಣಗಳನ್ನು ಸಂಗ್ರಹ ಮಾಡುವವನು. ಸ್ತ್ರೀ ಮೂಲಕವಾಗಿ ಧನನಾಶಮಾಡಿಕೊಳ್ಳತಕ್ಕವನು, ನೇತ್ರ ರೋಗವುಳ್ಳವನು, ಆಗುವನು.

೨. ವೃಷಭಾಂಶದಲ್ಲಿ ಶುಕ್ರನಿದ್ದರೆ- ಸ್ತ್ರೀಲೋಲನು ಕಾಮಿಯು ಸ್ತ್ರೀ ಮೂಲಕ ಸುಖಪಡುವವನು, ಉತ್ತಮವಾಹನವುಳ್ಳವನು; ಶಯ್ಯಾಸುಖವುಳ್ಳವನು, ಆಗುವನು.

೩. ನೇ ಮಿಥುನಾಂಶದಲ್ಲಿ ಶುಕ್ರನಿದ್ದರೆ- ಒಳ್ಳೆ ಭೋಗವುಳ್ಳವನು, ಮಧುರಾಹಾರದಲ್ಲಿಯೂ, ಹೆಂಡತಿಯಲ್ಲಿಯೂ, ಪ್ರೀತಿಯುಳ್ಳವನು ಆಗುವನು.

೪. ನೇ ಕರ್ಕಾಂಶದಲ್ಲಿ ಶುಕ್ರನಿದ್ದರೆ- ಸುಖಿಯು, ಜಲ ಭೂಮಿಯನ್ನು ವೃದ್ಧಿ ಮಾಡುವವನು ಸ್ತ್ರೀಮೂಲಕ ದ್ವೇಷವುಳ್ಳವನು, ವಾಹನ,ಪಶು, ನೀರು ಇತ್ಯಾದಿಗಳಿಂದ ಕಂಟಕವು.

೫. ನೇ ಸಿಂಹಾಂಶದಲ್ಲಿ ಶುಕ್ರನಿದ್ದರೆ- ಸುಖವಂತನು. ಹೆಂಡತಿಯಲ್ಲಿ ವಿರೋಧಮಾಡಿಕೊಳ್ಳುವವನು. ಹೆಂಗಸರಿಂದ ಅಪಮಾನ ಹೊಂದುವವನು ಮೇಹರೋಗವುಳ್ಳವನು ನೇತ್ರರೋಗವುಳ್ಳವನು ಆಗುವನು.

೬. ಕನ್ಯಾಂಶದಲ್ಲಿ ಶುಕ್ರನಿದ್ದರೆ- ನೀಚ ಸ್ತ್ರೀ ಸಂಗಮಾಡುವವನು. ದ್ವಿಕಲತ್ರ (ಇಬ್ಬರು ಹೆಂಡತಿಯರ) ಯೋಗವುಳ್ಳವನು ಧಾತುಪುಷ್ಟಿ ಕಡಿಮೆಯುಳ್ಳವನು, ಆಗುವನು.

೭. ನೇ ತುಲಾಂಶದಲ್ಲಿ ಶುಕ್ರನಿದ್ದರೆ- ಬಹುಕಾಮಿಯು, ಸ್ತ್ರೀಲೋಲನು, ಹೆಂಗಸರಿಂದ ಧನಲಾಭ ಹೊಂದುವವನು ಸಂಗೀತಪ್ರಿಯನು, ಹೊಸದಾಗಿ ಮನೆಯನ್ನು ಕಟ್ಟಿಸುವವನು, ಆಗುವನು.

೮. ನೇ ವೃಶ್ಚಿಕಾಂಶದಲ್ಲಿ ಶುಕ್ರನಿದ್ದರೆ- ಈತನ ಹೆಂಡತಿಯು, ಹುಣ್ಣಿನಿಂದ ಅಥವಾ ಕುಸುಮ ರೋಗದಿಂದ ಕಷ್ಟಪಡುವಳು. ಈತನು ಸಹ ಸ್ತ್ರೀ ಮೂಲಕ ವ್ಯಸನ ಪಡುವವನು, ಆಗುವನು.

೯. ಧನುರಂಶದಲ್ಲಿ ಶುಕ್ರನಿದ್ದರೆ- ಸ್ತ್ರೀಮೂಲಕವಾದ ವಿರೋಧದಿಂದ ಧನನಾಶ ಮಾಡಿಕೊಳ್ಳುವವನು; ವಾಹನ ಪಶುಭಯವುಳ್ಳವನು, ಉತ್ತಮ ಜಾತಿಯುವರಲ್ಲಿ ವಿರೋಧಿಯಾಗುವನು.

೧೦. ನೇ ಮಕರಾಂಶದಲ್ಲಿ ಶುಕ್ರನಿದ್ದರೆ- ನೀರಿನ ಕಂಟಕವುಳ್ಳವನು. ನೀಚ ಸ್ತ್ರೀ ಸಂಗ ಮಾಡುವವನು ಕ್ರೂರಗುಣವುಳ್ಳ ಹೆಂಡತಿಯುಳ್ಳವನು. ಆಗುವನು.

೧೧. ನೇ ಕುಂಭಾಂಶದಲ್ಲಿ ಶುಕ್ರನಿದ್ದರೆ— ಒಳ್ಳೆ ಭೋಗವುಳ್ಳವನು, ಅಶ್ವವಾಹನವುಳ್ಳವನು, ಅಲಂಕಾರ ಪ್ರಿಯನು ಆಗುವನು.

೧೨. ನೇ ಮೀನರಾಶ್ಯಂಶದಲ್ಲಿ ಶುಕ್ರನಿದ್ದರೆ— ಸ್ತ್ರೀ ಮೂಲಕವಾಗಿ ದುಃಖಪಡುವವನು. ಶೀತ ಕಫ ರೋಗವುಳ್ಳವನು, ಉತ್ತಮ ಜಾತಿಯುವರಲ್ಲಿ ವಿರೋಧಿಯಾಗುವನು.

ಮೇಷಾದಿ ಅಂಶಗಳಲ್ಲಿ ಶನಿಯಿರುವ ಫಲ.

೧. ನೇ ಮೇಷಾಂಶದಲ್ಲಿ ಶನಿಯಿದ್ದರೆ— ಜನರಲ್ಲಿ ವಿರೋಧಿಯು ಕಲಹ ಪ್ರಿಯನು ವ್ರಣ ಶಸ್ತ್ರಾಗ್ನಿ ಭಯವುಳ್ಳವನು ಶೂದ್ರ ಜನರಲ್ಲಿ ವಿರೋಧಿ ಯಾಗುವನು.

೨. ನೇ ವೃಷಭಾಂಶದಲ್ಲಿ ಶನಿಯಿದ್ದರೆ- ಮೇಹ ಸಂಬಂಧ ರೋಗ ವುಳ್ಳವನು. ಈತನ ಹೆಂಡತಿಯು ಶೂಲೆಯಿಂದ ಕಷ್ಟ ಪಡುವವಳು; ವಾಹನ ಪಶುಭಯವುಳ್ಳವನು ಆಗುವನು.

೩. ನೇ ಮಿಥುನಾಂಶದಲ್ಲಿ ಶನಿಯಿದ್ದರೆ- ಚಂಚಲ ಚಿತ್ತನು, ವ್ಯಾಪಾರ ಮೂಲಕವಾಗಿ ಧನ ವ್ಯಯಮಾಡಿಕೊಳ್ಳುವವನು. ಡಾಂಭಿಕವಾದ ಆಚರಣೆ ಯುಳ್ಳವನು ಆಗುವನು.

೪. ನೇ ಕರ್ಕಾಂಶದಲ್ಲಿ ಶನಿಯಿದ್ದರೆ- ಜಲಭಯವು ಭೂಮಿಯಿಂದ ವ್ಯವಹಾರ ಮಾಡಿಕೊಳ್ಳುವವನು. ರೋಗಿಯಾದ ತಾಯಿಯುಳ್ಳವನು. ಪರ ಸ್ತ್ರೀಯರನ್ನು ರಮಿಸುವವನು ಆಗುವನು.

೫. ನೇ ಸಿಂಹಾಂಶದಲ್ಲಿ ಶನಿಯಿದ್ದರೆ- ಸರಕಾರದಿಂದ ತೊಂದರೆ ಪಡು ವವನು. ವಾತ ಸಮ್ಮಂಧ ದೇಹವುಳ್ಳವನು. ರಾಜಪುರುಷರೊಡನೆ ವಿರೋಧ ಮಾಡಿಕೊಳ್ಳುವವನು ಪಿತ್ತಕ್ಲೇಶವುಳ್ಳವನು ಅಗುವನು.

೬. ನೇ ಕನ್ಯಾಂಶದಲ್ಲಿ ಶನಿಯಿದ್ದರೆ- ಶಸ್ತ್ರ, ಅಗ್ನಿ, ಚೋರಭಯವುಳ್ಳ ವನು. ಸ್ತ್ರೀ ಮೂಲಕ ಅಪವಾದ ಹೊಂದುವವನು ಆಗುವನು.

೭. ನೇ ತುಲಾಂಶದಲ್ಲಿ ಶನಿಯಿದ್ದರೆ- ಅಧಿಕಾರವುಳ್ಳವನು ಶೂದ್ರ ಜನ ರಲ್ಲಿ ಸ್ನೇಹ ಬೆಳೆಸುವವನು, ನೀಚಕಾರ್ಯದಿಂದ ಧನ ಸಂಪಾದನೆ ಮಾಡು ವವನು ಆಗುವನು.

೮. ನೇ ವೃಶ್ಚಿಕಾಂಶದಲ್ಲಿ ಶನಿಯಿದ್ದರೆ—ಮೂತ್ರ ಕೃಚ್ಛ್ರ ರೋಗವುಳ್ಳ ವನು. ಭೂಮಿಯಿಂದ ವ್ಯವಹಾರ ಮಾಡಿಕೊಳ್ಳುವವನು. ಅಣ್ಣತಮ್ಮಂದಿ ರಿಂದ ಮನೋದುಃಖ ಹೊಂದತಕ್ಕವನು ಆಗುವನು.

೯. ನೇ ಧನುರಂಶದಲ್ಲಿ ಶನಿಯಿದ್ದರೆ— ಸರ್ವ ಜನರಲ್ಲಿ ವಿರೋಧಿಯಾಗುವನು. ದಯಾ ದಾಕ್ಷಿಣ್ಯವುಳ್ಳವನು. ತೊಡೆಯಲ್ಲಿ ವ್ರಣಬಾಧೆಯುಳ್ಳವನು ಆಗುವನು.

೧೦. ನೇ ಮಕರಾಂಶದಲ್ಲಿ ಶನಿಯಿದ್ದರೆ- ಕಳ್ಳರಿಂದ ಧನಲಾಭ ಹೊಂದುವವನು, ಕಪ್ಪು ಪದಾರ್ಥಗಳಿಂದ ಧನ ಸಂಪಾದಿಸುವವನು ನೀಚ ಕಾರ್ಯಗಳನ್ನು ಮಾಡುವವನು ಆಗುವನು.

೧೧. ನೇ ಕುಂಭಾಂಶದಲ್ಲಿ ಶನಿಯಿದ್ದರೆ– ಅಧಿಕಾರವುಳ್ಳವನು, ಸರ್ವ ಜನರಲ್ಲಿ ಮರ್ಯಾದೆಯುಳ್ಳವನು, ಶೂದ್ರಜನರ ಸ್ನೇಹವುಳ್ಳವನು ಆಗುವನು.

೧೨. ನೇ ಮೀನಾಂಶದಲ್ಲಿ ಶನಿಯಿದ್ದರೆ– ಶೂದ್ರಜನರ ಸ್ನೇಹವುಳ್ಳವನು, ಚೋರಭಯವುಳ್ಳವನು, ಜಲಕಂಟಕವುಳ್ಳವನು, ಪುತ್ರಶೋಕವುಳ್ಳವನು, ಆಗುತ್ತಾನೆ.

ನವಾಂಶ ಕುಂಡಲಿಯಲ್ಲಿ ರಾಹು, ಕೇತುಗಳಿಗೆ ಫಲವಿಲ್ಲ. ಆದ್ದರಿಂದ ಅವರ ಫಲವನ್ನು ಬರೆದಿರುವದಿಲ್ಲ.

— ಷಡ್ವರ್ಗ ಕುಂಡಲಿಯ ಫಲಗಳು —

ಜನನ ಪತ್ರಿಕೆ ಅಥವಾ ಜಾತಕಗಳನ್ನು ತಯಾರಿಸುವಾಗ ಷಡ್ವರ್ಗ ಕುಂಡಲಿಯನ್ನು ತಯಾರಿಸಿ ಫಲಗಳನ್ನು ಅವಲೋಕಿಸಬೇಕು ಷಡ್ವರ್ಗದಲ್ಲಿ ಮೊದಲನೆಯದು ಲಗ್ನ ಅಥವಾ ರಾಶಿ ಈ ಕುಂಡಲಿಯಿಂದ ಜಾತಕನ ಸೌಖ್ಯ ಮೊದಲಾದ ವಿಚಾರವನ್ನೂ ಹೋರಾಧಿಪತಿಯಿಂದ ಜಾತಕನ ಶೀಲ, ಸ್ವಭಾವಾದಿಗಳನ್ನೂ, ದ್ರೇಕ್ಕಾಣಾಧಿಪತಿ ಹಾಗೂ ದ್ರೇಕ್ಕಾಣ ಕುಂಡಲಿಯಿಂದ ಜಾತಕನ ಪದವಿ, ಅಧಿಕಾರ, ಐಶ್ವರ್ಯ, ಸಂಪತ್ತು, ಈ ವಿಚಾರಗಳನ್ನೂ ನವಾಂಶಾಧಿಪತಿ ಮತ್ತು ನವಾಂಶ ಕುಂಡಲಿಯಿಂದ ಜಾತಕನ ರೂಪ, ಗುಣ, ಮಕ್ಕಳು, ಮೊಮ್ಮಕ್ಕಳು, ಇತ್ಯಾದಿ ವಿಷಯಗಳನ್ನೂ, ದ್ವಾದಶಾಂಶಾಧಿಪತಿಯಿಂದ ಜಾತಕನ ಲಿಂಗ, ಸ್ವರೂಪ ಬಲವಂತ, ಕ್ಷೀಣ, ಸಮಬಲ, ಲಘು, ದೀರ್ಘ, ಹ್ರಸ್ವ, ವಿಚಾರಗಳನ್ನೂ ತ್ರಿಂಶಾಂಶಾಧಿಪತಿಯಿಂದ (ಪುರುಷರಿಗೆ) ಪತ್ನಿಯ ಶೀಲ, ಸ್ವಭಾವ, ಸ್ತ್ರೀಯಳಿಂದ ಸುಖದುಃಖ (ಸ್ತ್ರೀಯರಿಗೆ) ಪತಿಯ ಶೀಲ, ಸ್ವಭಾವ, ಪತಿಯಿಂದ ಸುಖ ದುಃಖಗಳನ್ನೂ ತಿಳಿದುಕೊಳ್ಳಬೇಕು.

ಜನನಲಗ್ನಾಧಿಪತಿಯ ಫಲವಿಚಾರವನ್ನು ಈ ಮೊದಲು ವಿವರಿಸಿದೆ.

— ಹೋರಾಧಿಪತಿ ಫಲವು —

ಜನನಲಗ್ನದಲ್ಲಿ ರವಿ, ಕ್ಷೀಣಚಂದ್ರ, ಮಂಗಳ, ಪಾಪಗ್ರಹಗಳೊಡನೆ ಕೂಡಿದ ಬುಧ ಈ ಗ್ರಹಗಳು ವಿಷಮರಾಶಿಗಳಲ್ಲಿ (ಮೇಷ, ಮಿಥುನ, ಸಿಂಹ; ತುಲಾ; ಧನು, ಕುಂಭ ಇವು ವಿಷಮರಾಶಿಗಳು) ಇರುವಾಗ ಷಡ್ವರ್ಗ ಕುಂಡಲಿಯಲ್ಲಿ ಹೋರಾಧಿಪತಿಯು (ಸಿಂಹ) ರವಿ ಆದರೆ ಆ ಜಾತಕನು ಮಹಾ ಸಾಹಸಿಯೂ, ಧನವಂತನೂ, ಶೂರನೂ, ಅಧಿಕವಾದ ತೇಜಸ್ಸುಳ್ಳವನೂ, ಆಗುವನು.

ಜನನಲಗ್ನ ಕುಂಡಲಿಯಲ್ಲಿ ಪೂರ್ಣಚಂದ್ರ, ಶುಭ ಗ್ರಹಗಳೊಡನೆ ಕೂಡಿದ್ದ ಬುಧ, ಗುರು ಶುಕ್ರ ಈ ಶುಭಗ್ರಹಗಳು, ಸಮರಾಶಿಗಳಲ್ಲಿ (ವೃಷಭ, ಕರ್ಕ, ಕನ್ಯಾ, ವೃಶ್ಚಿಕ, ಮಕರ, ಮೀನ ಇವು ಸಮರಾಶಿಗಳು) ಇರುವಾಗ ಷಡ್ವರ್ಗಕುಂಡಲಿಯಲ್ಲಿ ಹೋರಾಧಿಪತಿಯು (ಕರ್ಕ) ಚಂದ್ರನಾದರೆ ಆ ಜಾತಕನು ನಮ್ರಸ್ವಭಾವಿಯೂ, ಕಾಂತಿಯುತನೂ; ಸುಖಭೋಗಿಯೂ, ಪತ್ನಿ, ಪುತ್ರ, ಮಿತ್ರ, ಧನ, ಆರೋಗ್ಯ ಮೊದಲಾದ ಸೌಭಾಗ್ಯಯುಕ್ತನೂ, ಬಹು ಬುದ್ಧಿವಂತನೂ, ಮೃದುವಾಗಿ ಮಾತಾಡತಕ್ಕವನೂ, ಆಗುವನು.

ಜನನ ಲಗ್ನಕುಂಡದಲ್ಲಿ ರವಿ, ಕ್ಷೀಣಚಂದ್ರ, ಕುಜ, ಪಾಪಗ್ರಹಗಳೊಡನೆ ಕೂಡಿದ ಬುಧ ಈ ಗ್ರಹಗಳು ಸಮರಾಶಿಗಳಲ್ಲಿ ಇರುವಾಗ ಷಡ್ವರ್ಗ ಕುಂಡಲಿಯಲ್ಲಿ ಹೋರಾಧಿಪತಿಯು (ಸಿಂಹ) ರವಿಯು ಆದರೆ ಆಜಾತಕನು ಆಲಸಿಯೂ, ಮೈಗಳ್ಳನೂ ಹೇಡಿಯೂ, ದರಿದ್ರನೂ, ನಿಸ್ತೇಜನೂ ಆಗುವನು.

ಜನನಲಗ್ನ ಕುಂಡಲಿಯಲ್ಲಿ ಪೂರ್ಣಚಂದ್ರ, ಶುದ್ಧನಾದ ಬುಧ, ಗುರು, ಶುಕ್ರರು ವಿಷಮ ರಾಶಿಗಳಲ್ಲಿ ಇರುವಾಗ ಹೋರಾಧಿಪತಿಯು (ಕರ್ಕ) ಚಂದ್ರನಾಗಿದ್ದರೆ ಆ ಜಾತಕನು, ಕಠೋರನೂ, ದುಃಖಿಯೂ, ಬಡವನೂ, ಮಂದಬುದ್ಧಿಯುಳ್ಳವನೂ, ಕರ್ಕಶವಾದ ಧ್ವನಿಯುಳ್ಳವನೂ ನಿರ್ಬಲನೂ, ಕಾಂತಿಹೀನನೂ, ಆಗುವನು.

ದ್ರೇಕ್ಕಾಣಾಧಿಪತಿ ಫಲವು

ದ್ರೇಕ್ಕಾಣಾಧಿಪತಿಯು ಚಂದ್ರನಿಗೆ ಮಿತ್ರನಾಗಿದ್ದರೆ— ಆ ಜಾತಕನು ರೂಪವಂತನೂ, ಸದ್ಗುಣಿಯೂ, ಸುಶೀಲನೂ, ದಾನವಂತನೂ. ಪರೋಪಕಾರಿಯೂ; ಸೌಭಾಗ್ಯವಂತನೂ, ಧನಿಕನೂ, ಸಕಲರಿಗೆ ಪ್ರಿಯನೂ, ಕಲ್ಯಾಣಕಾರಕನೂ ಆಗುವನು.

ದ್ರೇಕ್ಕಾಣಾಧಿಪತಿಯು ಚಂದ್ರನಿಗೆ ಸಮನಾಗಿದ್ದರೆ- ಆ ಜಾತಕನು ಸಾಧಾರಣ ಗುಣವುಳ್ಳವನು ಆಗುವನು.

ದ್ರೇಕ್ಕಾಣಾಧಿಪತಿಯು ಚಂದ್ರನಿಗೆ ಶತ್ರುವಾಗಿದ್ದರೆ- ಆ ಜಾತಕನು ಕುರೂಪಿಯೂ; ಬಡವನೂ, ದರಿದ್ರನೂ, ಸರ್ವರ ವಿರೋಧಿಯೂ ಪರರ ಉಪಕಾರವನ್ನು ಅರಿಯದವನೂ, ದುಷ್ಟನೂ, ಪಾಪಿಷ್ಟನೂ, ನೀಚಜನರ ಸ್ನೇಹವುಳ್ಳವನೂ, ಕಷ್ಟಜೀವಿಯೂ, ಭಾಗ್ಯಹೀನನೂ; ಆಗುವನು.

ದ್ರೇಕ್ಕಾಣದಲ್ಲಿ ಇರುವ ಚಂದ್ರನ ಫಲ

ದ್ರೇಕ್ಕಾಣಗಳಲ್ಲಿ ಸರ್ಪದ್ರೇಕ್ಕಾಣ, ಆಯುಧಧಾರಿ ದ್ರೇಕ್ಕಾಣ, ಚತುಷ್ಪಾದ ದ್ರೇಕ್ಕಾಣ, ಪಕ್ಷಿದ್ರೇಕ್ಕಾಣ ಹೀಗೆ ನಾಲ್ಕು ಪ್ರಕಾರದ ದ್ರೇಕ್ಕಾಣಗಳು.

ಸರ್ಪ ದ್ರೇಕ್ಕಾಣಗಳು– ಜನನ ಲಗ್ನವು ಕರ್ಕ ಇದ್ದು ೨-೩ ನೆಯ ದ್ರೇಕ್ಕಾಣಗಳು, ಜನನಲಗ್ನವು ವೃಶ್ಚಿಕವಾಗಿ ೧-೨ ನೆಯ ದ್ರೇಕ್ಕಾಣಗಳು ಜನನಲಗ್ನವು ಮೀನ ಇದ್ದು ೩ನೆಯ ದ್ರೇಕ್ಕಾಣವು ಇವು ಐದು ಸರ್ಪ ದ್ರೇಕ್ಕಾಣಗಳು.

ಆಯುಧ ಧಾರಿ ದ್ರೇಕ್ಕಾಣಗಳು— ಜನನ ಲಗ್ನವು ಮೇಷ ಇದ್ದು ೧–೩ನೆಯ ದ್ರೇಕ್ಕಾಣಗಳು. ಜನನ ಲಗ್ನವು ಮಿಥುನ ಇದ್ದು. ೨–೩ನೆಯ ದ್ರೇಕ್ಕಾಣಗಳು, ಜನನ ಲಗ್ನವು ಸಿಂಹ ಇದ್ದು ೨–೩ ನೆಯ ದ್ರೇಕ್ಕಾಣಗಳು ಜನನ ಲಗ್ನವು ಕನ್ಯಾ ಇದ್ದು ೨ನೆಯ ದ್ರೇಕ್ಕಾಣವು ಜನನ ಲಗ್ನವು ಧನಸ್ಸು ಇದ್ದು ೧–೩ನೆಯ ದ್ರೇಕ್ಕಾಣಗಳು. ಇವು ಒಂಭತ್ತು ಆಯುಧ ಧಾರಿ ದ್ರೇಕ್ಕಾಣಗಳು.

ಚತುಷ್ಪಾದ ದ್ರೇಕ್ಕಾಣಗಳು-ಜನನ ಲಗ್ನವು ಮೇಷವಿದ್ದು ೨ ನೆಯ ದ್ರೇಕ್ಕಾಣವು, ಜನನ ಲಗ್ನವು ವೃಷಭವಿದ್ದು ೨ ನೆಯ ದ್ರೇಕ್ಕಾಣವು ಜನನ ಲಗ್ನವು ಕರ್ಕವಿದ್ದು ೧ ನೆಯ ದ್ರೇಕ್ಕಾಣವು, ಜನನಲಗ್ನವು ಸಿಂಹವಿದ್ದು ೧-೨ ನೆಯ ದ್ರೇಕ್ಕಾಣಗಳು. ಜನನ ಲಗ್ನವು ವೃಶ್ಚಿಕವಿದ್ದು ೩ನೇ ದ್ರೇಕ್ಕಾಣವು ಜನನ ಲಗ್ನವು ಧನು ಇದ್ದು ೨ನೇ ದ್ರೇಕ್ಕಾಣವು ಅಂತು ಇವು ಏಳು ಚತುಷ್ಪಾದ ದ್ರೇಕ್ಕಾಣಗಳು.

ಪಕ್ಷಿ ದ್ರೇಕ್ಕಾಣಗಳು.—ಜನನಲಗ್ನವು ಮಿಥುನವಿದ್ದು ೨-೩ ನೆಯ ದ್ರೇಕ್ಕಾಣಗಳು ಜನನ ಲಗ್ನವು ಸಿಂಹವಿದ್ದು. ೧ ನೆಯ ದ್ರೇಕ್ಕಾಣವು ಜನನ ಲಗ್ನವು ತುಲಾಇದ್ದು ೨ ನೆಯ ದ್ರೇಕ್ಕಾಣವು ಜನನ ಲಗ್ನವು ಕುಂಭವಿದ್ದು ೧ ನೆಯ ದ್ರೇಕ್ಕಾಣವು ಇವು ಐದು ಪಕ್ಷಿದ್ರೇಕ್ಕಾಣಗಳು.

ಈ ಮೇಲಿನವುಗಳಲ್ಲಿ ಸರ್ಪ ದ್ರೇಕ್ಕಾಣಾಧಿಪತಿಯು ಚಂದ್ರನಾಗಿದ್ದರೆ ಜಾತಕನು ಕ್ರೂರನೂ, ತೀಕ್ಷ್ಣ ಸ್ವಭಾವಿಯೂ, ಹಿಂಸಾಚಾರಿಯೂ, ಆಗುವನು, ಆಯುಧಧಾರಿ ದ್ರೇಕ್ಕಾಣಾಧಿಪತಿಯು ಚಂದ್ರನಾಗಿದ್ದರೆ ಜಾತಕನು ಜೀವ ಹಿಂಸೆ ಮಾಡುವವನೂ, ಕೊಲೆಗಾರನೂ, ಕಟುಕನೂ, ಬೇಟೆಗಾರನೂ, ಆಗುವನು. ಚತುಷ್ಪಾದ ದ್ರೇಕ್ಕಾಣಗಳಲ್ಲಿ ಯಾವದೇ ದ್ರೇಕ್ಕಾಣಾಧಿಪತಿಯು ಚಂದ್ರನಾಗಿದ್ದರೆ, ಆ ಜಾತಕನು ಪರಸ್ತ್ರೀ ಲೋಲನೂ; ವ್ಯಭಿಚಾರಿಯೂ, ಪಾಪಿಯೂ, ಗುರು ಪತ್ನಿಯಲ್ಲಿ ಆಸಕ್ತನಾದವನೂ, ಆಗುವನು. ಪಕ್ಷಿ ದ್ರೇಕ್ಕಾಣಗಳಲ್ಲಿ ಯಾವದಾದರೊಂದು ದ್ರೇಕ್ಕಾಣದಲ್ಲಿ ಚಂದ್ರನಿದ್ದುದಾದರೆ ಆ ಜಾತಕನು, ನೃತ್ಯಕಲೆಯಲ್ಲಿ ಜಾಣನೂ, ಸಂಗೀತಗಾರನೂ, ವಾದ್ಯಗಳನ್ನು ನುಡಿಸುವವನೂ, ರಸಿಕನೂ, ನಾಟಕ, ಸಿನೇಮಾಗಳಲ್ಲಿ ನಟನಾಗುವ ಯೋಗದವನೂ ಆಗುವನು.

ನವಾಂಶಾಧಿಪತಿಗಳ ಫಲವನ್ನು ಹಿಂದೆ ಒಂದು ಭಾಗದಲ್ಲಿ ಕೊಡಲಾಗಿದೆ

—ದ್ವಾದಶಾಂಶಾಧಿ ಪತಿಗಳ ಫಲ.—

ಜನನಲಗ್ನವು ಮೇಷಲಗ್ನವಾಗಿರದೆ ಉಳಿದ ೧೧ ಲಗ್ನಗಳಲ್ಲಿ ಬೇಕಾದ ಒಂದು ಲಗ್ನವಾಗಿದ್ದು ಮೇಷ ದ್ವಾದಶಾಂಶದಲ್ಲಿ ಹುಟ್ಟಿದವನು ಕಳ್ಳನಾಗು

ವನು, ಜನನಲಗ್ನವು ವೃಷಭವಾಗಿರದೆ ಉಳಿದ ಲಗ್ನಗಳಲ್ಲಿ ಹುಟ್ಟಿದ ಜಾತಕನಿಗೆ ವೃಷಭದ್ವಾದಶಾಂಶವಾಗಿದ್ದರೆ ಅವನು ಸುಖಭೋಗಿಯಾಗುವನು, ಮಿಥುನ ಲಗ್ನವನ್ನು ಬಿಟ್ಟು ಉಳಿದ ಜನನಲಗ್ನಗಳಲ್ಲಿ ಹುಟ್ಟಿದ ಜಾತಕನು ಮಿಥುನ ದ್ವಾದಶಾಂಶದಲ್ಲಿ ಜನನವಾಗಿದ್ದರೆ ವಿದ್ವಾಂಸನಾಗುವನು. ಕರ್ಕಲಗ್ನವನ್ನು ಬಿಟ್ಟು ಉಳಿದ ಲಗ್ನಗಳಲ್ಲಿ ಮತ್ತು ಕರ್ಕ ದ್ವಾದಶಾಂಶದಲ್ಲಿ ಹುಟ್ಟಿದ ಜಾತಕನು, ಧನವಂತನಾಗುವನು. ಸಿಂಹ ಲಗ್ನವನ್ನು ಬಿಟ್ಟು ಉಳಿದ ಲಗ್ನಗಳಲ್ಲಿ ಮತ್ತು ಸಿಂಹ ದ್ವಾದಶಾಂಶದಲ್ಲಿ ಹುಟ್ಟಿದ ಜಾತಕನು ರಾಜ (ಮಂತ್ರಿ) ನಾಗುವನು, ಕನ್ಯಾಲಗ್ನವನ್ನು ಬಿಟ್ಟು ಉಳಿದ ಲಗ್ನಗಳಲ್ಲಿ ಮತ್ತು ಕನ್ಯಾದ್ವಾದಶಾಂಶದಲ್ಲಿ ಹುಟ್ಟಿದ ಜಾತಕನು, ನಪುಂಸಕ (ಷಂಡ) ನಾಗುವನು. ತುಲಾಲಗ್ನವನ್ನು ಬಿಟ್ಟು ಉಳಿದ ಲಗ್ನಗಳಲ್ಲಿ ತುಲಾ ದ್ವಾದಶಾಂಶದಲ್ಲಿ ಹುಟ್ಟಿದ ಜಾತಕನು ಶೂರನೂ, ರಣಾಂಗಣದಲ್ಲಿ ಶೌರ್ಯ ತೋರಿಸುವವನೂ, ಸೇನಾಪತಿಯೂ, ಆಗುವನು, ವೃಶ್ಚಿಕಲಗ್ನವನ್ನು ಬಿಟ್ಟು ಉಳಿದ ಲಗ್ನಗಳಲ್ಲಿ ಮತ್ತು ವೃಶ್ಚಿಕ ದ್ವಾದಶಾಂಶದಲ್ಲಿ ಹುಟ್ಟಿದ ಜಾತಕನು ಹಮಾಲನೂ; ಕಷ್ಟಜೀವಿಯೂ, ಭಾರವನ್ನು ಹೊತ್ತು ಹಾಕುವವನೂ ಆಗುವನು. ಧನಸ್ಸುಲಗ್ನವನ್ನು ಬಿಟ್ಟು ಉಳಿದ ಲಗ್ನಗಳಲ್ಲಿ ಮತ್ತು ಧನಸ್ಸು ದ್ವಾದಶಾಂಶದಲ್ಲಿ ಹುಟ್ಟಿದ ಜಾತಕನು ಸೇವಕನು ದಾಸವೃತ್ತಿಯನ್ನು ಕೈಕೊಂಡವನು, ನೌಕರನು ಆಗುವನು ಮಕರಲಗ್ನವನ್ನು ಬಿಟ್ಟು ಉಳಿದ ಲಗ್ನಗಳಲ್ಲಿ ಮತ್ತು ಮಕರ ದ್ವಾದಶಾಂಶದಲ್ಲಿ ಹುಟ್ಟಿದ ಜಾತಕನು ಪಾಪಿಷ್ಠನಾಗುವನು ಕುಂಭ ಲಗ್ನವನ್ನು ಬಿಟ್ಟು ಉಳಿದ ಲಗ್ನಗಳಲ್ಲಿ ಮತ್ತು ಕುಂಭ ದ್ವಾದಶಾಂಶದಲ್ಲಿ ಹುಟ್ಟಿದ ಜಾತಕನು ಪ್ರಾಣ ಹಿಂಸೆ ಮಾಡುವವನು, ಕಟುಕನು, ಬೇಟೆಗಾರನು ಆಗುವನು ಮೀನ ಲಗ್ನವನ್ನು ಬಿಟ್ಟು ಉಳಿದ ಲಗ್ನಗಳಲ್ಲಿ ಮತ್ತು ಮೀನ ದ್ವಾದಶಾಂಶದಲ್ಲಿಹುಟ್ಟಿದ ಜಾತಕನು ನಿರ್ಭಯವುಳ್ಳವನು, ಬುದ್ಧಿಹೀನನು, ಧೈರ್ಯಶಾಲಿಯು ಆಗುವನು.

ಜನನಲಗ್ನವು ಮೇಷವಾಗಿದ್ದು ಮೇಷದ್ವಾದಶಾಂಶದಲ್ಲಿ ಜನಿಸಿದವನು ಕಳ್ಳರಿಗೆ ನಾಯಕನಾಗುವನು. ಜನನಲಗ್ನವು ವೃಷಭವಾಗಿದ್ದು ವೃಷಭದ್ವಾದಶಾಂಶದಲ್ಲಿ ಜನಿಸಿದ ಜಾತಕನು ಸುಖಭೋಗಿಯು, ರಾಜಭೋಗಿಯು ಆಗುವನು. ಜನನಲಗ್ನವು ಮಿಥುನವಾಗಿದ್ದು ಮಿಥುನ ದ್ವಾದಶಾಂಶದಲ್ಲಿ

ಜನಿಸಿದವನು, ಪಂಡಿತರಲ್ಲಿ ಮಾನ್ಯನಾಗುವನು (ಪಂಡಿತ ರತ್ನ) ಜನನಲಗ್ನವು ಕರ್ಕವಾಗಿದ್ದು ಕರ್ಕ ದ್ವಾದಶಾಂಶದಲ್ಲಿ ಜನಿಸಿದವನು ಧನವಂತರಿಗೆ ಧನವಂತ (ಕೋಟ್ಯಾಧೀಶ) ನಾಗುವನು. ಜನನಲಗ್ನವು ಸಿಂಹವಾಗಿದ್ದು ಸಿಂಹದ್ವಾದಶಾಂಶದಲ್ಲಿ ಜನಿಸಿದವನು ರಾಜರಿಗೆ ರಾಜನು (ಚಕ್ರವರ್ತಿ) ಆಗುವನು. ಜನನಲಗ್ನವು ಕನ್ಯಾ ಆಗಿದ್ದು ಕನ್ಯಾದ್ವಾದಶಾಂಶದಲ್ಲಿ ಜನಿಸಿದವನು ಷಂಡರಲ್ಲಿ ಹಿರಿಯನಾಗುವನು. ಜನನಲಗ್ನವು ತುಲಾಆಗಿದ್ದು ತುಲಾ ದ್ವಾದಶಾಂಶದಲ್ಲಿ ಜನಿಸಿದವನು ಸೇನಾಧಿಕಾರಿಗಳಲ್ಲಿ ಮುಖ್ಯಸ್ಥ (ಮಹಾದಂಡನಾಯಕ) ಆಗುವನು, ಜನನ ಲಗ್ನವು ವೃಶ್ಚಿಕ ಆಗಿದ್ದು ವೃಶ್ಚಿಕ ದ್ವಾದಶಾಂಶದಲ್ಲಿ ಜನಿಸಿದವನು ಕೂಲಿಕಾರರ ಮುಖಂಡ, ಭಾರ ಹೊರುವವರ ನಾಯಕನಾಗುವನು. ಜನನಲಗ್ನವು ಧನಸ್ಸು ಆಗಿದ್ದು ಧನಸ್ಸುದ್ವಾದಶಾಂಶದಲ್ಲಿ ಜನಿಸಿದವನು ನೌಕರರಲ್ಲಿ ಹಿರಿಯ, ನೌಕರರ ನಾಯಕನಾಗುವನು. ಜನನಲಗ್ನವು ಮಕರವಾಗಿದ್ದು ಮಕರ ದ್ವಾದಶಾಂಶದಲ್ಲಿ ಜನಿಸಿದವನು, ಪಾಪಿಷ್ಟರಲ್ಲಿ ದೊಡ್ಡ ದುಷ್ಟರ ಮುಖಂಡ, ಪೂಜಾರಿ ಕೊಳ್ಳೆಗಾರರ ನಾಯಕನಾಗುವನು. ಜನನ ಲಗ್ನವು ಕುಂಭವಾಗಿದ್ದು ಕುಂಭದ್ವಾದಶಾಂಶದಲ್ಲಿ ಜನನವಾದವನು ಹಿಂಸಾ ಜನರಲ್ಲಿ ಹಿರಿಯನಾಗುವನು. ಜನನಲಗ್ನವು ಮೀನವಾಗಿದ್ದು ಮೀನದ್ವಾದಶಾಂಶದಲ್ಲಿ ಜನನವಾಗಿದ್ದರೆ, ಆ ಜಾತಕನು ಧೈರ್ಯಶಾಲಿಗಳಲ್ಲಿ ನಾಯಕನು, ಶೂರರಲ್ಲಿ ಹಿರಿಯನಾಗುವನು.

ತ್ರಿಂಶಾಂಶಾಧಿಪತಿ ಫಲ.

ಕುಜನು ತ್ರಿಂಶಾಂಶಾಧಿ ಪತಿಯಾದರೆ– ಕುಜನು (ಮೇಷ, ವೃಶ್ಚಿಕ) ಈ ತ್ರಿಶಾಂಶಾಧಿಪತಿಯಾದರೆ— ಆ ಜಾತಕನು ಶೂರನೂ, ಬಲಿಷ್ಠನೂ ತೇಜಸ್ವಿಯೂ, ಅತ್ಯಂತ ಸಾಹಸಿಯೂ, ವಸ್ತ್ರಾಲಂಕಾರ ಪ್ರಿಯನೂ, ಉತ್ತಮಳಾದ ಪತ್ನಿಯುಳ್ಳವನೂ, ಪತ್ನೀ ಸಮೇತನೂ, ವೀರ್ಯವಂತನೂ ಆಗುವನು.

ಶನಿಯು ತ್ರಿಂಶಾಂಶಾಧಿಪತಿಯಾದರೆ– ಶನಿಯು (ಮಕರ, ಕುಂಭ) ತ್ರಿಂಶಾಂಶಾಧಿಪತಿಯಾಗಿದ್ದ ವೇಳೆಗೆ ಜನಿಸಿದವನು ವ್ಯಾಧಿ ಪೀಡಿತನೂ, ತನ್ನ ಹೆಂಡತಿಯ ಮರಣವನ್ನು ನೋಡುವವನೂ, ಕ್ರೂರ ಸ್ವಭಾವವುಳ್ಳವನೂ,

ಪರಸ್ತ್ರೀ ಲೋಲನೂ, ದು:ಖಿತನೂ ಹೊಲ ಮನೆ, ಮೊದಲಾದ ಸ್ಥಾವರ ಆಸ್ತಿಯನ್ನು ಕಳೆದುಕೊಳ್ಳತಕ್ಕವನೂ, ದುರಾಚಾರಿಯೂ ಆಗುವನು.

ಗುರು ತ್ರಿಂಶಾಂಶಾಧಿಪತಿಯಾದರೆ– ಗುರುವು (ಧನು, ಮೀನ) ತ್ರಿಂಶಾಂಶಾಧಿಪತಿಯಾದರೆ ಆ ಜಾತಕನು ಧನ, ಕೀರ್ತಿ,ಬುದ್ಧಿ ಜ್ಞಾನಗಳಿಂದ ಕೂಡಿದವನೂ, ತೇಜಸ್ಸಿನಿಂದ ಕೂಡಿದವನೂ. ಸರ್ವರಿಂದ ಸನ್ಮಾನ ಹೊಂದತಕ್ಕವನೂ, ಆರೋಗ್ಯವಂತನೂ, ಉತ್ಸಾಹಿಯೂ ಸುಖಭೋಗಿಯೂ, ಉದ್ಯೋಗತತ್ಪರನೂ, ಆಗುವನು.

ಬುಧನು ತ್ರಿಂಶಾಂಶಾಧಿಪತಿಯಾದರೆ– ಬುಧನು (ಕನ್ಯಾ, ಮಿಥುನ) ತ್ರಿಂಶಾಂಶಾಧಿಪತಿಯಾದಾ ಜನಿಸಿದವನು ಮೇಧಾವಿಯೂ, ಬುದ್ಧಿವಂತನೂ ಶಿಲ್ಪಶಾಸ್ತ್ರ, ಸಂಗೀತ, ಸಾಹಿತ್ಯ ವಾದ್ಯ, ನೃತ್ಯ, ಚಿತ್ರ ಮುಂತಾದ ಕಲಾ ಶಾಸ್ತ್ರವನ್ನು ಬಲ್ಲವನೂ, ಡಾಂಭಿಕನೂ, ಕವಿತ್ವ ಶಕ್ತಿಯುಳ್ಳವನೂ,ವ್ಯವಹಾರ ಶೀಲನೂ, ಧರ್ಮಶಾಸ್ತ್ರಾರ್ಥವನ್ನು ತಿಳಿದವನೂ, ತನ್ನಯೋಗ್ಯತೆಗೆ ಮೀರಿದ ಕಾರ್ಯಗಳನ್ನು ಸಾಹಸದಿಂದ ಮಾಡುವ ಸ್ವಭಾವವುಳ್ಳವನೂ, ಹೆಚ್ಚಾದ ಸನ್ಮಾನ ಹೊಂದತಕ್ಕವನೂ ಆಗುವನು.

ಶುಕ್ರನು ತ್ರಿಂಶಾಂಶಾಧಿಪತಿಯಾದರೆ—ಶುಕ್ರನು (ತುಲಾ, ವೃಷಭ) ತ್ರಿಂಶಾಂಶಾಧಿಪತಿಯಾದಾಗ ಜನಿಸಿದವನು ಅಧಿಕವಾದ ಪುತ್ರ, ಸುಖ, ಸೌಭಾಗ್ಯ ಆರೋಗ್ಯ ಧನ; ಸಂಪತ್ತು, ಸೌಂದರ್ಯಗಳುಳ್ಳವನೂ, ಭೋಗಿಯೂ, ಮನೋಹರವಾದ ಶರೀರವುಳ್ಳವನೂ, ವಿಶೇಷವಾದ ವಿಷಯಾಸಕ್ತನೂ, ಸ್ತ್ರೀಲೋಲನೂ ಆಗುವನು.

ಫಲಕಾಂಡದಲ್ಲಿ ದ್ವಿಗ್ರಹ ಯೋಗಾಧ್ಯಾಯವು.

ರವಿಯು ಚಂದ್ರಾದಿ ಗ್ರಹಗಳಿಂದ ಕೂಡಿಕೊಂಡಿರುವ ಫಲ.

ರವಿಯು ಚಂದ್ರನನ್ನು ಕೂಡಿಕೊಂಡಿರುವ ಕಾಲದಲ್ಲಿ ಹುಟ್ಟಿದವನು ಯಂತ್ರಕೆಲಸಗಳನ್ನು ಮಾಡಿಸುವವನು ಬಾಲ್ಯದಲ್ಲಿ ಪಿತೃವಿಗೆ ಕಂಟಕ ಜರುಗುವದು ರವಿಯು ಕುಜನನ್ನು ಕೂಡಿಕೊಂಡಿದ್ದರೆ ಪಾಪ ಕಾರ್ಯಗಳಲ್ಲಿ ಆಸಕ್ತಿಯುಳ್ಳವನು ಪಿತ್ತಾಧಿಕ್ಯವುಳ್ಳವನು ಸಿಟ್ಟುಳ್ಳವನು ದೊಡ್ಡವರಿಂದ

ಕಲಹ ಮಾಡಿಕೊಳ್ಳುವನು ತಲೆಯಲ್ಲಿ ವ್ರಣ ಬಾಧೆಯುಳ್ಳವವನು ತಂದೆಗೆ ಅಗ್ನಿಭಯ ಶಸ್ತ್ರಾಗ್ನಿ ಘಾಯಗಳಿಂದ ದೇಹಪೀಡೆ ಜರುಗುವದು.

ರವಿಯು ಬುಧನಿಂದ ಕೂಡಿಕೊಂಡಿದ್ದರೆ— ಕೆಲಸಗಳಲ್ಲಿ ಕುಶಲನು ಸೂಕ್ಷ್ಮಬುದ್ಧಿ ಯುಳ್ಳವನು. ಚುರುಕು ಬುದ್ಧಿಯವನು ಕೀರ್ತಿವಂತನು ಪ್ರಾಜ್ಞ (ಜ್ಞಾನಿ)ನು ಆಗುತ್ತಾನೆ.

ರವಿಯು ಗುರುವನ್ನು ಕೂಡಿಕೊಂಡಿದ್ದರೆ— ಸೌಮ್ಯ ಸ್ವಭಾವಿಯು ಪರೋಪಕಾರಿಯು. ಪುಷ್ಟ ದೇಹವುಳ್ಳವನು. ತಂದೆಯು ಕೀರ್ತಿವಂತ ನಾಗುವನು.

ರವಿಯು ಶುಕ್ರನನ್ನು ಕೂಡಿಕೊಂಡಿದ್ದರೆ— ಸಾಹಸದಿಂದ ಧನವನ್ನು ಸಂಪಾದಿಸುವವನು ಸ್ತ್ರೀಮೂಲಕ ವಿರೋಧವುಳ್ಳವನು ರೋಗಿಷ್ಠಳಾದ ಹೆಂಡತಿಯುಳ್ಳವನು ಆಗುವನು.

ರವಿಯು ಶನಿಯನ್ನು ಕೂಡಿಕೊಂಡಿದ್ದರೆ— ಸಾಮುದ್ರಿಕಶಾಸ್ತ್ರ ಬಲ್ಲವನು ಲೋಹಗಳ ಕೆಲಸ ಮಾಡಿಸುವವನು. ರಾಜದಂಡನೆಯಿಂದಥ ನಕ್ಷಯ ಮಾಡಿ ಕೊಳ್ಳುವವನು ದೊಡ್ಡವರಲ್ಲಿ ದ್ವೇಷಿಯಾಗುವನು, ಶಿರೋರೋಗವುಳ್ಳವನು ತಂದೆಯು ವಾತಶೂಲೆಯಿಂದ ಕಷ್ಟಪಡುವವನು ಆಗುವನು.

ರವಿಯು ರಾಹು ಕೇತುಗಳನ್ನು ಕೂಡಿಕೊಂಡಿದ್ದರೆ— ಕ್ರೂರಸ್ವಭಾವವು ಳ್ಳವನು, ನೀಚಜನರಲ್ಲಿ ಶತೃತ್ವವುಳ್ಳವನು, ಸರಕಾರದಿಂದ ಧನಕ್ಷಯ ಮಾಡಿಕೊಳ್ಳುವವನು ಅಕಸ್ಮಾತ್ ಕಲ್ಲು ಕಟ್ಟಿಗೆ ಪೆಟ್ಟನಿಂದಲೂ ತಲೆಯಲ್ಲಿಯ ವ್ರಣಬಾಧೆಯಿಂದಲೂ ದುಃಖ ಪಡುವವನು ಬಾಲ್ಯದಲ್ಲಿ ಪಿತ್ರಾರಿಷ್ಟವುಳ್ಳವನು ಆಗುವನು.

ಚಂದ್ರನು ಕುಜಾದಿ ಗ್ರಹಗಳಿಂದ ಕೂಡಿಕೊಂಡಿರುವ ಫಲವು

ಚಂದ್ರನು ಕುಜನಿಂದ ಕೂಡಿಕೊಂಡಿರುವ ಜಾತಕನು ಕ್ರಯವಿಕ್ರಯ ದಲ್ಲಿ ನಿಪುಣನು ಹೆಂಗಸರಿಂದ ಲಾಭ ಹೊಂದುವವನು, ತಾಯಿಗೆ ಕ್ಷೇಮವಿಲ್ಲ ದವನು ಆಗುತ್ತಾನೆ.

ಚಂದ್ರನು ಬುಧನಿಂದ ಕೂಡಿಕೊಂಡಿದ್ದರೆ- ಪ್ರೀತಿಯಿಂದ ಮಾತಾಡುವವನು. ಸರ್ವರಲ್ಲಿ ಪ್ರೇಮವುಳ್ಳವನು, ಧನ ಸಂಪಾದನೆ ಮಾಡುವದರಲ್ಲಿ ನಿಪುಣನು ಆಗುತ್ತಾನೆ.

ಚಂದ್ರನು ಗುರುವನ್ನು ಕೂಡಿಕೊಂಡಿದ್ದರೆ- ನೆಂಟರಲ್ಲಿ ಶ್ರೇಷ್ಠನೆನಿಸಿಕೊಳ್ಳುವವನು. ಚಪಲ ಚಿತ್ತನು, ಧನವಂತನು, ಧೈರ್ಯಶಾಲಿಯು, ದೇಹ ಪುಷ್ಟಿಯುಳ್ಳವನು ಕಾರ್ಯದಲ್ಲಿ ನಿಪುಣನು ಮಾತ್ರ ಸುಖವುಳ್ಳವನು ಆಗುತ್ತಾನೆ.

ಚಂದ್ರನು ಶುಕ್ರನಿಂದ ಕೂಡಿಕೊಂಡಿದ್ದರೆ- ವಸ್ತ್ರಗಳ ವ್ಯಾಪಾರದಿಂದಲೂ ರಸ, ಬಿಳಿಪು ಪದಾರ್ಥಗಳಲ್ಲಿಯೂ ಸ್ತ್ರೀ ಮೂಲಕವಿಂದಲೂ ಧನ ಸಂಪಾದನೆ ಮಾಡುವವನು. ಸ್ತ್ರೀಲೋಲನು, ಸಂಗೀತದಲ್ಲಿ ಇಷ್ಟವುಳ್ಳವನೂ, ಉತ್ತಮವಾದ ವಾಹನವುಳ್ಳವನು. ಹೊಸದಾಗಿ ಮನೆಯನ್ನು ಕಟ್ಟಿಸುವವನು, ಮಧುರ ಆಹಾರದಲ್ಲಿ ಇಷ್ಟವುಳ್ಳವನು, ಆಗುತ್ತಾನೆ.

ಚಂದ್ರನುಶನಿಯಿಂದ ಕೂಡಿದ್ದರೆ- ಕ್ರೂರಗುಣವುಳ್ಳ ತಾಯಿಯುಳ್ಳವನು ಕುಲಾಚಾರದಲ್ಲಿ ನಿಂದೆಯುಳ್ಳವನು, ಬಾಲ್ಯದಲ್ಲಿ ತಾಯಿಗೆವಿಶೇಷವಾಗಿ ಕಾಡುವನು. ಚೋರಭಯದವನು ಆಗುವನು.

ಚಂದ್ರನು ರಾಹು ಕೇತುಗಳನ್ನು ಕೂಡಿಕೊಂಡಿದ್ದರೆ- ಮಾತ್ರಾರಿಷ್ಟವುಳ್ಳವನು, ಮೂತ್ರ ಕೃಚ್ಛ್ರರೋಗವುಳ್ಳವನು, ಚಂಚಲ ಮನಸ್ಸುಳ್ಳವನು ಸರ್ಪ ಭಯವುಳ್ಳವನು, ನಷ್ಟೇಂದ್ರಿಯದಿಂದ ದೇಹ ನಷ್ಟ ಮಾಡಿಕೊಳ್ಳುವವನು ಆಗುತ್ತಾನೆ.

ಚಂದ್ರನು ರವಿಯನ್ನು ಕೂಡಿಕೊಂಡಿದ್ದರೆ- ಜಾತಕನು ಶಿಶುವು ಗರ್ಭ ಪಲ್ಲಿರಲಿಕ್ಕೆ ಮುಂಚಿತವಾಗಿಯೇ ಪಿತೃವಿಗೆ ದೇಹಪೀಡೆಯು ಜರುಗುತ್ತದೆ.

ಚಂದ್ರನ ಸಂಯುಕ್ತ ಗ್ರಹ ಫಲ ವಿಚಾರ ಮುಗಿದುದು

ಕುಜನು ಬುಧಾದಿ ಗ್ರಹಗಳಿಂದ ಕೂಡಿಕೊಂಡಿರುವ ಫಲ

ಕುಜನು ಬುಧನನ್ನು ಕೂಡಿಕೊಂಡಿದ್ದರೆ- ವ್ಯಾಪಾರದಲ್ಲಿ ಸಮರ್ಥನು ನಾರು, ಕಾಯಿ, ಹಣ್ಣು, ಎಣ್ಣೆ, ಮುಂತಾದ ಪದಾರ್ಥಗಳ ವ್ಯಾಪಾರ ಮಾಡುವವನು ಬಂಧುಗಳ ಕಲಹ ಮಾಡಿಕೊಳ್ಳುವವನು. ಹೊಟ್ಟೆಯು

ಮೇಲೆ ವ್ರಣವಾಗಿ ವಿಶೇಷವಾಗಿ ಕಾಡುವದು ವಾದಿಯಾಗುವನು, ಆಗುತ್ತಾನೆ.

ಕುಜನು ಗುರುವಿನೊಡನೆ ಕೂಡಿದ್ದರೆ, ವ್ಯವಹಾರದಲ್ಲಿ ನಿಪುಣನು. ಜನಗಳಲ್ಲಿ ಮರ್ಯಾದೆಯುಳ್ಳವನು. ವಿದ್ಯಾಪರಿಣಿತನು ಚಪಲಚಿತ್ತನು, ಪಿತ್ತ ಪ್ರಕೃತಿಯುಳ್ಳವನು, ಭೂಮಿಯನ್ನು ಸಂಪಾದಿಸುವವನು. ಧೈರ್ಯಶಾಲಿಯು ಹಸಿವೆಯುಳ್ಳವನು. ದೇಹದಲ್ಲಿ ವ್ರಣ ಅಗ್ನಿಭಯ ಶಸ್ತ್ರ ಘಾಯವುಳ್ಳವನು ಆಗುವನು.

ಕುಜನು ಶುಕ್ರನೊಡನೆ ಕೂಡಿದ್ದರೆ- ಪಶುಗಳನ್ನು ಸಂಗ್ರಹ ಮಾಡುವವನು ಸಮರ್ಥನು ಪರಸ್ತ್ರೀ ಪ್ರಿಯನು. ಜೂಜಿನಿಂದಲೂ ಸ್ತ್ರೀಯರಿಂದಲೂ ಧನವನ್ನು ಕಳೆದುಕೊಳ್ಳುವನು. ನೇತ್ರರೋಗವುಳ್ಳವವನು. ಹೆಂಡತಿಯಲ್ಲಿ ಇಷ್ಟ ವಿಲ್ಲದೆ ಅನ್ಯಸ್ತ್ರೀಯರಲ್ಲಿ ರಮಿಸುವವನು, ಈತನ ಹೆಂಡತಿಗೆ ಅಗ್ನಿವ್ರಣ ಕುಸುಮ ರೋಗಗಳಿಂದ ಕಾಡುವದು

ಕುಜನು ಶನಿಯೊಡನೆ ಕೂಡಿದ್ದರೆ— ಹೊಟ್ಟೆಕಿಚ್ಚಿನಿಂದ ಕುತ್ಸಿತವಾದ ಕಾರ್ಯಗಳನ್ನು ಮಾಡಿ ನಿಂದೆಯನ್ನು ಹೊರುವವನು. ಅಸತ್ಯವಾದಿಯು ಅಧೈರ್ಯವಂತನು. ಆಲಸ್ಯಸ್ವಭಾವಿಯು ಭೂಮಿಯಿಂದಲೂ ಅಣ್ಣ ತಮ್ಮಂದಿರಿಂದಲೂ ದ್ವೇಷವುಳ್ಳವನು. ದೇಹದಲ್ಲಿ ಆಯುಧ ಘಾಯವು ಅಗ್ನಿ ಭಯವು ಶಸ್ತ್ರಗಳಿಂದ ಭಯವುಳ್ಳವನು ಆಗುತ್ತಾನೆ.

ಕುಜನು ರಾಹುಕೇತುಗಳಿಂದ ಕೂಡಿದ್ದರೆ- ಚಪಲಚಿತ್ತನು ಕ್ರೂರ ಸ್ವಭಾವಿಯು. ಅಣ್ಣ ತಮ್ಮಂದಿರಿಂದ ದುಃಖವುಳ್ಳವನು. ಆಲಸ್ಯ ಸ್ವಭಾವಿಯು ಅಗ್ನಿ ಭಯವುಳ್ಳವನು ಆಗುತ್ತಾನೆ.

ಕುಜನು ರವಿಯೊಡನೆ ಕೂಡಿದ್ದರೆ— ಒಳ್ಳೆ ಧೈರ್ಯಶಾಲಿಯು ಪಿತ್ತ ಸ್ವಭಾವಿಯು ಕಲಹ ಪ್ರಿಯನು ಭೂಮಿಯಿಂದ ವ್ಯವಹಾರ ಮಾಡಿಕೊಳ್ಳುವವನು ಒಡಹುಟ್ಟಿದವರು ನಾಶವಾಗುವರು.

ಕುಜನು ಚಂದ್ರನೊಡನೆ ಕೂಡಿದ್ದರೆ— ತಾಯಿಗೆ ವ್ರಣಬಾಧೆಯು, ಅಗ್ನಿಭಯವು ಚಂಚಲವಾದ ಮನಸ್ಸುಳ್ಳವನು. ವೀರ್ಯ ನಷ್ಟವುಳ್ಳವನು ಭ್ರಾತೃವಿಗೆ ಜಲಭಯವು ಜರುಗುತ್ತದೆ.

ಬುಧನು ಗುರು ಆದಿಗ್ರಹಗಳೊಡನೆ ಕೂಡಿಕೊಂಡಿರುವ ಫಲ.

ಬುಧನು ಗುರುವಿನೊಡನೆ ಕೂಡಿಕೊಂಡಿದ್ದರೆ- ಸಂಗೀತ ಪ್ರಿಯನು ಕಾರ್ಯದಲ್ಲಿ ನಿಪುಣನು ವಾಕ್ಚಾತುರ್ಯವಂತನು ಗಾಂಭೀರ್ಯಾದಿ ವಿನಯ ಗುಣವುಳ್ಳವನು. ವ್ಯಾಪಾರದಲ್ಲಿ ನಿಪುಣನು ಭಕ್ತಿವಂತನು ವೇದಾಂತ ಪ್ರಿಯನು ಆಗುತ್ತಾನೆ.

ಬುಧನು ಶುಕ್ರನೊಡನೆ ಕೂಡಿಕೊಂಡಿದ್ದರೆ- ಶ್ರೇಷ್ಠವಾಗಿ ಮಾತಾಡಿ ಹೆರವರನ್ನು ಮೆಚ್ಚಿಸತಕ್ಕವನು, ಹೊಸದಾಗಿ ಮನೆಯನ್ನು ಕಟ್ಟಿಸುವವನು. ಸರ್ವರಲ್ಲಿ ಮರ್ಯಾದೆಯುಳ್ಳವನು ಸ್ತ್ರೀಲೋಲನು, ಕಾಮತಂತ್ರ ಕುಶಲನು, ಗದ್ಗದ ಸ್ವರವುಳ್ಳವನು, ವಾಕ್ಪಟುತ್ವವುಳ್ಳವನು, ಪ್ರಾಜ್ಞ (ಜ್ಞಾನಿಯು) ನು ಆಚಾರವಂತನು, ವಿನಯಭಕ್ತಿಯುಳ್ಳವನು ಆಗುತ್ತಾನೆ.

ಬುಧನು ಶನಿಯೊಡನೆ ಕೂಡಿದ್ದರೆ- ಹೆರವರನ್ನು ವಂಚಿಸುವದರಲ್ಲಿ ಸಮರ್ಥನು, ಹಿರಿಯರ ಮಾತು ಮೀರಿನಡೆಯುವವನು, ವ್ಯಾಪಾರದಲ್ಲಿ ಹಲವು ಕಾಲ ನಷ್ಟ ಹೊಂದುವವನು ಸೋದರಮಾವಂದಿರಲ್ಲಿ ವಿರೋಧಿಯಾಗುವವನು, ದಯಾ ಹೀನನು ಡಾಂಭಿಕನು ಮಂದಬುದ್ಧಿಯುಳ್ಳವನು ಆಗುತ್ತಾನೆ.

ಬುಧನು ರಾಹುಕೇತುಗಳೊಡನೆ ಕೂಡಿದ್ದರೆ- ಮರವುಬುದ್ಧಿಯುಳ್ಳವನು ಭಕ್ತಿ ಇಲ್ಲದವನು ಬಂಧು ದ್ವೇಷಿಯು, ವಿದ್ಯಾಭಂಗವುಳ್ಳವನು, ಕಠಿಣ ವಾಕ್ಕುಳ್ಳವನು, ವ್ಯಾಪಾರದಿಂದಧನಕಳೆದುಕೊಳ್ಳುವವನು ಆಚಾರಹೀನನು, ಬುದ್ಧಿಹೀನನು ಆಗುತ್ತಾನೆ.

ಬುಧನು ರವಿಯೊಡನೆ ಕೂಡಿಕೊಂಡಿದ್ದರೆ- ಚಂಚಲ ಮನಸ್ಸುಳ್ಳವನು ವರ್ತಕರಲ್ಲಿ ಸ್ವಲ್ಪದ್ವೇಷಿಯಾಗುವನು, ಬಂಧುಗಳಲ್ಲಿ ಅಪವಾದ ಹೊಂದತಕ್ಕವನು ಆಗುತ್ತಾನೆ.

ಬುಧನು ಚಂದ್ರನೊಡನೆ ಕೂಡಿದ್ದರೆ- ಭಾಗ್ಯವಂತನು, ವ್ಯಾಪಾರದಲ್ಲಿ ನಿಪುಣನು ಸ್ಥಿರವಾದ ಮನಸ್ಸುಳ್ಳವನು, ಧರ್ಮಕಾರ್ಯದಲ್ಲಿ ಇಷ್ಟವುಳ್ಳವನು. ಆಚಾರವಂತನು, ಕುಲದಲ್ಲಿ ಶ್ರೇಷ್ಠನೆನಿಸಿಕೊಳ್ಳುವವನು. ಪರೋಪಕಾರಿಯು, ವಿದ್ಯಾ- ಬುದ್ಧಿಯುಳ್ಳವನು, ಸರ್ವಜನರಲ್ಲಿ ಪ್ರಿಯನು ಆಗುತ್ತಾನೆ.

ಬುಧನು, ಕುಜನೊಡನೆ ಕೂಡಿದ್ದರೆ- ಬಹುವಾದಿಯು, ದಯಾದಾಕ್ಷಿಣ್ಯ ವಿಲ್ಲದವನು, ಅಜ್ಞಾನದಿಂದ ಕಾರ್ಯಮಾಡುವವನು, ಬಂಧುಗಳಲ್ಲಿ ವಿರೋಧಿಯಾಗುವನು, ಮುಂಗೋಪಿಯು, ಚಂಚಲ ಮನಸ್ಸುಳ್ಳವನು ಆಗುತ್ತಾನೆ.

ಗುರುವು ಶುಕ್ರಾದಿ ಗ್ರಹಗಳೊಡನೆ ಕೂಡಿಕೊಂಡಿರುವ ಫಲವು.

ಗುರುವು ಶುಕ್ರನಿಂದ ಕೂಡಿಕೊಂಡಿದ್ದರೆ- ಉತ್ತಮನು, ವಿದ್ಯಾವಂತನು, ಒಳ್ಳೆಯ ಗುಣವುಳ್ಳವನು. ರೂಪವಂತನು, ಗುಣಾಢ್ಯಳಾದ ಹೆಂಡತಿಯುಳ್ಳವನು, ಧನವಂತನು, ಶೌರ್ಯ-ಧೈರ್ಯ ಗುಣವುಳ್ಳವನು, ಹೆಂಡತಿಯಲ್ಲಿ ಪ್ರೇಮವುಳ್ಳವನು, ವಿಶಾಲವಾದ ನೇತ್ರವುಳ್ಳವನು, ಪರೋಪಕಾರಿಯು, ಸತ್ಕಾರ್ಯದಲ್ಲಿ ಇಷ್ಟವುಳ್ಳವನು, ಮಧುರ ಆಹಾರದಲ್ಲಿ ಪ್ರೀತಿಯುಳ್ಳವನು ಉತ್ತಮ ವಾಹನವುಳ್ಳವನು, ಭಾಗ್ಯವಂತನು, ಜೀರ್ಣೋದ್ಧಾರವನ್ನು ಮಾಡತಕ್ಕವನು, ಹೊಸದಾಗಿ ಮನೆಯನ್ನು ಕಟ್ಟಿಸುವವನು, ಆಗುವನು.

ಗುರುವು ಶನಿಯೊಡನೆ ಕೂಡಿದ್ದರೆ- ಪಾಪ ಕಾರ್ಯದಲ್ಲಿ ನಿಪುಣನು ಪಾಪಕಾರ್ಯದಲ್ಲಿ ಇಷ್ಟವುಳ್ಳವನು, ಸತ್ಕಾರ್ಯಗಳಿಗೆ ವಿಘ್ನಕರತಕ್ಕವನ, ಬ್ರಾಹ್ಮಣಾದಿ ಉತ್ತಮ ಜಾತಿಯಲ್ಲಿ ವಿರೋಧಿಯಾಗುವನು, ಡಾಂಭಿಕ ಭಕ್ತಿಯುಳ್ಳವನು. ಪುತ್ರಶೋಕವುಳ್ಳವನು, ದುಷ್ಕೀರ್ತಿಯನ್ನು ಹೊಂದುವವನು ಆಗುವನು.

ಗುರುವು ರಾಹು ಕೇತುಗಳೊಡನೆ ಕೂಡಿದ್ದರೆ- ನಷ್ಟ ಸಂತಾನವುಳ್ಳವನು, ಸ್ಮರಣೆಯಿಲ್ಲದವನು, ಈತನ ಹೆಂಡತಿಗೆ ಗರ್ಭಪೀಡೆಯಿಂದಲೂ ಪ್ರಸೂತಿ ರೋಗದಿಂದಲೂ ಕಂಟಕವು ಜರುಗುತ್ತದೆ. ವೀರ್ಯ ನಷ್ಟತೆಯಿಂದ ದೇಹ ಒಣಗುವದು, ಸರ್ಪಭಯ ವುಂಟಾಗುವದು. ಚಂಚಲ ಮನಸ್ಸುಳ್ಳವನು, ವಿಧವಾ ಸ್ತ್ರೀಮೂಲಕದಿಂದ ಅಪವಾದ ಹೊಂದುವನು ಉತ್ತಮ ಜಾತಿಯವರಲ್ಲಿ ವಿರೋಧಿಯಾಗುವನು, ಅಂಡರೋಗವುಳ್ಳವನು, ಅಕಸ್ಮಾತ್ ಧನನಾಶವಾಗುವದು.

ಗುರುವು ರವಿಯೊಡನೆ ಕೂಡಿದ್ದರೆ- ಪುತ್ರಶೋಕವುಳ್ಳವನು, ರಾಜಕಾರ್ಯದಲ್ಲಿ ಧನವ್ಯಯ ಮಾಡಿಕೊಳ್ಳುವವನು, ಪಿತ್ತಾಧಿಕ್ಯವುಳ್ಳವನು, ತಂದೆಯಿಂದ ಭಾಗ್ಯವಂತನಾಗಿ ಸತ್ಕೀರ್ತಿಯನ್ನು ಪಡೆಯುತ್ತಾನೆ.

ಗುರುವು ಚಂದ್ರನನ್ನು ಕೂಡಿದ್ದರೆ- ದೇಹ ಪುಷ್ಟಿಯುಳ್ಳವನು, ಸತ್ಕಾರ್ಯದಲ್ಲಿ ಅಪೇಕ್ಷೆಯುಳ್ಳವನು, ಪರೋಪಕಾರಿಯು, ಜಲ ಕಾರ್ಯಾರಂಭ ಮಾಡಿಸುವವನು, ಮಾವು, ತೆಂಗು, ಮುಂತಾದ ಫಲ ವೃಕ್ಷಗಳನ್ನು ಹಾಕಿಸುವವನು. ಆಚಾರವಂತನು ದೇವತಾ ಕಾರ್ಯದಲ್ಲಿ ಇಷ್ಟವುಳ್ಳವನು. ಭಾಗ್ಯವಂತನು ಪುತ್ರಫಂತನು ಧನವಂತನು ಭಕ್ತಿವಂತನು ಕಾರ್ಯದಲ್ಲಿ ನಿಪುಣನು ಕೀರ್ತಿವಂತನು ಆಗುವನು.

ಗುರುವು ಕುಜನೊಡನೆ ಕೂಡಿದ್ದರೆ- ಕಲಹದ ಮೂಲಕ ಧನವ್ಯಯವುಳ್ಳವನು ಗುರು ಹಿರಿಯರಲ್ಲಿ ಭಕ್ತಿಯುಳ್ಳವನು ಪುತ್ರಶೋಕವುಳ್ಳವನು ಡಾಂಭಿಕನು ದೇಹದಲ್ಲಿ ವ್ರಣ ಶಸ್ತ್ರ ಘಾಯುವುಳ್ಳವನು, ಅಗ್ನಿಯಿಂದ ಜಲದಿಂದ ಭಯವು ಪಡುವವನು ಆಗುತ್ತಾನೆ.

ಗುರುವು ಬುಧನೊಡನೆ ಕೂಡಿದ್ದರೆ- ಸುಂದರ ಶರೀರಿಯು ಧರ್ಮ ಕಾರ್ಯಗಳಲ್ಲಿ ಇಷ್ಟವುಳ್ಳವನು. ಪರೋಪಕಾರಿಯು-ದೇವತಾ ಕಾರ್ಯಗಳಲ್ಲಿಯೂ ಗುರು ಹಿರಿಯರಲ್ಲಿಯೂ ಅತಿ ಭಕ್ತಿಯುಳ್ಳವನು, ಆಚಾರವಂತನು ವಿದ್ಯಾವಂತನು ಉತ್ತಮ ಸ್ವಭಾವದವನು ಆಗುತ್ತಾನೆ.

ಶುಕ್ರನು ಶನಿ ಆದಿ ಗ್ರಹಗಳೊಡನೆ ಕೂಡಿಕೊಂಡಿರುವ ಫಲ.

ಶುಕ್ರನು ಶನಿಯೊಡನೆ ಕೂಡಿದ್ದರೆ— ವಾತ ಶ್ಲೇಷ್ಮ ಪ್ರಕೃತಿಯುಳ್ಳವನು ಪರಸ್ತ್ರೀಯರಲ್ಲಿ ಅಪೇಕ್ಷೆಯುಳ್ಳವನು. ಮಾಯಾ ವಿದ್ಯೆ ಬಲ್ಲವನು ನೇತ್ರ ರೋಗವುಳ್ಳವನು. ಮಧ್ಯಮ ಕಾಮಿಯು ರೋಗಿಷ್ಟಳಾದ ಹೆಂಡತಿಯುಳ್ಳವನು ವಾಹನ ಭಯವುಳ್ಳವನು, ಸ್ತ್ರೀ ವಿರೋಧಿಯು ಆಗುವನು.

ಶುಕ್ರನು ರಾಹುಕೇತುಗಳನ್ನು ಕೂಡಿದ್ದರೆ— ನೇತ್ರರೋಗವುಳ್ಳವನು ಶಯ್ಯಾಸುಖ ಕಡಿಮೆಯುಳ್ಳವನು ಮಾಯಾವಿಯು ಆಗುವನು. ಹೀನ ಸ್ತ್ರೀಸಂಗ ಮಾಡುವವನು. ಹೆಂಗಸರಿಂದ ಧನವನ್ನು ಕಳೆದುಕೊಳ್ಳುವವನು ಮೋಹರೋಗವುಳ್ಳವನು, ಅಂಗವಿಕಲವುಳ್ಳವನು ಆಗುವನು, ಈತನ ಹೆಂಡತಿಗೆ ಗರ್ಭ ಪೀಡೆಯು ಕುಸುಮ ರೋಗವು ಪಿಶಾಚಿ ಬಾಧೆಯು ಸರ್ಪ ಭಯವು ಉಂಟಾಗುವದು.

ಶುಕ್ರನು ರವಿಯೊಡನೆ ಕೂಡಿದ್ದರೆ- ದ್ವಿಕಲತ್ರ (ಇಬ್ಬರು ಹೆಂಡರು) ಯೋಗವುಳ್ಳವನು. ಕೋಪಿಷ್ಟನು. ಬಹು ಕಾಮಿಯು ಸ್ತ್ರೀಲೋಲನು

ನೇತ್ರಪೀಡೆಯುಳ್ಳವನು ಕೆಲವು ಕಾಲ ಹೆಂಡತಿಯಲ್ಲಿ ಇಷ್ಟವಿಲ್ಲವೆ ಪರಸ್ತ್ರೀಯ ರಲ್ಲಿ ಸಂಗ ಮಾಡುವವನು ಆಗುವನು.

ಶುಕ್ರನು ಚಂದ್ರನೊಡನೆ ಕೂಡಿದ್ದರೆ- ಸ್ತ್ರೀಯರಲ್ಲಿ ಆಸಕ್ತಿಯುಳ್ಳವನು. ಶಯ್ಯಾ ಸುಖವುಳ್ಳವನು ಬಹು ಕಾಮಿಯು. ಭೋಗವಂತನು ಅಶ್ವ ವಾಹನ ವುಳ್ಳವನು. ಹುಳಿಯಲ್ಲಿ ಅಪೇಕ್ಷೆಯುಳ್ಳವನು. ಸಂಗೀತ ಲೋಲನು, ಸುಗಂಧ ಪರಿಮಳ ಲೇಪನವುಳ್ಳವನು ಆಗುತ್ತಾನೆ.

ಶುಕ್ರನು ಕುಜನೊಡನೆ ಕೂಡಿದ್ದರೆ-ನೇತ್ರಗಳಿಗೆ ಕಲ್ಲು ಕಟ್ಟಿಗೆ ಮುಂತಾದ ವುಗಳು ತಗಲುವುದರಿಂದ ಬಾಧೆ ಉಂಟಾಗುವದು. ಪಿತ್ತ ಪ್ರಕೃತಿಯುಳ್ಳವನು ಹೆಂಗಸರಲ್ಲಿ ವಿರೋಧಿಯಾಗುವನು. ಮೇಹ ಸಂಬಂಧ ರೋಗದಿಂದ ಕಷ್ಟ ಪಡುವವನು. ವಾಹನ ಭಯವುಳ್ಳವನು ರಜಸ್ವಲಾ ಸ್ತ್ರೀ ಸಂಗ ಮಾಡುವವನು ಆಗುವನು. ಸ್ತ್ರೀ ಮೂಲಕವಾಗಿ ಧನವ್ಯಯ ಮಾಡಿಕೊಳ್ಳುವನು. ಹೆಂಡತಿಗೆ ವ್ರಣಬಾಧೆಯು ಅಗ್ನಿಭಯವು ಪಿತ್ತ ಜ್ವರದಿಂದ ದೇಹಪೀಡೆಯುಂಟಾಗುತ್ತದೆ.

ಶುಕ್ರನು ಬುಧನಿಂದ ಕೂಡಿದ್ದರೆ- ಸಂಗೀತಪ್ರಿಯನು ರಾಜ ವಶೀಕರಣ ಬಲ್ಲವನು ನಿತ್ಯದಲ್ಲಿ ವಾಹನ ಸಂಚಾರಿಯು ವಾಕ್ಚಾತುರ್ಯವುಳ್ಳವನು. ಬಹು ಭೋಗಿಯು, ಸರ್ವರಲ್ಲಿ ಮರ್ಯಾದೆಯುಳ್ಳವನು, ಮಧುರ ಆಹಾರದಲ್ಲಿ ಪ್ರೀತಿ ಯುಳ್ಳವನು ಆಗುವನು.

ಶುಕ್ರನು ಗುರುವಿನೊಡನೆ ಕೂಡಿದ್ದರೆ- ಸಲಕ್ಷಣ ನೇತ್ರಗಳುಳ್ಳವನು. ದೇಹ ಪುಷ್ಟಿಯುಳ್ಳವನು, ವೀರ್ಯಬಲವುಳ್ಳವನು, ಹೊಸದಾಗಿ ಮನೆಯನ್ನು ಕಟ್ಟಿಸುವವನು, ಉತ್ತಮ ವಾಹನವುಳ್ಳವನು ಸೂಕ್ಷ್ಮಬುದ್ಧಿಯುಳ್ಳ ಹೆಂಡತಿ ಯುಳ್ಳವನು ಕಾಮತಂತ್ರಕುಶಲನು, ವಿದ್ಯಾವಂತನು; ಸುಖವಂತನು, ಆಗುತ್ತಾನೆ.

ಶನಿಯು ರಾಹು ಆದಿ ಗ್ರಹಗಳೊಡನೆ ಕೂಡಿಕೊಂಡಿರುವ ಫಲ

ಶನಿಯು ರಾಹು ಕೇತುಗಳಿಂದ ಕೂಡಿದ್ದರೆ- ದೊಡ್ಡ ಹಲ್ಲುಗಳುಳ್ಳವನು ಕಪ್ಪುಕೂದಲುಳ್ಳವನು. ವಾತ ಪ್ರಕೃತಿಯವನು ಕೋಪಿಷ್ಟನು, ಸೋಮಾರಿಯು ವಂಚಿಸುವ ಸ್ನೇಹಿತರುಳ್ಳವನು, ಲೋಭಿಯು, ಚೋರಭಯವುಳ್ಳವನು; ಸರ್ಪ ಮೊದಲಾದ ವಿಷಜಂತು ಭಯವುಳ್ಳವನು, ವ್ರಣಬಾಧೆಯುಳ್ಳವನು. ಅಕಸ್ಮಾತ್ ಶೂಲಿ ಬಾಧೆಯುಳ್ಳವನು, ನೀಚ ಜನರಿಂದ ಧನವನ್ನು ಕಳೆದುಕೊಳ್ಳುವವನು ಆಗುತ್ತಾನೆ.

ಶನಿಯು ರವಿಯಿಂದ ಕೂಡಿದ್ದರೆ- ಸರಕಾರದ ತೊಂದರೆಯಿಂದ ಧನ ವ್ಯಯ ಮಾಡಿಕೊಳ್ಳುವವನು ಪಿತ್ತ ಪ್ರಕೃತಿಯುಳ್ಳವನು ಮುಂಗೋಪಿಯು ಧೈರ್ಯಶಾಲಿಯು. ಉಷ್ಣ ಪದಾರ್ಥ ಕಾರ ಪದಾರ್ಥಗಳಲ್ಲಿ ಅಪೇಕ್ಷೆಯುಳ್ಳವನು. ಅಜ್ಞಾನದಿಂದ ಕಾರ್ಯಗಳನ್ನು ಮಾಡಿ ವ್ಯಸನ ಪಡುವವನು ಶೂದ್ರ ಜನರಲ್ಲಿ ದ್ವೇಷವುಳ್ಳವನು ಶಿರೋಬಾಧೆಯುಳ್ಳವನು. ವಾತ ಶೂಲೆಯಿಂದ ಶ್ರಮ ಪಡುವ ತಂದೆಯುಳ್ಳವನು. ಜನರಲ್ಲಿ ವಿರೋಧಿಯಾಗುವವನು ಆಗುತ್ತಾನೆ.

ಶನಿಯು ಚಂದ್ರನಿಂದ ಕೂಡಿದ್ದರೆ- ಚಂಚಲ ಮನಸ್ಸುಳ್ಳವನು. ಸೋಮಾರಿಯು, ಮಾತೃ ಸಮಾನವುಳ್ಳ ಸ್ತ್ರೀಯರಲ್ಲಿ ರಮಿಸುವವನು ಜಲ ಭಯವುಳ್ಳವನು. ಇಂದ್ರಿಯ ನಷ್ಟತೆಯುಳ್ಳವನು ಕಠಿಣ ವಾಕ್ಕುಳ್ಳವನು. ರೋಗಿಷ್ಟಳಾದ ತಾಯಿಯುಳ್ಳವನು, ನೇತ್ರರೋಗವುಳ್ಳವನು ಆಗುತ್ತಾನೆ.

ಶನಿಯು ಕುಜನೊಡನೆ ಕೂಡಿದ್ದರೆ- ಹಲ್ಲು ಬೇನೆಯುಳ್ಳವನು. ಕ್ರೂರ ಸ್ವಭಾವದವನು. ಬಹು ನಿಷ್ಠುರನು ಬಹುವಂಚಕನು, ಅಣ್ಣತಮ್ಮಂದಿರಲ್ಲಿ ವಿರೋಧಿಯಾಗುವವನು. ಕಾಲುಗಳಲ್ಲಿಯ ವ್ರಣ ಬಾಧೆ, ಅಗ್ನಿಭಯ, ಶಸ್ತ್ರ ಘಾಯ ಇವುಗಳಿಂದ ಕಷ್ಟ ಪಡುವವನು, ಕಲಹ ಪ್ರಿಯನು ಆಗುತ್ತಾನೆ.

ಶನಿಯು ಬುಧನೊಡನೆ ಕೂಡಿದ್ದರೆ- ಕಪ್ಪು ಪದಾರ್ಥಗಳಿಂದ ಧನಸಂಪಾದಿಸುವವನು ಮಾತುಲ (ಅತ್ತೆ; ಮಾವಂದಿರು) ವರ್ಗದಲ್ಲಿ ವಿರೋಧಿಯಾಗುವನು, ಚಂಚಲವಾದ ಮನಸ್ಸುಳ್ಳವನು ಆಗುತ್ತಾನೆ.

ಶನಿಯು ಗುರುವಿನೊಡನೆ ಕೂಡಿದ್ದರೆ- ಪಾಪಕಾರ್ಯದಲ್ಲಿ ಅಪೇಕ್ಷೆಯುಳ್ಳವನು, ಪುತ್ರಶೋಕವುಳ್ಳವನು, ಅಪ್ತೇಷ್ಟರಲ್ಲಿ ಕೀರ್ತಿಯನ್ನು ಪಡೆಯತಕ್ಕವನು ಬ್ರಾಹ್ಮಣಾದಿ ಉತ್ತಮ ಜಾತಿಯವರಲ್ಲಿ ದ್ವೇಷವನ್ನು ಮಾಡಿಕೊಳ್ಳುವವನು ಆಗುತ್ತಾನೆ.

ಶನಿಯು ಶುಕ್ರನೊಡನೆ ಕೂಡಿದ್ದರೆ- ನೇತ್ರರೋಗವುಳ್ಳವನು, ಸ್ತ್ರೀಮೂಲಕ ದ್ವೇಷ ಮಾಡಿಕೊಳ್ಳುವವನು, ಮೇಹ ಸಂಬಂಧ ರೋಗವುಳ್ಳವನು ವಾತಶೂಲಿಯ ಹೆಂಡತಿಯುಳ್ಳವನು, ನೀಚ ಸ್ತ್ರೀಸಂಗ ಮಾಡುವವನು, ಆಗುತ್ತಾನೆ.

ಈ ಸಂಯುಕ್ತ ಗ್ರಹಗಳು ಯಾವ ಯಾವ ಭಾವಫಲದಲ್ಲಿರುತ್ತಾರೆಂಬು ದನ್ನು ತಿಳಿದುಕೊಂಡು, ಆ ಭಾವಗಳ ಫಲಾನುಸಾರವಾಗಿ ಫಲಗಳನ್ನು ನೋಡ ತಕ್ಕದ್ದು.

ದ್ವಿಗ್ರಹಯೋಗ (ಮತ್ತೊಂದು ವಿಧ)
ರವಿಯೋಗ ಎರಡು ಗ್ರಹಗಳು ಕೂಡುವ ಯೋಗ

ಜನನ ಕುಂಡಲಿಯಲ್ಲಿ ಒಂದು ಸ್ಥಾನದಲ್ಲಿ ರವಿ ಚಂದ್ರರು ಕೂಡಿದ್ದರೆ ಸ್ತ್ರೀಯರನ್ನು ಗೆಲ್ಲುವವನೂ, ಸುಳ್ಳು ಮಾತಾಡುವವನೂ, ನೀತಿ ರಹಿತನೂ ಅಂತಃಕರುಣಿಯೂ, ಪರಾಕ್ರಮಿಯೂ, ಚಂಚಲವಾದ ಮನಸ್ಸುಳ್ಳವನೂ ಆಗುವನು.

ರವಿ ಮಂಗಳ ಕೂಡಿದ್ದರೆ— ಮೂರ್ಖನೂ, ಹಿಂಸಾಚಾರಿಯೂ, ಬಲಿಷ್ಠನೂ, ಪಾಪ ಚಿತ್ತವುಳ್ಳವನೂ, ಸುಳ್ಳು ಹೇಳತಕ್ಕವನೂ, ಆಗುವನು.

ರವಿ ಬುಧರು ಕೂಡಿದ್ದರೆ- ವಿಶ್ವಾಂಸನೂ, ಮತಲಬಿಯೂ, (ರಾಜಕಾರಣಿ) ರಾಜಮಾನ್ಯನೂ, ಸೇವೆಯನ್ನು ಮಾಡತಕ್ಕವನೂ (ನೌಕರ) ಮಧುರವಾಗಿ ಮಾತಾಡತಕ್ಕವನೂ, ಯಶಸ್ವಿಯೂ, ಅಸ್ಥಿರವಾದ ಧನವುಳ್ಳವನೂ ಆಗುವನು.

ರವಿ, ಗುರು ಕೂಡಿದ್ದರೆ- ರಾಜಮಾನ್ಯನೂ, ಧರ್ಮನಿಷ್ಠನೂ, ಬಹು ಜನ ಮಿತ್ರರುಳ್ಳವನೂ, ಉಪಾಧ್ಯಾಯನೂ, (ಶಿಕ್ಷಕ) ಬಹು ಪ್ರಸಿದ್ಧನೂ ಆಗುವನು.

ರವಿ, ಶುಕ್ರರು ಕೂಡಿದ್ದರೆ- ಶಸ್ತ್ರಾಸ್ತ್ರ ಪ್ರಹಾರ ಮಾಡತಕ್ಕವನೂ (ಸೈನಿಕ, ಬೇಟೆಗಾರ) ದುರ್ಬಲವಾದ ನೇತ್ರಗಳುಳ್ಳವನೂ, ಸ್ತ್ರೀಯಿಂದ ಧನ ಪಡೆಯತಕ್ಕವನೂ (ಸ್ತ್ರೀ ಆಸ್ತಿ ಸಿಗುವ ಯೋಗ) ಸರ್ವಕಾರ್ಯಗಳಲ್ಲಿ ಸಮರ್ಥನೂ, ಆಗುವನು.

ರವಿ, ಶನಿ ಕೂಡಿದ್ದರೆ- ವಿದ್ವಾಂಸನೂ, ಸದ್ಗುಣಿಯೂ, ಸ್ತ್ರೀ ಪುತ್ರಾದಿ ರಹಿತನೂ, ಆತ್ಮಕ್ರಿಯಾ ನಿಷ್ಠನೂ ವೃದ್ಧಜನರನ್ನೂ ಸಹ ವಾಗ್ವಾದದಲ್ಲಿ ಗೆಲ್ಲತಕ್ಕವನೂ ಆಗುವನು.

ಚಂದ್ರನೊಡನೆ ಎರಡು ಗ್ರಹಗಳು ಕೂಡುವ ಯೋಗ

ಒಂದುಸ್ಥಾನದಲ್ಲಿ ಚಂದ್ರ ಮಂಗಳರು ಕೂಡಿದ್ದರೆ- ಮಣ್ಣು, ಚರ್ಮ ಧಾತುಗಳಿಂದ ಸಾಮಾನುಗಳನ್ನು ತಯಾರಿಸುವ ಕುಶಲ ಕೈ ಕೆಲಸಗಾರನೂ, ಧನವಂತನೂ, ರಣಾಂಗಣದಲ್ಲಿ ಶೌರ್ಯವುಳ್ಳ ಸೈನಿಕನೂ, ಪ್ರತಿದಿವಸ ರಕ್ತದ ಹಿಂಸಾಕೃತಿಯಿಂದ ವ್ಯಾಕುಲ ಹೊಂದತಕ್ಕವನೂ, ಆಗುವನು.

ಚಂದ್ರ,ಬುಧರು ಕೂಡಿದ್ದರೆ-ಸ್ತ್ರೀಯರಿಂದ ಮನ್ನಣೆ ಹೊಂದತಕ್ಕವನೂ ಸುಂದರವಾದ ರೂಪವುಳ್ಳವನೂ, ಪದ, ಪದ್ಯಗಳನ್ನು ರಚಿಸುವದರಲ್ಲಿ ನಿಪುಣನೂ, ಧನವಂತನೂ; ಸದ್ಗುಣಿಯೂ, ಹಾಸ್ಯಮುಖವುಳ್ಳವನೂ ಆಗುವನು.

ಚಂದ್ರ, ಗುರು ಕೂಡಿದ್ದರೆ-ದೇವ,ಬ್ರಾಹ್ಮಣ,ಜಂಗಮ ಪೂಜಾತತ್ಪರನೂ ಬಂಧುಗಳನ್ನು ಗೌರವಿಸತಕ್ಕವನೂ ಧನವಂತನೂ, ದೃಢವಾದ ಪ್ರೀತಿಯುಳ್ಳವನೂ, ಸುಂದರನೂ, ಸುಸ್ವಭಾವಿಯೂ, ಆಗುವನು.

ಚಂದ್ರ, ಶುಕ್ರರು ಕೂಡಿದ್ದರೆ—ಕ್ರಯ, ವಿಕ್ರಯ ಮೊದಲಾದ ವ್ಯವಹಾರದಲ್ಲಿ ಚತುರನೂ, ಜಗಳಗಂಟನೂ; ವಸ್ತ್ರ-ಆಭರಣಾದಿಗಳಲ್ಲಿ ಪ್ರೀತಿಯುಳ್ಳವನೂ ಆಗುವನು.

ಚಂದ್ರ, ಶನಿ ಕೂಡಿದ್ದರೆ—ಆನೆ, ಕುದುರೆಗಳನ್ನು ಪಾಲನ ಮಾಡತಕ್ಕವನೂ; ದುಷ್ಟ ಸ್ವಭಾವಿಯೂ, ವೃದ್ಧ ಸ್ತ್ರೀಯೊಡನೆ ರಮಿಸತಕ್ಕವನೂ, ಪರಸ್ತ್ರೀ ಲಂಪಟನೂ; ಸಂತಾನ ರಹಿತನೂ, ಆಗುವನು.

— ಮಂಗಳನೊಡನೆ ಎರಡು ಗ್ರಹಗಳು ಕೂಡುವ ಯೋಗ —

ಮಂಗಳ, ಬುಧರು ಕೂಡಿದ್ದರೆ—ದುರ್ಭಾಗ್ಯವುಳ್ಳ ಪತ್ನಿಯುಳ್ಳವನೂ, ಖರೀದಿ ವ್ಯವಹಾರ ಮಾಡತಕ್ಕವನೂ; ಬಂಗಾರ, ಕಬ್ಬಿಣಗಳಿಂದ ಸಾಮಾನು ತಯಾರಿಸ ತಕ್ಕವನೂ, ವಿಧವಾ ಸ್ತ್ರೀ ಪ್ರಿಯನೂ, ಆಗುವನು.

ಮಂಗಳ, ಗುರು ಕೂಡಿದ್ದರೆ-ಬುದ್ಧಿವಂತನೂ, ಶಿಲ್ಪಶಾಸ್ತ್ರಜ್ಞನೂ, ವೇದಾಗಮ ಶಾಸ್ತ್ರಪಾರಂಗತನೂ ವಾಗ್ವಾದದಲ್ಲಿ ಚತುರನೂ, ಉತ್ತಮ ಭಾಷಣಕಾರನೂ, ಕುದುರೆಗಳನ್ನು ಹತ್ತುವದರಲ್ಲಿ ಪ್ರೀತಿಯುಳ್ಳವನೂ, ಪ್ರಧಾನ ಮನುಷ್ಯನೂ ಆಗುವನು.

ಮಂಗಳ, ಶುಕ್ರ ಕೂಡಿದ್ದರೆ- ಗುಣ ಪ್ರಧಾನನೂ, ನಿಪುಣನೂ,ಜೂಜು ಆಡುವವನೂ, ಸುಳ್ಳು ಮಾತಾಡತಕ್ಕವನೂ, ಮೂರ್ಖನೂ, ಪರಸ್ತ್ರೀಗಾಮಿಯೂ, ಬಹುಜನ ಮಾನ್ಯನೂ ಆಗುವನು

ಮಂಗಳ, ಶನಿ ಕೂಡಿದ್ದರೆ- ಚತುರ ಭಾಷಣಕಾರನೂ; ಇಂದ್ರಜಾಲ ವಿದ್ಯಾ ನಿಪುಣನೂ, ಧರ್ಮ ರಹಿತನೂ, ಕಲಹಪ್ರಿಯನೂ, ಸೆರೆ, ಸಿಂವಿ, ಇತ್ಯಾದಿ ಮಾದಕ ದ್ರವ್ಯಗಳನ್ನು ಕುಡಿಯತಕ್ಕವನೂ ಆಗುವನು.

— ಬುಧನೊಡನೆ ಎರಡು ಗ್ರಹಗಳು ಕೂಡುವ ಯೋಗ —

ಬುಧ, ಗುರು ಕೂಡಿದ್ದರೆ- ಧೈರ್ಯವಂತನೂ, ಪಂಡಿತನೂ, ಸುಖಿಯೂ ನೃತ್ಯ, ವಾದ್ಯಾದಿಗಳನ್ನು ಬಾರಿಸುವದರಲ್ಲಿ ಜಾಣನೂ ಆಗುವನು.

ಬುಧ, ಶುಕ್ರ ಕೂಡಿದ್ದರೆ- ಧನವಂತನೂ, ಮೃದುವಾಗಿ ಮಾತಾಡತಕ್ಕವನೂ, ವೇದಾಗಮಗಳ ಸಾರವನ್ನು ತಿಳಿದವನೂ,ಪದಪದ್ಯಗಳಲ್ಲಿ, ಹಾಸ್ಯದಲ್ಲಿ ಅಭಿರುಚಿಯುಳ್ಳವನೂ, ನೀತಿವಂತನೂ, ಶಿಲ್ಪಶಾಸ್ತ್ರಜ್ಞನೂ ಆಗುವನು.

ಬುಧ, ಶನಿ ಕೂಡಿದ್ದರೆ- ಸಾಲಗಾರನೂ; ಯಾವಾಗಲೂ ಪ್ರಯಾಣ (ಸಂಚಾರ) ಮಾಡತಕ್ಕವನೂ, ಉಪಾಯ ರಹಿತನೂ, ಅತ್ಯಂತ ಕಠೋರನೂ, ಚಾಸ್ನಾಗಿ ಮಾತಾಡತಕ್ಕವನೂ, ಕಾವ್ಯಗಳಲ್ಲಿ ಪ್ರೀತಿಯುಳ್ಳವನೂ, ಆಗುವನು.

— ಗುರುವಿನೊಡನೆ ಎರಡು ಗ್ರಹಗಳು ಕೂಡುವಯೋಗ —

ಗುರು, ಶುಕ್ರರು ಕೂಡಿದ್ದರೆ- ಧರ್ಮಿಷ್ಠನೂ, ಪ್ರಾಮಾಣಿಕನೂ, ತನ್ನ ಬುದ್ಧಿಬಲದಿಂದ ಉಪಜೀವನ ಹೊಂದತಕ್ಕವನೂ, ದಿವ್ಯಪತ್ನಿಯುಳ್ಳವನೂ, ಬಹು ಧನವಂತನೂ, ಆಗುವನು.

ಗುರು, ಶನಿ ಕೂಡಿದ್ದರೆ- ತಾನು ಕೈಕೊಂಡ ಉದ್ಯೋಗದಲ್ಲಿ ಸಫಲತೆಯುಳ್ಳವನೂ, ಶೂರನೂ, ಕೀರ್ತಿವಂತನೂ, ನಗರದ ಮುಖ್ಯ ಮನುಷ್ಯನೂ, ಸೇನಾಪತಿಯೂ, ಗ್ರಾಮಾಧಿಕಾರಿಯೂ, ಅಥವಾ ಸಮಾಜದ ಹಿರಿಯನೂ, ಆಗುವನು.

— ಶುಕ್ರನೊಡನೆ ಎರಡು ಗ್ರಹಗಳು ಕೂಡುವ ಯೋಗ —

ಶುಕ್ರ, ಶನಿ ಇವರು ಜನನಲಗ್ನ, ಕುಂಡಲಿಯಲ್ಲಿ ಒಂದು ಸ್ಥಾನದಲ್ಲಿ ಕೂಡಿದ್ದರೆ--ಕಟ್ಟಿಗೆಯನ್ನು ಕೊರೆಯುವ ಕೆಲಸದಲ್ಲಿ ಕುಶಲನೂ, ಹುಳಿ,

ಉಪ್ಪು ಪದಾರ್ಥಗಳನ್ನು ನಿರ್ಮಾಣಮಾಡುವ ಕಲೆಯನ್ನು ಬಲ್ಲವನೂ; ಕುಸ್ತಿ ಪೈಲವಾನನೂ; ಆಕಳು; ಎಮ್ಮೆಗಳ ಮೂಲಕ (ಕ್ಯಾಟಲ್ ಫಾರ್ಮ, ವ್ಯಾನೇಜರ)ನೂ ಆಗುವನು.

— ತ್ರಿಗ್ರಹಯೋಗ —

— ರವಿಯೊಡನೆ ಮೂರುಗ್ರಹಗಳು ಕೂಡುವ ಯೋಗ —

ರವಿ; ಮಂಗಳ; ಬುಧರು ಕೂಡಿದ್ದರೆ-ಅವನು ವಿಖ್ಯಾತನೂ; ಸಾಹಸದ ಕೆಲಸಗಳನ್ನು ಮಾಡತಕ್ಕವನೂ, ದಯಾರಹಿತನೂ, ನಿರ್ಲಜ್ಜನೂ, ಮತ್ತು ಧನ, ಸ್ತ್ರೀ, ಪುತ್ರರಿಂದ ಪೀಡೆಗೊಳಗಾಗುವವನೂ ಆಗುತ್ತಾನೆ.

ರವಿ, ಮಂಗಳ, ಗುರು ಇವರು ಕೂಡಿದ್ದರೆ- ಪ್ರಚಂಡ ಪುರುಷನೂ, ಸತ್ಯವಾದಿಯೂ, ಮಂತ್ರಿಯೂ, ಮುಖಂಡ ಮನುಷ್ಯನೂ, ಮಾತಾಡುವದರಲ್ಲಿ ಚತುರನೂ ಆಗುವನು.

ರವಿ, ಮಂಗಳ, ಶುಕ್ರರು ಕೂಡಿದ್ದರೆ- ಸುಂದರನೂ, ಐಶ್ವರ್ಯವಂತನೂ, ದೇವತಾ ಪೂಜೆ ಭಜನೆಗಳಲ್ಲಿ ಮನಸ್ಸುಳ್ಳವನೂ, ಕುಲೀನನೂ ಅಂತಃಕರುಣೆಯೂ, ವಿಷಯಾ ಸಕ್ತನೂ ಆಗುವನು.

ರವಿ, ಮಂಗಳ, ಶನಿ ಇವರು ಕೂಡಿದ್ದರೆ- ಮೂರ್ಖನೂ, ಧನಹೀನನೂ ರೋಗಪೀಡಿತನೂ, ಸ್ವಜನರಲ್ಲಿ ಅಪಮಾನಿತನೂ, ಜಗಳಗಂಟನೂ, ವಿಕಲನೂ ಆಗುವನು.

ರವಿ, ಬುಧ, ಗುರು ಇವರು ಕೂಡಿದ್ದರೆ-ನೇತ್ರರೋಗಿ (ದೃಷ್ಟಿದೋಷ) ಯೂ, ಧನವಂತನೂ, ಶಸ್ತ್ರಾಸ್ತ್ರ [ವಿದ್ಯಾಪಾರಂಗತನೂ, ಲೇಖಕನೂ ಆಗುವನು.

ರವಿ, ಬುಧ, ಶುಕ್ರರು ಕೂಡಿದ್ದರೆ- ಗುರು ಹಿರಿಯರಲ್ಲಿ ಭಕ್ತಿಯುಳ್ಳವನೂ, ಶ್ರೇಷ್ಠ ಮಾರ್ಗಾವಲಂಬಿಯೂ, ಸ್ತ್ರೀ ಸಂಬಂಧ ಸಂತಪ್ತ ಮನಸ್ಕನೂ ಆಗುವನು.

ರವಿ, ಬುಧ, ಶನಿ ಇವರು ಕೂಡಿದ್ದರೆ—ದುರಾಚಾರಿಯೂ, ಹೇಡಿಯೂ ಬಂಧು ಜನದ್ವೇಷಿಯೂ; ಸಮಾನ ಜನರಲ್ಲಿ ದ್ವೇಷ ಬುದ್ಧಿಯುಳ್ಳವನೂ ಆಗುವನು.

ರವಿ, ಗುರು, ಶುಕ್ರರು ಕೂಡಿದ್ದರೆ– ಮಂತ್ರಿಯೂ, ಮುಖಂಡನೂ, ಧನರಹಿತನೂ, ಕ್ರೂರನೂ, ಪಂಡಿತನೂ; ಪರರ ಕೆಲಸಗಳನ್ನು ಮನಸಾ ಮಾಡತಕ್ಕವನೂ, ಕೆಟ್ಟ ಕಣ್ಣುಗಳುಳ್ಳವನೂ ಆಗುವನು.

ರವಿ, ಗುರು, ಶನಿ ಇವರು ಕೂಡಿದ್ದರೆ– ಉತ್ತಮರಾದ ಪುತ್ರ, ಮಿತ್ರ; ಪತ್ನಿ ಉಳ್ಳವನೂ, ಧೈರ್ಯಶಾಲಿಯೂ, ರಾಜಭಕ್ತನೂ, ಬಂಧು ಜನ ದ್ವೇಷಿಯೂ ಆಗುವನು.

ರವಿ, ಶುಕ್ರ, ಶನಿ ಇವರು ಕೂಡಿದ್ದರೆ– ಮಾನ ರಹಿತನೂ, ಕಲಾ ಹೀನನೂ; ಶತ್ರುಗಳನ್ನು ಜಯಿಸತಕ್ಕವನೂ; ಉದ್ವಿಗ್ನ ಮನಸ್ಸಿನವನೂ, ದುರಾಚಾರಿಯೂ; ಕುಷ್ಠರೋಗಿಯೂ ಆಗುವನು.

ಚಂದ್ರ ಮಂಗಳ, ಬುಧ ಇವರು ಕೂಡಿದ್ದರೆ– ಆಚಾರರಹಿತನೂ ಪಾಪಿಷ್ಠನೂ ಸಂಸಾರದಲ್ಲಿ ಉಪಜೀವನ ಮಾಡುವ ಯೋಗ್ಯತೆ ಇಲ್ಲದವನೂ ಬಂಧು ಹೀನನೂ ಆಗುವನು.

ಚಂದ್ರ, ಮಂಗಳ, ಗುರು ಕೂಡಿದ್ದರೆ– ಸ್ತ್ರೀ ಲೋಲನೂ, ಚಂಚಲ ಸ್ವಭಾವಿಯೂ, ದೇಹದಲ್ಲಿ ವೃಣ (ಹುಣ್ಣು) ಗಳುಳ್ಳವನೂ, ಮನೋಹರನೂ ಚಂದ್ರನಂತಹ ಮುಖವುಳ್ಳವನೂ ಆಗುವನು.

ಚಂದ್ರ, ಮಂಗಳ, ಶುಕ್ರ ಕೂಡಿದ್ದರೆ– ದುಷ್ಟ ಸ್ವಭಾವದ ಪತ್ನಿಯುಳ್ಳವನೂ, ಅಥವಾ ದುಷ್ಟ ತಾಯಿಯ ಮಗನಾಗಿಯೂ, ಚಳಿ (ಥಂಡಿ) ಯನ್ನು ತಡೆಯಲಾರದವನೂ, ಸದಾ ಸಂಚಾರಿಯೂ ಆಗುವನು.

ಚಂದ್ರ, ಮಂಗಳ, ಶನಿ ಇವರು ಕೂಡಿದ್ದರೆ– ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಳ್ಳುವವನೂ, ಕ್ಷುದ್ರನೂ, ದ್ವೇಷಿಯೂ, ಕುಟಿಲನೂ ಆಗುವನು ಚಂದ್ರ, ಬುಧ, ಗುರು ಇವರು ಕೂಡಿದ್ದರೆ–ಯಶಸ್ವಿಯೂ, ಧನವಂತನೂ; ಬಹುಜನ ಪುತ್ರ, ಮಿತ್ರರುಳ್ಳವನೂ, ಉತ್ತಮ ಭಾಷಣಕಾರನೂ, ವಿಖ್ಯಾತನೂ, ಕೀರ್ತಿವಂತನೂ ಆಗುವನು.

ಚಂದ್ರ, ಬುಧ, ಶುಕ್ರರು ಕೂಡಿದ್ದರೆ– ವಿದ್ಯಾವಂತನೂ, ಅತ್ಯಂತ ಧನ ಲೋಭಿಯೂ, ನೀಚ ಆಚರಣೆಯುಳ್ಳವನೂ, ಬಹು ಈರ್ಷೆಯುಳ್ಳವನೂ ಆಗುವನು.

ಚಂದ್ರ, ಬುಧ, ಶನಿ ಇವರು ಕೂಡಿದ್ದರೆ— ಪಂಡಿತನೂ, ರಾಜಪೂಜಿತನೂ, ಅತ್ಯಂತ ಶ್ರೇಷ್ಠನೂ, ಭಾರಿ ದೇಹವುಳ್ಳವನೂ, ಚತುರತನದಿಂದ ಮಾತಾಡುವವನೂ, ಆಗುವನು.

ಚಂದ್ರ, ಗುರು, ಶುಕ್ರರು ಕೂಡಿದ್ದರೆ- ಉತ್ತಮ ತಾಯಿಯ ಪುತ್ರನೂ ಪಂಡಿತನೂ, ಸಜ್ಜನನೂ, (ಸಾಧು) ಎಲ್ಲ ಕಲೆಗಳನ್ನು ಬಲ್ಲವನೂ, ಸುಂದರನೂ, ಐಶ್ವರ್ಯವಂತನೂ, ಆಗುವನು.

ಚಂದ್ರ, ಗುರು, ಶನಿ ಇವರು ಕೂಡಿದ್ದರೆ- ರೋಗ ರಹಿತನೂ, ಸ್ತ್ರೀಲೋಲನೂ, ಶಾಸ್ತ್ರಾರ್ಥವನ್ನು ಬಲ್ಲವನೂ, ಗ್ರಾಮಾಧಿಕಾರಿಯೂ ಆಗುವನು.

ಚಂದ್ರ, ಶುಕ್ರ, ಶನಿ ಇವರು ಕೂಡಿದ್ದರೆ- ಉತ್ತಮ ಲೇಖಕನೂ, ಬರೆಯುವ ಕೆಲಸ ಮಾಡತಕ್ಕವನೂ, (ಗುಮಾಸ್ತ) ಧರ್ಮಶಾಸ್ತ್ರಗಳನ್ನು ಬಲ್ಲವನೂ, (ಪುರೋಹಿತ) ಓದುಗುಳಿಯೂ (ಗ್ರಂಥವಾಚನ) ಆಗುವನ .

ಮಂಗಳ, ಬುಧ, ಗುರು ಇವರು ಕೂಡಿದ್ದರೆ- ಕವಿತಾ ಶಕ್ತಿಯುಳ್ಳವನೂ, ಸುಂದರಳಾದ ಪತ್ನಿಯುಳ್ಳವನೂ, ಪರೋಪಕಾರಿಯೂ, ಗಾಯನ ಕಲೆಯಲ್ಲಿ ನಿಪುಣನೂ ಆಗುವನು.

ಮಂಗಳ, ಬುಧ, ಶುಕ್ರರು ಕೂಡಿದ್ದರೆ- ವಿಕಲವಾದ ಅವಯವಗಳುಳ್ಳವನೂ ಚಂಚಲವಾದ ಮನಸ್ಸುಳ್ಳವನೂ, ಸದಾ ಉತ್ಸಾಹಿಯೂ, ಅಭಿಮಾನಿಯೂ, ವಾಚಾಲನೂ, ಆಗುವನು.

ಮಂಗಳ, ಬುಧ, ಶನಿ ಇವರು ಕೂಡಿದ್ದರೆ- ಪರದೇಶಗಳಲ್ಲಿ ವಾಸಿಸತಕ್ಕವನೂ, ವಿಶೇಷ ಪ್ರವಾಸ ಮಾಡತಕ್ಕವನೂ, ದೃಷ್ಟಿದೋಷ (ನೇತ್ರರೋಗ) ವುಳ್ಳವನೂ, ಮುಖದಲ್ಲಿಯ ರೋಗವುಳ್ಳವನೂ, ಅತಿಶಯವಾದ ಹಾಸ್ಯವನ್ನು ಸೇರದವನೂ, ಪ್ರೇರಣೆಯ ಕೆಲಸ ಮಾಡತಕ್ಕವನೂ ಆಗುವನು.

ಮಂಗಳ, ಗುರು, ಶುಕ್ರರು ಕೂಡಿದ್ದರೆ- ದಿವ್ಯ ಪತ್ನಿಯುಳ್ಳವನೂ, ಅಧಿಕ ಸುಖಭೋಗಿಯೂ, ರಾಜರಿಗೆ (ಮಂತ್ರಿ) ಪ್ರಿಯನೂ ಆಗುವನು.

ಮಂಗಳ, ಗುರು, ಶನಿ ಇವರು ಕೂಡಿದ್ದರೆ- ಗಾಯದ ಕಲೆಗಳುಳ್ಳ ದೇಹವುಳ್ಳವನೂ, ರಾಜರಿಗೆ (ಮಂತ್ರಿ) ಪ್ರಿಯನೂ, ನೀಚತನದ ನಡತೆಯವನೂ, ದಯಾರಹಿತನೂ, ಮಿತ್ರರಿಂದ ನಿಂದಿಸಲ್ಪಡತಕ್ಕವನೂ ಆಗುವನು.

ಮಂಗಳ, ಶುಕ್ರ, ಶನಿ ಇವರು ಕೂಡಿದ್ದರೆ– ದುಷ್ಟಸ್ವಭಾವದ ಪತ್ನಿ ಅಥವಾ ತಾಯಿಯುಳ್ಳವನೂ, ಪರದೇಶಗಳಲ್ಲಿ ವಾಸಿಸುವನೂ, ಸದಾ ದುಃಖಿಯೂ ಆಗುವನು.

ಬುಧ, ಗುರು, ಶುಕ್ರರು ಕೂಡಿದ್ದರೆ– ಸುಂದರವಾದ ಶರೀರವುಳ್ಳವನೂ, ರಾಜಪೂಜ್ಯನೂ, ಶತ್ರುಗಳನ್ನು ಜಯಿಸತಕ್ಕವನೂ, ಬಹುಕೀರ್ತಿವಂತನೂ, ಸತ್ಯವಾದಿಯೂ ಆಗುವನು.

ಬುಧ, ಗುರು, ಶನಿ ಇವರು ಕೂಡಿದ್ದರೆ– ಸುಂದರಳಾದ ಪತ್ನಿಯುಳ್ಳವನೂ; ಸುಖಭೋಗಿಯೂ, ಧನವಂತನೂ, ಐಶ್ವರ್ಯಶಾಲಿಯೂ, ವಿಶೇಷವಾಗಿ ಸುಖಿಯೂ, ಧೈರ್ಯಶಾಲಿಯೂ ಆಗುವನು.

ಬುಧ, ಶುಕ್ರ, ಶನಿ ಇವರು ಕೂಡಿದ್ದರೆ– ವಾಚಾಲನೂ, ಪರಸ್ತ್ರೀಯರಲ್ಲಿ ರಮಿಸತಕ್ಕವನೂ, ಸತ್ಸಂಗ ರಹಿತನೂ, ಕಲಾವಿಹೀನನೂ, ಸದಾ ಒಂದೇ ಸ್ಥಾನದಲ್ಲಿರುವವನೂ ಆಗುವನು.

ಗುರು, ಶುಕ್ರ, ಶನಿ ಇವರು ಕೂಡಿದ್ದರೆ– ಬಹುಕೀರ್ತಿವಂತನೂ; ರಾಜಭೋಗಿಯೂ, ಒಂದು ವೇಳೆ ನೀಚಕುಲದಲ್ಲಿ ಜನನವಾದಾಗ್ಯೂ, ಸುಶೀಲನೂ, ಆಗುವನು.

ಚಂದ್ರನು ವಿಶೇಷವಾಗಿ ಪಾಪಗ್ರಹಗಳಿಂದ ಕೂಡಿದ್ದರೆ– ತಾಯಿಗೆ ಕಂಟಕವು. ಅದರಂತೆ ರವಿಯೂ ಕೂಡಿದ್ದರೆ, ತಂದೆಗೆ ಅರಿಷ್ಟವು. ರವಿ ಚಂದ್ರರು ಶುಭ ಗ್ರಹಗಳಿಂದ ಕೂಡಿದ್ದರೆ, ಶುಭ ಫಲವೂ ಶುಭಾಶುಭ ಮಿಶ್ರಗ್ರಹಗಳಿಂದ ಕೂಡಿದ್ದರೆ ಮಿಶ್ರ ಫಲಗಳೂ ಉಂಟಾಗುವವು. ಮತ್ತು ಮೂರು ಶುಭಗ್ರಹಗಳು ಒಂದು ಸ್ಥಾನದಲ್ಲಿ ಕೂಡಿದ್ದಾದರೆ– ಆ ಮನುಷ್ಯನು ಸುಖಿಯಾಗುವನು, ಮೂರು ಪಾಪಗ್ರಹಗಳು ಕೂಡಿದ್ದಾದರೆ– ಅವನು ದುಃಖಿಯೂ, ಗುರು ಹಿರಿಯರಿಗೆ ಅವಿಧೇಯನೂ, ಸರ್ವರ ನಿಂದೆಗೊಳಗಾಗುವನೂ, ಆಗುವನು.

ಚತುರ್ಗ್ರಹಯೋಗ

— ರವಿಯೊಡನೆ ನಾಲ್ಕುಗ್ರಹಗಳು ಕೂಡುವ ಯೋಗ —

ರವಿ, ಚಂದ್ರ, ಮಂಗಳ; ಬುಧ ಈ ಗ್ರಹಗಳು ಕೂಡಿದ್ದರೆ– ಲೇಖಕನೂ,

ಕಳ್ಳನೂ, ಯುಕ್ತಿಯಿಂದ ಮಾತಾಡತಕ್ಕವನೂ, ಇಂದ್ರಜಾಲ, ಮಹೇಂದ್ರ ಜಾಲ, ವಿದ್ಯಾಬಲ್ಲವನೂ, ವೈದ್ಯಶಾಸ್ತ್ರ ಪಂಡಿತನೂ ಆಗುವನು.

ರವಿ, ಚಂದ್ರ, ಮಂಗಳ, ಗುರು ಇವರು ಕೂಡಿದ್ದರೆ- ಜಾಣನೂ ಧನ ವಂತನೂ ತೇಜಸ್ವಿಯೂ, ದುಃಖರಹಿತನೂ, ನೀತಿವಂತನೂ, ಆಗುವನು.

ರವಿ, ಚಂದ್ರ, ಮಂಗಳ, ಶುಕ್ರರು ಕೂಡಿದ್ದರೆ- ವಿದ್ಯಾ ಮತ್ತು ಧನ ಸಂಪಾದಿಸುವವನೂ, ಸುಖಿಯೂ, ಪುತ್ರವಂತನೂ; ಕೀರ್ತನ ಭಾಷಣ ಪುರಾಣ, ಪ್ರವಚನ, ಇತ್ಯಾದಿ ವಾಣಿಯ ಸಹಾಯದಿಂದ ಉಪಜೀವನ ಹೊಂದತಕ್ಕವನೂ ಆಗುವನು.

ರವಿ, ಚಂದ್ರ, ಮಂಗಳ, ಶನಿ ಇವರು ಕೂಡಿದ್ದರೆ- ಮೂರ್ಖನೂ, ಬಡ ವನೂ, ಕೃಶಳಾದ (ಬಡಕಲು) ಅಸ್ತವ್ಯಸ್ತ ಶರೀರವುಳ್ಳವನೂ, ಭಿಕ್ಷುಕನೂ, ಆಗುವನು.

ರವಿ, ಚಂದ್ರ, ಬುಧ, ಗುರು ಕೂಡಿದ್ದರೆ- ಶಿಲ್ಪಶಾಸ್ತ್ರಜ್ಞನೂ, ಶ್ರೀಮಂತನೂ, ಬಂಗಾರದ ವ್ಯವಹಾರ ಮಾಡತಕ್ಕವನೂ, ನಿರೋಗಿಯೂ, ತಗ್ಗಾದ ಕಣ್ಣುಗಳುಳ್ಳವನೂ ಆಗುವನು.

ರವಿ, ಚಂದ್ರ, ಬುಧ, ಶುಕ್ರರು ಕೂಡಿದ್ದರೆ- ಸುಂದರನೂ; ಐಶ್ವರ್ಯ ವಂತನೂ, ರಾಜಮಾನ್ಯನೂ, ಯುಕ್ತಿಯಿಂದ ಮಾತಾಡುವವನೂ, ವಿಕಲನೂ ಆಗುವನು.

ರವಿ, ಂಚದ್ರ, ಬುಧ, ಶನಿ ಇವರು ಕೂಡಿದ್ದರೆ- ಭಿಕ್ಷಾನ್ನವನ್ನು ಭೋಜನ ಮಾಡತಕ್ಕವನೂ, ತಾಯಿತಂದೆಗಳಿಂದ ಬೇರೆಯಾಗಿ ಇರತಕ್ಕವನು, ವಿಕಲ ವಾದ ನೇತ್ರವುಳ್ಳವನೂ ಆಗುವಮು.

ರವಿ, ಚಂದ್ರ, ಗುರು, ಶುಕ್ರರು ಕೂಡಿದ್ದರೆ— ರಾಜಪೂಜಿತನೂ; ಜಲಾ ಸಯ, ಅರಣ್ಯ, ಮೃಗ, ಇವುಗಳ ಒಡೆಯ (ಅಧಿಕಾರಿ) ನೂ, ಜಾಣನೂ, ಸುಖಿಯೂ, ಆಗುವನು.

ರವಿ, ಚಂದ್ರ, ಗುರು, ಶನಿ ಇವರು ಕೂಡಿದ್ದರೆ- ಮಾನ್ಯನೂ, ಪತ್ನೀ ಪ್ರಿಯನೂ, ಬಹುಧನವಂತನೂ, ಪುತ್ರವಂತನೂ, ತೀಕ್ಷ್ಣವಾದ ನೇತ್ರಗಳು ಳ್ಳವನೂ ಆಗುವನು.

ರವಿ, ಚಂದ್ರ, ಶುಕ್ರ, ಶನಿ, ಇವರು ಕೂಡಿದ್ದರೆ- ಅಂಜಬುರುಕನೂ. ಮುನ್ನಡೆಯುಳ್ಳವನೂ, ಅತ್ಯಂತ ಕೆಳ್ಳಗಾದ ಸ್ತ್ರೀಯ ಹಾಗೆ ಆಚರಣೆಯುಳ್ಳ ವನೂ ಆಗುವನು.

ರವಿ, ಮಂಗಳ, ಬುಧ, ಗುರು ಇವರು ಕೂಡಿದ್ದರೆ- ನೂಲಿನ ಕೆಲಸ ಮಾಡತಕ್ಕವನೂ, ಪರಸ್ತ್ರೀಯರಲ್ಲಿ ರಮಣ ಮಾಡತಕ್ಕವನೂ, ಶೂರನೂ, ವೀರನೂ, ದುಃಖಿಯೂ. ಯಾಂತ್ರಿಕ ಕೆಲಸಗಾರ (ಚಕ್ರಧಾರಿ) ನೂ ಆಗುವನು.

ರವಿ ಚಂದ್ರ, ಮಂಗಳ ಶುಕ್ರರು ಕೂಡಿದ್ದರೆ- ದುರ್ಜನನೂ, ಲಜ್ಜಾಹೀನನೂ, ಚೋರನೂ, ವಿಷಮವಾದ ದೇಹವುಳ್ಳವನೂ. ವ್ಯಭಿಚಾರಿಯೂ, ಆಗುವನು.

ರವಿ ಮಂಗಳ ಬುಧ ಶನಿ ಇವರು ಕೂಡಿದ್ದರೆ- ಶೂರ ಸೈನಿಕನೂ ಕವಿತ್ವ ಬಲ್ಲವರೂ, ಮಂತ್ರಿಯೂ, ಅಥವಾ ಸೇನಾಪತಿಯೂ, ತೀಕ್ಷ್ಣ ಮತ್ತು ನೀಚ ಆಚರಣೆಯುಳ್ಳವನೂ ಆಗುವನು.

ರವಿ ಮಂಗಳ ಗುರು ಶುಕ್ರರು ಕೂಡಿದ್ದರೆ- ಪೂಜ್ಯನೂ, ಧನಿಕನೂ, ಸುಂದರನೂ, ಐಶ್ವರ್ಯವಂತನೂ, ರಾಜ್ಯಮಾನ್ಯನೂ, ಪ್ರಖ್ಯಾತನೂ, ನೀತಿವಂತನೂ, ಆಗುವನು.

ರವಿ ಮಂಗಳ ಗುರು ಶನಿ ಇವರು ಕೂಡಿದ್ದರೆ— ಮುಖಂಡನೂ, ಬಹುಜನರ ನಾಯಕನೂ, ಉನ್ಮತ್ತ ಸ್ವಭಾವಿಯೂ, ರಾಜ ಮಾನ್ಯನೂ, ಜನರ ಅಪೇಕ್ಷೆಗಳನ್ನು ಪೂರ್ಣಗೊಳಿಸತಕ್ಕವನೂ ಆಗುವನು. (ಮಂತ್ರಿ) ಎಮ್. ಎಲ್. ಎ. ಎಮ್. ಎಲ್. ಸಿ. ಇತ್ಯಾದಿ)

ರವಿ ಮಂಗಳ ಶುಕ್ರ ಶನಿ ಇವರು ಕೂಡಿದ್ದರೆ—ಜನ ವಿರೋಧಿಯೂ, ಸಮಾನ ನೇತ್ರಗಳುಳ್ಳವನೂ, ನೀಚ ಆಚರಣೆಯುಳ್ಳವನೂ, ಜಡ ಆಕಾರವುಳ್ಳವನೂ ಆಗುವನು.

ರವಿ ಬುಧ ಗುರು ಶುಕ್ರರು ಕೂಡಿದ್ದರೆ- ಬಹು ಬುದ್ಧಿವಂತನೂ, ಧನಿಕನೂ, ಸುಖಿಯೂ, ಆತ್ಮ ಪೌರಷ ಮಾಡಿಕೊಳ್ಳುವವನೂ, ಡಂಭಾಚಾರಿ (ಬಾಯಿಬಢಾಯಿ) ಯೂ ಪರರ ಕೆಲಸಗಳನ್ನು ಮಾಡಿಕೊಡತಕ್ಕವನೂ ಆಗುವನು.

ರವಿ ಬುಧ ಗುರು ಶನಿ ಇವರು ಕೂಡಿದ್ದರೆ- ಬಹುಜನ ಬಂಧು-ಬಾಂಧವರುಳ್ಳವನೂ, ಜಗಳಗಂಟನೂ, ನಪುಂಸಕರಂತೆ ವರ್ತನ ಮಾಡತಕ್ಕವನೂ, ನಿರುದ್ಯೋಗಿಯೂ ಆಗುವನು.

ರವಿ ಬುಧ ಶುಕ್ರ ಶನಿ ಇವರು ಕೂಡಿದ್ದರೆ- ಪ್ರಿಯ ಮಿತ್ರರುಳ್ಳವನೂ, ಶುದ್ಧಾಚರಣೆಯುಳ್ಳವನೂ, ಸುಂದರನೂ, ಐಶ್ವರ್ಯವಂತನೂ, ಪಂಡಿತನೂ, ಸುಖಭೋಗಿಯೂ, ವಾಚಾಲನೂ ಆಗುವನು

ರವಿ ಗುರು ಶುಕ್ರ ಶನಿ ಇವರು ಕೂಡಿದ್ದರೆ- ಧನಲೋಭಿಯೂ, ಮಾನವಂತನೂ, ಕವಿತ್ವವನ್ನು ಬಲ್ಲವನೂ, ಕಾರ್ಮಿಕರ ಒಡೆಯ (ಸುಪರವಾಯಿಜರ, ಮ್ಯಾನೇಜರ ಸರಕಾರೀ ಕಾರಖಾನೆಯ ಉಚ್ಚ ಅಧಿಕಾರಿಯು) ರಾಜರೊಡನೆ ಪ್ರೀತಿಯುಳ್ಳವನೂ ಆಗುವನು·

ಚಂದ್ರ ಮಂಗಳ ಬುಧ ಗುರು ಇವರು ಕೂಡಿದ್ದರೆ— ಶಾಸ್ತ್ರಗಳಲ್ಲಿ ನಿಪುಣನೂ, ರಾಜರ ಪ್ರೀತಿ ಸಂಪಾದಿಸತಕ್ಕವನೂ, ಮಹಾ ಮೇಧಾವಿಯೂ ಆಗುವನು·

ಚಂದ್ರ ಮಂಗಳ ಬುಧ ಶುಕ್ರರು ಕೂಡಿದ್ದರೆ- ಬಂಜೆಯಾದ ಪತ್ನಿಯುಳ್ಳವನೂ, ಬಹಳ ನಿದ್ರೆ ಮಾಡತಕ್ಕವನೂ, ಜಗಳಗಂಟನೂ, ನೀಚನೂ, ಬಂಧುಗಳೊಂದಿಗೆ ದ್ವೇಷ ಮಾಡತಕ್ಕವನೂ, ಆಗುವನು.

ಚಂದ್ರ ಮಂಗಳ ಶುಕ್ರ ಶನಿ ಇವರು ಕೂಡಿದ್ದರೆ- ಶೂರನೂ, ವೀರನೂ, ಉತ್ತಮರಾದ ಪುತ್ರ ಮಿತ್ರ, ಪತ್ನಿಯುಳ್ಳವನೂ ಇಬ್ಬರು ತಾಯಂದಿರು (ಮಲತಾಯಿ) ಉಳ್ಳವನೂ ಆಗುವನು.

ಚಂದ್ರ, ಮಂಗಳ, ಗುರು, ಶುಕ್ರರು ಕೂಡಿದ್ದರೆ- ಹಟವಾದಿಯೂ, ವಿಕೃತವಾದ ದೇಹವುಳ್ಳವನೂ, ಧನವಂತನೂ, ಪುತ್ರವಂತನೂ, ಅಭಿಮಾನಿಯೂ, ಪಂಡಿತನೂ ಆಗುವನು·

ಚಂದ್ರ, ಮಂಗಳ, ಗುರು, ಶನಿ ಇವರು ಕೂಡಿದ್ದರೆ- ಕಿವುಡನೂ, ಬಧಿರನೂ, ಭ್ರಮಿಷ್ಟನೂ, ಉನ್ಮಾದ ರೋಗವುಳ್ಳವನೂ, ಶೂರನೂ, ವೀರನೂ, ಬುದ್ಧಿವಂತನೂ ಆಗುವನು.

ಚಂದ್ರ, ಮಂಗಳ, ಶುಕ್ರ ಶನಿ ಇವರು ಕೂಡಿದ್ದರೆ- ವ್ಯಭಿಚಾರಿಣಿಯಾದ ಪತ್ನಿಯುಳ್ಳವನೂ, ಭಾವೋದ್ರೇಕ ಸ್ವಭಾವಿಯೂ, ಸರ್ಪದ ಕಣ್ಣುಗಳಂತಹ ಕಣ್ಣುಗಳುಳ್ಳವನೂ, ಡಂಭಾಚಾರಿಯೂ ಆಗುವನು.

ಚಂದ್ರ, ಶುಕ್ರ, ಬುಧ, ಗುರು ಇವರು ಕೂಡಿದ್ದರೆ- ಸುಂದರನೂ ಐಶ್ವರ್ಯಶಾಲಿಯೂ, ಧನವಂತನೂ, ಇಬ್ಬರು ತಾಯಿ, ಇಬ್ಬರು ತಂದೆಗಳುಳ್ಳವನೂ, (ಸಾಕು ತಾಯಿ, ಸಾಕು ತಂದೆ) ಪಂಡಿತನೂ, ಶತ್ರುರಹಿತನೂ ಆಗುವನು.

ಚಂದ್ರ, ಬುಧ, ಗುರು, ಶನಿ ಇವರು ಕೂಡಿದ್ದರೆ— ಬಂಧು ಜನರಿಗೆ ಪ್ರಿಯನೂ, ಕವಿತ್ವವನ್ನು ಬಲ್ಲವನೂ, ಮಂತ್ರಿಯೂ, ಯಶಸ್ವಿಯೂ, ಧರ್ಮಿಷ್ಠನೂ, ತೇಜಸ್ವಿಯೂ ಆಗುವನು.

ಚಂದ್ರ, ಬುಧ, ಶುಕ್ರ, ಶನಿ ಇವರು ಕೂಡಿದ್ದರೆ- ತಾಯಿಯನ್ನು ಕಳೆದುಕೊಳ್ಳುವವನೂ, ಚರ್ಮರೋಗವುಳ್ಳವನೂ, ಐಶ್ವರ್ಯವಂತನೂ ದುಃಖಿಯೂ, ಬಹು ಜನ ಪತ್ನಿಯರುಳ್ಳವನೂ ಆಗುವನು.

ಚಂದ್ರ, ಗುರು, ಶುಕ್ರ, ಶನಿ ಇವರು ಕೂಡಿದ್ದರೆ- ಪರಸ್ತ್ರೀಲೋಲನೂ, ಪಂಡಿತನೂ, ದ್ರವ್ಯಹೀನನೂ, ಅಣ್ಣ, ತಮ್ಮಂದಿರುಳ್ಳವನೂ; ಸ್ಥೂಲದೇಹದ ಪತ್ನಿಯುಳ್ಳವನೂ, ಆಗುವನು.

ಮಂಗಳ, ಗುರು, ಬುಧ, ಶುಕ್ರ ಇವರು ಕೂಡಿದ್ದರೆ- ಪತ್ನಿಯೊಡನೆ ಕಲಹ ಮಾಡತಕ್ಕವನೂ, ಧನವಂತನೂ ಉತ್ತಮ ಸ್ವಭಾವದವನೂ, ಆರೋಗ್ಯವಂತನೂ, ಲೋಕಪೂಜ್ಯನೂ ಆಗುವನು.

ಮಂಗಳ, ಬುಧ, ಗುರು, ಶನಿ ಇವರು ಕೂಡಿದ್ದರೆ- ಶೂರನೂ, ವೀರನೂ ಧನವಿಲ್ಲದವನೂ, ಸತ್ಯವಂತನೂ, ಸದಾಚಾರಿಯೂ, ವಿದ್ವಾಂಸನೂ, ವಾದ ವಿವಾದ ಮಾಡುವವರಲ್ಲಿ ಸಮರ್ಥನೂ, ಯುಕ್ತಿಯಿಂದ ಮಾತಾಡತಕ್ಕವನೂ, ಉತ್ತಮ ಭಾಷಣಕಾರನೂ, ಆಗುವನು.

ಮಂಗಳ, ಬುಧ, ಶುಕ್ರ, ಶನಿ ಇವರು ಕೂಡಿದ್ದರೆ- ಕುಸ್ತಿ ಆಡುವದರಲ್ಲಿ ಜಾಣನೂ ಪುಷ್ಟ ದೇಹವುಳ್ಳವನೂ ಉತ್ತಮ ಸೈನಿಕನೂ ಸದೃಢ ಶರೀರವುಳ್ಳವನೂ ಆಗುವನು.

ಮಂಗಳ, ಗುರು, ಶುಕ್ರ, ಶನಿ ಇವರು ಕೂಡಿದ್ದರೆ—ಹಟವಾದಿಯೂ ಧನವಂತನೂ, ತೇಜಸ್ವಿಯೂ ಸ್ತ್ರೀ ವಿಷಯದಲ್ಲಿ ಚಂಚಲನೂ, ಧೂರ್ತನೂ ಆಗುವನು.

ಬುಧ, ಗುರು, ಶುಕ್ರ, ಶನಿ ಇವರು ಕೂಡಿದ್ದರೆ—ಕಾಮುಕನೂ, ವಿನಮ್ರನೂ, ಸೇವಾ ಮಾಡತಕ್ಕವನೂ, ಬುದ್ಧಿವಂತನೂ, ತೀಕ್ಷ್ಣ ಸ್ವಭಾವಿಯೂ, ಧಾರ್ಮಿಕ ಕೆಲಸಗಳಲ್ಲಿ ಅಭಿರುಚಿಯುಳ್ಳವನೂ ಆಗುವನು.

ಪಂಚಗ್ರಹಯೋಗ (ಒಂದು ರಾಶಿಯಲ್ಲಿ ಐದು ಗ್ರಹಗಳು ಕೂಡಿದ್ದರೆ)

ರವಿ, ಚಂದ್ರ, ಮಂಗಳ, ಬುಧ, ಗುರು, ಇವರು ಯಾವದೇ ಒಂದು ರಾಶಿಯಲ್ಲಿ ಕೂಡಿದ್ದರೆ- ಆ ಜಾತಕನು ಮಾಯಾವಿಯೂ, ದುಃಖಿಯೂ, ಪತ್ನಿಯಿಂದ ವಿಯೋಗ ಹೊಂದತಕ್ಕವನೂ ಆಗುವನು.

ರವಿ, ಚಂದ್ರ, ಮಂಗಳ, ಬುಧ, ಶುಕ್ರ ಇವರು ಕೂಡಿದ್ದರೆ- ಅಸತ್ಯವಾದಿಯೂ ಬಂಧು ದ್ವೇಷಿಯೂ ಪರರ ಕೆಲಸಗಳನ್ನು ಮಾಡುವವನೂ, ನಪುಂಸಕರ ಗೆಳೆತನ ಮಾಡುವವನೂ ಆಗುವನು.

ರವಿ, ಮಂಗಳ, ಬುಧ, ಶನಿ ಇವರು ಕೂಡಿದ್ದರೆ-ಅಲ್ಪ ಆಯುಷಿಯೂ, ಪತ್ನೀರಹಿತನೂ ದುಃಖಿಯೂ ಪುತ್ರರಹಿತನೂ, ಬಂಧನದಲ್ಲಿರುವವನೂ ಆಗುವನು.

ರವಿ, ಚಂದ್ರ, ಮಂಗಳ, ಗುರು, ಶುಕ್ರರು ಕೂಡಿದ್ದರೆ ಜ್ಯಾತ್ಯಂಧನೂ ಬಹು ದುಃಖಿಯೂ ತಾಯಿ ತಂದೆಗಳನ್ನು ವರ್ಜಿಸತಕ್ಕವನೂ, ಸಂಗೀತದಲ್ಲಿ ಪ್ರೀತಿಯುಳ್ಳವನೂ ಆಗುವನು.

ರವಿ, ಚಂದ್ರ, ಮಂಗಳ, ಶುಕ್ರ, ಶನಿ ಇವರು ಕೂಡಿದ್ದರೆ—ಪರರ ದ್ರವ್ಯವನ್ನು ಅಪಹರಿಸುವವನೂ, ಸೈನಿಕನೂ, ಅನ್ಯರಿಗೆ ಸಂತಾಪವನ್ನುಂಟು ಮಾಡುವವನೂ, ದುಷ್ಟನೂ, ಸಮರ್ಥನೂ ಆಗುವನು.

ರವಿ, ಚಂದ್ರ, ಮಂಗಳ, ಶುಕ್ರ, ಶನಿ ಇವರು ಕೂಡಿದ್ದರೆ— ಮಾನಹೀನನೂ, ದುರಾಚಾರಿಯೂ, ಬಡವನೂ, ಪರಸ್ತ್ರೀ ಲಂಪಟನೂ, ಆಗುವನು.

ರವಿ, ಚಂದ್ರ, ಬುಧ, ಗುರು, ಶುಕ್ರರು ಕೂಡಿದ್ದರೆ— ಮಂತ್ರಿಯೂ, ಬಹಳ ಧನವಂತನೂ, ಯಾಂತ್ರಿಕ ಕೆಲಸಗಳಲ್ಲಿ ತಜ್ಞನೂ, ದಂಡನಾಯಕನೂ ಪ್ರಸಿದ್ಧ ಪುರುಷನೂ ಯಶಸ್ವಿಯೂ, ಆಗುವನು.

ರವಿ, ಚಂದ್ರ, ಬುಧ, ಗುರು, ಶನಿ, ಇವರು ಕೂಡಿದ್ದರೆ— ಪರರ ಅನ್ನವನ್ನು ಭೋಜನ ಮಾಡತಕ್ಕವನೂ, ಉನ್ಮಾದನೂ, ಪ್ರಿಯಜನರಿಗೆ ದುಃಖವನ್ನುಂಟು ಮಾಡುವವನೂ, ಮೋಸಗಾರನೂ, ಉಗ್ರಸ್ವಭಾವಿಯೂ, ಅಂಜುಬುರುಕನೂ ಆಗುವನು.

ರವಿ, ಚಂದ್ರ ಬುಧ, ಶುಕ್ರ ಶನಿ ಇವರು ಕೂಡಿದ್ದರೆ- ಧನಹೀನನೂ, ಪುತ್ರಹೀನನೂ, ದುಃಖಿಯೂ, ಮರಣಕ್ಕೆ ಹೆದರುವವನೂ, ಅಧಿಕ ಕೂದಲುಗಳುಳ್ಳವನೂ ಆಗುವನು.

ರವಿ, ಚಂದ್ರ, ಗುರು, ಶುಕ್ರ, ಶನಿ ಇವರು ಕೂಡಿದ್ದರೆ— ಇಂದ್ರಜಾಲ ವಿದ್ಯೆಯನ್ನು ಬಲ್ಲವನೂ, ಉತ್ತಮ ಭಾಷಣಕಾರನೂ, ಯುಕ್ತಿಯಿಂದ ಮಾತಾಡುವವನೂ, ಸ್ತ್ರೀಯರೊಡನೆ ಸ್ನೇಹವುಳ್ಳವನೂ, ಶತ್ರುಗಳಿಗೆ ವಿಶೇಷವಾಗಿ ಅಂಜುವವನೂ ಆಗುವನು.

ರವಿ, ಮಂಗಳ, ಬುಧ, ಗುರು, ಶುಕ್ರರು ಕೂಡಿದ್ದರೆ— ಸಮೃದ್ಧಿಯುಳ್ಳವನೂ, ಕುದುರೆ ಮೊದಲಾದ ನಾನಾತರದ ವಾಹನವುಳ್ಳವನೂ, ಕಾಮುಕನೂ, ಶೋಕರಹಿತನೂ, ಸೇನಾಪತಿಯೂ, ರಾಜರಿಗೆ ಪ್ರಿಯನೂ ಆಗುವನು.

ರವಿ. ಮಂಗಳ, ಬುಧ, ಗುರು, ಶನಿ ಇವರು ಕೂಡಿದ್ದರೆ- ಭಿಕ್ಷಾನ್ನವನ್ನು ಭುಜಿಸುವವನೂ, ರೋಗಿಯೂ, ನಿತ್ಯ ಉದ್ವೇಗಿಯೂ, ಮಲಿನನೂ, ಜೀರ್ಣ ಮನುಷ್ಯನೂ ಆಗುವನು.

ರವಿ, ಮಂಗಳ, ಬುಧ, ಶುಕ್ರ, ಶನಿ, ಇವರು ಕೂಡಿದ್ದರೆ- ರೋಗ ಪೀಡಿತನೂ, ಶತೃಗಳ ಪೀಡೆಗೊಳಗಾಗುವವನೂ, ಸ್ಥಾನಭ್ರಷ್ಟನೂ, ಹಸಿವೆಯಿಂದ ಬಳಲುವವನೂ, ವಿಕಲನೂ, ಆಗುವನು.

ರವಿ, ಮಂಗಳ, ಗುರು, ಶುಕ್ರ ಶನಿ ಇವರು ಕೂಡಿದರೆ- ಪಂಡಿತನೂ, ಧಾತುಗಳು, ಯಂತ್ರಗಳು, ರಾಸಾಯನಗಳನ್ನು ಬಲ್ಲವನೂ, ಪ್ರಸಿದ್ಧನೂ ಆಗುವನು.

ರವಿ,ಬುಧ,ಗುರು,ಶುಕ್ರ, ಶನಿ ಇವರು ಕೂಡಿದ್ದರೆ–ಮಿತ್ರರಿಗೆ ಪ್ರಿಯನೂ; ಶಾಸ್ತ್ರಗಳನ್ನು ಬಲ್ಲವನೂ, ಧರ್ಮಿಷ್ಠನೂ, ಗುರು ಜನರಿಗೆ ಸಲಹೆಗಾರನೂ, ದಯಾಳುವೂ ಆಗುವನು.

ಚಂದ್ರ, ಮಂಗಳ, ಬುಧ, ಗುರು, ಶುಕ್ರರು ಕೂಡಿದ್ದರೆ- ಸಾಧುವೂ, ಪಾಪಹೀನನೂ, ಧನವಂತನೂ, ವಿದ್ಯಾವಂತನೂ, ಸುಖಿಯೂ, ಬಹಳ ಜನ ಸ್ನೇಹಿತರುಳ್ಳವನೂ ಆಗುವನು.

ಚಂದ್ರ, ಮಂಗಳ, ಗುರು, ಶುಕ್ರ, ಶನಿ ಇವರು ಕೂಡಿದ್ದರೆ- ಅಡಿಗೆಯ ಕೆಲಸ ಮಾಡುವವದರಲ್ಲಿ ಜಾಣನೂ, ಬಡವನೂ, ಮಲಿನನೂ, ರೋಗಿಷ್ಠನೂ, ಆಗುವನು.

ಚಂದ್ರ, ಮಂಗಳ, ಬುಧ, ಶುಕ್ರ ಶನಿ ಇವರು ಕೂಡಿದ್ದರೆ- ಮಿತ್ರರ ಪಕ್ಷಪಾತಿಯೂ, ದುಷ್ಟಸ್ವಭಾವಿಯೂ, ಪರಪೀಡಕನೂ ಅಭಿಮಾನಿಯೂ ಆಗುವನು.

ಚಂದ್ರ, ಬುಧ, ಗುರು ಶುಕ್ರ, ಶನಿ ಇವರು ಕೂಡಿದ್ದರೆ- ಮಂತ್ರಿಯೂ, ರಾಜನಿಗೆ ಸಮಾನನೂ, ಲೋಕಪೂಜ್ಯನೂ, ಸಮಾಜದ ಮುಖಂಡನೂ ನಾಯಕನೂ, ಆಗುವನು.

ಮಂಗಳ, ಬುಧ, ಗುರು, ಶುಕ್ರ, ಶನಿ ಇವರು ಕೂಡಿದ್ದರೆ- ಶೋಕರಹಿತನೂ, ಕ್ರೋಧ ಸ್ವಭಾವಿಯೂ, ದರಿದ್ರನೂ, ಉನ್ಮಾದನೂ, ರಾಜರಿಗೆ ಪ್ರಿಯನೂ, ಬಹಳ ನಿದ್ರೆ ಮಾಡತಕ್ಕವನೂ ಆಗುವನು.

ಷಟ್ ಗ್ರಹಯೋಗ ಫಲ-(ಒಂದು ರಾಶಿಯಲ್ಲಿ ಆರುಗ್ರಹಗಳು ಕೂಡಿದ ಫಲ) ಯಾವದೇ ಒಂದು ರಾಶಿಯಲ್ಲಿ ರವಿ, ಚಂದ್ರ, ಮಂಗಳ, ಬುಧ, ಗುರು, ಶುಕ್ರ ಈ ಆರು ಗ್ರಹಗಳು ಕೂಡಿದ್ದರೆ- ವಿದ್ಯಾ, ಧರ್ಮ, ಧನ ಇವುಗಳಿಂದ ಕೂಡಿದವನೂ, ಬಹಳ ಮಾತನಾಡುವವನೂ ಹಾಗೂ ಭಾಗ್ಯವಂತನೂ ಆಗುವನು

ರವಿ, ಚಂದ್ರ, ಮಂಗಳ, ಬುಧ, ಗುರು, ಶನಿ ಈ ಆರು ಗ್ರಹಗಳು ಕೂಡಿದ್ದರೆ- ಪರರ ಕೆಲಸಗಳನ್ನು ಮಾಡುವದರಲ್ಲಿ ಪ್ರೀತಿಯುಳ್ಳವನೂ, ದಾಸಿಯೂ, ಶುದ್ಧ ಆತ್ಮವುಳ್ಳವನೂ, ಚಂಚಲವಾದ ಆಕೃತಿಯುಳ್ಳವನೂ ಆಗುವನು.

ರವಿ, ಚಂದ್ರ, ಮಂಗಳ, ಬುಧ, ಶುಕ್ರ, ಶನಿ ಇವರು ಕೂಡಿದ್ದರೆ- ಸಂಶಯಸ್ವಭಾವಿಯೂ, ಸುಂದರನೂ, ಐಶ್ವರ್ಯವಂತನೂ, ಮಾನವಂತನೂ,

ವಿಖ್ಯಾತನೂ ಯುದ್ಧದಲ್ಲಿ ಶತ್ರುಗಳನ್ನು ನಷ್ಟಮಾಡುವವನೂ, ವನ, ಅರಣ್ಯಗಳಲ್ಲಿ ಸಂಚರಿಸುವವನೂ ಆಗುವನು.

ರವಿ, ಚಂದ್ರ, ಮಂಗಳ, ಗುರು, ಶುಕ್ರ, ಶನಿ ಇವರು ಕೂಡಿದ್ದರೆ- ಧನಲೋಭಿಯೂ, ಯುದ್ಧದಲ್ಲಿ ಉತ್ಸಾಹವುಳ್ಳವನೂ ಚಾಡಿಖೋರನೂ, ಕೋಪಿಷ್ಠನೂ ಸುಂದರನೂ, ಐಶ್ವರ್ಯಶಾಲಿಯೂ ಆಗುವನು.

ರವಿ, ಚಂದ್ರ, ಬುಧ ಗುರು, ಶುಕ್ರ, ಶನಿ ಇವರು ಕೂಡಿದ್ದರೆ- ಪತ್ನಿಹೀನನೂ, ದ್ರವ್ಯಹೀನನೂ, ಮಂತ್ರಿಯೂ ಕ್ಷಮಾಗುಣದವನೂ ಆಗುವನು.

ರವಿ ಮಂಗಳ, ಬುಧ, ಗುರು, ಶುಕ್ರ, ಶನಿ ಇವರು ಕೂಡಿದ್ದರೆ-ನಿರ್ಧನನೂ. ಪತ್ನಿ; ಪುತ್ರಹೀನನೂ, ತೀರ್ಥಕ್ಷೇತ್ರಗಳಿಗೆ ತಿರುಗುವವನೂ, ಅರಣ್ಯಗಳಲ್ಲಿ ಇರುವವನೂ ಆಗುವನು,

ಚಂದ್ರ, ಮಂಗಳ, ಬುಧ, ಗುರು, ಶುಕ್ರ, ಶನಿ ಇವರು ಕೂಡಿದ್ದರೆ- ಧನವಂತನೂ ಪುತ್ರ, ಪೌತ್ರರುಳ್ಳವನೂ, ಪವಿತ್ರನೂ ಸದಾಚಾರಿಯೂ ಮಂತ್ರಿಯೂ, ಬಹುಜನ ಪತ್ನಿಯರುಳ್ಳವನೂ, ರಾಜನ ಪ್ರೀತಿ ಸಂಪಾದಿಸುವವನೂ, ಪ್ರತಾಪಿಯೂ, ಆಗುವನು.

ಐದು ಅಥವಾ ಆರುಗ್ರಹಗಳು ಒಂದು ರಾಶಿಯಲ್ಲಿದ್ದರೆ- ಬಹುತರವಾಗಿ ಆಜಾತಕನು ದರಿದ್ರನೂ ಮೂರ್ಖನೂ, ಆಗುವನು. ಗ್ರಹಗಳು ಪರಸ್ಪರ ದೃಷ್ಟಿ ಸಂಬಂಧವಾಗುವದರಿಂದ ಈ ಫಲ ವುಂಟಾಗುವದು.

ಜನನ ನಕ್ಷತ್ರ ದೋಷವು ಹಾಗೂ ಶಾಂತಿ ವಿಚಾರವು

ಅಶ್ವಿನಿ— ಈ ನಕ್ಷತ್ರದ ೧ ನೆಯ ಚರಣ (ಪಾದ)ದಲ್ಲಿ ಕೂಸು ಹುಟ್ಟಿದರೆ ತಂದೆಗೆ ಅರಿಷ್ಟವು. ೨ನೆಯ ಚರಣದಲ್ಲಿ ತಾಯಿಗೆ ಪೀಡೆಯು. ೩ನೆಯ ಚರಣದಲ್ಲಿ ಧನ ಹಾನಿಯು. ೪ನೆಯ ಚರಣದಲ್ಲಿ ಶುಭವು ಈ ನಕ್ಷತ್ರದೋಷವು ೩ ತಿಂಗಳ ವರೆಗೆ ಇರುವದರಿಂದ ಒಂದು ವಸ್ತ್ರದಲ್ಲಿ ನವಧಾನ್ಯಗಳನ್ನೂ, ಬಂಗಾರದ ಚೂರನ್ನೂ ಹಾಕಿ ಗಂಟು ಕಟ್ಟಿ ಅದನ್ನು ಅಷ್ಟ ವಿಧಾರ್ಚನೆಯಿಂದ ಪೂಜಿಸಿ

ದಕ್ಷಿಣೆ ಸಹಿತ ಪೂಜ್ಯರಿಗೆ ದಾನ ಕೊಟ್ಟರೆ ದೋಷ ಪರಿಹಾರವು. ರೇವತಿ ನಕ್ಷತ್ರದ ಕೊನೆಯ ೨ ಗಳಿಗೆ ಅಶ್ವಿನಿ ನಕ್ಷತ್ರದ ಆರಂಭದ ೨ ಗಳಿಗೆ ಈ ಸಂಧಿ ಕಾಲದ ೪ ಗಳಿಗೆಗಳಲ್ಲಿ ಶಿಶು ಜನಿಸಿದರೂ ತಂದೆಗೆ ಪೀಡಾಕರವು ಈ ದೋಷ ನಿವಾರಣೆಗೂ ಮೇಲಿನಂತೆ ದಾನ ಕೊಡಬೇಕು.

ಭರಣಿ— ಈ ನಕ್ಷತ್ರದಲ್ಲಿ ಜನನವಾದರೆ ಶುಭಪ್ರದವು.
ಕೃತ್ತಿಕ— ಈ ನಕ್ಷತ್ರವು ಜನನಕ್ಕೆ ಶುಭಕರವು.

ರೋಹಿಣಿ— ಈ ನಕ್ಷತ್ರದ ೧ನೆಯ ಚರಣದಲ್ಲಿ ಶಿಶು ಜನಿಸಿದರೆ ಸೋದರಮಾವ (ತಾಯಿಯ ತಮ್ಮ ಅಥವಾ ಅಣ್ಣ)ನಿಗೆ ಅನಿಷ್ಟವು. ಈ ದೋಷಕ್ಕಾಗಿ ಬೆಳ್ಳಿ ಅಥವಾ ಬೆಳ್ಳಿಯ ಪಾತ್ರೆಯನ್ನು ದಾನ ಮಾಡಬೇಕು. ಇನ್ನುಳಿದ ೨-೩-೪ ನೆಯ ಚರಣಗಳು ಶುಭವು.

ಮೃಗಶಿರ— ಈ ನಕ್ಷತ್ರದ ಎಲ್ಲ ಚರಣಗಳು ಶುಭವು.
ಆರಿದ್ರ– ಈ ನಕ್ಷತ್ರವು ಶುಭಪ್ರದವು.
ಪುನರ್ವಸು— ಈ ನಕ್ಷತ್ರವು ಶುಭಕರ.

ಪುಷ್ಯ— ಈ ನಕ್ಷತ್ರದ ೧ನೆಯ ಚರಣದಲ್ಲಿ ಶಿಶು ಹುಟ್ಟಿದರೆ ಸೋದರ ಮಾವನಿಗೆ ಪೀಡೆಯು ೨-೩ನೆಯ ಚರಣಗಳಲ್ಲಿ ಹೆಣ್ಣು ಕೂಸು ಹುಟ್ಟಿದರೆ ತಾಯಿಗೂ, ಗಂಡುಕೂಸು ಹುಟ್ಟಿದರೆ ತಂದೆಗೂ ಅರಿಷ್ಟವು (ಹಗಲು ಗಂಡು ಹುಟ್ಟಿದರೆ ತಂದೆಗೆ ರಾತ್ರಿ ಹೆಣ್ಣು ಹುಟ್ಟಿದರೆ ತಾಯಿಗೆ ಗಂಡಾಂತರವು) ಈ ದೋಷವು ೩ ತಿಂಗಳ ವರೆಗೆ ಇರುವದರಿಂದ ಗಂಧದ ಕಟ್ಟಿಗೆ ಹಾಗೂ ಕರು ಸಹಿತ ಆಕಳು ದಾನ ಮಾಡಿದರೆ ಶಾಂತಿಯುಂಟಾಗುವದು. ಪುಷ್ಯ ನಕ್ಷತ್ರದಲ್ಲಿ ಹುಟ್ಟಿದರೆ ಮತ್ತು ಜನನ ಲಗ್ನವು ಕರ್ಕವಾದರೆ ಪಿತ್ರಾರಿಷ್ಟವು.

ಆಶ್ಲೇಷ— ಈ ನಕ್ಷತ್ರದ ೧ನೆಯ ಚರಣದಲ್ಲಿ ಹುಟ್ಟಿದರೆ ಶುಭ ಫಲವು. ೨ನೆಯ ಚರಣದಲ್ಲಿ ಧನ ಹಾನಿಯು. ೩ನೆಯ ಚರಣದಲ್ಲಿ ತಾಯಿಗೆ ಪೀಡೆಯು. ೪ನೆಯ ಚರಣದಲ್ಲಿ ತಂದೆಗೆ ಅರಿಷ್ಟವು ಈ ನಕ್ಷತ್ರದೋಷವು ೯ ತಿಂಗಳ ವರೆಗೆ ಇರುವದು. ಈ ದೋಷ ಶಾಂತಿಗೆ ಕುರಿಯನ್ನು ದಾನ ಮಾಡಬೇಕು. ಆಶ್ಲೇಷ ನಕ್ಷತ್ರದ ಕೊನೆಯ ೨ ಗಳಿಗೆ ಮಘನಕ್ಷತ್ರದ

ಆರಂಭದ ೨ ಗಳಿಗೆ ಈ ವೇಳೆಯಲ್ಲಿ ಜನನವಾದರೆ ಮಹಾದೋಷವು. ಈ ದೋಷ ನಿವಾರಣೆಗೆ ಗೋಮುಖ ಪ್ರಸವ, ನವಗ್ರಹ ಶಾಂತಿ, ರುದ್ರಾಭಿಷೇಕ ಮಾಡಿಸಬೇಕು.

ಆಶ್ಲೇಷ ನಕ್ಷತ್ರ ದೋಷ ವಿಚಾರ (ಗ್ರಂಥಾಂತರದಲ್ಲಿ)

ಈ ನಕ್ಷತ್ರದಲ್ಲಿ ಜನನವಾದ ಶಿಶುವು ೧ನೆಯ ವರ್ಷದಲ್ಲಿ ತಂದೆಯನ್ನು ೨ನೆಯ ವರ್ಷದಲ್ಲಿ ಧನವನ್ನು ೩ನೆಯ ವರ್ಷದಲ್ಲಿ ತಾಯಿಯನ್ನು ೫ನೆಯ ವರ್ಷದಲ್ಲಿ ಅಣ್ಣ ತಮ್ಮಂದಿರನ್ನು ೭ನೆಯ ವರ್ಷದಲ್ಲಿ ಉಳಿದ ಭಾಂಧವರನ್ನು, ೮ನೆಯ ವರ್ಷದಲ್ಲಿ ಅತ್ತೆ, ಮಾವಂದಿರನ್ನು, ೯ನೆಯ ವರ್ಷದಲ್ಲಿ ಮಾವನನ್ನು ನಾಶಮಾಡುವದರಿಂದ ಶಾಂತಿಯನ್ನು ಅವಶ್ಯವಾಗಿ ಮಾಡಿಸಬೇಕು.

ಆಶ್ಲೇಷ ನಕ್ಷತ್ರವನ್ನು ವೃಕ್ಷ ಅಥವಾ ಬಳ್ಳಿಯ ರೂಪದಲ್ಲಿ ಬರೆದು ಅದರ ಗಳಿಗೆಗಳನ್ನು ಕೆಳಗಿನಂತೆ ಬರೆದು ಜನನ ಕಾಲದ ಗಳಿಗೆಗಳು ಯಾವ ಸ್ಥಾನದಲ್ಲಿ ಬರುತ್ತವೆಯೋ ಆ ಪ್ರಕಾರ ಫಲವನ್ನು ತಿಳಿದುಕೊಳ್ಳಬೇಕು.

ಆಶ್ಲೇಷನಕ್ಷತ್ರದ ಒಟ್ಟುಗಳಿಗೆಗಳನ್ನು ೭ ಭಾಗ ಮಾಡಿ ಮುಂದೆ ವಿವರಿಸಿದ ಪ್ರಕಾರ ಫಲವನ್ನು ತಿಳಿಯಬೇಕು. ಆಶ್ಲೇಷನಕ್ಷತ್ರದ ಮೊದಲಿನ ೧೦ ಗಳಿಗೆ ಹಣ್ಣುಗಳಲ್ಲಿ ಮುಂದೆ ೫ ಗಳಿಗೆ ಹೂಗಳಲ್ಲಿ ಮುಂದೆ ೯ ಗಳಿಗೆ ಎಲೆಗಳಲ್ಲಿ ಮುಂದೆ ೭ ಗಳಿಗೆ ಟೊಂಗೆಗಳಲ್ಲಿ ಮುಂದೆ ೧೩ ಗಳಿಗೆ ತೊಗಟೆಗಳಲ್ಲಿ, ಮುಂದೆ ೧೨ ಗಳಿಗೆ ಬೊಡ್ಡೆಯಲ್ಲಿ ಮುಂದೆ ೪ ಗಳಿಗೆ ಬೇರು (ಮೂಲ) ಗಳಲ್ಲಿ ಈ ಪ್ರಕಾರ ನಕ್ಷತ್ರದ ಒಟ್ಟು ಗಳಿಗೆಗಳನ್ನು ಕಲ್ಪಿಸಿ ಜನನ ಕಾಲದ ಗಳಿಗೆ ಫಳಿಗಳು ಯಾವ ಸ್ಥಾನದಲ್ಲಿ ಬರುತ್ತವೆಯೋ ಅದರ ಮೇಲಿಂದ ಶುಭಾಶುಭ ಫಲಗಳನ್ನು ತಿಳಿದುಕೊಳ್ಳಬೇಕು.

ಫಲಗಳು— ಹಣ್ಣುಗಳಲ್ಲಿ ಬಂದರೆ ಧನ ಪ್ರಾಪ್ತಿಯು. ಹೂಗಳಲ್ಲಿ ಬಂದರೆ- ಧನಲಾಭವು. ಎಲೆಗಳಲ್ಲಿ ಬಂದರೆ- ರಾಜಭಯವು. (ಸರಕಾರದವರಿಂದ ಪೀಡೆಯು) ಟೊಂಗೆಗಳಲ್ಲಿ ಬಂದರೆ- ಹಾನಿಯು. ತೊಗಟೆಗಳಲ್ಲಿ ಬಂದರೆ- ತಾಯಿಗೆ ಪೀಡೆಯು. ಬೊಡ್ಡೆಯಲ್ಲಿ ಬಂದರೆ- ತಂದೆಗೆ ಪೀಡೆಯು. ಬೇರು (ಮೂಲ) ಗಳಲ್ಲಿ ಬಂದರೆ- ಅಲ್ಪಾಯುಷ್ಯವು.

— ಆಶ್ಲೇಷ ನಕ್ಷತ್ರ ವೃಕ್ಷ ಚಕ್ರ —

ಗಳಿಗೆಗಳು	ಗಳಿಗೆ	ಸ್ಥಾನದ ಹೆಸರು	ಫಲ
೧ ರಿಂದ ೧೦	೧೦	ಹಣ್ಣು	ಧನ ಪ್ರಾಪ್ತಿಯು
೧೧ ರಿಂದ ೧೫	೫	ಹೂವು	ಧನ ಲಾಭ
೧೬ ರಿಂದ ೨೪	೯	ಎಲೆಗಳು	ರಾಜ ಭಯ
೨೫ ರಿಂದ ೩೧	೭	ಟೊಂಗೆಗಳು	ಹಾನಿಯು
೩೨ ರಿಂದ ೪೪	೧೩	ತೊಗಟೆ	ಮಾತೃ ಹಾನಿಯು
೪೫ ರಿಂದ ೫೬	೧೨	ಬೊಡ್ಡೆ	ಪಿತೃ ಹಾನಿಯು
೫೭ ರಿಂದ ೬೦	೪	ಬೇರು (ಮೂಲ)	ಅಲ್ಪಾಯುಷ್ಯವು

ಈಗ ಆಶ್ಲೇಷ ನಕ್ಷತ್ರವು ೬೦ ಗಳಿಗೆ ಇರುವದೆಂದು ಕಲ್ಪಿಸಿ ಬರೆಯಲಾಗಿದೆ. ಆದರೆ ನಕ್ಷತ್ರವು ೬೦ ಗಳಿಗೆಗಿಂತ ಹೆಚ್ಚು ಕಡಿಮೆ ಇದ್ದರೆ ಆ ಪ್ರಕಾರ ಹೆಚ್ಚು ಕಡಿಮೆ ಮಾಡಿ ಆಯಾ ಭಾಗಗಳ ಫಲವನ್ನು ನಿಶ್ಚಯಿಸಿ ಕೊಳ್ಳಬೇಕು.

ಆಶ್ಲೇಷ ನಕ್ಷತ್ರ ೨ ನೆಯ ಚರಣದಲ್ಲಿ ಜನಿಸಿದ ಕನ್ಯೆಯು ಸೋದರ ಮಾವ ಅಥವಾ ಅತ್ತೆಯನ್ನು, ೩ನೆಯ ಚರಣದಲ್ಲಿ ಜನಿಸಿದವಳು ಗಂಡನ ಅಣ್ಣ (ಭಾವ) ನನ್ನೂ, ೪ ನೆಯ ಚರಣದಲ್ಲಿ ಜನಿಸಿದವಳು ಗಂಡನ ತಮ್ಮ (ಮೈದುನ) ನನ್ನೂ ನಾಶ ಪಡಿಸುವಳು.

ಇದೇ ಪ್ರಕಾರ ಆಶ್ಲೇಷ ನಕ್ಷತ್ರ ೨ ನೆಯ ಚರಣದಲ್ಲಿ ಗಂಡು ಕೂಸು ಜನನವಾದರೆ ತನ್ನ ಸೋದರಮಾವ ಅಥವಾ ಅತ್ತೆಯನ್ನೂ, ೩ ನೆಯ ಚರಣದಲ್ಲಿ ಜನನವಾದವನು ಹೆಂಡತಿಯ ಅಣ್ಣನನ್ನೂ, ೪ ನೆಯ ಚರಣದಲ್ಲಿ ಜನಿಸಿದವನು ಹೆಂಡತಿಯ ತಮ್ಮನನ್ನೂ ಕಷ್ಟಕ್ಕೀಡು ಮಾಡುವನು.

ಪುರುಷಾಕೃತಿಯ ಆಶ್ಲೇಷ ನಕ್ಷತ್ರ ಫಲ.

ಆಶ್ಲೇಷ ನಕ್ಷತ್ರವನ್ನು ಪುರುಷಾಕಾರವಾಗಿ ಕಲ್ಪಿಸಿ ಅದರ ಮೇಲಿನ ನಕ್ಷತ್ರದ ಗಳಿಗೆಯನ್ನು ೧೦ ಭಾಗವಾಡಿ ಮುಂದೆ ತಿಳಿಸಿದ ಪ್ರಕಾರ ಆಯಾ ಸ್ಥಳಗಳಲ್ಲಿ ಅಷ್ಟಷ್ಟು ಗಳಿಗೆಯನ್ನು ಸ್ಥಾಪಿಸಿ ಫಲವನ್ನು ತಿಳಿದುಕೊಳ್ಳಬೇಕು. ಹೇಗಂದರೆ

ಆರಂಭದ ೫ ಗಳಿಗೆ ಮಸ್ತಕದಲ್ಲಿ, ಮುಂದೆ ೭ ಗಳಿಗೆ ಮುಖದಲ್ಲಿ, ಮುಂದೆ ೨ ಗಳಿಗೆ ನೇತ್ರಗಳಲ್ಲಿ, ಮುಂದೆ ೩ ಗಳಿಗೆ ಕಂಠದಲ್ಲಿ, ಮುಂದೆ ೪ ಗಳಿಗೆ ಎರಡೂ ಭುಜಗಳಲ್ಲಿ; ಮುಂದೆ ೮ ಗಳಿಗೆ ಎರಡೂ ಬಾಹುಗಳಲ್ಲಿ ಮುಂದೆ ೧೧ ಗಳಿಗೆ ಹೃದಯದಲ್ಲಿ, ಮುಂದೆ ೬ ಗಳಿಗೆ ಎರಡೂ ಜಾನುಗಳಲ್ಲಿ ಮುಂದೆ ೯ ಗಳಿಗೆ ಗುಹ್ಯದಲ್ಲಿ ಮುಂದೆ ೫ ಗಳಿಗೆ ಪಾದದಲ್ಲಿ ಬರುತ್ತವೆ.

ಫಲವು- ಮಸ್ತಕದಲ್ಲಿ ಬಂದರೆ ರಾಜ್ಯ ಪ್ರಾಪ್ತಿಯು, ಮುಖದಲ್ಲಿ ಬಂದರೆ ತಂದೆಗೆ ಪೀಡೆಯು, ನೇತ್ರಗಳಲ್ಲಿ ಬಂದರೆ ತಾಯಿಗೆ ಅರಿಷ್ಟವು, ಕಂಠದಲ್ಲಿ ಬಂದರೆ ಪರಸ್ತ್ರೀ ವ್ಯಾಮೋಹವು, ಭುಜಗಳಲ್ಲಿ ಬಂದರೆ ಗುರು ಹಿರಿಯರಲ್ಲಿ ಭಕ್ತಿಯುಳ್ಳವನು, ಬಾಹುಗಳಲ್ಲಿ ಬಂದರೆ ಬಲಿಷ್ಠನು, ಹೃದಯದಲ್ಲಿ ಬಂದರೆ ಆತ್ಮಘಾತಕನು, ಎರಡೂ ಜಾನು (ಮೊಳಕಾಲು) ಗಳಲ್ಲಿ ಬಂದರೆ ಧರ್ಮಿಷ್ಠನು, ಗುಹ್ಯದಲ್ಲಿ ಬಂದರೆ ಸುಖಭೋಗಿಯು, ಎರಡೂ ಪಾದಗಳಲ್ಲಿ ಬಂದರೆ,ಧನವಂತನು. ಈ ಪ್ರಕಾರ ಫಲವನ್ನು ತಿಳಿಯಬೇಕು.

ಮಘೆ- ಈ ನಕ್ಷತ್ರದ ೧ ನೆಯ ಚರಣದಲ್ಲಿ ಶಿಶು ಜನನವಾದರೆ,ತಂದೆಗೆ ಅರಿಷ್ಟವು. ೨ ನೆಯ ಚರಣದಲ್ಲಿ ತಾಯಿಗೆ ಅರಿಷ್ಟವು, ೩ನೆಯ ಚರಣದಲ್ಲಿ ಧನ ಹಾನಿಯು. ೪ನೆಯ ಚರಣದಲ್ಲಿ ಜನನವಾದರೆ ಶುಭ ಆದರೂ ಶಾಂತಿಯನ್ನು ಮಾಡಿಸಬೇಕು. ಈ ನಕ್ಷತ್ರ ದೋಷವು ೩ ತಿಂಗಳ ವರೆಗೆ ಇರುವದು. ಅದಕ್ಕಾಗಿ ಕೂಸು ಜನನವಾದ ೨೧ ದಿವಸಗಳೊಳಗಾಗಿ ಕುದುರೆಯನ್ನು ದಾನ ಮಾಡಬೇಕು. ಅಥವಾ ವಸ್ತ್ರ, ನವಧಾನ್ಯಗಳು, ಬಂಗಾರ ದಾನಮಾಡಬೇಕು.

ಹುಬ್ಬ- ಈ ನಕ್ಷತ್ರದಲ್ಲಿ ಶಿಶು ಜನನವಾದರೆ ಶುಭಕರವು.

ಉತ್ತರೆ- ಈ ನಕ್ಷತ್ರದ ೧ ನೆಯ ಚರಣದಲ್ಲಿ ಗಂಡುಕೂಸು ಜನನವಾದರೆ ತಂದೆಗೂ, ಹೆಣ್ಣುಕೂಸು ಜನನಾದರೆ ಪತಾಯಿಗೂ ಅರಿಷ್ಟವು. ಮತ್ತು ೪ ನೆಯ ಚರಣದಲ್ಲಿಯ ಜನನವು ಸಹಿತ ಅಣ್ಣ ತಮ್ಮಂದಿರರಿಗೆ ಹಾಗೂ ತಂದೆಗೆ ಹಾನಿಕರವೆಂದು ಕೆಲವು ಗ್ರಂಥಗಳಲ್ಲಿ ಉಕ್ತವಾಗಿದೆ. ಈ ನಕ್ಷತ್ರದೋಷ ೨ ತಿಂಗಳ ವರೆಗೆ ಇರುವದು. ಅದಕ್ಕಾಗಿ ಒಂದು ತಾಮ್ರದ ಪಾತ್ರೆ (ತಂಬಿಗೆ)

ಯಲ್ಲಿ ಎಳ್ಳು ತುಂಬಿ ಅದನ್ನು ಪೂಜಿಸಿ ನಾಮಕರಣ (ಹೆಸರಿಡುವ) ಮಾಡುವ ಮೊದಲು ಅಥವಾ ೯-೧೧-೧೩ ನೆಯ ದಿವಸಗಳಲ್ಲಿ ದಾನ ಮಾಡಬೇಕು.

ಹಸ್ತ— ಈ ನಕ್ಷತ್ರದಲ್ಲಿ ಕೂಸು ಜನನವಾದರೆ ಉತ್ತಮವು.

ಚಿತ್ತ— ಈ ನಕ್ಷತ್ರದ ೧-೨ ನೆಯ ಚರಣಗಳಲ್ಲಿ ಗಂಡು ಕೂಸು ಜನನವಾದರೆ ತಂದೆಗೂ ಹೆಣ್ಣು ಕೂಸು ಜನನವಾದರೆ ತಾಯಿಗೂ ಪೀಡೆಯು. ಈ ಪೀಡೆಯು ೬ ತಿಂಗಳವರೆಗೆ ಇರುವದು. ಇದಕ್ಕೆ ಕುರಿ ಅಥವಾ ಕಂಬಳಿ ದಾನವನ್ನು ಮಾಡಬೇಕು. ಮತ್ತು ೫ ಜನ ಮಾಹೇಶ್ವರರಿಗೆ ಭೋಜನ ದಕ್ಷಿಣೆ, ವಸ್ತ್ರದಾನಗಳಿಂದ ೧ ತಿಂಗಳೊಳಗಾಗಿ ತೃಪ್ತಿಪಡಿಸಬೇಕು. ಈ ನಕ್ಷತ್ರದ ೪ ನೆಯ ಚರಣವು ಸಹ ಹೆಚ್ಚು ದೋಷಯುಕ್ತವಾದದ್ದೆಂದು ಗ್ರಂಥಾಂತರದಲ್ಲಿ ಉಂಟು

ಸ್ವಾತಿ— ಈ ನಕ್ಷತ್ರದಲ್ಲಿ ಶಿಶು ಜನನವಾದರೆ ಶುಭಪ್ರದವು.

ವಿಶಾಖ— ಈ ನಕ್ಷತ್ರದ ೪ ನೆಯ ಚರಣದಲ್ಲಿ ಹೆಣ್ಣು ಕೂಸು ಜನನವಾದರೆ ಮೈದುನ (ಗಂಡನ ತಮ್ಮ) ನಿಗೂ ಗಂಡು ಕೂಸು ಜನನವಾದರೆ ಹೆಂಡತಿಯ ತಮ್ಮನಿಗೂ ಅರಿಷ್ಟವು. ಈ ಜನನವು ವಿಷಯೋಗವಾಗುವದರಿಂದ ಈ ದೋಷವು ದೀಕ್ಷೆ ಅಥವಾ ಉಪನಯನದ ನಂತರ ಉಂಟಾಗುವದಿಲ್ಲವಾದ್ದರಿಂದ ವಿವಾಹವಾಗುವ ಮೊದಲು ದೀಕ್ಷಾಸಂಸ್ಕಾರ ಮಾಡಿಸುವದುತ್ತಮವು.

ಅನುರಾಧ— ಈ ನಕ್ಷತ್ರದೊಳು ಶಿಶು ಜನನವಾದರೆ ಶುಭವು.

ಜ್ಯೇಷ್ಠ— ಈ ನಕ್ಷತ್ರದ ೧ ನೆಯ ಚರಣದಲ್ಲಿ ಕೂಸು ಜನನವಾದರೆ-ಕೂಸಿನ ತಾಯಿಯ ತಾಯಿ (ಅಜ್ಜಿ) ಗೆ ಪೀಡೆಯು. ೨ ನೆಯ ಚರಣದಲ್ಲಿ ಕೂಸು ಜನಿಸಿದರೆ ಕೂಸಿನ ತಾಯಿಯ ತಂದೆ (ಅಜ್ಜನಿಗೆ) ಅರಿಷ್ಟವು ಧನಹಾನಿಯು. ೩ ನೆಯ ಚರಣದಲ್ಲಿ ಜನಿಸಿದರೆ ತಾಯಿಗೆ ಹಾಗೂ ತಾಯಿಯ ತಂಗಿ (ಚಿಕ್ಕವ್ವ) ಗೆ ಅರಿಷ್ಟವು. ೪ ನೆಯ ಚರಣದಲ್ಲಿ ಜನಿಸಿದರೆ ಕೂಸಿನ ತಂದೆಗೆ ಹಾಗೂ ತಾಯಿಗೆ ಪೀಡಾಕಾರವು. ಹಾಗೂ ಈ ನಕ್ಷತ್ರದ ೧ ನೆಯ ಚರಣದಲ್ಲಿ ಜನನವಾದ ಶಿಶುವಿನಿಂದ ಅಣ್ಣನಿಗೂ ೨ ನೆಯ ಚರಣದಲ್ಲಿ ಜನಿಸಿದವನಿಂದ ತಮ್ಮನಿಗೂ ೩ ನೆಯ ಚರಣದಲ್ಲಿ ಜನಿಸಿದವನಿಂದ ತಾಯಿಗೂ, ೪ ನೆಯ ಚರಣದಲ್ಲಿ ಜನಿಸಿದವನಿಂದ ಸ್ವತಃ ಕೂಸಿಗೂ ಅರಿಷ್ಟವು, ಕಷ್ಟವು ಎಂಬುದಾಗಿ ಗ್ರಂಥಾಂತರದಲ್ಲಿ ಅದೆ.

ಜ್ಯೇಷ್ಠ ನಕ್ಷತ್ರದ ಭಾಗ ಫಲ- ಜ್ಯೇಷ್ಠ ನಕ್ಷತ್ರದ ಆದ್ಯಂತ ಕಾಲವನ್ನು ಮಾಡಿ ಆ ಒಟ್ಟು ಗಳಿಗೆಗಳನ್ನು ೧೦ ಭಾಗ ಮಾಡಬೇಕು ಆ ಮೇಲೆ ಮುಂದೆ ಬರೆದ ಪ್ರಕಾರ ಆಯಾ ಭಾಗಗಳ ಫಲವನ್ನು ತಿಳಿಯಬೇಕು. ೧ನೆಯ ಭಾಗದ ಗಳಿಗೆ ಫಳಗಳಲ್ಲಿ ಕೂಸು ಜನನವಾದರೆ ತಾಯಿಯ ತಾಯಿಗೆ (ಮಾತಾಮಹ) ಅರಿಷ್ಟವು ೨ನೆಯ ಭಾಗದ ಗಳಿಗೆ ಫಳಗಳಲ್ಲಿ ಜನನವಾದರೆ ತಂದೆಯ ತಂದೆಗೆ (ಪಿತಾಮಹ) ಅರಿಷ್ಟ. ೩ ನೆಯ ಭಾಗದಲ್ಲಿ ಜನಿಸಿದರೆ ತಾಯಿಯ ತಂದೆಗೆ ಪೀಡಾಕರವು. ೪ ನೆಯ ಭಾಗದೊಳು ಜನನವಾದರೆ. ಕೂಸಿನ ಅಣ್ಣ ತಮ್ಮಂದಿರರಿಗೆ ಪೀಡೆಯು. ೫ ನೆಯ ಭಾಗದೊಳು ಜನನ ಹೊಂದಿದರೆ ಸ್ವತಃ ಕೂಸಿಗೆ ಪೀಡೆಯು. ೬ ನೆಯ ಭಾಗದಲ್ಲಿ ಜನನವಾದರೆ ಶುಭವು. ಯಾರಿಗೂ ದೋಷವಿಲ್ಲ. ೭ ನೆಯ ಭಾಗದೊಳು ಜನಿಸಿದರೆ ಕೂಸಿಗೆ ಮುಂದೆ ಲಗ್ನವಾಗತಕ್ಕ ಹೆಂಡತಿಗೆ ಹಾಗೂ ಹೆಂಡತಿಯ ತಂದೆಗೆ ಅಕ್ಕ, ತಂಗಿ ಅಣ್ಣ, ತಮ್ಮಂದಿರರಿಗೆ ಅರಿಷ್ಟವು. ೮ ನೆಯ ಭಾಗದಲ್ಲಿ ಜನನವಾದರೆ ಕೂಸಿಗೆ ಪೀಡಾಕರವು. ೯ ನೆಯ ಭಾಗದಲ್ಲಿ ಜನನವಾದರೆ ಕೂಸಿನ ತಂದೆಗೆ ದೋಷವು ಅರಿಷ್ಟವು. ೧೦ ನೆಯ ಭಾಗದೊಳು ಜನನ ಹೊಂದಿದರೆ ಕೂಸಿನ ತಾಯಿಗೆ ಅರಿಷ್ಟವು.

ಈ ನಕ್ಷತ್ರದ ಕೊನೆಯ ೨ ಗಳಿಗೆಗಳು ಮೂಲ ನಕ್ಷತ್ರದ ಆರಂಭದ ೨ ಗಳಿಗೆಗಳು ಅಭುಕ್ತ ಮೂಲವು. ಈ ವೇಳೆಯಲ್ಲಿ ಜನನವಾದ ಕೂಸಿನ ಮುಖವನ್ನು ತಂದೆಯು ೮ ವರ್ಷಗಳ ವರೆಗೆ ನೋಡಕೂಡದು. ಶಾಂತಿ ಮಾಡಿಸಿ ನೋಡಿದರೆ ಅಡ್ಡಿ ಇಲ್ಲ. ಈ ದೋಷ ಶಾಂತಿಗಾಗಿ ಗೋಮುಖ ಪ್ರಸವ, ನವಗ್ರಹ ಶಾಂತಿಮಾಡಿಸಿದರೆ ದೋಷ ಪರಿಹಾರವು.

— ಮೂಲ ನಕ್ಷತ್ರ ವಿಶೇಷ ಫಲವಿಚಾರ —

ಮೂಲಾ ನಕ್ಷತ್ರದಲ್ಲಿ ಜನಿಸಿದವನು ಕೆಲವು ವಿಶೇಷ ಫಲಗಳನ್ನು ಅನುಭವಿಸತಕ್ಕವನಾಗುವನೆಂದು ಮಹರ್ಷಿಗಳಿಂದ ಉಕ್ತವಾಗಿದೆ. ಅವನು ತನ್ನ ವಂಶವನ್ನು ನಾಶಮಾಡುತ್ತಾನೆ. ಅಥವಾ ಆ ವಂಶದಲ್ಲಿ ಸೌಭಾಗ್ಯವೃದ್ಧಿಯನ್ನು ಉಂಟುಮಾಡುತ್ತಾನೆ. ಇವೆರಡೂ ಆಗದಿದ್ದರೆ ಹುಟ್ಟಿದವನು ತೀವ್ರ ಸಾಯುತ್ತಾನೆ.

— ಅಭುಕ್ತ ಮೂಲಾ ವಿಚಾರ —

ಜ್ಯೇಷ್ಠ ನಕ್ಷತ್ರದಲ್ಲಿ ಅಂತ್ಯ ೨ ಗಳಿಗೆ ಮೂಲಾನಕ್ಷತ್ರದಲ್ಲಿ ಆದಿ ೨ಗಳಿಗೆ ಕಾಲ ಅಭುಕ್ತ ಮೂಲವು. ಆ ಕಾಲದಲ್ಲಿ ಹುಟ್ಟಿದ ಶಿಶುವಿನ ಮುಖವನ್ನು ತಂದೆಯು ೮ ವರ್ಷಗಳ ವರೆಗೆ ನೋಡಬಾರದು. ಶಾಂತಿಯನ್ನು ಮಾಡಿಸಿ ಮುಖವನ್ನು ನೋಡಬಹುದು.

ಶಾಂತಿಕರ್ಮವಿಧಿ— ಒಂದು ಮಣ್ಣಿನ ಕೊಡ (ಕುಂಭ) ದಲ್ಲಿ ೧೦೦ ತೂತು (ರಂಧ್ರ) ಗಳನ್ನು ಮಾಡಿ ಅದರಲ್ಲಿ ನೀರುತುಂಬಿ ಅದರಲ್ಲಿ ನವರತ್ನ ಗಳು, ಶತೌಷಧಿಗಳು (೧೦೦ ಔಷಧಿ ದ್ರವ್ಯಗಳು) ಸಪ್ತ ಮೃತ್ತಿಕೆಗಳು (ಏಳು ಸ್ಥಾನಗಳಲ್ಲಿಯ ಮಣ್ಣು) ಇವುಗಳನ್ನು ಹಾಕಿ ಆ ಕುಂಭಕ್ಕೆ ಶಾಂತಿವಿಧಿ ಯಿಂದ ಪೂಜಾಮಾಡಿ ಆ ಕೂಸು, ತಾಯಿ, ತಂದೆಗಳು ಕುಂಭದಲ್ಲಿಯ ಜಲದಿಂದ ಸ್ನಾನಮಾಡಬೇಕು. ನಂತರ ಸ್ವಸ್ತಿ ಪುಣ್ಯಾಹ ವಾಚನಗಳಿಂದ ಮಂಗಲಾಶೀರ್ವಾದ ಹೊಂದಬೇಕು. ಈ ವಿಷಯವಾಗಿ ಕ್ಷೇಮ ಉಂಟಾಗ ಬೇಕೆಂದು ಅಪೇಕ್ಷಿಸುವವರು ನಮ್ಮ "ಶಾಂತಿ ಪ್ರಯೋಗರತ್ನಂ" ಗ್ರಂಥ ವನ್ನು ತರಿಸಿ ನೋಡಬಹುದು. ಬೆಲೆ. ೧೦-೦೦.

— ಮೂಲಾ ನಕ್ಷತ್ರ ಪಾದ ಫಲ —

ಮೂಲಾ ನಕ್ಷತ್ರ ೧ನೆಯ ಪಾದದಲ್ಲಿ ಜನಿಸಿದರೆ ತಂದೆಗೆ ಅರಿಷ್ಟವು. ೨ನೆಯ ಪಾದದಲ್ಲಿ ಜನಿಸಿದರೆ ತಾಯಿಗೆ ಅರಿಷ್ಟವು. ೩ ನೆಯ ಪಾದದಲ್ಲಿ ಜನಿ ಸಿದರೆ ಧನ ಹಾನಿಯು. ೪ ನೆಯ ಪಾದದಲ್ಲಿ ಜನಿಸಿದರೆ ಶುಭಪ್ರದವು. ಆದರೂ ಶಾಂತಿ ಕರ್ಮವನ್ನಾಚರಿಸಬೇಕು.

— ಮೂಲಾ ನಕ್ಷತ್ರ ವೇಲಾ ಫಲ. —

ಯಾವದೇ ಮಾಸದ ಕೃಷ್ಣ ಪಕ್ಷದ ತೃತಿಯಾ ತಿಥಿ, ಮಂಗಳವಾರ ಮೂಲ ನಕ್ಷತ್ರ ಹೀಗೆ ಕೂಡಿದಾಗ ಜನನವಾದರೆ ೧ ಯೋಗವು ಕೃಷ್ಣ ಪಕ್ಷದ ಪಂಚಮಿ ತಿಥಿ. ಶನಿವಾರ ಮೂಲಾ ನಕ್ಷತ್ರ ಹೀಗೆ ಕೂಡಿದಾಗ ಜನಿಸಿದರೆ ೨ ನೆಯ ಯೋಗವು. ಯಾವದೇ ಮಾಸದ ಶುಕ್ಲಪಕ್ಷದ ೧೪ ಬುಧವಾರ ಮೂಲ

ನಕ್ಷತ್ರ ಈ ಪ್ರಕಾರ ಕೂಡಿದಾಗ ಜನನವಾದರೆ ಖನೆಯು ಯೋಗವು. ಈ ಪ್ರಕಾರ ಈ ಮೂರೂ ಯೋಗಗಳಲ್ಲಿ ಜನಿಸಿದ ಬಾಲಕನು ತನ್ನ ವಂಶವನ್ನು ನಾಶ ಮಾಡುವನು. ಹಗಲಿನಲ್ಲಿ ಮೂಲಾ ನಕ್ಷತ್ರವಿದ್ದು ಆ ಕಾಲದಲ್ಲಿ ಹುಟ್ಟಿದ ಶಿಶುವಿನಿಂದ ತಂದೆಗೆ ಅರಿಷ್ಟವು. ಮೂಲಾ ನಕ್ಷತ್ರವಿದ್ದು ಸಾಯಂ ಕಾಲ ಜನನವಾದರೆ ಸೋದರ ಮಾವನಿಗೆ ಅನಿಷ್ಟವು. ರಾತ್ರಿ ಮೂಲಾ ನಕ್ಷತ್ರ ವಿದ್ದು ಆ ಕಾಲದಲ್ಲಿ ಹುಟ್ಟಿದರೆ ಮನೆಯಲ್ಲಿಯ ಪಶುಗಳಿಗೆ ಅರಿಷ್ಟವು. ಪ್ರಾತಃ ಕಾಲದಲ್ಲಿ ಮೂಲಾ ನಕ್ಷತ್ರವಿದ್ದು ಆ ಕಾಲದಲ್ಲಿ ಹುಟ್ಟಿದರೆ ಮಿತ್ರ ವರ್ಗಕ್ಕೆ ನಷ್ಟವು.

— ಪುರುಷಾಕೃತಿಯ ಮೂಲಾ ನಕ್ಷತ್ರ ಫಲ. —

ಮೂಲಾ ನಕ್ಷತ್ರವನ್ನು ಪುರುಷಾಕಾರವನ್ನಾಗಿ ಕಲ್ಪಿಸಿ ಅದರ ಮೇಲೆ ಆ ನಕ್ಷತ್ರದ ಒಟ್ಟು ಗಳಿಗೆಗಳನ್ನು ೧೦ ಭಾಗ ಮಾಡಿ ಕೆಳಗೆ ವಿವರಿಸಿದ ಪ್ರಕಾರ ಫಲ ತಿಳಿಯಬೇಕು. ಮೂಲಾ ನಕ್ಷತ್ರದ ಮೊದಲಿನ ೫ ಗಳಿಗೆ ಶಿರ ಸ್ಸಿನಲ್ಲಿ, ಮುಂದಿನ ೫ ಗಳಿಗೆ ಮುಖದಲ್ಲಿ, ಮುಂದೆ ೮ ಗಳಿಗೆ ಎರಡೂ ಭುಜ ಗಳಲ್ಲಿ, ಮುಂದೆ ೮ ಗಳಿಗೆ ಎರಡೂ ತೋಳುಗಳಲ್ಲಿ, ಮುಂದೆ ೨ ಗಳಿಗೆ ಎರಡೂ ಹಸ್ತಗಳಲ್ಲಿ, ಮುಂದೆ ೮ ಗಳಿಗೆ ಹೃದಯದಲ್ಲಿ ಮುಂದೆ ೨ ಗಳಿಗೆ ನಾಭಿಯಲ್ಲಿ, ಮುಂದೆ ೧೦ ಗಳಿಗೆ ಗುಹ್ಯದಲ್ಲಿ, ಮುಂದೆ ೬ ಗಳಿಗೆ ಎರಡೂ ತೊಡೆಗಳಲ್ಲಿ ಮುಂದೆ ೬ ಗಳಿಗೆ ಎರಡೂ ಪಾದಗಳಲ್ಲಿ ಈ ಪ್ರಕಾರ ನಕ್ಷತ್ರದ ಒಟ್ಟು ಗಳಿಗೆ ಗಳನ್ನು ಕಲ್ಪಿಸಿ ಜನನ ಕಾಲದ ಗಳಿಗೆ ಫಳಗಳು ಯಾವ ಸ್ಥಾನಗಳಲ್ಲಿ ಬರುತ್ತ ವೆಯೋ ಅದರ ಮೇಲಿಂದ ಫಲಗಳನ್ನು ತಿಳಿದುಕೊಳ್ಳಬೇಕು.

ಫಲಗಳು— ಶಿರಸ್ಸಿನಲ್ಲಿ ಬಂದರೆ ಛತ್ರ ಲಾಭ, ಮುಖದಲ್ಲಿ ಬಂದರೆ ಪಿತೃಘಾತಕ. ಭುಜಗಳಲ್ಲಿ ಬಂದರೆ ಪತ್ನಿಗೆ ಮರಣ. ತೋಳುಗಳಲ್ಲಿ ಬಂದರೆ ದುಷ್ಟ ಕಾರ್ಯಗಳು, ಹಸ್ತಗಳಲ್ಲಿ ಬಂದರೆ ಕೊಲ್ಲುವ ಸ್ವಭಾವವು. ಹೃದಯ ದಲ್ಲಿ ಬಂದರೆ ರಾಜ್ಯ ಪ್ರಾಪ್ತಿಯು. ನಾಭಿಯಲ್ಲಿ ಬಂದರೆ ಅಲ್ಪಾಯುಷ್ಯವು. ಗುಹ್ಯ ಸ್ಥಾನದಲ್ಲಿ ಬಂದರೆ ಅಧಿಕ ಸೌಖ್ಯವು. ತೊಡೆಗಳಲ್ಲಿ ಬಂದರೆ ಸಂಚಾ ರವು. ಪಾದಗಳಲ್ಲಿ ಬಂದರೆ ಅಲ್ಪಾಯುಷ್ಯವು.

— ಪುರುಷಾಕಾರ ಮೂಲಾ ನಕ್ಷತ್ರದ ಫಲ. —

ಗಳಿಗೆ	ಸ್ಥಾನ ಹೆಸರು	ಗಳಿಗೆಗಳು	ಫಲ
೫	ಶಿರಸ್ಸು	೧ ರಿಂದ ೫	ಛತ್ರಲಾಭವು (ರಾಜ್ಯಪ್ರಾಪ್ತಿ)
೫	ಮುಖ	೬ ರಿಂದ ೧೦	ಪಿತೃ ಘಾತಕನು
೮	೨ ಭುಜ	೧೧ ರಿಂದ ೧೮	ಪತ್ನಿಗೆ ಮರಣ
೮	೨ ಬಾಹು	೧೯ ರಿಂದ ೨೬	ದುಷ್ಟ ಕಾರ್ಯಗಳು
೨	೨ ಹಸ್ತ	೨೭ ರಿಂದ ೨೮	ಕೊಲ್ಲುವ ಸ್ವಭಾವವು
೮	ಹೃದಯ	೨೯ ರಿಂದ ೩೬	ರಾಜ್ಯ ಲಾಭ
೨	ನಾಭಿ	೩೭ ರಿಂದ ೩೮	ಅಲ್ಪಾಯುಷ್ಯವು
೧೦	ಗುಹ್ಯ	೩೯ ರಿಂದ ೪೮	ಅಧಿಕ ಸೌಖ್ಯವು
೬	೨ ತೊಡೆ	೪೯ ರಿಂದ ೫೪	ಸಂಚಾರವು.
೬	೨ ಪಾದ	೫೫ ರಿಂದ ೬೦	ಅಲ್ಪಾಯುಷ್ಯವು.

ಈಗ ೬೦ ಗಳಿಗೆಗೆ ಮಾತ್ರ ತೋರಿಸಿದೆ. ಮೂಲಾ ನಕ್ಷತ್ರವು ಒಮ್ಮೊಮ್ಮೆ ೫೫ ಗಳಿಗೆ ೩೦ ಫಳಗಳಿಂದ ೬೬ ಗಳಿಗೆ ೩೦ ಫಳಗಳ ವರೆಗೆ ಬರುವದರಿಂದ ಅವನ್ನು ೬೦ ಭಾಗ ಮಾಡಿ ಆ ಭಾಗಕ್ಕೆ ಎಷ್ಟು ಗಳಿಗೆ ಬರುತ್ತವೆಯೋ ಆ ಪ್ರಕಾರ ಆಯಾ ಭಾಗಗಳಿಗೆ ಹಂಚಿ ಹಾಕಿ ಫಲ ನಿಶ್ಚಯಿಸಬೇಕು.

— ಮೂಲಾ ನಕ್ಷತ್ರ ಮುಹೂರ್ತ ಫಲ —

ಮೂಲಾ ನಕ್ಷತ್ರವು ೬೦ ಗಳಿಗೆ ಇರುವದೆಂದು ಕಲ್ಪಿಸಿದರೆ ೨ ಗಳಿಗೆಗೆ ೧ ಮುಹೂರ್ತದ ಪ್ರಕಾರ ೩೦ ಮುಹೂರ್ತಗಳಾಗುವವು. ಈ ಮುಹೂರ್ತಗಳಿಗೆ ಪ್ರತ್ಯೇಕ ಅಧಿದೇವತೆಗಳಾಗುವರು. ೧ನೆಯು ಮುಹೂರ್ತರಾಕ್ಷಸ, ೨ನೆಯದು ದಾನವ; ೩ನೆಯದು ಚಂದ್ರ, ೪ನೆಯದು ಶುಕ್ರ, ೫ ನೆಯದು ಶೇಷ, ೬ ನೆಯದು ಪಿತೃ, ೭ ನೆಯದು ಮಾತೃ; ೮ ನೆಯದು ಯಮ, ೯ನೆಯದು ಕಾಲ. ೧೦ನೆಯದು ವಿಶ್ವೇದೇವ, ೧೧ ನೆಯದು ಮಹೇಶ್ವರ, ೧೨ ನೆಯದು ಶರ್ವ, ೧೩ ನೆಯದು ಕುಬೇರ; ೧೪ ನೆಯದು ಶುಕ್ರ ೧೫ ನೆಯದು ಮೇಘ, ೧೬ನೆಯದು ಸೂರ್ಯ, ೧೭ ನೆಯದು ಗಂಧರ್ವ, ೧೮ ನೆಯದು

ಯಮದೇವ, ೧೯ ನೆಯದು ಬ್ರಹ್ಮ. ೨೦ ನೆಯದು ವಿಷ್ಣು, ೨೧ ನೆಯದು ಯಮ. ೨೨ ನೆಯದು ಈಶ್ವರ. ೨೩ ನೆಯದು ಆಕಾಶ. ೨೪ ನೆಯದು ವಾಯು. ೨೫ ನೆಯದು ಋಷಿ. ೨೬ ನೆಯದು ಕಾರ್ತಿಕೇಯ. ೨೭ ನೆಯದು ಭೃಂಗಿರಿಟ ೨೮ ನೆಯದು ಗೌರಿ. ೨೯ ನೆಯದು ಸರಸ್ವತಿ ೩೦ ನೆಯದು ಪ್ರಜಾಪತಿ ಹೀಗೆ ೩೦ ಮುಹೂರ್ತಗಳಿಗೆ ಇರುವ ಅಧಿಪತಿಗಳು.

ಈ ಪ್ರಕಾರ ಇರುವ ೩೦ ಮುಹೂರ್ತಗಳಲ್ಲಿ ೧-೨-೬-೮-೯-೧೪-೨೩ ಈ ಮುಹೂರ್ತಗಳಲ್ಲಿ ಹುಟ್ಟಿದ ಶಿಶುವಿನಿಂದ ವಂಶಕ್ಷಯವಾಗುವದು.

— ಮೂಲಾ ನಕ್ಷತ್ರ ವೃಕ್ಷ ಫಲವು —

ಮೂಲಾ ನಕ್ಷತ್ರವನ್ನು ಒಂದು ಗಿಡವೆಂದು ಕಲ್ಪಿಸಿ ಅದರ ಆದ್ಯಂತ ಕಾಲಗಳಿಗೆಗಳನ್ನು ೮ಭಾಗ ಮಾಡಿ ಮುಂದೆ ತಿಳಿಸಿದ ಪ್ರಕಾರ ಆಯಾ ಸ್ಥಾನಗಳಲ್ಲಿ ಅಷ್ಟಷ್ಟುಗಳಿಗೆಗಳನ್ನು ಸ್ಥಾಪಿಸಿ ಆ ಫಲವನ್ನು ತಿಳಿಯಬೇಕು. ಅದು ಹೇಗಂದರೆ-ಆರಂಭದ ೪ ಗಳಿಗೆ ಮೂಲ (ಬೇರು) ದಲ್ಲಿ ಮುಂದೆ ೭ ಗಳಿಗೆ ಬೊಡ್ಡೆಯಲ್ಲಿ, ಮುಂದೆ ೧೦ ಗಳಿಗೆ ತೊಗಟೆಯಲ್ಲಿ, ಮುಂದೆ ೮ ಗಳಿಗೆ ಶಾಖಾ (ಟೊಂಗೆಗಳಲ್ಲಿ) ದಲ್ಲಿ, ಮುಂದೆ ೯ ಗಳಿಗೆ ಎಲೆಗಳಲ್ಲಿ, ಮುಂದೆ ೫ ಗಳಿಗೆ ಪುಷ್ಪ (ಹೂವು) ಗಳಲ್ಲಿ, ಮುಂದೆ ೬ ಗಳಿಗೆ ಹಣ್ಣುಗಳಲ್ಲಿ, ಆ ಮೇಲೆ ೧೧ ಗಳಿಗೆ ತುದಿಗಳಲ್ಲಿ ಈ ಪ್ರಕಾರ ಗಿಡದ ಸ್ಥಾನಗಳಲ್ಲಿ ಮೂಲಾ ನಕ್ಷತ್ರದ ಗಳಿಗೆಗಳು ಇರುತ್ತವೆ.

ಈಗ ಮೂಲಾ ನಕ್ಷತ್ರದ ಆದ್ಯಂತಕಾಲವು ೬೦ ಗಳಿಗೆ ಇರುವದೆಂದು ಕಲ್ಪಿಸಿ ಈ ವೃಕ್ಷದಲ್ಲಿ ತೋರಿಸಿದೆ. ಆದರೆ ನಕ್ಷತ್ರದ ಆದ್ಯಂತಕಾಲವು ಒಮ್ಮೊಮ್ಮೆ ೫೫ಗಳಿಗೆ ೩೦ಫಳದಿಂದ ೬೬ಗಳಿಗೆ ೩೦ಫಳಗಳ ವರೆಗೆ ಇರುವದರಿಂದ ಆದ್ಯಂತ ಕಾಲವನ್ನು ೬೦ ರಿಂದ ಭಾಗಿಸಿ ಒಂದೊಂದು ಭಾಗಕ್ಕೆ ಎಷ್ಟುಗಳಿಗೆ, ಫಳ ಬರುತ್ತವೆಯೋ ಅವನ್ನು ಲೆಖ್ಖಮಾಡಿ ಆಯಾ ಭಾಗಕ್ಕೆಗಳಿಗೆ ಫಳಕೂಡಿಸಿ ಹಾಕಿ ಫಲವನ್ನು ನಿಶ್ಚಯಿಸಬೇಕು.

ಫಲವಿವರ- ಕೂಸಿನ ಜನನಕಾಲದ ಗಳಿಗೆ ಫಳಗಳು ೧ ನೆಯ ಭಾಗ ವೃಕ್ಷದ ಬೇರಿನಲ್ಲಿ (ಮೂಲದಲ್ಲಿ) ಬಂದರೆ ಸರ್ವನಾಶವು. ೨ ನೆಯ ಭಾಗ ಗಿಡದ ಬೊಡ್ಡೆಯಲ್ಲಿ ಬಂದರೆ ದ್ರವ್ಯನಾಶವು, ಹಾನಿಯು ೩ ನೆಯ ಭಾಗ ತೊಗಟೆಯಲ್ಲಿ ಬಂದರೆ ಕೂಸಿನ ಅಣ್ಣ ತಮ್ಮಂದಿರರಿಗೆ ಪೀಡಾಕರವು. ೪ ನೆಯಭಾಗ

ಗಿಡದ (ಶಾಖೆ) ಟೊಂಗೆಗಳಲ್ಲಿ ಬಂದರೆ ತಾಯಿಗೆ ಪೀಡೆಯು. ೫ ನೆಯ ಭಾಗ ಗಿಡದ ಎಲೆಗಳಲ್ಲಿ ಬಂದರೆ ಬಂಧು-ಬಳಗದವರಿಗೆ ಅರಿಷ್ಟವು ೬ ನೆಯ ಭಾಗ ಗಿಡದ ಪುಷ್ಪಗಳಲ್ಲಿ ಬಂದರೆ ರಾಜಮಂತ್ರಿಪದ ಪ್ರಾಪ್ತಿಯು. ೭ ನೆಯ ಭಾಗ ಗಿಡದ ಫಲ (ಹಣ್ಣು) ಗಳಲ್ಲಿ ಬಂದರೆ ಐಶ್ವರ್ಯವು ರಾಜ್ಯ ಪ್ರಾಪ್ತಿಯು. ೮ ನೆಯ ಭಾಗ ಗಿಡದ ತುದಿಗಳಲ್ಲಿ ಬಂದರೆ ಕೂಸಿಗೆ ಅಲ್ಪಾಯುಷ್ಯವು. ತಂದೆಗೆ ಅನಿಷ್ಟವು.

— ಮೂಲಾ ನಕ್ಷತ್ರದ ವಾಸ ವಿಚಾರವು —

ಆಷಾಢ, ಭಾದ್ರಪದ, ಆಶ್ವಿನ, ಮಾಘಮಾಸಗಳಲ್ಲಿ ಮೂಲಾ ನಕ್ಷತ್ರವು ಸ್ವರ್ಗಲೋಕದಲ್ಲಿ ವಾಸವಾಗಿರುವದು. ವೈಶಾಖ, ಜ್ಯೇಷ್ಠ, ಮಾರ್ಗಶಿರ ಫಾಲ್ಗುಣ ಮಾಸಗಳಲ್ಲಿ ಈ ನಕ್ಷತ್ರವು ಪಾತಾಳ ಲೋಕದಲ್ಲಿರುವದು. ಚೈತ್ರ, ಶ್ರಾವಣ, ಕಾರ್ತಿಕ, ಪುಷ್ಯ ಮಾಸಗಳಲ್ಲಿ ಈ ನಕ್ಷತ್ರವು ಭೂಲೋಕದಲ್ಲಿ ಇರುವದು. ಈ ನಕ್ಷತ್ರವು ಭೂಲೋಕದಲ್ಲಿರುವ ಮಾಸಗಳಲ್ಲಿ ಶಿಶುಜನನವಾದರೆ ದೋಷವುಂಟಾಗುವದು. ಸ್ವರ್ಗಲೋಕ, ಪಾತಾಳಲೋಕಗಳಲ್ಲಿ ಇರುವಾಗ ಜನನದೋಷವುಂಟಾಗುವದಿಲ್ಲ.

— ಜನನಲಗ್ನದ ಪ್ರಕಾರ ಮೂಲಾ ನಕ್ಷತ್ರ ವಿಚಾರ —

ವೃಷಭ, ಸಿಂಹ, ವೃಶ್ಚಿಕ, ಕುಂಭ ಈ ಲಗ್ನಗಳಲ್ಲಿ ಯಾವದಾದರೊಂದು ಲಗ್ನದಲ್ಲಿ ಶಿಶು ಜನನವಾದರೆ ಮೂಲಾ ನಕ್ಷತ್ರವು ಸ್ವರ್ಗ ಲೋಕದಲ್ಲಿರುತ್ತದೆ. ಮಿಥುನ, ಕನ್ಯಾ, ತುಲಾ, ಮೀನ ಈ ಲಗ್ನಗಳಲ್ಲಿ ಯಾವದಾದರೊಂದು ಲಗ್ನದಲ್ಲಿ ಕೂಸು ಜನನವಾದರೆ ಮೂಲಾ ನಕ್ಷತ್ರವು ಪಾತಾಳಲೋಕದಲ್ಲಿ ಇರುವದು. ಮೇಷ ಕರ್ಕ, ಧನಸ್ಸು, ಮಕರ ಲಗ್ನಗಳಲ್ಲಿ ಯಾವದಾದರೊಂದು ಲಗ್ನದಲ್ಲಿ ಶಿಶು ಜನನವಾದರೆ ಮೂಲಾ ನಕ್ಷತ್ರವು ಭೂಲೋಕದಲ್ಲಿ ಇರುವದೆಂದು ತಿಳಿಯಬೇಕು.

ಮೂಲಾ ನಕ್ಷತ್ರವು ಸ್ವರ್ಗಲೋಕದಲ್ಲಿರುವಾಗ ಕೂಸು ಜನನವಾದರೆ ರಾಜ್ಯಪ್ರಾಪ್ತಿಯು. ಪಾತಾಳಲೋಕದಲ್ಲಿರುವಾಗ ಜನನವಾದರೆ ಧನಲಾಭವು. ಭೂಲೋಕದಲ್ಲಿರುವಾಗ ಜನನವಾದರೆ ಅರಿಷ್ಟವು. ಇದಕ್ಕೆ ವಿಧಾನೋಕ್ತ ಶಾಂತಿಯನ್ನು ಆಚರಿಸಬೇಕು.

ಚೈತ್ರ, ಶ್ರಾವಣ, ಕಾರ್ತಿಕ, ಪುಷ್ಯ, ಮಾಸಗಳು, ಮೇಷ ಕರ್ಕ, ಧನಸ್ಸು, ಮಕರ ಜನನ ಲಗ್ನಗಳು ಇರುವಾಗ ಜನಿಸಿದ ಶಿಶುವಿಗೆ ಮಹಾ ಅರಿಷ್ಟವು. ಮಾಸಗಳ ಪ್ರಕಾರ ಅಥವಾ ಜನನ ಲಗ್ನಗಳ ಪ್ರಕಾರ ನಕ್ಷತ್ರವು ಭೂಲೋಕದಲ್ಲಿದ್ದರೂ ಅರಿಷ್ಟ ಉಂಟಾಗುವದು. ಒಂದು ವೇಳೆ ಮಾಸಗಳ ರೀತಿಯಾಗಿ, ಜನನ ಲಗ್ನಗಳ ರೀತಿಯಾಗಿ ಅರಿಷ್ಟ ತಗಲದಿದ್ದರೂ ನಕ್ಷತ್ರೋಕ್ತ ಶಾಂತಿಯನ್ನು (ಗೋಮುಖ ಪ್ರಸವ ಶಾಂತಿಯನ್ನು ಮಾಡಿಸಿ ಕರು ಸಹಿತ ಆಕಳ ದಾನ ಮಾಡಬೇಕು) ಮಾಡಿಸುವದೊಳ್ಳೇದು. ನಕ್ಷತ್ರದೋಷ ಪರಿಹಾರಕ್ಕಾಗಿ ಕೂಸು ಜನನವಾದ ೬ ತಿಂಗಳ ಅವಧಿಯಲ್ಲಿ ಒಂದು ಎಮ್ಮೆಯನ್ನು ಪೂಜ್ಯರಿಗೆ ದಾನ ಮಾಡಬೇಕು.

ಪೂರ್ವಾಷಾಡ— ಈ ನಕ್ಷತ್ರದ ೩ನೆಯ ಚರಣದಲ್ಲಿ ಗಂಡು ಕೂಸು ಜನನವಾದರೆ ತಂದೆಗೆ, ಹೆಣ್ಣುಕೂಸು ಜನನವಾದರೆ ತಾಯಿಗೆ ಪೀಡೆಯು ಮತ್ತು ಈ ನಕ್ಷತ್ರದ ೧ನೆಯ ಚರಣದಲ್ಲಿ ಶಿಶು ಜನಿಸಿದರೆ ತಂದೆಗೆ, ೨ನೆಯ ಚರಣದಲ್ಲಿ ಕೂಸು ಜನಿಸಿದರೆ ತಾಯಿಗೆ ೩ನೆಯ ಚರಣದಲ್ಲಿ ಶಿಶು ಜನನವಾದರೆ ಆ ಕೂಸಿಗೆ ೪ ನೆಯ ಚರಣದಲ್ಲಿ ಜನಿಸಿದರೆ ಸೋದರಮಾವನಿಗೆ ಕಂಟಕಪ್ರದವೆಂದು ಗ್ರಂಥಾಂತರಗಳಲ್ಲಿ ಉಕ್ತವಾಗಿದೆ. ಈ ನಕ್ಷತ್ರದೋಷವು ೮ ತಿಂಗಳ ವರೆಗೆ ಇದ್ದು ದೋಷ ನಿವಾರಣೆಗಾಗಿ ವಸ್ತ್ರ,ಬಂಗಾರ ದಾನ ಕೊಡಬೇಕು. ಅಥವಾ ಒಂದು ಕಂಚಿನ ಪಾತ್ರೆಯಲ್ಲಿ ಅಕ್ಕಿಯನ್ನು ತುಂಬಿ ಅದರಲ್ಲಿ ಬಂಗಾರದಿಂದ ಮಾಡಿದ ಅಪ ದೇವತೆಯನ್ನು ಇಟ್ಟು ಪೂಜಿಸಿ ಬಿಳೆ ವಸ್ತ್ರ ದಕ್ಷಿಣೆ ಸಹಿತ ದಾನ ಮಾಡಬೇಕು. ಪೂರ್ವಾಷಾಢ ನಕ್ಷತ್ರದಲ್ಲಿ ಜನಿಸಿ ಧನಸ್ಸು ಲಗ್ನವು ಜನನಲಗ್ನವಾದರೆ ಪಿತ್ರಾರಿಷ್ಟವು.

ಉತ್ತರಾಷಾಡ—ಈ ನಕ್ಷತ್ರದಲ್ಲಿ ಜನನವಾದರೆ ಶುಭವು.

ಶ್ರವಣ–ಈ ನಕ್ಷತ್ರವು ಶುಭಕರ.

ಧನಿಷ್ಠ–ಈ ನಕ್ಷತ್ರವು ಶುಭಪ್ರದವು.

ಶತತಾರಾ–ಈ ನಕ್ಷತ್ರದಲ್ಲಿ ಜನನವಾದರೆ ಉತ್ತಮವು.

ಪೂರ್ವಾಭಾದ್ರಪದ– ಈ ನಕ್ಷತ್ರದ ೨ನೆಯ ಚರಣದಲ್ಲಿ ಕೂಸು ಜನನವಾದರೆ ಕಂಭತ್ರ ಎಂಬ ದೋಷವುಂಟಾಗುವದೆಂದು ಕೆಲವರ ಅಭಿ

ಪ್ರಾಯ. ಇದಕ್ಕೆ ಬಂಗಾರದಿಂದ 'ಅಜೈಕಪಾತ್' ಎಂಬ ದೇವತೆಯನ್ನು ಮಾಡಿ ಪೂಜಿಸಿ ವಸ್ತ್ರ, ದಕ್ಷಿಣೆ ಸಹಿತ ದಾನ ಮಾಡಬೇಕು.

ಉತ್ತರಾಭಾದ್ರಪದ—ಈ ನಕ್ಷತ್ರವು ಶುಭಪ್ರದವು.

ರೇವತಿ— ಈ ನಕ್ಷತ್ರದ ೧ನೆಯ ಚರಣದಲ್ಲಿ ಕೂಸು ಜನನವಾದರೆ ಶುಭವು. ೨ನೆಯ ಚರಣದಲ್ಲಿ ಜನನವಾದರೆ ಧನಹಾನಿಯು ೩ನೆಯ ಚರಣದಲ್ಲಿ ತಾಯಿಗೆ ಪೀಡೆಯು. ೪ ನೆಯ ಚರಣದಲ್ಲಾದರೆ ತಂದೆಗೆ ಅರಿಷ್ಟವು. ಈ ನಕ್ಷತ್ರದೋಷವು ೩ ತಿಂಗಳ ವರೆಗೆ ಇದ್ದು ದೋಷ ನಿವಾರಣೆಗಾಗಿ ಬಂಗಾರದಿಂದ 'ಪೂಷಾ' ದೇವತೆಯನ್ನು ಮಾಡಿಸಿ ಪೂಜಿಸಿ ನವಧಾನ್ಯ ವಸ್ತ್ರ ಸಹಿತ ದಾನಮಾಡಬೇಕು. ಈ ನಕ್ಷತ್ರದ ಅಂತ್ಯದ ೨ ಗಳಿಗೆ ಕಾಲವು ನಕ್ಷತ್ರ ಗಂಡಾಂತರವು ಇದು ತಾಯಿ, ತಂದೆಗಳಿಗೆ ಅರಿಷ್ಟವು.

ಕೃಷ್ಣ ಪಕ್ಷದ ಚತುರ್ದಶಿ ಜನನ ದೋಷವು— ಬಹುಳ ಚತುರ್ದಶಿ ತಿಥಿಯಲ್ಲಿ ಗೂಸು ಜನನವಾದರೆ- ಚತುರ್ದಶಿ ತಿಥಿಯ ಆದ್ಯಂತ ಕಾಲವನ್ನು ಮಾಡಿ ೮ ಗಳಿಗೆ, ಫಳಗಳನ್ನು ೬ ಭಾಗ ಮಾಡಬೇಕು. ಕೂಸಿನ ಜನನ ಕಾಲವು ೧ನೆಯ ಭಾಗದ ಗಳಿಗೆ ಫಳಗಳಲ್ಲ ಬಂದರೆ ಶುಭವು. ೨ನೆಯ ಭಾಗದಲ್ಲಿ ಬಂದರೆ ತಂದೆಗೆ ಪೀಡೆಯು. ೩ನೆಯ ಭಾಗದಲ್ಲಿ ಬಂದರೆ ತಾಯಿಗೆ ಅರಿಷ್ಟವು. ೪ನೆಯ ಭಾಗದಲ್ಲಿ ಬಂದರೆ ಸೋದರ ಮಾವನಿಗೆ ಅನಿಷ್ಟವು. ೫ನೆಯ ಭಾಗದಲ್ಲಿ ಬಂದರೆ ಕೂಸಿನ ಅಣ್ಣ ತಮ್ಮಂದಿರಂಗೆ ಪೀಡಾಕರವು ೬ ನೆಯ ಭಾಗದಲ್ಲಿ ಬಂದರೆ ಹುಟ್ಟಿದ ಕೂಸಿಗೆ ಪೀಡೆಯು ಮತ್ತು ಧನ ಹಾನಿಯು. ವಂಶ ನಷ್ಟ ಉಂಟಾಗುವದು. ಕೃಷ್ಣ ಪಕ್ಷದ ಚತುರ್ದಶಿ. ಅಮಾವಾಸ್ಯಗಳ ಜನನ ದೋಷ ನಿವಾರಣೆಗಾಗಿ ಮಾಡುವ ಶಾಂತಿ ಕ್ರಮವನ್ನು, ನಮ್ಮ ಪುರೋಹಿತ ಚಿಂತಾಮಣಿ ಅಥವಾ ಶಾಂತಿ ಪ್ರಯೋಗರತ್ನ ಗ್ರಂಥವನ್ನು ತರಿಸಿ ನೋಡಿರಿ ಬೆಲೆ ೧೦-೦೦.

ಅಮವಾಸ್ಯೆಯ ಜನನ ಫಲ— ಅಮವಾಸ್ಯ ತಿಥಿಯಲ್ಲಿ ಕೂಸು ಜನನವಾದರೆ ಅಮವಾಸ್ಯೆಯ ಆದ್ಯಂತ ಕಾಲವನ್ನು ಮಾಡಿ ಒಟ್ಟು ಗಳಿಗೆ ಫಳಗಳನ್ನು ೬ ಭಾಗ ಮಾಡಬೇಕು ಕೂಸಿನ ಜನನ ಕಾಲವು ೧ನೆಯ

ಭಾಗದಲ್ಲಿ ಬಂದರೆ ಧನ ಹಾನಿಯು. ೨ನೆಯ ಭಾಗದಲ್ಲಿ ಬಂದರೆ ತಾಯಿಗೆ ಅರಿಷ್ಟವು. ೩ನೆಯ ಭಾಗದಲ್ಲಿ ಬಂದರೆ ತಂದೆಗೆ ಪೀಡೆಯು. ೪ನೆಯ ಭಾಗದಲ್ಲಿ ಬಂದರೆ ಅಣ್ಣಾ ತಮ್ಮಂದಿರರಿಗೆ ಅನಿಷ್ಟವು. ೫ನೆಯ ಭಾಗದಲ್ಲಿ ಬಂದರೆ ಎತ್ತು, ಎಮ್ಮೆ, ಆಕಳು ಮೊದಲಾದ ಪಶುಗಳ ನಾಶವು. ೬ನೆಯ ಭಾಗದಲ್ಲಿ ಬಂದರೆ ಶುಭ ಪ್ರದವು. ಈ ಪ್ರಕಾರ ಫಲವಿದ್ದು ದೋಷ ನಿವಾರಣೆಗಾಗಿ ವಿಧಾನೋಕ್ತ ಶಾಂತಿಯನ್ನು ಮಾಡಿಸಬೇಕು.

ಅಮವಾಸ್ಯೆಯ ಅಂತ್ಯ ಸಂಧಿಯಲ್ಲಿ, ವಿಷಗಳಿಗೆಯಲ್ಲಿ; ವಿಷಾಂಶದಲ್ಲಿ ಸೂರ್ಯ ಚಂದ್ರಗ್ರಹಣದಲ್ಲಿ ಹುಟ್ಟಿದ ಶಿಶುವಿಗೆ ಗರಳಾಂಶವೆಂಬ ದುರ್ಯೋಗವಾಗುವದು. ಈ ದುರ್ಯೋಗದಲ್ಲಿ ಹುಟ್ಟಿದ ಶಿಶುವಿಗೆ ದುಃಖವು, ಬಂಧನವು. ದೃಶ್ಯವ್ಯಾಧಿಯು. ಅದೃಶ್ಯವ್ಯಾಧಿಯು ಮೃತ್ಯುವು. ತಂದೆಯ ಜನನ ನಕ್ಷತ್ರದಲ್ಲಿ ಶಿಶು ಹುಟ್ಟಿದರೆ ತಂದೆಗೆ ಅರಿಷ್ಟವು. ತಾಯಿಯ ಜನನ ನಕ್ಷತ್ರದಲ್ಲಿ ಶಿಶು ಹುಟ್ಟಿದರೆ ತಾಯಿಗೆ ಅರಿಷ್ಟವು. ಅದರಂತೆ ಅಣ್ಣಾ ಹಾಗೂ ಕೂಸಿನ ಜನ್ಮ ನಕ್ಷತ್ರಗಳು ಒಂದೇ ಆದರೂ ಅರಿಷ್ಟವು. ದರ್ಶ ಜನನ (ಬಾಯಿ ಮೇಲಾಗಿ ಹುಟ್ಟುವದು) ಸಂಕ್ರಮಣ ಕಾಲದಲ್ಲಿಯ ಜನನ ಸೂರ್ಯ, ಚಂದ್ರ ಗ್ರಹಣ ಜನನ, ಅವಳಿ-ಜವಳಿ ಜನನ, ತ್ರಿಕ ಪ್ರಸವ (ಮೂರು ಗಂಡಿನ ನಂತರ ಹೆಣ್ಣು, ಮೂರು ಹೆಣ್ಣಿನ ನಂತರ ಗಂಡು ಜನನ) ಸದಂತ (ಹಲ್ಲುಸಹಿತ) ಜನನ. ವೈಧೃತಿ. ವ್ಯತೀಪಾತ ಯೋಗಗಳ ಜನನಗಳು ಸಹ ಅನಿಷ್ಟ ದಾಯಕವಾದವುಗಳು ಮತ್ತು ವ್ಯಾಘಾತ, ಗಂಡ, ಶೂಲ, ಈ ದುಷ್ಟ ಯೋಗಗಳಲ್ಲಿಯೂ, ದಗ್ಧ, ಮೃತ್ಯು, ಉತ್ಪಾತ, ಕಂಟಕಾದಿ ಕೆಟ್ಟ ಯೋಗಗಳಲ್ಲಿಯೂ ಕೂಸು ಜನಿಸಿದರೆ ಗಂಡಾಂತರ ದೋಷವು.

ಗಂಡಾಂತರ ದೋಷ ವಿಚಾರ- ಲಗ್ನಗಂಡಾಂತರವು; ನಕ್ಷತ್ರಗಂಡಾಂತರವು, ತಿಥಿಗಂಡಾಂತರವು. ಎಂದು ಮೂರು ವಿಧ ಗಂಡಾಂತರಗಳುಂಟು.

ಲಗ್ನ ಗಂಡಾಂತರವು- ಕರ್ಕಾಂತ್ಯನವಾಂಶವು. ವೃಶ್ಚಿಕಾಂತ್ಯನವಾಂಶವು. ಮೀನಾಂತ್ಯನವಾಂಶವು ಇವು ಮೂರು ಲಗ್ನ ಗಂಡಾಂತರವು. ಮೇಷ, ಸಿಂಹ, ಧನಸ್ಸುರಾಶಿಗಳ ಆದಿನವಾಂಶವು ಸಹ ಗಂಡಾಂತರವು.

ನಕ್ಷತ್ರ ಗಂಡಾಂತರವು— ಆಶ್ಲೇಷಾಂತ್ಯವು ಜ್ಯೇಷ್ಠಾಂತ್ಯವು ರೇವತಿ ನಕ್ಷತ್ರಾಂತ್ಯವು (ಇವುಗಳಲ್ಲಿ ಎರಡೆರಡುಗಳಿಗೆಗಳು) ಇವು ಮೂರು ನಕ್ಷತ್ರ ಗಂಡಾಂತರವು.

ಎಲ್ಲ ಗ್ರಹಗಳು ಅಸ್ತರಾಗಿದ್ದರೆ, ನೀಚ ಸ್ಥಾನದಲ್ಲಿದ್ದರೆ ಅಥವಾ ಶತ್ರು ಸ್ಥಾನದಲ್ಲಿದ್ದರೆ ಪ್ರೇತಾಂಶ (ಶವ) ವಾಗುವದು. ಈ ದುರ್ಯೋಗದಲ್ಲಿ ಹುಟ್ಟಿದ ಶಿಶುವಿಗೆ ಮೃತ್ಯುಪ್ರದವು.

ತಿಥಿಗಂಡಾಂತರವು- ೧-೬-೧೧ ಈ ನಂದ ತಿಥಿಗಳ ಅಂತ್ಯದಲ್ಲಿ ೨ ಗಳಿಗೆಗಳು ೫-೧೦-೧೫-೩೦ ಈ ಪೂರ್ಣ ತಿಥಿಗಳ ಆದಿಯಲ್ಲಿ ೨ ಗಳಿಗೆಗಳ ಕಾಲವು ತಿಥಿಗಂಡಾಂತರವು. ಈ ಮೂರೂ ವಿಧಗಂಡಾಂತರಗಳಲ್ಲಿ ಜನಿಸಿದ ಕೂಸಿನ ಜನ್ಮಲಗ್ನದಲ್ಲಿ ಚಂದ್ರನು ಇದ್ದು ರಾಶಿಸಂಧಿಯಲ್ಲಿ ಶಿಶುವು ಜನಿಸಿದ್ದಾದರೆ ಆ ಕೂಸು ತತ್‌ಕ್ಷಣವೇ ಮರಣ ಹೊಂದುವದು ಈ ದೋಷ ನಿವಾರಣೆಗಾಗಿ ಶಿವ ಸಹಸ್ರ, ಗಣಸಹಸ್ರ, ಶಿವಕವಚ, ರುದ್ರ ಕವಚ ಶ್ರೀ ರುದ್ರಾಭಿಷೇಕ, ನವಗ್ರಹ ಜಪ, ಮೃತ್ಯುಂಜಯ ಜಪ ಇತ್ಯಾದಿ ಪೂಜಾಪಾರಾಯಣ ಮಾಡಿಸಬೇಕು ಮತ್ತು ತಿಥಿಗಂಡಾಂತರ ದೋಷಕ್ಕೆ ಹೋರಿಯನ್ನೂ, ನಕ್ಷತ್ರಗಂಡಾಂತರ ದೋಷಕ್ಕೆ ಅನ್ನದಾನ, ಆಕಳ ದಾನವನ್ನೂ, ಲಗ್ನಗಂಡಾಂತರ ದೋಷಕ್ಕೆ ದ್ರವ್ಯ ದಾನವನ್ನೂ ಮಾಡಬೇಕು.

ತಿಥಿಗಂಡಾಂತರಗಳಲ್ಲಿ ಶಿಶುಹುಟ್ಟಿದರೆ ಮಾತಾ-ಪಿತೃಗಳಿಗೆ, ಅರಿಷ್ಟವು. ಗಂಡಾಂತರ ಅಂಶಗಳಲ್ಲಿ ಶಿಶುಹುಟ್ಟಿದರೆ ಕೂಸಿಗೆ ಅರಿಷ್ಟವು. ಬದುಕಿದರೆ ರಾಜನಾಗುತ್ತಾನೆ. ಉಳಿದ ಗಂಡಾಂತರಗಳಲ್ಲಿ ಹುಟ್ಟಿದ ಕೂಸು ಕುಲವಂತನಾಗುತ್ತಾನೆ. ಗುಳಿಕ ಕಾಲದಲ್ಲಿ ಜನಿಸಿದರೆ ಅಂಗವಿಕಾರವೂ, ಯಮ ಕಂಟಕ ಕಾಲದಲ್ಲಿ ಜನಿಸಿದರೆ ಕುರೂಪಿಯೂ ಆಗುವನು. ವೈಧೃತಿ ವ್ಯತೀಪಾತ ಯೋಗಗಳಲ್ಲಿ ಜನಿಸಿದರೆ ಪಿತ್ರಾರಿಷ್ಟವು. ಶೂಲ ಯೋಗದಲ್ಲಿ ಜನಿಸಿದರೆ ಸರ್ವನಾಶವು. ಅಂಧಕನಕ್ಷತ್ರಗಳಲ್ಲಿ ಜನಿಸಿದರೆ ಕುಲನಾಶವು. ವಿಪರೀತವಾಗಿ ಅಂದರೆ ನಾಭಿ ನಾಳದಿಂದ ಸುತ್ತಿಕೊಂಡು ಹುಟ್ಟಿದರೆ ನಾಶಕರವು. ಎರಡು ಸಂಧಿ ವೇಳೆಯಲ್ಲಿ ಹುಟ್ಟಿದರೆ ಅಧಿಕಾಂಶವು, ಹೀನಾಂಗವು, ಅಧಿಕ ಭಯವು. ಹುಟ್ಟಿದ ಶಿಶುವಿನ ಅನಿಷ್ಟ ಯೋಗಗಳನ್ನೂ, ಗಂಡಾಂತರಗಳನ್ನೂ ತಿಳಿದುಕೊಂಡು ಅವುಗಳಿಗೆ ಪರಿಹಾರಗಳನ್ನು ತಿಳಿದು ಆಚರಿಸಬೇಕು.

ಕುಜನಾದರೂ ಶನಿಯಾದರೂ ರವಿಯನ್ನು ಕೂಡಿ ಇದ್ದರೆ ಪಿತೃರಿಷ್ಟವು, ಚಂದ್ರನನ್ನು ಕೂಡಿದ್ದರೆ ಮಾತೃರಿಷ್ಟವು. ಲಗ್ನಕ್ಕೆ ೬—೧೦ ನೆಯ ಸ್ಥಾನಗಳಲ್ಲಿ ಚಂದ್ರನು ಬಲಹೀನನಾಗಿ ಪಾಪಗ್ರಹಗಳಿಂದ ಕೂಡಿದ್ದರೆ ಮಾತೃರಿಷ್ಟವು. ಇದೇ ರೀತಿಯಲ್ಲಿ ಕುಜನಿದ್ದರೆ ಭ್ರಾತೃರಿಷ್ಟವು. ಚಂದ್ರನಿಗೆ ೭ನೆಯ ಸ್ಥಾನದಲ್ಲಿ ಕುಜ ಶನಿಗಳಿದ್ದರೆ ಮಾತೃರಿಷ್ಟವು ಮತ್ತು ಪಿತೃರಿಷ್ಟವು. ಚಂದ್ರನಿಗೆ ೨-೧೨ನೆಯ ಸ್ಥಾನಗಳಲ್ಲಿ ಕುಜ ಶನಿಗಳಿದ್ದರೆ ಪಿತೃರಿಷ್ಟವು ರವಿಗೆ ೨-೧೨ ನೆಯ ಸ್ಥಾನಗಳಲ್ಲಿ ಕುಜ ಶನಿಗಳಿದ್ದರೆ ಪಿತೃರಿಷ್ಟವು. ಲಗ್ನಕ್ಕೆ ೬-೮ ಸ್ಥಾನಗಳಲ್ಲಿ ಪಾಪಗ್ರಹವಿದ್ದು ಲಗ್ನವನ್ನು ಪಾಪಗ್ರಹಗಳು ನೋಡಿದರೆ ತಾಯಿ ಸಹಿತ ಶಿಶುವಿಗೆ ಅರಿಷ್ಟವು. ಶುಭಗ್ರಹಗಳು ಲಗ್ನವನ್ನು ನೋಡಿದರೆ ವ್ಯಾಧಿ ಉಂಟಾಗುವದು. ಚಂದ್ರ, ರವಿಗಳು ಪಾಪಗ್ರಹಗಳ ಮಧ್ಯದಲ್ಲಿದ್ದು ಶುಭಗ್ರಹಗಳಿಂದ ನೋಡಲ್ಪಡದೆ ಇದ್ದರೆ ಮಾತೃರಿಷ್ಟವು. ಲಗ್ನಕ್ಕೆ ೧೨ ನೇ ಸ್ಥಾನದಲ್ಲಿ ರವಿಯಿದ್ದು. ನಾಲ್ಕನೇ ಸ್ಥಾನದಲ್ಲಿ ಕುಜನಿದ್ದು. ಚಂದ್ರನು ಕ್ಷೀಣನಾಗಿದ್ದರೆ ಮಾತೃರಿಷ್ಟವು.

ಲಗ್ನಕ್ಕೆ ೨-೧೨ ನೆಯ ಸ್ಥಾನಗಳಲ್ಲಿ ಪಾಪ ಗ್ರಹಗಳಿದ್ದು ಶುಭ ಗ್ರಹಗಳಿಂದ ನೋಡಲ್ಪಡದೆ ಇದ್ದು ಪಾಪ ಗ್ರಹಗಳಿಂದ ನೋಡಲ್ಪಟ್ಟರೆ ಮಾತೃರಿಷ್ಟವು ಸೂರ್ಯ ಚಂದ್ರರು ರಾಹುಕೇತುಗಳಿಂದ ಕೂಡಿಕೊಂಡಿದ್ದು ಲಗ್ನಕ್ಕೆ ೮ ನೆಯ ಸ್ಥಾನದಲ್ಲಿ ಕುಜನಿದ್ದರೆ ಮಾತೃರಿಷ್ಟವು. ಚಂದ್ರನಿಗೆ ೭-೮ ನೆಯ ಸ್ಥಾನಗಳಲ್ಲಿ ಎಲ್ಲ ಪಾಪ ಗ್ರಹಗಳಿದ್ದರೆ ಮಾತೃರಿಷ್ಟವು. ಚಂದ್ರನಿಗೆ ೧-೬-೭-೮-೧೨ ನೆಯ ಸ್ಥಾನಗಳಲ್ಲಿ ಎಲ್ಲ ಪಾಪ ಗ್ರಹಗಳಿದ್ದರೆ ಮಾತೃರಿಷ್ಟವು. ಲಗ್ನಕ್ಕೆ ೩-೮ ನೆಯ ಸ್ಥಾನಗಳಲ್ಲಿ ಚಂದ್ರನು ಪಾಪ ಗ್ರಹಗಳಿಂದ ಕೂಡಿದ್ದರೆ, ಮಾತೃರಿಷ್ಟವು. ಶುಕ್ರನಿಗೆ ೫ನೆಯ ಸ್ಥಾನದಲ್ಲಿ ರವಿ ಇದ್ದು ಶುಕ್ರನು ಶನಿಯಿಂದ ಕೂಡಿದ್ದರೂ ನೋಡಿಸಿಕೊಂಡರೂ ಮಾತೃರಿಷ್ಟವು ರಾತ್ರಿ ಜನನವಾಗಿ ಚಂದ್ರನಿಗೆ ೫-೯ ನೆಯ ಸ್ಥಾನಗಳಲ್ಲಿ ಶನಿ ಇದ್ದರೆ ಮಾತೃರಿಷ್ಟವು.

ಹಗಲು ಜನನವಾಗಿ ಶುಕ್ರನಿಗೆ ೫-೯ ನೆಯ ಸ್ಥಾನಗಳಲ್ಲಿ ಕುಜನಿದ್ದರೆ ಮಾತೃರಿಷ್ಟವು. ಲಗ್ನದಲ್ಲಿ ಕುಜಶನಿಗಳಿದ್ದು. ಮಧ್ಯದಲ್ಲಿ ಚಂದ್ರನು ಇದ್ದು ೮ ನೆಯ ಸ್ಥಾನದಲ್ಲಿ ಸೂರ್ಯನಿದ್ದರೆ ಮಾತೃರಿಷ್ಟವು. ಲಗ್ನಕ್ಕೆ

೪ನೆಯ ಸ್ಥಾನದಲ್ಲಿ ಪಾಪಗ್ರಹಗಳಿದ್ದರೆ ಮಾತ್ರಾರಿಷ್ಟವು. ರವಿಗೆ ೮ ನೆಯ ಸ್ಥಾನದಲ್ಲಿ ಕುಜ ಶನಿಗಳಿದ್ದು ಶುಭಗ್ರಹಗಳ ದೃಷ್ಟಿಯಿಲ್ಲದಿದ್ದರೆ ಮಾತ್ರಾರಿಷ್ಟವು. ಲಗ್ನಕ್ಕೆ ಶನಿ ಕುಜನ ಸಂಬಂಧವಾಗಲಿ ದೃಷ್ಟಿಯಾಗಲಿ ಇದ್ದು ರವಿಯು ಎರಡು ಪಾಪಗ್ರಹಗಳ ಮಧ್ಯದಲ್ಲಿ ಇದ್ದರೆ ಪಿತ್ರಾರಿಷ್ಟವು. ರವಿಯು ಪಾಪಗ್ರಹಗಳಿಂದ ಕೂಡಿ ಚರ ರಾಶಿಯಲ್ಲಿದ್ದರೆ ಪಿತ್ರಾರಿಷ್ಟವು.

ಲಗ್ನಕ್ಕೆ ೫-೯ ನೆಯ ಸ್ಥಾನಗಳಲ್ಲಿ ರವಿಯು ಇದ್ದರೆ ಪಿತ್ರಾರಿಷ್ಟವು. ಲಗ್ನಕ್ಕೆ ೯ ನೆಯ ಸ್ಥಾನದಲ್ಲಿ ಪಾಪಗ್ರಹವಿದ್ದು ಆ ಸ್ಥಾನಾಧಿಪತಿ ಪಾಪ ಗ್ರಹಗಳಿಂದ ಕೂಡಿದ್ದರೆ ಪಿತ್ರಾರಿಷ್ಟವು.

ಕುಜನು ಚಂದ್ರಪ್ರಾಂಶದಲ್ಲಿದ್ದು ಆ ಜನನ ಲಗ್ನಕ್ಕೆ ೫ ನೇ ಸ್ಥಾನದಲ್ಲಿದ್ದರೆ ಮಾತಾಪಿತೃಗಳಿಗೆ ಅರಿಷ್ಟವು ಕರ್ಕ, ಕನ್ಯಾ, ಧನಸ್ಸು ಈ ರಾಶಿಗಳು ಜನನ ಲಗ್ನವಾಗಿ ಸಿಂಹಾಂಶದಲ್ಲಿ ಚಂದ್ರನಿದ್ದರೆ ಪಿತ್ರಾರಿಷ್ಟವು. ಕನ್ಯಾಂಶದಲ್ಲಿ ಚಂದ್ರನಿದ್ದರೆ ಮಾತ್ರಾರಿಷ್ಟವು. ಜನನ ಲಗ್ನಕ್ಕೆ ೧೨ ನೆಯ ಸ್ಥಾನದಲ್ಲಿ ಚಂದ್ರನಿದ್ದರೆ ತಾಯಿಗೆ, ರವಿಯಿದ್ದರೆ ತಂದೆಗೆ, ಕುಜನಿದ್ದರೆ ಅಣ್ಣ ತಮ್ಮಂದಿರರಿಗೆ, ಶುಕ್ರನಿದ್ದರೆ ಹೆಂಡತಿಗೆ, ಗುರು ಇದ್ದರೆ ಮಕ್ಕಳಿಗೆ ಅರಿಷ್ಟವುಂಟಾಗುತ್ತದೆ.

—ಅರಿಷ್ಟ ಭಂಗ ವಿಚಾರವು—

ಜನ್ಮ ಲಗ್ನದಲ್ಲಿ ಗುರುವು ಉಚ್ಚನಾಗಿದ್ದರೆ-ಯಾವ ಗ್ರಹಗಳು ಬಲಹೀನರಾಗಿರುವರೋ ಅದರಿಂದುಂಟಾಗುವ ಅರಿಷ್ಟವನ್ನು ನಾಶ ಮಾಡುವನು. ಜನ್ಮಲಗ್ನಾಧಿಪತಿ ಅತಿ ಬಲವಂತನಾಗಿ ಶುಭ ಗ್ರಹಗಳನ್ನು ಕೂಡಿಕೊಂಡು ಕೇಂದ್ರದಲ್ಲಿದ್ದು ಪಾಪ ಗ್ರಹಗಳ ಸಂಬಂಧ ದೃಷ್ಟಿಯಿಲ್ಲದಿದ್ದರೆ ಸಮಸ್ತ ಅರಿಷ್ಟಗಳು ನಾಶವಾಗಿ ಭಾಗ್ಯವಂತನಾಗಿಯೂ, ಆಯುಷ್ಯವಂತನಾಗಿಯೂ ಬಾಳುತ್ತಾನೆ. ಚಂದ್ರನು ಅಷ್ಟಮಾಧಿಪತಿಯು ಇವರು ಶುಭಗ್ರಹಗಳ ದ್ರೇಕ್ಕಾಣದಲ್ಲಿ ಇದ್ದರೆ, ಅರಿಷ್ಟನಾಶವು. ಚಂದ್ರನು ಪೂರ್ಣನಾಗಿ ಶುಭ ಗ್ರಹಗಳ ನವಾಂಶದಲ್ಲಿದ್ದು ಗುರುವಿನ ಸಂಬಂಧವಾಗಲಿ ದೃಷ್ಟಿಯಾಗಲಿ ಇದ್ದರೆ ಸಮಸ್ತ ಅರಿಷ್ಟಗಳು ನಾಶವಾಗುವವು. ಬುಧ-ಗುರು ಶುಕ್ರರು ಬಲವಂತರಾಗಿ ಕೇಂದ್ರ ಸ್ಥಾನಗಳಲ್ಲಿದ್ದು ಪಾಪಗ್ರಹಗಳ ಸಂಬಂಧವಾಗಲಿ ದೃಷ್ಟಿಯಾಗಲಿ ಇಲ್ಲದಿದ್ದರೆ

ಸಮಸ್ತ ಅರಿಷ್ಟಗಳು ನಾಶಹೊಂದುತ್ತವೆ. ಚಂದ್ರನು ಶತ್ರು ಸ್ಥಾನದಲ್ಲಿದ್ದು. ಗುರು ಶುಕ್ರ ಬುಧರಿಂದ ಕೂಡಿಕೊಂಡು ಶುಭ ಗ್ರಹಗಳದ್ರೇಕ್ಕಾಣದಲ್ಲಿ ದ್ದರೆ ಸಮಸ್ತ ದೋಷಗಳು ನಾಶವಾಗುವವು.

ಅಸ್ತತ್ವ ಇಲ್ಲದೆ ಇರುವಗುರುವು ಒಳ್ಳೇ ಬಲವಂತನಾಗಿ ಕೇಂದ್ರ ಸ್ಥಾನ ದಲ್ಲಿದ್ದರೆ ಸಮಸ್ತ ಅರಿಷ್ಟಗಳು ನಾಶವಾಗುವವು. ಜನ್ಮರಾಶ್ಯಧಿ ಪತಿ ಶುಭ ಗ್ರಹವಾಗಿ ಲಗ್ನ ಕೇಂದ್ರ ಸ್ಥಾನಗಳಲ್ಲಿ ಶುಭಗ್ರಹಗಳಿಂದ ಕೂಡಿಕೊಂಡು ಇದ್ದರೆ ಸಮಸ್ತ ಅರಿಷ್ಟಗಳು ನಾಶವಾಗುವವು. ಲಗ್ನಕ್ಕೆ ೩-೬-೧೧ ನೇ ಸ್ಥಾನಗಳಲ್ಲಿ ರಾಹು ಬಲವಂತನಾಗಿದ್ದು ಪಾಪಗ್ರಹಗಳಿಂದ ಕೂಡದೆ ಶುಭಗ್ರಹಗಳಿಂದ ನೋಡಿಸಿಕೊಳ್ಳುತ್ತಾ ಇದ್ದರೆ ಅರಿಷ್ಟ ನಾಶವು. ಪೂರ್ಣಚಂದ್ರನು. ಶುಭಗ್ರಹ ಗಳಿಂದ ಕೂಡಿಕೊಂಡ ಪಾಪಗ್ರಹಗಳ ದೃಷ್ಟಿ ಸಂಬಂಧವಿಲ್ಲದಿದ್ದರೆ ಸಮಸ್ತ ದೋಷಗಳು ನಾಶಹೊಂದುತ್ತವೆ. ಪೂರ್ಣಚಂದ್ರನನ್ನು ಎಲ್ಲ ಗ್ರಹಗಳು ನೋಡಿದರೆ ಸಮಸ್ತ ಅರಿಷ್ಟಗಳು ನಾಶವಾಗುವವು. ಶುಭಗ್ರಹಗಳು ಅತಿ ಬಲ ವಂತರಾಗಿಯೂ, ಪಾಪಗ್ರಹಗಳು ಅತಿ ಬಲಹೀನವಾಗಿಯೂ ಇದ್ದು ಜನ್ಮ ಲಗ್ನವು ಶುಭಗ್ರಹ ಕ್ಷೇತ್ರವಾಗಿ ಶುಭಗ್ರಹಗಳ ದೃಷ್ಟಿಸಂಬಂಧವಿದ್ದರೆ ಸಮಸ್ತ ಅರಿಷ್ಟಗಳು ನಾಶವಾಗುವವು.

ರಾಹು, ಕೇತುಗಳು ಮೇಷ, ವೃಷಭ, ಕರ್ಕ ಈ ರಾಶಿಗಳಲ್ಲಿದ್ದು ಪಾಪ ಗ್ರಹಗಳ ಸಂಬಂಧವಿಲ್ಲದಿದ್ದರೆ ಅರಿಷ್ಟ ನಾಶವು. ಚಂದ್ರನು ಶುಭವರ್ಗದಲ್ಲಿದ್ದು. ಶುಭಗ್ರಹದಿಂದ ಕೂಡಿದ್ದರೆ. ಸಮಸ್ತ ಅರಿಷ್ಟಗಳು ನಾಶವಾಗುವವು. ಚಂದ್ರ ನಿರುವರಾಶ್ಯಧಿಪತಿ ಜನ್ಮಲಗ್ನದಲ್ಲಿ ಶುಭಗ್ರಹಗಳಿಂದ ಕೂಡಿಕೊಂಡು ಉಚ್ಚ ನಾಗಿದ್ದು, ಶುಕ್ರನಿಂದ ನೋಡಿಸಿಕೊಳ್ಳುತ್ತ ಇದ್ದರೆ, ಸಮಸ್ತ ಅರಿಷ್ಟಗಳು ನಾಶ ವಾಗುವವು. ಚಂದ್ರನು ಉಚ್ಚನಾಗಿದ್ದು ಸ್ವಕ್ಷೇತ್ರ ಶುಭವರ್ಗದಲ್ಲಿದ್ದು ಪೂರ್ಣ ವಾಗಿ ಶುಭಗ್ರಹಗಳಿಂದ ನೋಡಿಸಿಕೊಳ್ಳುತ್ತ ಇದ್ದು ಪಾಪಗ್ರಹಗಳ ದೃಷ್ಟಿ ಯಿಲ್ಲದಿದ್ದರೆ ಸಮಸ್ತ ಅರಿಷ್ಟಗಳು ನಾಶವಾಗುವವು. ಶುಭಗ್ರಹಗಳ ಸ್ಥಾನದ ಲ್ಲಿದ್ದ ಚಂದ್ರನು ಲಗ್ನಾಧಿಪತಿಯಿಂದ ನೋಡಿಸಿಕೊಳ್ಳುತ್ತ ಇದ್ದರೆ ಅರಿಷ್ಟನಾಶವು ಲಗ್ನಾಧಿಪತಿಯು ಮತ್ತು ಚಂದ್ರನು ಉಪಚಯಸ್ಥಾನಗಳಲ್ಲಿದ್ದರೆ ಚಂದ್ರಾ ರಿಷ್ಟನಾಶವು. ಚಂದ್ರಲಗ್ನಕ್ಕೆ ೧೨ನೆಯ ಸ್ಥಾನದಲ್ಲಿ ಬುಧ ಶುಕ್ರರು ಲಗ್ನಕ್ಕೆ ೧೧

ನೆಯ ಸ್ಥಾನದಲ್ಲಿ ಪಾಪಗ್ರಹಗಳು ೧೦ ನೆಯ ಸ್ಥಾನದಲ್ಲಿ ಗುರುವು ಇದ್ದರೆ ಅರಿಷ್ಟನಾಶವು. ಚಂದ್ರನು ಪೂರ್ಣನಾಗಿ ಉಚ್ಚ ಸ್ವಕ್ಷೇತ್ರದಲ್ಲಿದ್ದು ಶುಭ ಮಿತ್ರ ಗ್ರಹಗಳಿಂದ ದೃಷ್ಟಿಯಾಗಲಿ ಸಂಬಂಧವಾಗಲಿ ಇದ್ದು ಪಾಪಗ್ರಹಗಳ ದೃಷ್ಟಿಯಿಲ್ಲದಿದ್ದರೆ. ಸಮಸ್ತ ಅರಿಷ್ಟನಾಶವು.

ವೃಷಭ-ಕರ್ಕರಾಶಿಯಲ್ಲ ಪೂರ್ಣ ಚಂದ್ರನಿದ್ದು ಪಾಪಗ್ರಹಗಳ ದೃಷ್ಟಿಯಿಲ್ಲದೆ. ಶುಭ ಗ್ರಹಗಳ ದೃಷ್ಟಿಯಿದ್ದರೆ ಅರಿಷ್ಟನಾಶವು ಕೇತುವಿನ ದೋಷವನ್ನು ರಾಹು ಹೋಗಲಾಡಿಸುತ್ತಾನೆ. ಈ ಎರಡು ದೋಷಗಳನ್ನು ಶನಿಯು ಹೋಗಲಾಡಿಸುತ್ತಾನೆ. ಈ ನಾಲ್ಕು ಗ್ರಹಗಳ ದೋಷವನ್ನು, ಬುಧನು ಹೋಗಲಾಡಿಸುತ್ತಾನೆ ಈ ಐದು ಗ್ರಹಗಳ ದೋಷವನ್ನು ರವಿಯು ಹೋಗಲಾಡಿಸುತ್ತಾನೆ. ಈ ಆರು ಗ್ರಹಗಳ ದೋಷವನ್ನು, ಪೂರ್ಣ ಚಂದ್ರನು ಹೋಗಲಾಡಿಸುತ್ತಾನೆ. ಈ ಏಳು ಗ್ರಹಗಳ ದೋಷವನ್ನು ಶುಕ್ರನು ಹೋಗಲಾಡಿಸುತ್ತಾನೆ. ಈ ಎಂಟು ಗ್ರಹಗಳ ದೋಷವನ್ನು ಗುರುವು ಹೋಗಲಾಡಿಸುತ್ತಾನೆ. ಗುರುವು ಸ್ವಕ್ಷೇತ್ರ ಉಚ್ಚ ಮಿತ್ರ ಕ್ಷೇತ್ರಗಳಲ್ಲಿದ್ದು ಲಗ್ನಕ್ಕೆ ಕೇಂದ್ರ ತ್ರಿಕೋಣ ಸ್ಥಾನಗಳಲ್ಲಿ ಇದ್ದರೆ ಸಮಸ್ತ ದೋಷಗಳನಾಶವು. ಗುರು ಶುಕ್ರರು ಬಲವಂತರಾಗಿ ಕೇಂದ್ರ ಸ್ಥಾನಗಳಲ್ಲಿದ್ದರೆ. ಸಮಸ್ತ ದೋಷಗಳ ನಾಶವು. ಎಲ್ಲ ಗ್ರಹಗಳು ಸ್ವಕ್ಷೇತ್ರದಲ್ಲಿದ್ದರೆ ಸಮಸ್ತ ದೋಷಗಳನಾಶವು. ಲಗ್ನದಲ್ಲಿಯೂ ಲಗ್ನಕೇಂದ್ರ ತ್ರಿಕೋಣ ಸ್ಥಾನಗಳಲ್ಲಿಯೂ ಪಾಪ ಗ್ರಹಗಳಿಲ್ಲದೆ. ಶುಭ ಗ್ರಹಗಳಿದ್ದರೆ. ಸಮಸ್ತ ದೋಷಗಳು ನಾಶವಾಗುವವು ಹುಟ್ಟಿದ ಶಿಶುಗಳಿಗೆ ಅರಿಷ್ಟ ಭಂಗವನ್ನು ತಿಳಿದು. ಅರಿಷ್ಟ ಭಂಗಗಳಿದ್ದರೆ ಧರ್ಮ ಶಾಸ್ತ್ರವನ್ನು ತಿಳಿದು ಧನಧಾನ್ಯ-ಗೋ-ಭೂಮಿ ಹಿರಣ್ಯ, ದಾನಗಳನ್ನೂ ತೀರ್ಥಾಭಿಷೇಕ ಗ್ರಹಶಾಂತಿ. ಯಂತ್ರಸ್ಥಾ ಜಪಮಂತ್ರಾದಿಗಳನ್ನೂ ಮಾಡತಕ್ಕದ್ದು ಹುಟ್ಟಿದ ಶಿಶುವಿಗೆ ಬಾಲಾರಿಷ್ಟವನ್ನು ಚನ್ನಾಗಿ ಶೋಧಿಸಿ ದಶಾ ಭುಕ್ತ್ಯಾದಿ ಫಲಗಳನ್ನೂ, ಆಯುರ್ದಾಯಗಳನ್ನೂ ನೋಡತಕ್ಕದ್ದು.

ಕೀಟಕ ರಾಶ್ಯಂಶ ಫಲ ವಿಚಾರವು.

ಕರ್ಕ, ವೃಶ್ಚಿಕ, ಈ ಎರಡು ರಾಶಿಗಳು ಕೀಟಕ ಸಂಜ್ಞಗಳು. ಲಗ್ನಾಧಿಪತಿಯಾಗಲಿ. ಅಷ್ಟಮಾಧಿಪತಿಯಾಗಲಿ ಇವರು ಕರ್ಕರಾಶಿಯಲ್ಲಿದ್ದು. ಕರ್ಕಾಂಶದಲ್ಲಿದ್ದರೆ. ಸರ್ಪಭಯವುಂಟಾಗುತ್ತದೆ. ಲಗ್ನ ಅಷ್ಟಮಾಧಿಪತಿಗಳು

ಕರ್ಕರಾಶಿಯಲ್ಲಿದ್ದು ಸಿಂಹಾಂಶದಲ್ಲಿದ್ದರೆ ವನ್ಯಜಂತು (ಅಡವಿ ಪ್ರಾಣಿ) ಗಳಿಂದ ಭಯವುಂಟಾಗುತ್ತದೆ.

ಲಗ್ನ ಅಷ್ಟಮಾಧಿಪತಿಗಳಿಬ್ಬರು. ಕರ್ಕರಾ ಯಲ್ಲಿದ್ದು: ಕನ್ಯಾಂಶದಲ್ಲಿದ್ದರೆ ವಿಷ ಮೂಷಕ (ಇಲಿ) ಗಳಿಂದ ಭಯವು. ಲಗ್ನ-ಅಷ್ಟಮಾಧಿಪತಿಗಳು ಕರ್ಕರಾಶಿಯಲ್ಲಿದ್ದು ತುಲಾಂಶದಲ್ಲಿದ್ದರೆ. ಕೋತಿ (ಮಂಗ) ಗಳಿಂದ ಭಯವು.

ಲಗ್ನ ಅಷ್ಟಮಾಧಿ ಪತಿಗಳು ಕರ್ಕರಾಶಿಯಲ್ಲಿದ್ದು ವೃಶ್ಚಿಕಾಂಶದಲ್ಲಿದ್ದರೆ ಚೇಳು ಮುಂತಾದ ವಿಷಜಂತುಗಳಿಂದ ಕಂಟಕವು. ಲಗ್ನ ಅಷ್ಟಮಾಧಿಪತಿಗಳು ಕರ್ಕ ರಾಶಿಯಲ್ಲಿದ್ದು ಧನುರಂಶವನ್ನು ಹೊಂದಿದ್ದರೆ. ಭೂಸರ್ಪಗಳಿಂದ ಭಯವು. ಲಗ್ನ ಅಷ್ಟಮಾಧಿಪತಿಗಳು ಕರ್ಕರಾಶಿಯಲ್ಲಿದ್ದು ಮಕರಾಂಶವನ್ನು ಹೊಂದಿದ್ದರೆ ಜಲ ಸಮೀಪದಲ್ಲಿ ಭಯವು. ಲಗ್ನ ಅಷ್ಟಮಾಧಿಪತಿಗಳು ಕರ್ಕ ರಾಶಿಯಲ್ಲಿದ್ದು ಕುಂಭಾಂಶವನ್ನು ಹೊಂದಿದ್ದರೆ ವಿಷದಿಂದ ಭಯವು ಲಗ್ನ ಅಷ್ಟಮಾಧಿಪತಿಗಳು ಕರ್ಕ ರಾಶಿಯಲ್ಲಿದ್ದು ಮೀನಾಂಶವನ್ನು ಹೊಂದಿದ್ದರೆ ಹಂದಿ ಮೊದಲಾದ ಕ್ರೂರ ಮೃಗಗಳಿಂದ ಭಯವು. ಲಗ್ನ ಅಷ್ಟಮಾಧಿ ಪತಿಗಳು ಕರ್ಕರಾಶಿಯಲ್ಲಿದ್ದು ಮೇಷಾಂಶವನ್ನು ಹೊಂದಿದ್ದರೆ ಸರ್ಪ ಮೊದಲಾದವುಗಳಿಂದ ಭಯವು. ಲಗ್ನ ಅಷ್ಟಮಾಧಿಪತಿಗಳು ಕರ್ಕ ರಾಶಿಯಲ್ಲಿದ್ದು ವೃಷಭಾಂಶವನ್ನು ಹೊಂದಿದ್ದರೆ. ಕೊಂಬುಳ್ಳ (ಎತ್ತು, ಎಮ್ಮೆ, ಆಕಳು) ಪ್ರಾಣಿಗಳಿಂದ ಕಂಟಕವು. ಲಗ್ನ ಅಷ್ಟಮಾಧಿಪತಿಗಳು ಕರ್ಕರಾಶಿಯಲ್ಲಿದ್ದು ಮಿಥುನಾಂಶವನ್ನು ಹೊಂದಿದ್ದರೆ. ಕೊಂಬುಳ್ಳ ಪ್ರಾಣಿಗಳಿಂದಾಗಲಿ, ಕೆಂಪುಚೇಳು, ಜೇನುಹುಳಗಳಿಂದಾಗಲಿ ಭಯವು. ಲಗ್ನ ಅಷ್ಟಪತಿಗಳು ವೃಶ್ಚಿಕರಾಶಿಯಲ್ಲಿದ್ದು ಕರ್ಕಾಂಶವನ್ನು ಹೊಂದಿದ್ದರೆ. ವಿಷ ಜಂತುಮಾಧಿಗಳಿಂದ ಭಯವು ಲಗ್ನ ಅಷ್ಟಮಾಧಿಪತಿಗಳು ವೃಶ್ಚಿಕರಾಶಿಯಲ್ಲಿದ್ದು. ಸಿಂಹಾಂಶದಲ್ಲಿದ್ದರೆ ನಾಗರ ಹಾವಿನಿಂದ ಭಯವು. ಲಗ್ನ ಅಷ್ಟಮಾಧಿಪತಿಗಳು ವೃಶ್ಚಿಕ ರಾಶಿಯಲ್ಲಿದ್ದು ಮಕರಾಂಶವನ್ನು ಹೊಂದಿದ್ದರೆ ನೀರಿನ ಸಮೀಪದಲ್ಲಿ ಭಯಂಕರವಾದ ಸರ್ಪಗಳಿಂದ ಭಯವು ಲಗ್ನ ಅಷ್ಟಮಾಧಿಪತಿಗಳು ವೃಶ್ಚಿಕರಾಶಿಯಲ್ಲಿದ್ದು ಕುಂಭಾಂಶವನ್ನು ಹೊಂದಿದ್ದರೆ. ವಿಷಜಂತುಗಳಿಂದ ಭಯವು. ಲಗ್ನ ಅಷ್ಟಮಾಧಿಪತಿಗಳು ವೃಶ್ಚಿಕರಾಶಿಯಲ್ಲಿದ್ದು ಮೀನಾಂಶ

ವನ್ನು ಹೊಂದಿದ್ದರೆ. ಅಡವಿಮೃಗಗಳಿಂದ ಭಯವು. ಲಗ್ನ ಅಷ್ಟಮಾಧಿಪತಿಗಳು ವೃಶ್ಚಿಕ ರಾಶಿಯಲ್ಲಿದ್ದು ಮೇಷಾಂಶವನ್ನು ಹೊಂದಿದ್ದರೆ ಕೆಂಪು ಚೇಳಿನಿಂದ, ವ್ರಣ ಶಸ್ತ್ರಾಸ್ತ್ರ ಅಗ್ನಿಯಿಂದ ಭಯವು. ಲಗ್ನ ಅಷ್ಟಮಾಧಿಪತಿಗಳು ವೃಶ್ಚಿಕ ರಾಶಿಯಲ್ಲಿದ್ದು ವೃಷಭಾಂಶವನ್ನು ಹೊಂದಿದ್ದರೆ ವಿಷಜಂತುವಿನಿಂದಲೂ ಸ್ತ್ರೀಯರಿಂದಲೂ ಕಂಟಕವು. ಲಗ್ನ ಅಷ್ಟಮಾಧಿಪತಿಗಳು ವೃಶ್ಚಿಕರಾಶಿಯಲ್ಲಿದ್ದು ಮಿಥುನಾಂಶವನ್ನು ಹೊಂದಿದ್ದರೆ ವಿಷಜಂತುಗಳಿಂದ ಭಯವು. ಲಗ್ನ ಅಷ್ಟಮಾಧಿಪತಿಗಳು ವೃಶ್ಚಿಕ ರಾಶಿಯಲ್ಲಿದ್ದು ಕರ್ಕಾಂಶವನ್ನು ಹೊಂದಿದ್ದರೆ. ಜಲಭಯವುಂಟಾಗುವದು. ಲಗ್ನ ಅಷ್ಟಮಾಧಿಪತಿಗಳು ವೃಶ್ಚಿಕರಾಶಿಯಲ್ಲಿದ್ದು ಸಿಂಹಾಂಶವನ್ನು ಹೊಂದಿದ್ದರೆ ರಾಜಭಯವು. ವಿಷರೋಗದಿಂದ ಭಯವು. ಲಗ್ನ ಅಷ್ಟಮಾಧಿಪತಿಗಳು ವೃಶ್ಚಿಕರಾಶಿಯಲ್ಲಿದ್ದು. ಕನ್ಯಾಂಶವನ್ನು ಹೊಂದಿದ್ದರೆ ನೀಚಳಾದ ಹೆಂಗಸಿನಿಂದ ಕಂಟಕವು. ಲಗ್ನ ಅಷ್ಟಮಾಧಿಪತಿಗಳು ವೃಶ್ಚಿಕರಾಶಿಯಲ್ಲಿದ್ದು ತುಲಾಂಶವನ್ನು ಹೊಂದಿದ್ದರೆ. ವಿಷ ಭಕ್ಷಣದಿಂದಲೂ ವರ್ತಕರಿಗೆ ವ್ಯಾಪಾರದಿಂದಲೂ ಭಯವು.

— ಗ್ರಹಗಳ ಬಲಾಬಲ ವಿಚಾರ —

ರವಿ, ಗುರು, ಶುಕ್ರರು ಹಗಲು ಬಲಿಷ್ಠರು, ಚಂದ್ರ, ಕುಜ, ಶನಿಗಳು; ರಾತ್ರಿ ಬಲಿಷ್ಠರು, ಬುಧನು ಹಗಲು ರಾತ್ರಿಗಳೆರಡರಲ್ಲಿಯೂ ಬಲಿಷ್ಠನು ಪಾಪಗ್ರಹಗಳು ಕೃಷ್ಣಪಕ್ಷದಲ್ಲಿಯೂ, ಶುಭಗ್ರಹಗಳು ಶುಕ್ಲಪಕ್ಷದಲ್ಲಿಯೂ ಬಲಿಷ್ಠರು.

ಎಲ್ಲ ಗ್ರಹಗಳಲ್ಲಿ ಶನಿಯು ದುರ್ಬಲನು. ನಂತರ ಕುಜ, ಬುಧ, ಗುರು. ಶುಕ್ರ, ಪೂರ್ಣ ಚಂದ್ರ, ರವಿ ಇವರು ಅನುಕ್ರಮವಾಗಿ ಬಲವುಳ್ಳವರಿರುತ್ತಾರೆ ಎಲ್ಲ ಗ್ರಹಗಳಿಗಿಂತ ರವಿಯು ಹೆಚ್ಚು ಬಲವುಳ್ಳವನು.

ಗ್ರಹಗಳು ಉಚ್ಚ ಕ್ಷೇತ್ರಗಳಲ್ಲಿದ್ದರೆ ಪೂರ್ಣ ಶುಭ ಫಲವನ್ನೂ. ಸ್ವಕ್ಷೇತ್ರ ಅಥವಾ ಮೂಲ ತ್ರಿಕೋಣಗಳಲ್ಲಿದ್ದರೆ ಮುಕ್ಕಾಲು ($\frac{3}{1}$) ಭಾಗ ಶುಭ ಫಲವನ್ನೂ; ಮಿತ್ರಕ್ಷೇತ್ರಗಳಲ್ಲಿದ್ದರೆ ಅರ್ಧ ($\frac{1}{2}$) ಭಾಗ ಶುಭ ಫಲವನ್ನೂ, ಶತ್ರು ಕ್ಷೇತ್ರಗಳಲ್ಲಿದ್ದರೆ ಕಾಲು ಭಾಗ ($\frac{1}{4}$) ಶುಭ ಫಲವನ್ನೂ ಕೊಡುವರು. ಗ್ರಹಗಳು ನೀಚಕ್ಷೇತ್ರಗಳಲ್ಲಿದ್ದರೆ ಯಾವ ಶುಭ ಫಲವನ್ನೂ ಕೊಡದೆ ಅದಕ್ಕೆ ಬದಲಾಗಿ ದುಷ್ಟ ಫಲಗಳನ್ನೇ ಕೊಡುವರು.

— ಸೂರ್ಯ ಪುರುಷಾಕೃತಿ ಚಕ್ರ —

ಪುರುಷಾಕಾರ ಚಕ್ರವನ್ನು ಬರೆದು ಅದರಲ್ಲಿ ಕೂಸು ಜನನವಾದ ಸಮಯಕ್ಕೆ ಸೂರ್ಯನ ಯಾವ ನಕ್ಷತ್ರದಲ್ಲಿ ಇರುವನೋ ಆ ನಕ್ಷತ್ರದಿಂದ ೩ ನಕ್ಷತ್ರಗಳನ್ನು ತಲೆಯಲ್ಲಿಯೂ ನಂತರ ಮುಂದಿನ ೩ ನಕ್ಷತ್ರಗಳನ್ನು ಮುಖದಲ್ಲಿಯೂ, ಮುಂದಿನ ೧ ನಕ್ಷತ್ರವನ್ನು ಬಲ ಹೆಗಲಿನಲ್ಲಿಯೂ, ಮುಂದಿನ ೧ ನಕ್ಷತ್ರವನ್ನು ಎಡ ಹೆಗಲಿನಲ್ಲಿಯೂ, ಮುಂದಿನ ೧ ನಕ್ಷತ್ರವನ್ನು ಬಲ ತೋಳಿನಲ್ಲಿಯೂ, ಮುಂದಿನ ೧ ನಕ್ಷತ್ರವನ್ನು ಎಡತೋಳಿನಲ್ಲಿಯೂ, ಆ ಮೇಲೆ ೧ ನಕ್ಷತ್ರವನ್ನು ಬಲ ಹಸ್ತದಲ್ಲಿಯೂ, ಆಮೇಲೆ ೧ ನಕ್ಷತ್ರವನ್ನು ಎಡಹಸ್ತದಲ್ಲಿಯೂ ನಂತರ ೫ ನಕ್ಷತ್ರಗಳನ್ನು ಹೃದಯದಲ್ಲಿಯೂ, ಮುಂದೆ ೧ ನಕ್ಷತ್ರವನ್ನು ನಾಭಿ (ಹೊಕ್ಕಳ) ಯಲ್ಲಿಯೂ ಮುಂದೆ ೧ ನಕ್ಷತ್ರವನು ಗುಹ್ಯ ಸ್ಥಾನದಲ್ಲಿಯೂ ಮುಂದೆ ೧ ನಕ್ಷತ್ರವನ್ನು ಬಲ ತೊಡೆಯಲ್ಲಿಯೂ, ಮುಂದೆ ೧ ನಕ್ಷತ್ರವನ್ನು ಎಡ ತೊಡೆಯಲ್ಲಿಯೂ ಆ ಮೇಲೆ ೨ ನಕ್ಷತ್ರಗಳನ್ನು ಬಲ ಪಾದದಲ್ಲಿಯೂ, ಮುಂದೆ ೨ ನಕ್ಷತ್ರ ಎಡ ಪಾದದಲ್ಲಿಯೂ, ಈ ಪ್ರಕಾರ ಕ್ರಮದಿಂದ ಸೂರ್ಯನಿರುವ ನಕ್ಷತ್ರದಿಂದ ನಕ್ಷತ್ರಗಳನ್ನು ಸ್ಥಾಪಿಸಬೇಕು. ಕೂಸಿನ ಜನನ ನಕ್ಷತ್ರವು ಯಾವಸ್ಥಾನದಲ್ಲಿ ಬರುವದೋ ನೋಡಿ ಅದರ ಫಲವನ್ನು ತಿಳಿದುಕೊಳ್ಳಬೇಕು.

ಫಲವು- ಪುರುಷಾಕಾರ ಆಕೃತಿಯಲ್ಲಿ ಕೂಸಿನ ಜನ್ಮನಕ್ಷತ್ರವು ತಲೆಯಲ್ಲಿ ಬಂದರೆ ರಾಜ್ಯಪದಪ್ರಾಪ್ತಿಯು. ಶ್ರೀಮಂತನಾಗುವಯೋಗವು (ಸರಕಾರಿ ಅಧಿಕಾರಿಯೂ ಆಗಬಹುದು) ಮುಖದಲ್ಲಿ ಬಂದರೆ ವಿದ್ಯಾಭಿವೃದ್ಧಿಯು, ಪಂಡಿತನಾಗುವನು. ಮೃಷ್ಟಾನ್ನ ಭೋಜನವು. ಎರಡೂ ಹೆಗಲುಗಳಲ್ಲಿ ಬಂದರೆ ಐಶ್ವರ್ಯವಂತನು. ಉತ್ತಮ ವಾಹನವುಳ್ಳವನು. ಎರಡೂ ತೋಳುಗಳಲ್ಲಿ ಬಂದರೆ ಆರೋಗ್ಯವಂತನು. ಸದೃಢನು, ಶೂರನೂ; ಧೈರ್ಯಶಾಲಿಯು ಎರಡೂ ಹಸ್ತಗಳಲ್ಲಿ ಬಂದರೆ ಚೋರನಾಗುವನು. ಹೃದಯದಲ್ಲಿ ಬಂದರೆ ಧನವಂತನು. ಐಶ್ವರ್ಯಶಾಲಿಯು ನಾಭಿ (ಹೊಕ್ಕಳ)ಯಲ್ಲಿ ಬಂದರೆ ಸಾಧಾರಣ ಸುಖಭೋಗಿಯು. ಗುಹ್ಯದಲ್ಲಿ ಬಂದರೆ ಪರಸ್ತ್ರೀಯರಲ್ಲಿ ಅಪೇಕ್ಷೆಯುಳ್ಳವನು. ವ್ಯಭಿಚಾರಿಯು, ಕಾಮುಕನು ವಿಷಯಲಂಪಟನು. ಎರಡೂ ತೊಡೆಗಳಲ್ಲಿ ಬಂದರೆ ಪರದೇಶಗಳಲ್ಲಿ ಸಂಚಾರಮಾಡತಕ್ಕವನು. ಎರಡೂ ಪಾದಗಳಲ್ಲಿ ಬಂದರೆ ಬಡವನು, ಕಷ್ಟಜೀವಿಯು, ಧನಹೀನನು, ಅಲ್ಪಾಯುಷಿಯು ಆಗುವನು.

೧೨ ರಾಶಿಯವರು ಘಾತಕ ಮಾಸಾದಿಗಳು.

ಮೇಷರಾಶಿಯವರಿಗೆ- ಕಾರ್ತಿಕಮಾಸ, ಪ್ರತಿಪದ, ಷಷ್ಠಿ, ಏಕಾದಶಿ ತಿಥಿಗಳು, ರವಿವಾರ, ಮಘನಕ್ಷತ್ರ, ವಿಷ್ಕಂಭಯೋಗ, ಬವಕರಣ, ೧ ನೆಯ ಪ್ರಹರ ಸ್ತ್ರೀ-ಪುರುಷರಿಗೆ ೧ನೆಯ ಚಂದ್ರ, ಇವು ಘಾತಕಗಳಾಗಿವೆ

ವೃಷಭರಾಶಿಯವರಿಗೆ- ಮಾರ್ಗಶಿರಮಾಸ, ಪಂಚಮಿ, ದಶಮಿ, ಹುಣ್ಣಿವೆ ತಿಥಿಗಳು, ಶನಿವಾರ, ಹಸ್ತನಕ್ಷತ್ರ, ಶುಕ್ಲಯೋಗ, ಶಕುನಿಕರಣ, ೪ನೆಯ ಪ್ರಹರ, ಪುರುಷರಿಗೆ ೫ನೆಯ ಚಂದ್ರ, ಸ್ತ್ರೀಯರಿಗೆ ೮ನೆಯ ಚಂದ್ರ ಇವು ಘಾತಕಗಳು.

ಮಿಥುನ ರಾಶಿಯವರಿಗೆ- ಆಷಾಢಮಾಸ, ದ್ವಿತಿಯಾ, ಸಪ್ತಮಿ, ದ್ವಾದಶಿ ತಿಥಿಗಳು, ಸೋಮವಾರ, ಸ್ವಾತಿನಕ್ಷತ್ರ, ಪರಿಘಯೋಗ; ಕೌಲವ ಕರಣ, ೩ನೆಯ ಪ್ರಹರ, ಪುರುಷರಿಗೆ ೯ನೆಯ ಚಂದ್ರ, ಸ್ತ್ರೀಯರಿಗೆ ೭ ನೆಯ ಚಂದ್ರ ಇವು ಘಾತಕಗಳಾಗಿವೆ.

ಕರ್ಕರಾಶಿಯವರಿಗೆ- ಪುಷ್ಯಮಾಸ, ದ್ವಿತಿಯಾ, ಸಪ್ತಮಿ, ದ್ವಾದಶಿ ತಿಥಿಗಳು, ಬುಧವಾರ, ಅನುರಾಧ ನಕ್ಷತ್ರ, ವ್ಯಾಘಾತಯೋಗ, ನಾಗವಾನ್ ಕರಣ, ೧ನೆಯ ಪ್ರಹರ, ಪುರುಷರಿಗೆ ೨ನೆಯ ಚಂದ್ರ, ಸ್ತ್ರೀಯರಿಗೆ ೯ನೆಯ ಚಂದ್ರ ಇವು ಘಾತಕಗಳಾಗಿವೆ.

ಸಿಂಹ ರಾಶಿಯವರಿಗೆ— ಜ್ಯೇಷ್ಠಮಾಸ, ತೃತಿಯಾ, ಅಷ್ಟಮಿ, ತ್ರಯೋದಶಿ ತಿಥಿಗಳು, ಶನಿವಾರ ಮೂಲ ನಕ್ಷತ್ರ, ಧೃತಿಯೋಗ, ಬವಕರಣ, ೧ನೆಯ ಪ್ರಹರ, ಪುರುಷರಿಗೆ ೬ನೆಯ ಚಂದ್ರ, ಸ್ತ್ರೀಯರಿಗೆ ೪ನೆಯ ಚಂದ್ರ ಇವು ಘಾತಕಗಳಾಗಿವೆ.

ಕನ್ಯಾ ರಾಶಿಯವರಿಗೆ— ಭಾದ್ರಪದಮಾಸ, ಪಂಚಮಿ, ದಶಮಿ ಹುಣ್ಣಿವೆ ತಿಥಿಗಳು ಶನಿವಾರ ಶ್ರವಣ ನಕ್ಷತ್ರ, ಶುಕ್ಲಯೋಗ, ಕೌಲವಕರಣ, ೧ನೆಯ ಪ್ರಹರ, ಪುರುಷರಿಗೆ ೧೦ನೆಯ ಚಂದ್ರ, ಸ್ತ್ರೀಯರಿಗೆ ೬ನೆಯ ಚಂದ್ರ ಇವು ಘಾತಕಗಳು.

ತುಲಾ ರಾಶಿಯವರಿಗೆ- ಮಾಘಮಾಸ, ಚತುರ್ಥಿ ನವಮಿ, ಚತುರ್ದಶಿ ತಿಥಿಗಳು, ಗುರುವಾರ, ಶತತಾರಾ ನಕ್ಷತ್ರ, ಶುಕ್ಲಯೋಗ, ತೈತಿಲಕರಣ,

೪ನೆಯ ಪ್ರಹರ, ಪುರುಷರಿಗೆ ೩ನೆಯ ಚಂದ್ರ ಸ್ತ್ರೀಯರಿಗೆ ೬ ನೆಯ ಚಂದ್ರ ಇವು ಘಾತಕಗಳು.

ವೃಶ್ಚಿಕ ರಾಶಿಯವರಿಗೆ- ಆಶ್ವಿನಮಾಸ; ಪ್ರತಿಪದ, ಷಷ್ಠಿ, ಏಕಾದಶಿ ತಿಥಿಗಳು, ಶುಕ್ರವಾರ, ರೇವತಿ ನಕ್ಷತ್ರ; ವ್ಯತಿಪಾತಯೋಗ; ಗರಜ ಕರಣ, ೧ನೆಯ ಪ್ರಹರ ಪುರುಷರಿಗೆ ೭ನೆಯ ಚಂದ್ರ, ಸ್ತ್ರೀಯರಿಗೆ ೨ನೆಯ ಚಂದ್ರ, ಇವು ಘಾತಕಗಳು.

ಧನಸ್ಸು ರಾಶಿಯವರಿಗೆ- ಶ್ರಾವಣಮಾಸ, ತೃತಿಯಾ, ಅಷ್ಟಮಿ, ತ್ರಯೋದಶಿ ತಿಥಿಗಳು, ಶುಕ್ರವಾರ, ಭರಣಿನಕ್ಷತ್ರ, ವಜ್ರಯೋಗ, ತೈತಿಲ ಕರಣ, ೧ನೆಯ ಪ್ರಹರ, ಪುರುಷರಿಗೆ ೪ನೆಯ ಚಂದ್ರ, ಸ್ತ್ರೀಯರಿಗೆ ೧೦ನೆಯ. ಚಂದ್ರ ಇವು ಘಾತಕಗಳು.

ಮಕರ ರಾಶಿಯವರಿಗೆ- ವೈಶಾಖಮಾಸ; ಚತುರ್ಥಿ, ನವಮಿ, ಚತುರ್ದಶಿ ತಿಥಿಗಳು ಮಂಗಳವಾರ, ರೋಹಿಣಿನಕ್ಷತ್ರ, ವೈಧೃತಿಯೋಗ ಶಕುನಿ ಕರಣ, ೪ ನೆಯ ಪ್ರಹರ, ಪುರುಷರಿಗೆ ೮ ನೆಯ ಚಂದ್ರ, ಸ್ತ್ರೀಯರಿಗೆ ೧೧ನೆಯ ಚಂದ್ರ ಇವು ಘಾತಕಗಳು.

ಕುಂಭ ರಾಶಿಯವರಿಗೆ- ಚೈತ್ರಮಾಸ, ತದಿಗಿ; ಅಷ್ಟಮಿ, ತ್ರಯೋದಶಿ ತಿಥಿಗಳು, ಗುರುವಾರ. ಆರಿದ್ರಾನಕ್ಷತ್ರ, ಗಂಡಯೋಗ, ಕಿಂಸ್ತುಘ್ನಕರಣ, ೩ನೆಯ ಪ್ರಹರ, ಪುರುಷರಿಗೆ ೧೧ನೆಯ ಚಂದ್ರ, ಸ್ತ್ರೀಯರಿಗೆ ೫ನೆಯ ಚಂದ್ರ ಇವು ಘಾತಕಗಳು.

ಮೀನ ರಾಶಿಯವರಿಗೆ- ಫಾಲ್ಗುಣಮಾಸ, ಪಂಚಮಿ, ದಶಮಿ, ಪೌರ್ಣಿಮಾ ತಿಥಿಗಳು, ಶುಕ್ರವಾರ ಆಶ್ಲೇಷ ನಕ್ಷತ್ರ, ವಜ್ರಯೋಗ, ಚತುಷ್ಪಾದಕರಣ, ೪ನೆಯ ಪ್ರಹರ, ಪುರುಷರಿಗೂ, ಸ್ತ್ರೀಯರಿಗೂ ೧೨ನೆಯ ಚಂದ್ರ ಇವು ಘಾತಕಗಳು.

ಈ ಘಾತ ಮಾಸಾದಿಗಳನ್ನು ಪ್ರವಾಸ, ಯಾತ್ರಾ; ರಾಜದರ್ಶನ ಅಥವಾ ಅಧಿಕಾರಿಗಳ ಭೆಟ್ಟಿ; ವ್ಯಾಪಾರ, ಉದ್ಯೋಗಗಳ ಆರಂಭ, ಹೊಸ ವಸ್ತ್ರಾಭರಣ ಧರಿಸುವದು. ಜೂಜು; ಹೊಸ ಮನೆ ಕಟ್ಟಿಸುವದು; ಯುದ್ಧ ಕೋರ್ಟು ಕಚೇರಿ ಕೆಲಸಗಳು ಇತ್ಯಾದಿ ಪ್ರಸಂಗಗಳಲ್ಲಿ ಮಾತ್ರ ಬಿಡಬೇಕು.

ವಿವಾಹ ದೀಕ್ಷಾ, ಉಪನಯನ ಸಮಯದಲ್ಲಿ ಇವುಗಳನ್ನು ತ್ಯಾಜ್ಯ ಮಾಡುವ ಅವಶ್ಯಕತೆ ಇರುವದಿಲ್ಲ.

— ಯೋಗಗಳು —

ರಜ್ಜು ಯೋಗ– ಎಲ್ಲಗ್ರಹಗಳು ಚರರಾಶಿಗಳಲ್ಲಿ, ಕೇಂದ್ರಗಳಾದ ಲಗ್ನ ಚತುರ್ಥ, ಸಪ್ತಮ, ದಶಮಗಳಲ್ಲಿದ್ದರೆ— ರಜ್ಜು ಎಂಬ ಯೋಗ ವಾಗುವದು. ಈ ಯೋಗದಲ್ಲಿ ಹುಟ್ಟಿದವರು ಪ್ರವಾಸದಲ್ಲಿ ಹೆಚ್ಚಿನ ಪ್ರೀತಿ ಯುಳ್ಳವರೂ, ಪರದೇಶಗಳಲ್ಲಿ ಬಹು ಹೆಚ್ಚಿನ ದ್ರವ್ಯ ಸಂಪಾದಿಸತಕ್ಕವರೂ, ಅಸೂಯಾಪರರೂ ಆಗುವರು.

ಮುಸಲಯೋಗ– ಸರ್ವ ಗ್ರಹಗಳು ಸ್ಥಿರರಾಶಿಗಳಲ್ಲಿ, ದ್ವಿತೀಯ ಪಂಚಮ, ಅಷ್ಟಮ ಏಕಾದಶ, ಈ ನಾಲ್ಕು ಸ್ಥಾನಗಳಲ್ಲಿದ್ದರೆ ಮುಸಲ ಯೋಗವೆನಿಸಲ್ಪಡುತ್ತದೆ. ಈ ಯೋಗದಲ್ಲಿ ಹುಟ್ಟಿದವರು— ಮಾನವಂತರೂ, ಧನವಂತರೂ, ಅನೇಕ ಕಾರ್ಯಗಳನ್ನು ಕೈ ಕೊಳ್ಳುವವರೂ ಉದ್ಯಮಿಗಳೂ ಆಗುವರು.

ನಲಯೋಗ– ದ್ವಿಸ್ವಭಾವ ರಾಶಿಗಳಾದ ತೃತೀಯ, ಷಷ್ಠ, ನವಮ, ಈ ನಾಲ್ಕು ರಾಶಿಗಳಲ್ಲಿ ಸಪ್ತಗ್ರಹಗಳಿದ್ದರೆ– ನಲ ಎಂಬ ಯೋಗವಾಗುವದು ಈ ಯೋಗದಲ್ಲಿ ಜನಿಸಿದವರು ಬುದ್ಧಿವಂತರೂ, ಸೂಕ್ಷ್ಮಾಲೋಚನೆಯುಳ್ಳ ವರೂ, ಧನವಂತರೂ, ವಿಕಲಾಂಗರೂ ಆಗುವರು.

ಸ್ರಗ್ಯೋಗ––ಯಾವ ರಾಶಿಯಲ್ಲೇ ಆಗಲಿ, ಕೇಂದ್ರಗಳಾದ ಲಗ್ನ, ಚತುರ್ಥ, ಸಪ್ತಮ, ದಶಮಗಳಲ್ಲಿ ಎಲ್ಲ ಗ್ರಹಗಳಿದ್ದರೆ ಸ್ರಗ್ಯೋಗವಾಗುವದು. ಈ ಯೋಗದಲ್ಲಿ ಜನಿಸಿದವರು ಅನೇಕ ತರದ ವಸ್ತ್ರ–ವಾಹನಾದಿ ಭೋಗ ಸೌಖ್ಯವುಳ್ಳವರಾಗುವರು.

ವ್ಯಾಳಯೋಗ– ಎಲ್ಲ ಕೇಂದ್ರಗಳಲ್ಲಿ ಪಾಪಗ್ರಹಗಳಿದ್ದರೆ ವ್ಯಾಳ ಎಂಬ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು ಅನೇಕ ದುಃಖಗಳನ್ನು ಅನುಭವಿಸುವವರೂ, ದರಿದ್ರರೂ, ಪರಾನ್ನ ಭುಂಜಿಸುವವರೂ, ಯಾವಾಗಲೂ ನಿದ್ರಾಲಸ್ಯವುಳ್ಳವರೂ ಆಗುವರು.

ಗದಾಯೋಗ– ಎಲ್ಲ ಗ್ರಹಗಳು ಲಗ್ನ ಚತುರ್ಥಗಳಲ್ಲಾಗಲಿ, ಲಗ್ನ ದಶಮಗಳಲ್ಲಾಗಲಿ ಚತುರ್ಥ ಸಪ್ತಮಗಳಲ್ಲಾಗಲಿ, ಸಪ್ತಮ ದಶಮ

ಗಳಲ್ಲಾಗಲಿ ಇದ್ದರೆ ಗದಾ ಎಂಬ ಯೋಗವಾಗುವದು. ಈ ಯೋಗದಲ್ಲಿ ಜನಿಸಿದವರು ಅನೇಕ ಪ್ರಕಾರದಿಂದ ಧನಾರ್ಜನೆ ಮಾಡುವವರೂ, ಧನ ವಂತರೂ ಸತ್ಕರ್ಮಿಗಳೂ, ಬುದ್ಧಿವಂತರೂ ಆಗುವರು.

ವಿಹಗಯೋಗ-- ದಶಮ ಮತ್ತು ಚತುರ್ಥಗಳಲ್ಲಿ ಸರ್ವ ಗ್ರಹ ಗಳಿದ್ದರೆ ವಿಹಗ ಎಂಬ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು ಪ್ರವಾಸದಲ್ಲಿ ಪ್ರೀತಿಯುಳ್ಳವರೂ, ದೂತವೃತ್ತಿಯುಳ್ಳವರೂ, ಜಗಳಗಂಟರೂ ಸುಖಾಲ್ಪರೂ ಆಗುವರು.

ಶಕಟಯೋಗ-- ಲಗ್ನ ಮತ್ತು ಸಪ್ತಮ ಈ ಎರಡೂ ರಾಶಿಗಳಲ್ಲಿ ಸರ್ವ ಗ್ರಹಗಳಿದ್ದರೆ ಶಕಟ ಎಂಬ ಯೋಗವಾಗುವದು. ಈ ಯೋಗದಲ್ಲಿ ಜನಿಸಿದವರು ಗಾಡಿ ಮೊದಲಾದವುಗಳನ್ನು ಇಟ್ಟುಕೊಂಡು ಜೀವಿಸುವವರೂ, ಕರ್ಮಭ್ರಷ್ಟೆಯಾದ ಹೆಂಡತಿಯುಳ್ಳವರೂ, ದರಿದ್ರರೂ ಆಗುವರು.

ಶೃಂಗಾಟಕಯೋಗ-- ಸರ್ವ ಗ್ರಹಗಳು ಲಗ್ನ ಪಂಚಮ ನವಮ ಈ ಸ್ಥಾನಗಳಲ್ಲಿದ್ದರೆ ಶೃಂಗಾಟಕ ಎಂಬ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು-- ಇಬ್ಬರು ಹೆಂಡರುಗಳುಳ್ಳವರೂ, ಮೊದಲನೆ ಹೆಂಡತಿಯನ್ನು ಹೆಚ್ಚಾಗಿ ಪ್ರೀತಿಸಿ ಎರಡನೆಯ ಹೆಂಡತಿಯನ್ನು ವಿರೋಧಿಸುವವರೂ, ಹಸನ್ಮುಖಿ ಗಳೂ, ಅಂತ್ಯ ವಯಸ್ಸಿನಲ್ಲಿ ಸುಖವನ್ನು ಅನುಭೋಗಿಸುವವರೂ ಆಗುವರು.

ಹಲಯೋಗ-- ಎಲ್ಲ ಗ್ರಹಗಳು ದ್ವಿತೀಯ, ಷಷ್ಠ, ದಶಮದಲ್ಲಾ ಗಲಿ, ತೃತೀಯ, ಸಪ್ತಮ, ಏಕಾದಶದಲ್ಲಾಗಲಿ, ಚತುರ್ಥ, ಅಷ್ಟಮ; ದ್ವಾದಶಗಳಲ್ಲಾಗಲಿ, ಯಾವುದಾದರೂ ಮೂರು ರಾಶಿಗಳಲ್ಲಿದ್ದರೆ ಹಲ ಎಂಬ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು, ಕೃಷಿ ಮೂಲದಿಂದ ಜೀವಿಸುವವರೂ, ಅಲ್ಪ ಧನವಂತರೂ, ಕಷ್ಟ ಜೀವಿಗಳೂ ಆಗುವರು.

ವಜ್ರಯೋಗ-- ಲಗ್ನ ಸಪ್ತಮ-ದಶಮಗಳಲ್ಲಿ ಶುಭಗ್ರಹಗಳಾಗಲಿ ದಶಮ, ಚತುರ್ಥಗಳಲ್ಲಿ ಪಾಪಗ್ರಹಗಳಾಗಲಿ ಇದ್ದರೆ ವಜ್ರಯೋಗವಾ ಗುವದು. ಈ ಯೋಗದಲ್ಲಿ ಹುಟ್ಟಿದವರು ತಮ್ಮ ಮಧ್ಯಪ್ರಾಯದಲ್ಲಿ ಕಷ್ಟ ವನ್ನು ಅನುಭವಿಸುವವರೂ, ಮಿಕ್ಕ ಬಾಲ್ಯ ಮತ್ತು ವೃದ್ಧಾಪ್ಯದಲ್ಲಿ ಸುಖ ವನ್ನು ಅನುಭೋಗಿಸುವವರೂ, ಸ್ಥಿರಚಿತ್ತರೂ, ಸಹನಶಕ್ತಿಯುಳ್ಳವರೂ, ಧನ ವಂತರೂ ಆಗುವರು.

ಯುವಯೋಗ— ಲಗ್ನ, ಚತುರ್ಥ; ದಶಮಗಳಲ್ಲಿ ಅಶುಭ ಗ್ರಹಗಳಾಗಲಿ, ದಶಮ ಚತುರ್ಥಗಳಲ್ಲಿ ಶುಭಗ್ರಹಗಳಾಗಲಿ ಇದ್ದರೆ ಯುವ ಎಂಬ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು ತಮ್ಮ ಮಧ್ಯ ಪ್ರಾಯದಲ್ಲಿ ಹೆಚ್ಚಿನ ಸುಖವುಳ್ಳವರೂ, ಬಾಲ್ಯ ಮತ್ತು ವೃದ್ಧಾಪ್ಯದಲ್ಲಿ ಅಲ್ಪ ಸುಖವುಳ್ಳವರೂ, ದಾನ ಧರ್ಮವಂತರೂ ಸತ್ಕರ್ಮಿಗಳೂ ಆಗುವರು.

ಪದ್ಮಯೋಗ— ದಶಮ ಮತ್ತು ಚತುರ್ಥದಲ್ಲಿ ಶುಭಗ್ರಹರಿದ್ದು ಲಗ್ನ; ಸಪ್ತಮಗಳಲ್ಲಿ ಪಾಪಗ್ರಹರಿದ್ದು, ಮಿಕ್ಕ ಯಾವ ರಾಶಿಯಲ್ಲಿಯೂ ಗ್ರಹಗಳಿಲ್ಲದಿದ್ದರೆ ಪದ್ಮ ಎಂಬ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು ಆಯುಷ್ಮಂತರೂ, ಕೀರ್ತಿವಂತರೂ, ಸುಖಭೋಗ ಅಧಿಕವುಳ್ಳವರೂ, ಧನವಂತರೂ ಆಗುವರು.

ವಾಪಿಯೋಗ- ದ್ವಿತೀಯ ಪಂಚಮ; ಅಷ್ಟಮ ಏಕಾದಶ, ಈ ನಾಲ್ಕು ಸ್ಥಾನಗಳಲ್ಲಿಯಾಗಲಿ, ತೃತೀಯ, ಷಷ್ಠ, ನವಮ, ದ್ವಾದಶ, ಈ ನಾಲ್ಕು ಸ್ಥಾನಗಳಲ್ಲಿಯಾಗಲಿ, ಸರ್ವ ಗ್ರಹಗಳಿದ್ದರೆ ವಾಪಿಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು ಬಹು ಧನವಂತರೂ; ಕೃಪಣರೂ, ದೀರ್ಘಾಯುಷಿಗಳೂ. ಸಂತಾನ ಸೌಖ್ಯವನ್ನು ವಿಪುಲವಾಗಿ ಅನುಭವಿಸುವವರೂ ಆಗುವರು.

ಯೂಪಯೋಗ- ಲಗ್ನ, ದ್ವಿತೀಯ, ತೃತೀಯ ಚತುರ್ಥಗಳಲ್ಲಿ ತಪ್ಪದೆ ಎಲ್ಲ ಗ್ರಹಗಳಿದ್ದರೆ ಯೂಪ ಎಂಬ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು ಧನವಂತರೂ, ಉದಾರ ಬುದ್ಧಿಯವರೂ, ಸತ್ಕರ್ಮಿಗಳೂ ಮಂತ್ರವಾದಿಗಳೂ, ಬುದ್ಧಿವಂತರೂ ಆಗುವರು.

ಶರಯೋಗ- ಚತುರ್ಥ, ಪಂಚಮ, ಷಷ್ಠ, ಸಪ್ತಮ, ಈ ನಾಲ್ಕು ಸ್ಥಾನಗಳಲ್ಲಿ ತಪ್ಪದೆ ಸರ್ವ ಗ್ರಹಗಳಿದ್ದರೆ ಶರ ಎಂಬ ಯೋಗವಾಗುವದು, ಈ ಯೋಗದಲ್ಲಿ ಜನಿಸಿದವರು ಹಿಂಸಾಕೃತ್ಯಗಳನ್ನು ಮಾಡುವವರೂ, ಶಸ್ತ್ರಾಸ್ತ್ರಗಳನ್ನು ತಯಾರಿಸುವವರೂ ಆಗುವರು.

ಶಕ್ತಿಯೋಗ- ಸಪ್ತಮ, ಅಷ್ಟಮ, ನವಮ, ದಶಮ, ಈ ನಾಲ್ಕು ಸ್ಥಾನಗಳಲ್ಲಿ ಎಲ್ಲ ಗ್ರಹಗಳು ತಪ್ಪದೆ ಇದ್ದರೆ ಶಕ್ತಿ ಎಂಬ ಯೋಗವಾಗುತ್ತದೆ.

ಈ ಯೋಗದಲ್ಲಿ ಜನಿಸಿದವರು ದುಃಖಿಗಳೂ, ದೀನರೂ, ದರಿದ್ರರೂ, ಕುಲೋನುಚಿತಕೃತ್ಯ ಮಾಡುವವರೂ ಆಗುವರು.

ದಂಡಯೋಗ— ದಶಮ, ಏಕಾದಶ, ದ್ವಾದಶ, ಲಗ್ನ ಈ ಸ್ಥಾನಗಳಲ್ಲಿ ತಪ್ಪದೆ, ಎಲ್ಲ ಗ್ರಹಗಳಿದ್ದರೆ ದಂಡ ಎಂಬ ಯೋಗವಾಗುವದು. ಈ ಯೋಗದಲ್ಲಿ ಜನಿಸಿದವರು— ಹೀನಬುದ್ಧಿಯವರೂ, ಬಂಧುಜನರಿಂದ ಬಿಡಲ್ಪಡುವವರೂ, ದೀನರೂ ಆಗುವರು.

ನೌಕಾಯೋಗ—೧, ೨, ೩, ೪, ೫, ೬, ೭ ಹೀಗೆ ಕ್ರಮವಾಗಿ ಲಗ್ನದಿಂದ ಸಪ್ತಮದ ವರೆಗೆ ತಪ್ಪದೆ ಒಂದೊಂದು ಸ್ಥಾನದಲ್ಲಿ ಒಂದೊಂದು ಗ್ರಹವಿದ್ದರೆ ನೌಕಾ ಎಂಬ ಯೋಗವಾಗುವದು. ಈ ಯೋಗದಲ್ಲಿ ಜನಿಸಿದವರು ಕೃಪಣರೂ, ಕೀರ್ತಿವಂತರೂ, ಭೋಗ, ಭಾಗ್ಯಾದಿಗಳ ಸುಖವಿಹೀನರೂ ಆಯುಷ್ಯವಂತರೂ ಆಗುವರು.

ಕೂಟಯೋಗ— ಲಗ್ನದಿಂದ ೪, ೬, ೭, ೮, ೯, ೧೦, ಸ್ಥಾನಗಳಲ್ಲಿ ಕ್ರಮವಾಗಿ ತಪ್ಪದೆ ಎಲ್ಲ ಗ್ರಹಗಳಿದ್ದರೆ ಕೂಟ ಎಂಬ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು ಧರ್ಮಾಧರ್ಮ ಜ್ಞಾನವಿಲ್ಲದವರೂ, ಅಸತ್ಯವಾದಿಗಳೂ ಆಗುವರು.

ಚಕ್ರಯೋಗ— ಲಗ್ನದಿಂದ ೭, ೮, ೯, ೧೦, ೧೧, ೧೨, ೧ ಈ ಎಲ್ಲ ಸ್ಥಾನಗಳಲ್ಲಿ ತಪ್ಪದೆ ಕ್ರಮವಾಗಿ ಸರ್ವ ಗ್ರಹಗಳಿದ್ದರೆ ಚಕ್ರ ಎಂಬ ಯೋಗವುಂಟಾಗುತ್ತದೆ. ಈ ಯೋಗದಲ್ಲಿ ಹುಟ್ಟಿದವರು ತಮ್ಮ ಮಧ್ಯ ವಯಸ್ಸಿನಲ್ಲಿ ಅಲ್ಪ ಸುಖವಂತರೂ, ಬಾಲ್ಯ, ವೃದ್ಧಾಪ್ಯಗಳಲ್ಲಿ ಹೆಚ್ಚಿನ ಸುಖವನ್ನು ಅನುಭವಿಸುವವರೂ, ದಯಾಳುಗಳೂ, ಅನೇಕ ಕಾರ್ಯಗಳನ್ನು ಮಾಡುವವರೂ ಆಗುವರು.

ಕಾರ್ಮುಕಯೋಗ— ಲಗ್ನದಿಂದ ೧೦, ೧೧, ೧೨, ೧, ೨, ೩, ೪ ಈ ಎಲ್ಲ ಸ್ಥಾನಗಳಲ್ಲಿ ತಪ್ಪದೆ ಸರ್ವ ಗ್ರಹಗಳಿದ್ದರೆ ಕಾರ್ಮುಕ ಎಂಬ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು ತಮಗೆ ಸಂಕಟವನ್ನು ತಾವೇ ತಂದುಕೊಳ್ಳುವವರೂ, ಧನವಂತರೂ, ಶೂರರೂ, ಸಾಹಸಿಗಳೂ, ಮಧ್ಯವಯಸ್ಸಿನಲ್ಲಿ ಅಲ್ಪ ಸುಖವುಳ್ಳವರೂ ಆಗುವರು.

ಅರ್ಧಚಂದ್ರಯೋಗ— ಲಗ್ನದಿಂದ ೫, ೮, ೧೧, ೩, ೬, ೯, ೧೨, ಈ ಸ್ಥಾನಗಳಲ್ಲಿ ಕ್ರಮವಾಗಿ ಏಳು ಗ್ರಹಗಳಿದ್ದರೆ ಅರ್ಧಚಂದ್ರ ಯೋಗವಾಗುವದು. ಈ ಯೋಗದಲ್ಲಿ ಜನಿಸಿದವರು— ಸರ್ವಜನ ಸನ್ಮಾನಿತರೂ, ಪ್ರಖ್ಯಾತ ಪುರುಷರೂ, ಧನವಂತರೂ, ರಾಜಪ್ರಿಯರೂ, ಕಾಂತಿಯುಕ್ತ ಶರೀರಿಗಳೂ, ರತ್ನಾಭರಣಾದಿಗಳ ಪ್ರಾಪ್ತಿಯುಳ್ಳವರೂ, ಸರ್ವಭೋಗಯುಕ್ತರೂ ಆಗುವರು.

ಸಮುದ್ರಯೋಗ— ಲಗ್ನದಿಂದ ೨, ೪, ೬, ೮, ೧೦, ೧೨ ಈ ಸ್ಥಾನಗಳಲ್ಲಿ ತಪ್ಪದೆ ಸರ್ವ ಗ್ರಹಗಳಿದ್ದರೆ ಸಮುದ್ರ ಎಂಬ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು ಪರೋಪಕಾರಿಗಳೂ; ಧರ್ಮ ಬುದ್ಧಿಯವರೂ, ಧನವಂತರೂ, ಸಾಹಸಯುಕ್ತರೂ, ಧೀರರೂ, ಸರ್ವ ಪ್ರಕಾರದ ಭೋಗಭಾಗ್ಯಯುಕ್ತರೂ, ಆಗುವರು.

ಛತ್ರಯೋಗ—ಲಗ್ನದಿಂದ ೩, ೫, ೭, ೯, ೧೧, ಈ ಸ್ಥಾನಗಳಲ್ಲಿ ಸರ್ವ ಗ್ರಹಗಳಿದ್ದರೆ ಛತ್ರ ಎಂಬ ಯೋಗವಾಗುತ್ತದೆ. ಈ ಯೋಗದಲ್ಲಿ ಹುಟ್ಟಿದವರು ರಾಜರಾಗಲಿ, ರಾಜಸಮಾನರಾಗಿಯಾಗಲಿ ಆಗುವರು ಮತ್ತು ರಾಜರಂತೆ ಅನೇಕ ತರದ ಸುಖಭೋಗ್ಯಾದಿಗಳನ್ನನುಭೋಗಿಸುವರೂ ಆಗುವರು.

ವೀಣಾಯೋಗ— ಕ್ರಮವಾಗಿ ತಪ್ಪದೆ ಏಳು ಸ್ಥಾನಗಳಲ್ಲಿ ಸರ್ವ ಗ್ರಹಗಳಿದ್ದರೆ ವೀಣಾಯೋಗವಾಗುವದು. ಈ ಯೋಗದಲ್ಲಿ ಜನಿಸಿದವರು ಅನೇಕ ಸೇವಕರುಳ್ಳವರೂ, ನೃತ್ಯಾದಿಗಳಲ್ಲಿ ಬಹಳ ಆಸಕ್ತಿಯುಳ್ಳವರೂ, ಧನವಂತರೂ ಬಹು ಸೂಕ್ಷ್ಮ ಬುದ್ಧಿಯುಳ್ಳವರೂ, ಅನೇಕರನ್ನು ಪೋಷಿಸುವವರೂ ಆಗುವರು.

ದಾಮಯೋಗ— ೬ ಸ್ಥಾನಗಳಲ್ಲಿ ತಪ್ಪದೆ ಸರ್ವ ಗ್ರಹಗಳಿದ್ದರೆ ದಾಮ ಎಂಬ ಯೋಗವಾಗುವದು ಈ ಯೋಗದಲ್ಲಿ ಹುಟ್ಟಿದವರು—ಧನವಂತರೂ, ಉದಾರ ಬುದ್ಧಿಯವರೂ, ಪರೋಪಕಾರ ನಿರತರೂ ಆಗುವರು.

ಪಾಶಯೋಗ—ಐದು ಸ್ಥಾನಗಳಲ್ಲಿ ಕ್ರಮವಾಗಿ ಎಲ್ಲ ಗ್ರಹಗಳಿದ್ದರೆ ಪಾಶ ಎಂಬ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು ಅಪಕಾರಿಗಳೂ, ಡಾಂಭಿಕರೂ, ಅನುಚಿತ ಕಾರ್ಯಗಳನ್ನು ಮಾಡುವವರೂ ಆಗುವರು.

ಕೇದಾರಯೋಗ-- ಸರ್ವ ಗ್ರಹಗಳು ತಪ್ಪದೆ ನಾಲ್ಕು ರಾಶಿಗಳಲ್ಲಿರುವಾಗ ಕೇದಾರನೆಂಬ ಯೋಗವಾಗುವದು. ಈ ಯೋಗದಲ್ಲಿ ಜನಿಸಿದವರು

ಸತ್ಯವಾದಿಗಳೂ, ಧನವಂತರೂ, ಚಂಚಲ ಬುದ್ಧಿಯುವರೂ ಕೃಷಿಕಾರ್ಯಾಸಕ್ತರೂ ಆಗುವರು

ತ್ರಿಶೂಲಯೋಗ—ಸರ್ವ ಗ್ರಹಗಳು ಮೂರು ಸ್ಥಾನಗಳಲ್ಲಿರುವಾಗ ತ್ರಿಶೂಲ ಎಂಬ ಯೋಗವಾಗುವದು. ಈ ಯೋಗದಲ್ಲಿ ಜನಿಸಿದವರು ಕಠೋರವಾದ ಮನಸ್ಸುಳ್ಳವರೂ, ಯುದ್ಧದಲ್ಲಿ ಪ್ರೀತಿಯುಳ್ಳವರೂ ಧೀರರೂ ಆಗುವರು.

ಯುಗಯೋಗ— ಎಲ್ಲ ಗ್ರಹಗಳು ಎರಡು ಸ್ಥಾನಗಳಲ್ಲಿದ್ದರೆ ಯುಗ ಎಂಬ ಯೋಗವಾಗುವದು. ಈ ಯೋಗದಲ್ಲಿ ಜನಿಸಿದವರು-ಯುಕ್ತಾಯುಕ್ತ ಜ್ಞಾನಶೂನ್ಯರೂ, ಧರ್ಮಹೀನರೂ, ನಿಂದ್ಯರೂ, ನಿರ್ಧನರೂ ಆಗುವರು.

ಗೋಳಯೋಗ-ಸರ್ವ ಗ್ರಹಗಳು ಒಂದೇ ಸ್ಥಾನದಲ್ಲಿದ್ದರೆ ಗೋಳ ಎಂಬ ಯೋಗವಾಗುವದು, ಈ ಯೋಗದಲ್ಲಿ ಜನಿಸಿದವರು— ವಿದ್ಯಾವಿಹೀನರೂ, ಮಂದ ಬುದ್ಧಿಯುವರೂ ದುಃಖಿಗಳೂ, ಮಾನಹೀನರೂ ಆಗುವರು.

ಚಾಂದ್ರಯೋಗ— ರವಿಗೆ ಕೇಂದ್ರಸ್ಥಾನಗಳಾದ೧,೪,೭,೧೦, ಸ್ಥಾನಗಳಲ್ಲಿ ಚಂದ್ರನಿದ್ದರೆ ಅಲ್ಪ ಧನವಂತರೂ,ಫಣಾಪರಸ್ಥಾನಗಳಾದ ೨,೫,೮,೧೧, ಸ್ಥಾನಗಳಲ್ಲಿದ್ದರೆ ಧನ, ಶೀಲ,ಜ್ಞಾನಗಳು ಮಧ್ಯಮವುಳ್ಳವರಾಗಿಯೂ, ಅಪೋಕ್ಲಿಬಗಳಾದ ೩,೬,೯,೧೨ ಸ್ಥಾನಗಳಲ್ಲಿದ್ದರೆ ಅಧಿಕ ಧನವಂತರೂ, ಸುಖವಂತರೂ, ಜ್ಞಾನಿಗಳೂ, ಬುದ್ಧಿವಂತರೂ, ಅನೇಕ ಕಾರ್ಯಗಳನ್ನು ಮಾಡುವವರಾಗಿಯೂ ಆಗುತ್ತಾರೆ.ಮತ್ತು ಚಂದ್ರನು ಸ್ವನವಾಂಶದಲ್ಲಿದ್ದು ಗುರುವಿನಿಂದ ನೋಡಲ್ಪಟ್ಟು, ಹಗಲು ಜನನವಾದರೆ ಬಹು ಭಾಗ್ಯಯುಕ್ತರೂ, ಧರ್ಮಬುದ್ಧಿಯುಳ್ಳವರೂ ಆಗುವರು. ರಾತ್ರಿ ಜನನವಾಗಿ ಶುಕ್ರನಿಂದ ನೋಡಲ್ಪಟ್ಟರೆ- ಅಧಿಕ ಭಾಗ್ಯಯುಕ್ತರೂ, ಧನವಂತರೂ, [illegible]ಗಳಲ್ಲಿ ನಿಪುಣರೂ, ಕಾಮಿಗಳೂ ಆಗುವರು.

ಅಧಿಯೋಗ— ಚಂದ್ರನಿಗೆ ಷಷ್ಠದಲ್ಲಾಗಲಿ, ಸಪ್ತಮದಲ್ಲಾಗಲಿ ಅಷ್ಟಮದಲ್ಲಾಗಲಿ ಶುಭಗ್ರಹಗಳಾದ ಗುರು, ಬುಧ ಶುಕ್ರರು ಅಥವಾ ಷಷ್ಠ ಸಪ್ತಮಃ ಅಷ್ಟಮದಲ್ಲಿ ಒಂದೊಂದರಲ್ಲಿ ಒಂದೊಂದ ಗ್ರಹವಿದ್ದರೆ ಅಧಿಯೋಗವಾಗುವದು. ಇದಕ್ಕೆ ಶುಭಾಧಿಯೋಗವೆಂದು ಹೆಸರು ಪಾಪ ಮತ್ತು ಶುಭರು ಕೂಡಿದ್ದರೆ ಮಿಶ್ರಾಧಿಯೋಗ; ಪಾಪಗ್ರಹರು ಮಾತ್ರ ಇದ್ದರೆ ಪಾಪಾಧಿಯೋಗವಾಗುವದು. ಗುರು, ಬುಧ, ಶುಕ್ರರು ಬಲಿಷ್ಠರಾಗಿದ್ದರೆ ರಾಜ

ಸಮಾನರಾಗುವರು. ಮಧ್ಯಬಲಿಗಳಾದರೆ ದೊಡ್ಡ ಅಧಿಕಾರಿಯಾಗುವರು. ಹೀನಬಲಿಗಳಾದರೆ ಅಲ್ಪ ಸೌಖ್ಯೈಶ್ವರ್ಯವುಳ್ಳವರೂ, ದೀರ್ಘಾಯುಷಿಗಳೂ, ನಿರೋಗಿಗಳೂ ಆಗುವರು.

ಕೇಮದ್ರುಮಯೋಗ- ಚಂದ್ರನಿಗೆ ದ್ವಿತೀಯ ದ್ವಾದಶದಲ್ಲಿ ಪಂಚತಾರಾಗ್ರಹಗಳಾದ ಕುಜ, ಬುಧ, ಗುರು, ಶುಕ್ರ, ಶನಿಗಳಲ್ಲಿ ಯಾರಾದರೊಬ್ಬರು ಇಲ್ಲದಿದ್ದರೆ ಕೇಮದ್ರುಮ ಎಂಬ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು ಕೇವಲ ದರಿದ್ರರಾಗುವರು.

ಸುನಫಾಯೋಗ- ಚಂದ್ರನಿಗೆ ದ್ವಿತೀಯದಲ್ಲಿ ಸೂರ್ಯನಲ್ಲದೆ ಮಿಕ್ಕ ತಾರಾಗ್ರಹಗಳಲ್ಲಿ ಒಂದು ಗ್ರಹವು ದ್ವಿತೀಯದಲ್ಲಿ ೧೫ ಭಾಗದ ನಂತರವಿದ್ದರೆ ಸುನಫಾ ಎಂಬ ಯೋಗವಾಗುವದು . ಈ ಯೋಗದಲ್ಲಿ ಹುಟ್ಟಿದವರು ಸ್ವಾರ್ಜಿತದಿಂದ ಧನವನ್ನು ಸಂಪಾದಿಸುವವರೂ, ಕೀರ್ತಿವಂತರೂ ಆಗುವರು.

ಅನಫಾಯೋಗ- ಚಂದ್ರನಿಗೆ ದ್ವಾದಶದಲ್ಲಿ ೧೫ ಭಾಗಕ್ಕೆ ಹಿಂದೆ ಪಂಚತಾರಾಗ್ರಹಗಳಲ್ಲೊಂದು ಗ್ರಹವಿದ್ದರೆ ಅನಫಾ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು ಬಹು ಕಾಮಿಗಳೂ, ಭೋಗ ಭಾಗ್ಯಯುಕ್ತರೂ, ಉದಾರ ಮನಸ್ಸಿನವರೂ, ಕೀರ್ತಿವಂತರೂ, ಧನವಂತರೂ ಆಗುವರು.

ಧುರುಧುರಾಯೋಗ- ಚಂದ್ರನಿಗೆ ದ್ವಿತೀಯ ದ್ವಾದಶಗಳಲ್ಲಿ ಗ್ರಹಗಳಿದ್ದರೆ ಧುರುಧುರಾ ಎಂಬ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು ಅನೇಕ ವಿಧದ ಸುಖೋಪಭೋಗವುಳ್ಳವರೂ ಧನವಾಹನಾದಿಗಳಿಂದ ಯುಕ್ತರೂ, ಉದಾರ ಬುದ್ಧಿಯುವರೂ ತೇಜಸ್ವಿಗಳೂ ಆಗುವರು.

ಕೇಮದ್ರುಮಯೋಗಭಂಗ - ಚಂದ್ರನಿಗೆ ಎಲ್ಲ ಶುಭಗ್ರಹಗಳ ದೃಷ್ಟಿ ಇದ್ದರೂ, ಅಥವಾ ಚಂದ್ರನಿಗೆ ಕೇಂದ್ರದಲ್ಲಿ ಶುಭಗ್ರಹಗಳಿದ್ದರೂ ಜಾತಕನಿಗೆ ಕೇಮದ್ರುಮಯೋಗ ಭಂಗವಾಗಿ ಜಾತಕರು ಅನೇಕ ಭೋಗಯುಕ್ತರೂ, ಧನವಂತರೂ, ಮಾನಿಗಳೂ ಆಗುವರು.

ಗಜಕೇಸರಿಯೋಗ—ಚಂದ್ರನಿಗೆ ಕೇಂದ್ರದಲ್ಲಿ ಗುರುವಿದ್ದರೆ, ಅಥವಾ ಚಂದ್ರನೊಡನೆ ಬುಧನು ನೀಚನಾಗಿಯಾಗಲಿ ಅಸ್ತನಾಗಿಯಾಗಲಿ ಇಲ್ಲದಿದ್ದರೆ ಗಜಕೇಸರಿ ಯೋಗವಾಗುವದು. ಈ ಯೋಗದಲ್ಲಿ ಹುಟ್ಟಿದವರು, ಇತರ ಗ್ರಹಗಳಿಂದುಂಟಾಗುವ ದುರ್ಯೋಗವನ್ನು ಅನುಭವಿಸದೆ, ಧನವಂತರು, ಆಗುವರು.

— ಮುಗಿದುದು —

ವೇ|| ಬಸವಯ್ಯ ಶಾಸ್ತ್ರಿಗಳು ಹಿರೇಮಠ
ಶ್ರೀ ಗಣಾಧೀಶ್ವರ ಪಂಚಾಂಗ ಕರ್ತರು,

ಇವರಿಂದ ರಚಿತವಾದ ಅಮೂಲ್ಯ ಗ್ರಂಥಗಳು

೧. ಶಾಸ್ತ್ರೋಕ್ತ ವೈಧಿಕ ಶಿವಪೂಜಾ ವಿಧಿ
೨. ಗುಪ್ತಸರ್ಪಪ್ರಶ್ನೆ ಸಿದ್ಧಾಂಜನ
೩. ಪುರೋಹಿತ ಚಿಂತಾಮಣಿ ಅಥವಾ ಶಾಂತಿ ಪ್ರಯೋಗರತ್ನ
೪. ಪಂಚಾಂಗ ಗಣಿತ ಸಂಜೀವಿನಿ ಭಾಗ—೧
೫. ಪಂಚಾಂಗ ಗಣಿತ ಸಂಜೀವಿನಿ ಭಾಗ—೨
೬. ರುದ್ರಾಭಿಷೇಕ ವಿಧಾನ (ಶ್ರೀ ರುದ್ರ, ಕನ್ನಡ ಟೀಕಾ ಸಹಿತ)
೭. ನವರಾತ್ರಿ ನವದುರ್ಗಾ ಪೂಜಾ ವಿಧಾನ
೮. ಪುರುಷ ದೈವದರ್ಪಣ
೯. ಸ್ತ್ರೀ ದೈವದರ್ಪಣ
೧೦. ಅದೃಷ್ಟ ಪ್ರಶ್ನೆ ಫಲಗನ್ನಡಿ
೧೧. ಮನೋಗತ ಪ್ರಶ್ನೆ ಪ್ರಕಾಶಾಂಜನ
೧೨. ದ್ವಾದಶ (೧೨) ಜ್ಯೋತಿರ್ಲಿಂಗಗಳ ಕಥೆಗಳು
೧೩. ಬಸವೇಶ್ವರ ಚರಿತಾಮೃತ (೩೧೬ ಪುಟಗಳು)
೧೪. ಪ್ರಾರಬ್ಧ ಪ್ರಕಾಶ ಅಥವಾ ಜಾತಕಫಲ ಚೂಡಾಮಣಿ
೧೫. ೬೦ ವರ್ಷಗಳ ರಟ್ಟಿಮತ ಶಾಸ್ತ್ರ
೧೬. ಸಹಸ್ರ ಯಂತ್ರ, ಮಂತ್ರ, ತಂತ್ರಗಳು
೧೭. ಸರ್ಪಪ್ರಶ್ನೆ ಸಿದ್ಧ ವಿದ್ಯಾ ಚಂದ್ರಿಕೆ
೧೮. ಪ್ರಾರಬ್ಧ ಪ್ರಕಾಶ (ಜಾತಕ ಚೂಡಾಮಣಿ)
೧೯. ವ್ಯಾಸಭುಜಸ್ತಂಭನ ಅಥವಾ ವ್ಯಾಸಋಷಿಯ ತೋಳು ಏಕೆ ಮೆರೆಯಿಸುವರು ?
೨೦. ಅಂತ್ಯ ಸಂಸ್ಕಾರ ವಿಧಾನ

ಪ್ರಕಾಶಕರು :

ಮೆಸರ್ಸ, ಪಿ. ಸಿ. ಶಾಬಾದಿಮಠ ಬುಕ್-ಡಿಪೋ

ಸ್ಟೇಶನ್ ರೋಡ, ಗದಗ.

[ಬೆಲೆ : 8-00 ರೂ.